# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ 11ನೇ ಡಿಸೆಂಬರ್ 2018
ಮಂಗಳವಾರ

## ವಿಷಯಾನುಕ್ರಮಣಿಕೆ


1. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ
– ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)
– ಶ್ರೀ ಐವನ್ ಡಿ ಸೋಜಾ
– ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

2. ಪ್ರಶ್ನೋತ್ತರಗಳು
(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

129 – ಬಾಪೂಜಿ ಸೇವಾ ಕೇಂದ್ರಗಳ ಬಗ್ಗೆ
– ಶ್ರೀ ಬಿ.ಜಿ.ಪಾಟೀಲ್

125 – ಸಣ್ಣ ನೀರಾವರಿ ಇಲಾಖೆಯ ಅಡಿಯಲ್ಲಿ ಕೆರೆಯ ಹೂಳೆತ್ತುವ/ಚೆಕ್‌ಡ್ಯಾಮ್/ ತಡೆಗೋಡೆ ನಿರ್ಮಾಣ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನದ ಕುರಿತು
ಶ್ರೀ ಕೆ.ಹರೀಶ್ ಕುಮಾರ್

318 – ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿ ಮತ್ತು ಭೂಕುಸಿತದಿಂದಾಗಿ ನದಿಗಳಲ್ಲಿ ಹೂಳು ತುಂಬಿ ಅವುಗಳ ಮಾರ್ಗ ಬದಲಾಗಿರುವ ಕುರಿತು
– ಶ್ರೀಮತಿ ಎಸ್.ವೀಣಾ ಅಚ್ಚಯ್ಯ

10 – ನ್ಯಾಯಾಲಯದ ಕಲಾಪಗಳು ಕನ್ನಡದಲ್ಲಿ ಜರುಗುವಂತೆ ಶಾಸನಬದ್ಧಗೊಳಿಸುವ ಬಗ್ಗೆ
– ಶ್ರೀ ಯು.ಬಿ.ವೆಂಕಟೇಶ್

261 – ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕಿನ ಶಿಂಷಾ ನದಿಯ ನೀರಾವರಿ ಯೋಜನೆಗಳ ಬಗ್ಗೆ
– ಶ್ರೀ ಕೆ.ಟಿ.ಶ್ರೀಕಂಠೇಗೌಡ

280 – ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನದ ಕುರಿತು
– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

244 – ಕೃಷ್ಣಾ ಕೊಳ್ಳದಲ್ಲಿ "ಬಿ" ಸ್ಕೀಂನಡಿಯಲ್ಲಿ ರಾಜ್ಯಕ್ಕೆ ಹಂಚಿಕೆಯಾಗಿರುವ ನೀರು ಆಂಧ್ರ ಪ್ರದೇಶದ ಪಾಲಾಗುತ್ತಿರುವ ಬಗ್ಗೆ
ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ

289 – ಶಿವಮೊಗ್ಗ ಜಿಲ್ಲೆಗಳ ಕೆರೆಗಳ ಜಲ ಸಂವರ್ಧನೆ ಬಗ್ಗೆ
– ಶ್ರೀ ಆಯನೂರು ಮಂಜುನಾಥ್


"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

312 – ಸಖರಾಯ ಪಟ್ಟಣದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಬಗ್ಗೆ
– ಶ್ರೀ ಎಸ್.ಎಲ್.ಧರ್ಮೇಗೌಡ

269 – ಕರ್ನಾಟಕ ರಾಜ್ಯದ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ (**Government Medical Colleges)** ಪ್ರಾಧ್ಯಾಪಕರುಗಳಿಗೆ **(AICTE)** ವೇತನ ಶ್ರೇಣಿಗಳನ್ನು ಮಂಜೂರು ಮಾಡುವ ಬಗ್ಗೆ
ಶ್ರೀ ಎಸ್.ವ್ಹಿ.ಸಂಕನೂರ

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

3. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು

(ಅ) – ರೈತರ ಸಾಲ ಮನ್ನಾ ಕುರಿತು ಸಾಲ ಋಣಮುಕ್ತ ಪತ್ರ ನೀಡುವ ಕುರಿತು
ಶ್ರೀ ಶ್ರೀನಿವಾಸ ಮಾನೆ
ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

(ಆ) – ಉತ್ತರ ಕನ್ನಡ ಜಿಲ್ಲೆಯ ಶಿರಸಿ ಶೈಕ್ಷಣಿಕ ಜಿಲ್ಲೆಯ ಅಕ್ಷರ ದಾಸೋಹ ಅಡುಗೆ ಸಿಬ್ಬಂದಿಗೆ ಏಪ್ರಾನ್ ಖರೀದಿಯಲ್ಲಿನ ಅವ್ಯವಹಾರ ಕುರಿತು
ಶ್ರೀ ಎಸ್.ವ್ಹಿ.ಸಂಕನೂರ
ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

(ಇ) – ಶಿಕ್ಷಕರ ವಿಶೇಷ ವಾರ್ಷಿಕ ಬಡ್ತಿಯಲ್ಲಿ ಅನ್ಯಾಯದ ಕುರಿತು
ಶ್ರೀ ಅರುಣ ಶಹಾಪುರ
ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

(ಈ) – ಅತಿಥಿ ಶಿಕ್ಷಕರ ವೇತನ ನಿಗದಿತ ಸಮಯಕ್ಕೆ ಸಿಗದಿರುವ ಬಗ್ಗೆ
ಶ್ರೀ ಐವನ್ ಡಿ'ಸೋಜಾ
ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

(ಉ) – ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಅಭಿವೃದ್ಧಿಗಾಗಿ ಪ್ರಾಧಿಕಾರ ರಚಿಸುವ ಬಗ್ಗೆ
ಶ್ರೀ ಕೆ.ಸಿ.ಕೊಂಡಯ್ಯ
ಶ್ರೀ ರಾಜಶೇಖರ ಬಸವರಾಜ ಪಾಟೀಲ (ಗಣಿ ಮತ್ತು ಭೂ ವಿಜ್ಞಾನ ಸಚಿವರು ಮತ್ತು ಮುಜರಾಯಿ ಸಚಿವರು

(ಊ) – ಪಹಣಿ ಮ್ಯುಟೇಷನ್ ಕಂದಾಯ ದಾಖಲೆಗಳನ್ನು ಪಡೆಯುವ ಶುಲ್ಕ ಹೆಚ್ಚಳ ಮಾಡಿರುವ ಬಗ್ಗೆ
ಶ್ರೀ ಎನ್.ಅಪ್ಪಾಜಿಗೌಡ
ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಹಾಗೂ ಶಾಸನ ರಚನೆ ಸಚಿವರು)

4. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ

– ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)
  ಶ್ರೀ ಆರ್.ವಿ.ದೇಶಪಾಂಡೆ (ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)
  ಡಾ:ತೇಜಸ್ವಿನಿಗೌಡ
  ಶ್ರೀ ಎಸ್.ಎಲ್.ಭೋಜೇಗೌಡ
  ಶ್ರೀ ಎಸ್.ಎಲ್.ಧರ್ಮೇಗೌಡ
  ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

(ನಿಯಮ 68ರಡಿಯಲ್ಲಿ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು)

5. ಸಭೆಯ ಮುಂದಿಡಲಾದ ಕಾಗದಪತ್ರಗಳು
6. ಕಾರ್ಯದರ್ಶಿಯವರ ವರದಿ
7. ನಿಯಮ 330ರ ಮೇರೆಗೆ ಚರ್ಚೆ

(ಅ) ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2013-14ನೇ ಸಾಲಿನಿಂದ ಇಲ್ಲಿಯವರೆಗೆ ಆಯವ್ಯಯದಲ್ಲಿ ಅನುದಾನ ಘೋಷಣೆ ಮಾಡಲಾಗಿದ್ದರೂ ಬಿಡುಗಡೆ ಮಾಡದಿರುವ ಹಾಗೂ 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಅನುದಾನದಲ್ಲಿ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ. ಅನುದಾನ ಹೊರತುಪಡಿಸಿ ಮಂಡಳಿಗೆ ಬಿಡುಗಡೆ ಮಾಡುವ ಕುರಿತು ಪ್ರಸ್ತಾಪಿಸುವ ಬಗ್ಗೆ

– ಶ್ರೀ ಕೆ.ಸಿ.ಕೊಂಡಯ್ಯ
– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ವೈ.ಎ.ನಾರಾಯಣಸ್ವಾಮಿ
– ಶ್ರೀ ಪ್ರಿಯಾಂಕ ಖರ್ಗೆ (ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರು)
– ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)
– ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
– ಶ್ರೀ ಬಸವರಾಜ ಪಾಟೀಲ್ ಇಟಗಿ
– ಶ್ರೀ ಅರುಣ ಶಹಾಪುರ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

8. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಚಿವರಿಂದ ಉತ್ತರ

(ಅ) ಕಾರವಾರ ಜಿಲ್ಲೆಯ ಶಿರಸಿ ಶೈಕ್ಷಣಿಕ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಮಧ್ಯಾಹ್ನ ಅಕ್ಷರ ದಾಸೋಹ ಅಡುಗೆ ಸಿಬ್ಬಂದಿಗೆ ನೀಡಲಾದ ಫೈರ್‌ಪ್ರೂಫ್ ಏಪ್ರಾನ್ ಖರೀದಿಯಲ್ಲಿ ಆದ ಅವ್ಯವಹಾರದ ಹಿನ್ನೆಲೆಯಲ್ಲಿ ಮುಖ್ಯ ಶಿಕ್ಷಕರ ಸಂಚಿತರಹಿತ ವಾರ್ಷಿಕ ಬಡ್ತಿ ತಡೆಹಿಡಿಯಲು ಡಿಡಿಪಿಐ ಅವರು ಕಳುಹಿಸಿದ ನೋಟಿಸ್ ಕುರಿತು

– ಡಾ:ಜಯಮಾಲ ರಾಮಚಂದ್ರ (ಸಭಾ ನಾಯಕರು) (ಮುಖ್ಯ ಮಂತ್ರಿಗಳ ಪರವಾಗಿ)

(ಆ) ಶಿಕ್ಷಕರ ವಿಶೇಷ ವಾರ್ಷಿಕ ವೇತನ ಬಡ್ತಿಯಲ್ಲಿ ಆಗಿರುವ ಅನ್ಯಾಯ ಹಾಗೂ ತಾರತಮ್ಯವನ್ನು ಸರಿಪಡಿಸುವ ಬಗ್ಗೆ

– ಡಾ:ಜಯಮಾಲ ರಾಮಚಂದ್ರ (ಸಭಾ ನಾಯಕರು) (ಮುಖ್ಯ ಮಂತ್ರಿಗಳ ಪರವಾಗಿ)

9. ಗಮನ ಸೆಳೆಯುವ ಸೂಚನೆಗಳು

(ಅ) ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕ್ರೀಡಾ ನೀತಿಯನ್ನು ಜಾರಿಗೆ ತರಲು ಮತ್ತು ಕ್ರೀಡೆಯಲ್ಲಿ ಭಾಗವಹಿಸುವವರಿಗೆ ಉದ್ಯೋಗಗಳನ್ನು ಮೀಸಲಿಡುವಂತೆ ಕ್ರಮ ಕೈಗೊಳ್ಳುವ ಕುರಿತು

– ಶ್ರೀ ಐವನ್ ಡಿ'ಸೋಜಾ
– ಶ್ರೀ ಹೆಚ್.ಎಂ.ರೇವಣ್ಣ
– ಶ್ರೀ ಆಯನೂರು ಮಂಜುನಾಥ್
– ಶ್ರೀ ಎಂ.ಸಿ.ವೇಣುಗೋಪಾಲ್
– ಶ್ರೀ ಅ.ದೇವೇಗೌಡ
– ಶ್ರೀ ಜಿ.ಟಿ.ದೇವೇಗೌಡ (ಉನ್ನತ ಶಿಕ್ಷಣ ಸಚಿವರು)

(ಆ) ದಿನಾಂಕ 01–04–2006ರ ನಂತರ ನೇಮಕಾತಿ ಹೊಂದಿರುವ ಸರ್ಕಾರಿ ನೌಕರರುಗಳಿಗೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಕುರಿತು

– ಶ್ರೀ ಅರುಣ ಶಹಾಪುರ
– ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಪುಟ್ಟಣ್ಣ
– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಆಯನೂರು ಮಂಜುನಾಥ್
– ಶ್ರೀ ಐವನ್ ಡಿ'ಸೋಜಾ
– ಶ್ರೀ ಕೆ.ಜೆ.ಜಾರ್ಜ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ, ಸಕ್ಕರೆ ಹಾಗೂ ಐ.ಟಿ. ಮತ್ತು ಬಿ.ಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

– ಶ್ರೀ ಎಸ್.ವ್ಹಿ.ಸಂಕನೂರ

– ಶ್ರೀ ವೈ.ಎ.ನಾರಾಯಣಸ್ವಾಮಿ

– ಶ್ರೀ ಶರಣಪ್ಪ ಮಟ್ಟೂರ

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

– ಶ್ರೀ ಹೆಚ್.ಎಂ.ರೇವಣ್ಣ

– ಡಾ:ತೇಜಸ್ವಿನಿಗೌಡ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)

(ಇ) ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ 4 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡುವುದಕ್ಕೆ ಸಂಬಂಧಪಟ್ಟಂತೆ ಶಾಶ್ವತ ಒಡಂಬಡಿಕೆ ಮಾಡಿಕೊಳ್ಳುವ ಕುರಿತು

– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರು)

– ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು) (ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

10. <u>ನಿಯಮ 330ರ ಮೇರೆಗೆ ಚರ್ಚೆ</u>

(ಅ) ರಾಜ್ಯ ಸರ್ಕಾರಿ ನೌಕರರು ಕರ್ನಾಟಕ ಸರ್ಕಾರ ವಿಮಾ ಇಲಾಖೆಗೆ ಕಟ್ಟುತ್ತಿರುವ ವಂತಿಗೆಯ ಮಾಹಿತಿಯು ಗಣಕೀಕೃತಗೊಂಡಿಲ್ಲದ ಕಾರಣ ಸರಿಯಾದ ಸಮಯಕ್ಕೆ ವಿಮಾ ಬಾಂಡ್ ಪಡೆಯುವಲ್ಲಿ 5 ರಿಂದ 6 ತಿಂಗಳ ಕಾಲ ವಿಳಂಬವಾಗುತ್ತಿರುವ ಕುರಿತು

– ಡಾ:ವೈ.ಎ.ನಾರಾಯಣಸ್ವಾಮಿ

– ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ)

(ಇ) ಬೆಂಗಳೂರು ನಗರದ ಮಾರತ್‌ಹಳ್ಳಿ, ಚಿಕ್ಕಸಂದ್ರ, ಸರ್ಜಾಪುರ, ಬೆಳ್ಳಂದೂರು, ದೇವರಬೀಸನ ಹಳ್ಳಿ, ಕಾಡುಬೀಸನ ಹಳ್ಳಿ, ಮುಂತಾದ ಕಡೆಗಳಲ್ಲಿ ಅಕ್ರಮವಾಗಿ ಪ್ರವೇಶಿಸಿ ಬಾಂಗ್ಲಾ ದೇಶೀಯರ ಕ್ಯಾಂಪ್‌ಗಳಲ್ಲಿ ನೆಲೆಸಿರುವ ರೋಹಿಂಗ್ಯರು ಹಲ್ಲೆ, ದರೋಡೆ, ಕಳ್ಳತನ ಮುಂತಾದ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಆತಂಕಕ್ಕೀಡಾಗಿರುವ ಬಗ್ಗೆ

– ಶ್ರೀ ಎನ್.ರವಿಕುಮಾರ್

– ಡಾ:ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿಗಳು)

– ಡಾ:ವೈ.ಎ.ನಾರಾಯಣಸ್ವಾಮಿ

– ಡಾ:ತೇಜಸ್ವಿನಿ ಗೌಡ

– ಶ್ರೀ ಹೆಚ್.ಎಂ.ರಮೇಶ್ ಗೌಡ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**11. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

<u>ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ</u>

– ಶ್ರೀ ಎನ್.ರವಿಕುಮಾರ್
– ಶ್ರೀ ಪಿ.ಆರ್.ರಮೇಶ್
– ಡಾ:ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿ ಹಾಗೂ ಒಳಾಡಳಿತ, ಬೆಂಗಳೂರು ನಗರ ಅಭಿವೃದ್ಧಿ, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ)
– ಶ್ರೀ ಬಂಡೆಪ್ಪ ಖಾಶೆಂಪೂರ (ಸಹಕಾರ ಸಚಿವರು)
– ಶ್ರೀ ಎನ್.ಅಪ್ಪಾಜಿ ಗೌಡ
– ಶ್ರೀ ಹೆಚ್.ಎಂ.ರಮೇಶ್ ಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)
– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಪ್ರಿಯಾಂಕ ಖರ್ಗೆ (ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರು)
– ಶ್ರೀ ಆಯನೂರು ಮಂಜುನಾಥ್
– ಶ್ರೀ ಎಂ.ಸಿ.ವೇಣುಗೋಪಾಲ್

**********

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(323)11–12–2018(10–10)ಬಿಎಸ್‌ಡಿ–ಕೆಎಸ್

**ಕರ್ನಾಟಕ ವಿಧಾನ ಪರಿಷತ್ತು**

ಮಂಗಳವಾರ 11ನೇ ಡಿಸೆಂಬರ್ 2018ರಂದು

ಸದನವು **ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

ಪೂರ್ವಾಹ್ನ 10 ಗಂಟೆ 02 ನಿಮಿಷಕ್ಕೆ ಸಮಾವೇಶಗೊಂಡಿತು

ಸಭಾಪತಿ **ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ** ಅವರು

ಪೀಠದಲ್ಲಿ ಉಪಸ್ಥಿತರಿದ್ದರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**01. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ:– ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೇ, ರಾಜ್ಯವನ್ನು ಭೀಕರವಾಗಿ ಕಾಡುತ್ತಿರುವ ಬರದ ಬಗ್ಗೆ ಹಾಗೂ ರೈತರು ಕಂಗಾಲಾಗುತ್ತಿರುವ ಬಗ್ಗೆ ಮತ್ತು ಕೂಲಿಕಾರರು ಉದ್ಯೋಗ ಇಲ್ಲದೇ ಗುಳೆ ಹೋಗುತ್ತಿರುವ ಪರಿಸ್ಥಿತಿಯ ಬಗ್ಗೆ ಸೇರಿದಂತೆ ಒಟ್ಟಾರೆ ಇಡೀ ರಾಜ್ಯವನ್ನು ಭೀಕರವಾಗಿ ಆವರಿಸಿರುವ ಬರ ಮತ್ತು ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು ನಿಯಮ 59ರಡಿಯಲ್ಲಿ ನಿಲುವಳಿ ಸೂಚನೆಯ ಪತ್ರವನ್ನು ಕೊಟ್ಟಿದ್ದು, ದಯವಿಟ್ಟು ಈ ಗಂಭೀರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ನಿಲುವಳಿ ಸೂಚನೆಯ ಪ್ರಸ್ತಾಪಕ್ಕೆ ಅವಕಾಶ ಕೊಡಬೇಕೆಂದು ಮನವಿ ಮಾಡುತ್ತೇನೆ.

**ಸಭಾಪತಿಯವರು:–** ಪ್ರಶ್ನೋತ್ತರ ಮುಕ್ತಾಯವಾಗಲೀ, ನಂತರ ತೀರ್ಮಾನ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುತ್ತೇನೆ, ಇದು ವೈಯಕ್ತಿಕ ಪ್ರಶ್ನೆ ಅಲ್ಲ. ಇಡೀ ರಾಜ್ಯದಲ್ಲಿ ಭೀಕರ ಬರಗಾಲ ಬಂದಿದ್ದು, ಕುಡಿಯುವುದಕ್ಕೆ ನೀರಿಲ್ಲದೇ ಜನರು ಗುಳೆ ಹೋಗುವ ಪರಿಸ್ಥಿತಿ ಇದೆ. ಸರ್ಕಾರ ಕಿವುಡಾಗಿ ಕುಳಿತಿದೆ. ಜಾನುವಾರುಗಳಿಗೆ ಕುಡಿಯುವುದಕ್ಕೆ ನೀರಿಲ್ಲ. ತಾವು ಚರ್ಚೆಗೆ ಅವಕಾಶ ಕೊಡಬೇಕು.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈಗ ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡಬೇಕು. ನಿಯಮಾನುಸಾರ ಪಾಲನೆ ಮಾಡಬೇಕು.

(ಗೊಂದಲ)

**ಸಭಾಪತಿಯವರು:–** ನಿಯಮ 63ರನ್ನು ನೋಡಬೇಕು, ಮೊದಲು ಪ್ರಶ್ನೋತ್ತರ ವೇಳೆ ಮುಕ್ತಾಯವಾಗಲೀ, ನಂತರ ನನ್ನ ನಿಲುವನ್ನು ಹೇಳುತ್ತೇನೆ. ಮೊದಲು ಪ್ರಸ್ತಾಪ ಮಾಡಲು ನಾನು ಅನುಮತಿ ನೀಡುವುದಿಲ್ಲ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ರಾಜ್ಯದ ಭೀಕರ ಬರಗಾಲದ ಪರಿಸ್ಥಿತಿ ಬಗ್ಗೆ ಚರ್ಚೆ ಆಗಬೇಕು. ಸಂಪ್ರದಾಯದಂತೆ ಪ್ರಸ್ತಾಪ ಮಾಡಲು ಅವಕಾಶ ಇದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ದಯಮಾಡಿ ನಿಯಮ 63ನ್ನು ಓದಿ. ಹಿಂದಿನ ಪ್ರೊಸೀಜರ್ ನೋಡಿ. ಹಿಂದೆ ಮಾನ್ಯ ಈಶ್ವರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾಗ ತೀರ್ಮಾನವಾಗಿದೆ. ಪ್ರಶ್ನೋತ್ತರ ವೇಳೆ ಮುಕ್ತಾಯವಾದ ನಂತರ ಅನುಮತಿ ನೀಡುತ್ತೇನೆ. ನಾನು ಅವಕಾಶ ಕೊಡುತ್ತೇನೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, 176 ತಲ್ಲೂಕುಗಳ ಪೈಕಿ 100 ತಾಲ್ಲೂಕುಗಳಲ್ಲಿ ಭೀಕರವಾದ ಬರಗಾಲ ಇದೆ. ರಾಜ್ಯದ 30 ಜಿಲ್ಲೆಗಳಲ್ಲಿ 17 ಜಿಲ್ಲೆಗಳು ಬರಗಾಲಕ್ಕೆ ತುತ್ತಾಗಿವೆ. ಅರ್ಧಕ್ಕರ್ಧ ಜನರು ಗುಳೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೋಗುವ ಪರಿಸ್ಥಿತಿ ಇದೆ. ಮನೆ–ಮಠ ಕಳೆದುಕೊಳ್ಳುವ ಪರಿಸ್ಥಿತಿ ಇದ್ದು, ಗುಳೆ ಹೋಗಿ ಹಳ್ಳಿಗಳಲ್ಲಿ ಬಾಗಿಲು ಹಾಕುವ ಪರಿಸ್ಥಿತಿ ಇದೆ. ಸರ್ಕಾರ ಕಣ್ತೆರೆಸುವುದಕ್ಕೆ ಅವಕಾಶ ಇದೆ. ಸರ್ಕಾರ ತಪ್ಪನ್ನು ಮುಚ್ಚಿಕೊಳ್ಳುವುದಕ್ಕಾಗಿ ಪ್ರಸ್ತಾಪ ಮಾಡಲು ಅವಕಾಶ ಕೊಡುತ್ತಿಲ್ಲ. ಸರ್ಕಾರವು ಏಕೆ ಬಾಯಿ ಮುಚ್ಚಿಕೊಂಡು ಕುಳಿತಿದೆ ಎಂದರೆ ಸರ್ಕಾರ ಪರಿಸ್ಥಿತಿ ಎದುರಿಸುವ ಸ್ಥಿತಿಯಲ್ಲಿ ಇಲ್ಲ.

**ಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ, ನಾನು ನಿಮಗೆ ಮಾತನಾಡಲು ಅನುಮತಿ ಕೊಟ್ಟಿದ್ದೇನೆಯೇ? ನಾನು ಅನುಮತಿ ಕೊಡದಿದ್ದರೆ ಮಾತನಾಡಬೇಡಿ. ಯಾರೂ ಮಾತನಾಡಬಾರದು. ನಾನು ಪ್ರಶ್ನೋತ್ತರ ವೇಳೆ ಮುಗಿದ ನಂತರ ಅವಕಾಶ ಕೊಡುತ್ತೇನೆ. ಶ್ರೀ ಬಿ.ಜಿ. ಪಾಟೀಲ್ ರವರು ಪ್ರಶ್ನೆ ಕೇಳಿ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಸಾರ್ ಇಲ್ಲ.

**ಸಭಾಪತಿಯವರು:–** ಇಲ್ಲ, ನಾನು ಒಪ್ಪುವುದಿಲ್ಲ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಹಿಂದೆ ಪ್ರಶ್ನೋತ್ತರ ವೇಳೆಗೆ ಮುಂಚೆ ಸಂಪ್ರದಾಯದಂತೆ ಪ್ರಸ್ತಾಪ ಮಾಡಿದ ಉದಾಹರಣೆಗಳು ಇವೆ.

**ಸಭಾಪತಿಯವರು:–** ಪೀಠ ಹೇಳಿದ ನಂತರ ಪ್ರತ್ಯುತ್ತರ ಕೊಡಬಾರದು.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಸ್ವಂತ ವಿಷಯ ಮಾತನಾಡುತ್ತಿಲ್ಲ.

**ಸಭಾಪತಿಯವರು:–** ಇದರಲ್ಲಿ ನನ್ನ ಸ್ವಂತ ವಿಷಯವೂ ಇಲ್ಲ. ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ ಪ್ರಶ್ನೋತ್ತರ ವೇಳೆ ಮುಗಿಯುವವರೆಗೂ ಅವಕಾಶ ಕೊಡುವುದಿಲ್ಲ. ನಾನು ಇದಕ್ಕಿಂತ ಹೆಚ್ಚು ಹೇಳುವುದಿಲ್ಲ. ನಾನು ಅವರ ಹೆಸರನ್ನು ಕರೆದಿದ್ದೇನೆ.

(ಗೊಂದಲ)

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನನಗೆ ಒತ್ತಾಯ ಮಾಡುವ ಹಕ್ಕು ಇದೆ. ಈ ಹಿಂದೆ ಸದನದಲ್ಲಿ ನಿಲುವಳಿ ಸೂಚನೆಯ ಬಗ್ಗೆ ಪೂರ್ವಭಾವಿ ಪ್ರಸ್ತಾಪ ಮಾಡಲು ಪ್ರಾಥಮಿಕವಾಗಿ 5 ನಿಮಿಷ ಅವಕಾಶ ಕೊಟ್ಟ ಉದಾಹರಣೆಗಳು ಇವೆ. ಇದರ ಗಂಭೀರತೆ ಏನೆಂದು ತಾವು ಕೇಳಬೇಕು.

**ಸಭಾಪತಿಯವರು:–** ತಮಗೆ ಕೇಳಲು ಸಂಪೂರ್ಣವಾದ ಅಧಿಕಾರ ಇದೆ. ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ಪ್ರಶ್ನೋತ್ತರ ವೇಳೆ ಮುಗಿದ ನಂತರ ನಾನು ಅನುಮತಿ ಕೊಡುತ್ತೇನೆ. ಪ್ರಶ್ನೋತ್ತರ ವೇಳೆಯನ್ನು ಯಾವ ಪರಿಸ್ಥಿತಿಯಲ್ಲಿಯೂ ಮುಂದೆ ಹಾಕುವುದಕ್ಕೆ ಆಗುವುದಿಲ್ಲ. ಪ್ರಶ್ನೋತ್ತರ ವೇಳೆ ಮುಗಿದ ನಂತರ ತಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ದಯವಿಟ್ಟು ಸಂಪ್ರದಾಯ ಏನೆಂದು ನಾನು ನೆನಪು ಮಾಡುತ್ತೇನೆ. ಪೀಠವು ಪ್ರಸ್ತಾಪ ಮಾಡಬೇಕಾದ ಗಂಭೀರತೆ ಏನೆಂದು 5 ನಿಮಿಷದಲ್ಲಿ ಮನವರಿಕೆ ಮಾಡಲು ಅವಕಾಶ ಕೊಡುತ್ತದೆ. ತಾವು ಈ ಕಡೆ ಇದ್ದಾಗ ಇದನ್ನು ಗಮನಿಸಿದ್ದೀರಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಪ್ರಶ್ನೆಗಳನ್ನು ಹಾಕಿ ಉತ್ತರ ತೆಗೆದುಕೊಳ್ಳದಿದ್ದರೆ ಹೇಗೆ? ನಿನ್ನೆ ದಿವಸವೂ ಪ್ರಶ್ನೋತ್ತರ ಆಗಲಿಲ್ಲ. ತಾವು ರೂಲಿಂಗ್ ಕೊಟ್ಟ ಮೇಲೂ ಈ ರೀತಿ ಆದರೆ ಹೇಗೆ?

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಕುಡಿಯುವುದಕ್ಕೆ ನೀರಿಲ್ಲ, ಜನ–ಜಾನುವಾರುಗಳು ಗುಳೆ ಹೋಗುತ್ತಿವೆ. ಪ್ರತಿ ಪಕ್ಷವಾದ ನಮಗೆ ಅವಕಾಶ ಕೊಡಬೇಕು. ಪೀಠವು ಪರಂಪರೆಯಿಂದ ಏನು ಹೇಳಿದೆ, ರಾಜ್ಯದಲ್ಲಿ ಇಂತಹ ಗಂಭೀರ ವಿಷಯದ ಬಗ್ಗೆ 5 ನಿಮಿಷದಲ್ಲಿ ಮನವರಿಕೆ ಮಾಡುವ ಬಗ್ಗೆ ಹೇಳುತ್ತದೆ. ಅದಕ್ಕೂ ಅವಕಾಶ ಕೊಡದಿದ್ದರೆ ಏನರ್ಥ?

**ಶ್ರೀ ಎಸ್.ವ್ಹಿ. ಸಂಕನೂರು:–** ದಯಮಾಡಿ 10 ನಿಮಿಷಗಳ ಅವಕಾಶ ಕೊಡಿ.

**ಶ್ರೀ ಟಿ.ಎ. ಶರವಣ:–** ಪೀಠ ಹೇಳಿದ್ದನ್ನು ಪಾಲನೆ ಮಾಡದೇ ವಾದ ಮಾಡಿದರೆ ಹೇಗೆ?

**ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಬಗ್ಗೆ ಪ್ರಾಸ್ತಾವಿಕವಾಗಿ ಎರಡು ಮಾತುಗಳನ್ನು ಹೇಳಲು ತಮ್ಮ ಅನುಮತಿಯನ್ನು ಕೇಳುತ್ತಿದ್ದಾರೆ. ತಾವು ಈಗಾಗಲೇ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದು, ಪ್ರಶ್ನೋತ್ತರ ಅವಧಿಯ ನಂತರ ತೆಗೆದುಕೊಳ್ಳುವ ಬಗ್ಗೆ ಹೇಳಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಸಂಪ್ರದಾಯದ ಪ್ರಕಾರವಾಗಿ ಪ್ರಶ್ನೋತ್ತರ ಅವಧಿಗೂ ಮೊದಲು ಅವಕಾಶ ಕೊಟ್ಟಿರುವ ಉದಾಹರಣೆಗಳು ಇವೆ, ಈ ಹಿನ್ನೆಲೆಯಲ್ಲಿ ಅವಕಾಶ ಕೊಡಬೇಕೆಂದು ತಮ್ಮನ್ನು ಒತ್ತಾಯ ಮಾಡುತ್ತಿದ್ದಾರೆ. ನಾನು ಎರಡೂ ವಿಚಾರಗಳ ಬಗ್ಗೆ ಬೆಳಕು ಚೆಲ್ಲುತ್ತೇನೆ, ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ತಾಳ್ಮೆಯಿಂದ ಕೇಳಬೇಕು. ಅವರು ಆ ರೀತಿ ಏಕೆ ಹೇಳುತ್ತಿದ್ದಾರೆ ಎಂಬುದನ್ನೂ ಹೇಳುತ್ತೇನೆ.

**(324)11–12–2018(10–20)ಹೆಚ್‌ವಿ–ಜಿಆರ್**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣಭೈರೇಗೌಡ(ಮುಂದುವರೆದದ್ದು):–**

ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 63ರ ಪ್ರಕಾರ "ನಿಲುವಳಿ ಸೂಚನೆ ತರಲು ಅನುಮತಿ ಕೋರುವುದು" ಎನ್ನುವ ಶೀರ್ಷಿಕೆಯಡಿಯಲ್ಲಿ;

**(1) ಸಭಾಪತಿಯವರು 59ನೇ ನಿಯಮದ ಮೇರೆಗೆ ಒಪ್ಪಿಗೆ ಕೊಟ್ಟರೆ ಮತ್ತು ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿದೆಯೆಂದು ಅಭಿಪ್ರಾಯಪಟ್ಟರೆ, ಪ್ರಶ್ನೋತ್ತರ ಮತ್ತು ಶೂನ್ಯವೇಳೆಯ ತರುವಾಯ ಹಾಗೂ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಇತರ ವಿಷಯವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಸಂಬಂಧಪಟ್ಟ ಸದಸ್ಯನ ಹೆಸರನ್ನು ಕರೆಯಬೇಕು ಅಂಥ ಸದಸ್ಯನು ತನ್ನ ಸ್ಥಾನದಲ್ಲಿ ಎದ್ದು ನಿಂತು ಸದನದಲ್ಲಿ ನಿಲುವಳಿ ಸೂಚನೆಯನ್ನು ತರಲು ಅನುಮತಿ ಕೇಳತಕ್ಕದ್ದು.**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದು ಇದೆ. ಇದರಲ್ಲಿ 'ಪೂರ್ವಭಾವಿ ಪ್ರಸ್ತಾವನೆ' ಎಂದು ಹೇಳಿಲ್ಲ. ಅನುಮತಿ ಕೋರುವುದಕ್ಕೂ ಸಹ ತದನಂತರ ಅವಕಾಶವಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ಸಂಪ್ರದಾಯಗಳ ಬಗ್ಗೆ ಮಾತನಾಡಿದ್ದಾರೆ. ನಾನು ಹಿಂದಿನ ಸರ್ಕಾರದ ಅಧಿಕಾರಾವಧಿಯಲ್ಲಿ ಐದು ವರ್ಷಗಳ ಕಾಲ ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದೇನೆ. ಅದಕ್ಕೂ ಮೊದಲು ನನಗೆ ಈ ಸದನದ ಅನುಭವ ಇರಲಿಲ್ಲ. ಆ 5 ವರ್ಷಗಳ ಅವಧಿಯಲ್ಲಿ ನಾನು ನೋಡಿದಂತೆ ಸುಮಾರು ಮೂರು ಮೂರೂವರೆ ವರ್ಷಗಳ ಅವಧಿಯಲ್ಲಿ ಈ ಸದನ ಪ್ರಾರಂಭವಾದಾಗ ನಿಲುವಳಿ ಸೂಚನೆಗೆ ಪ್ರಶ್ನೋತ್ತರ ಅವಧಿಗೂ ಮೊದಲು ನಿಲುವಳಿ ಸೂಚನೆಯ ಮೇಲೆ ಪ್ರಾಸ್ತಾವಿಕವಾಗಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿರಲಿಲ್ಲ. ಈ ಬಗ್ಗೆ ಲಿಖಿತ ನಿಯಮವಿದ್ದರೂ ಸಹ ಲಿಖಿತ ನಿಯಮಕ್ಕಿಂತ ಹೆಚ್ಚಾಗಿ ಇಲ್ಲಿ ಅದನ್ನು ಪರಿಪಾಲನೆ ಮಾಡಿಕೊಂಡು ಬಂದಿದ್ದರು. ಕೆಳಮನೆಯಲ್ಲಿ ನಿಯಮಗಳಿದ್ದರೂ ಸಹ ಅದನ್ನು ಸಡಿಲಗೊಳಿಸಿಕೊಂಡು ಇಷ್ಟ ಬಂದಂತೆ, ನಿಲುವಳಿ ಸೂಚನೆಯ ಮೇಲೆ ಪೂರ್ವಭಾವಿ ಪ್ರಸ್ತಾವನೆ ಮಾಡುವುದಕ್ಕೆ ಅವಕಾಶವನ್ನು ಕೊಡುವಂತಹ ಸಂಪ್ರದಾಯ ಬೆಳೆದು ಬಂದಿದೆ. ಆದರೆ, ಈ ಮನೆಯಲ್ಲಿ ಆ ಸಂಪ್ರದಾಯ ಇರಲಿಲ್ಲ. ಸುಮಾರು ಒಂದೂವರೆ ವರ್ಷಗಳ ಹಿಂದೆ ಆಗಿನ ಮಾನ್ಯ ಸಭಾಪತಿಗಳು ತಮ್ಮ ಕೊಠಡಿಯಲ್ಲಿ ಒಂದು ಸಭೆ ಕರೆದು, ಇದರ ಬಗ್ಗೆ ಚರ್ಚೆ ಮಾಡಿ, ಅಂದಿನ ಆಡಳಿತ ಪಕ್ಷದವರ ಅಭಿಪ್ರಾಯವನ್ನು ಕೇಳಿದ್ದರು, ಆಗ ನಾವು 'ಇದು ಸರಿಯಲ್ಲ ಇರುವಂತಹ ನಿಯಮಾವಳಿಗಳನ್ನು ಅನುಸರಿಸಿಕೊಂಡು ಹೋಗುವುದು ಒಳ್ಳೆಯದು' ಎಂದು ಹೇಳಿದ್ದೆವು. ಆದರೂ ಸಹ ವಿರೋಧ ಪಕ್ಷದವರು ಒತ್ತಾಯ ಮಾಡಿದ್ದಾರೆಂದು, ನಿಯಮವನ್ನು ಸಡಿಲಗೊಳಿಸಿದರು. ಇದು ನಡೆದಿರುವುದು ಸುಮಾರು ಒಂದೂವರೆ ವರ್ಷಗಳ ಹಿಂದೆ ಎಂದು ನನಗೆ ನೆನಪಿದೆ. ನಿರ್ದಿಷ್ಟ ದಿನಾಂಕದ ಬಗ್ಗೆ ಸಚಿವಾಲಯದವರು ನನ್ನ ನೆರವಿಗೆ ಬರಬೇಕಾಗಿದೆ.

**ಸಭಾಪತಿಯವರು:-** 2018ನೇ ವರ್ಷದಲ್ಲಿ ಈ ನಿಯಮವನ್ನು ಸಡಿಲಗೊಳಿಸಲಾಯಿತು.

**ಶ್ರೀ ಕೃಷ್ಣಭೈರೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಿಯಮಾವಳಿಗಳಿಗೆ ತಿದ್ದುಪಡಿಯನ್ನು ತರುವಂತಹ ಅವಕಾಶವಿದೆ. ಆದರೆ, 2018ರಲ್ಲಿ ನಿಯಮಕ್ಕೆ ತಿದ್ದುಪಡಿಯನ್ನು ತರದೇ ವಾಡಿಕೆಯಲ್ಲಿ ಪ್ರಶ್ನೋತ್ತರ ಮತ್ತು ಶೂನ್ಯವೇಳೆಗೂ ಮೊದಲು ನಿಲುವಳಿ ಸೂಚನೆಯ ಪ್ರಸ್ತಾವಿಕ ಪ್ರಸ್ತಾವನೆಗೆ ಅವಕಾಶ ಮಾಡಿಕೊಡಲಾಯಿತು. ಇದು ಒಳ್ಳೆಯ ಸಂಪ್ರದಾಯವಲ್ಲ. ನನಗೆ ತಿಳಿದಂತೆ ಸುಮಾರು ಒಂದೂ ಅಥವಾ ಒಂದೂವರೆ ವರ್ಷಗಳ ಹಿಂದೆ ವಾಡಿಕೆಯಲ್ಲಿ ಬಂದಿದೆ. ಪ್ರಶ್ನೋತ್ತರ ಮತ್ತು ಶೂನ್ಯವೇಳೆಯ ನಂತರ ನಿಲುವಳಿ ಸೂಚನೆಯ ಪ್ರಸ್ತಾವವನ್ನು ತೆಗೆದುಕೊಳ್ಳುವುದೇ ಈ ಸದನದ ಸಂಪ್ರದಾಯವಾಗಿವೆ. ಇತ್ತೀಚಿನ ವರ್ಷಗಳಲ್ಲಿ ನಮ್ಮಂಥವರೆಲ್ಲ ಸೇರಿಕೊಂಡು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಪ್ರದಾಯಗಳನ್ನು ಗಾಳಿಗೆ ತೂರಿ, ಈ ಸಂಪ್ರದಾಯಗಳನ್ನು ಬದಿಗಿಟ್ಟು ಇಂಥ ವಾಡಿಕೆಗಳನ್ನು ನಾವಾಗಿ ನಾವೇ ಸೃಷ್ಟಿ ಮಾಡಿಕೊಳ್ಳುತ್ತಿದ್ದೇವೆ. ಏಕೆಂದರೆ, 'ನಿಯಮ ಮಾಡುವವರೇ ನಾವು, ನಿಯಮ ಉಲ್ಲಂಘನೆ ಮಾಡುವುದಕ್ಕೆ ನಮಗೆ ಹಕ್ಕಿದೆ' ಎನ್ನುವುದು ನಮ್ಮಂಥ ಕೆಲವರ ಭಾವನೆಯಾಗಿದೆ. ಆದರೆ, ನಿಯಮ ಬಹಳ ಸ್ಪಷ್ಟವಾಗಿದೆ. ಈಗಾಗಲೇ ನಾನು ಉಲ್ಲೇಖ ಮಾಡಿರುವ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 63ರಲ್ಲಿನ ಅಂಶಗಳನ್ನು ತಮಗೂ ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಸಲ್ಲಿಸುತ್ತಿದ್ದೇನೆ. ನಿಯಮ ಬಹಳ ಸ್ಪಷ್ಟವಾಗಿದೆ. ಕಳೆದ ಒಂದೂವರೆ ವರ್ಷಗಳಿಂದ ವಾಡಿಕೆಯಾಗಿ ಏನನ್ನು ಅನುಸರಿಸಿಕೊಂಡು ಬಂದಿದ್ದೇವೆ, ಅದರ ಬಗ್ಗೆ ತಾವು ಸ್ಪಷ್ಟ ನಿಲುವನ್ನು ತೆಗೆದುಕೊಳ್ಳಬೇಕಾಗಿದೆ. 'ಈ ಸದನದ ಸಂಪ್ರದಾಯ ಮತ್ತು ನಿಯಮಾವಳಿಗಳನ್ನು ಅನುಸರಣೆ ಮಾಡಬೇಕು' ಎನ್ನುವುದು ಸರ್ಕಾರದ ನಿಲುವಾಗಿದೆ. ಆ ಪ್ರಕಾರ ನಡೆದರೆ ಒಳ್ಳೆಯದು ಎನ್ನುವುದು ನಮ್ಮ ಅಭಿಪ್ರಾಯವಾಗಿದೆ.

**ಸಭಾಪತಿಯವರುಃ–** ಸರ್ಕಾರದ ನಿಯಮವಿರಲಿ, ವಿರೋಧ ಪಕ್ಷದ ನಿಯಮವಿರಲಿ, ನನ್ನ ನಿಯಮ ಏನೆಂದರೆ, ನಿಯಮ 63ರ ಬಗ್ಗೆ ಸಾಕಷ್ಟು ಚರ್ಚೆ ನಡೆದು ಬಂದಿರುವ ಅಭಿಪ್ರಾಯದ ಪ್ರಕಾರ, ಪ್ರಶ್ನೋತ್ತರವೇಳೆ ಮತ್ತು ಶೂನ್ಯವೇಳೆಯ ನಂತರವಷ್ಟೇ ನಿಲುವಳಿ ಸೂಚನೆಯ ಪ್ರಸ್ತಾಪಕ್ಕೆ ನಾನು ಅನುಮತಿಯನ್ನು ನೀಡಬೇಕಾಗಿದೆ.

ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ರೂಲಿಂಗ್ ಕೊಟ್ಟ ನಂತರ ತಾವುಗಳು ಪದೇಪದೇ ಈ ಪೀಠದ ವಿರುದ್ಧ ಮಾತನಾಡಬಾರದು. ಪ್ರಶ್ನೋತ್ತರ ಮತ್ತು ಶೂನ್ಯವೇಳೆಯಾದ ಮೇಲೆ ನಿಲುವಳಿ ಸೂಚನೆಯ ಪ್ರಸ್ತಾಪಕ್ಕೆ ನಾನು ತಮಗೆ ಅನುಮತಿಯನ್ನು ನೀಡುತ್ತೇನೆ. ಅಲ್ಲಿಯವರೆಗೆ ತಮಗೆ ಅವಕಾಶವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರಶ್ನೋತ್ತರ ವೇಳೆ ನಡೆಸುವುದಕ್ಕೆ ತಾವುಗಳು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ ನನಗೆ ಮಾತನಾಡಲು ತಾವು ಅವಕಾಶವನ್ನು ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರುಃ–** ಒಂದು ಬಾರಿ ರೂಲಿಂಗ್ ಕೊಟ್ಟ ನಂತರ ಪದೇಪದೇ ಅದರ ಬಗ್ಗೆ ಪ್ರಶ್ನೆ ಮಾಡಬಾರದೆಂದು ನಾನು ಈಗಾಗಲೇ ಹೇಳಿದ್ದೇನೆ. ಪ್ರಶ್ನೋತ್ತರ ಮತ್ತು ಶೂನ್ಯವೇಳೆಯಾದ ನಂತರ ತಮಗೆ ನಾನು ಅವಕಾಶವನ್ನು ನೀಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ತಾವು ನೀಡಿರುವ ರೂಲಿಂಗ್ ಅನ್ನು ಮರು ಪರಿಶೀಲನೆ ಮಾಡಿ ಎಂದು ಹೇಳುವಂತಹ ಅಧಿಕಾರ ನಮಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರುः–** ಮಾನ್ಯ ವಿರೋಧ ಪಕ್ಷದ ನಾಯಕರೇ, ಪ್ರಶ್ನೋತ್ತರ ವೇಳೆಯಾದ ನಂತರ ತಮಗೆ ಅವಕಾಶವನ್ನು ನೀಡುತ್ತೇನೆಂದು ಹೇಳುತ್ತಿದ್ದೇನೆ. ಒಂದು ಗಂಟೆಯಲ್ಲಿ ಏನು ವ್ಯತ್ಯಾಸವಾಗುತ್ತದೆ. ಇದರಿಂದ ನಿಮಗೇನು ಸಮಸ್ಯೆಯಾಗುತ್ತದೆ. ಈ ರೀತಿ ತಾವು ಹಠ ಮಾಡಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿः–** ಸನ್ಮಾನ್ಯ ಸಭಾಪತಿಯವರೇ, ಒಂದೂವರೆ ವರ್ಷಗಳಿಂದ ನಡೆದುಕೊಂಡು ಬಂದಿರುವ ವಾಡಿಕೆಯ ಪ್ರಕಾರ ನಮಗೆ ಮಾತನಾಡಲು ಅವಕಾಶ ಕೊಡಬೇಕೆಂದು ನಾವು ಕೇಳಿಕೊಳ್ಳುತ್ತಿದ್ದೇವೆ. ಪೀಠದ ಜೊತೆಗೆ ನಾವು ಹಠ ಮಾಡದಿದ್ದರೆ ನಮ್ಮ ಗತಿಯೇನು? ಪ್ರತಿ ಪಕ್ಷವಾಗಿ ನಾವು ಯಾವ ರೀತಿ ಕೆಲಸ ಮಾಡಬೇಕು? ತಾವು ಸಹ ವಿರೋಧ ಪಕ್ಷದಲ್ಲಿದ್ದು ಕೆಲಸ ಮಾಡಿರುವವರು. ತಮಗೂ ಈ ಬಗ್ಗೆ ತಿಳಿದಿದೆ. ಪ್ರತಿಪಕ್ಷವಾಗಿ ಕೆಲಸ ಮಾಡಬೇಕಾದರೆ, ನಮಗೂ ಕೆಲವೊಂದು ಜವಾಬ್ದಾರಿಗಳು ಇರುತ್ತವೆ. ನಾಡಿನ ಜನರಿಗೆ ಸಂಕಷ್ಟ ಪರಿಸ್ಥಿತಿ ಬಂದಿರುವಾಗ ಮತ್ತು ರೈತರು ಗುಳೆ ಹೋಗುತ್ತಿರುವಂತಹ ಪರಿಸ್ಥಿತಿ ನಿರ್ಮಾಣವಾಗಿರುವಾಗ ನಾವು ಏನು ಮಾಡಬೇಕು?

**ಸಭಾಪತಿಯವರುः–** ಅದಕ್ಕಾಗಿ ನಿಮಗೆ ಬೇಕಾದ ರೀತಿಯಲ್ಲಿ ವರ್ತಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ತಮಗೆ ಅನುಮತಿಯನ್ನು ನೀಡುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿः–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರವನ್ನು ಒತ್ತಾಯ ಮಾಡುವ ಅಧಿಕಾರ ನಮಗಿದೆ. ಈ ಸದನದ ಇತಿಹಾಸದ ಪರಂಪರೆಯಲ್ಲಿ ಆಗಿ ಹೋಗಿರುವ ಸಭಾಪತಿಗಳು ನಿಮ್ಮ ಸಮಸ್ಯೆಯನ್ನು ಐದು ನಿಮಿಷಗಳಲ್ಲಿ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಿ ಎಂದು ನಮಗೆ ಕಾಲಾವಕಾಶವನ್ನು ನೀಡುತ್ತಿದ್ದರು. ಆದ್ದರಿಂದ ತಾವು ದಯಮಾಡಿ ನಮಗೆ ಮಾತನಾಡಲು ಅವಕಾಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರುः–** ಮಾನ್ಯ ವಿರೋಧ ಪಕ್ಷದ ನಾಯಕರೇ, ಸದನವನ್ನು ನಿಮಗೆ ಬೇಕಾದ ರೀತಿಯಲ್ಲಿ ಮೋಲ್ಡ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರಶ್ನೋತ್ತರ ಮತ್ತು ಶೂನ್ಯವೇಳೆಗಳಾದ ಮೇಲೆ ತಮಗೆ ಮಾತನಾಡಲು ಅವಕಾಶವನ್ನು ನೀಡುತ್ತೇನೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆದ್ದರಿಂದ ತಾವು ಕುಳಿತುಕೊಳ್ಳಬೇಕು. ಒಂದು ಗಂಟೆಯಲ್ಲಿ ಏನೂ ವ್ಯತ್ಯಾಸವಾಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿः–** ಸನ್ಮಾನ್ಯ ಸಭಾಪತಿಯವರೇ, ನಾನು ಪೀಠವನ್ನು ಪ್ರಶ್ನೆ ಮಾಡುತ್ತಿಲ್ಲ. ಸಮಸ್ಯೆಯನ್ನು ತಮಗೆ ಮನವರಿಕೆ ಮಾಡಬೇಕಾಗಿರುವುದು ನನ್ನ ಜವಾಬ್ದಾರಿಯಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರುः–** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ಗಂಟೆಯ ನಂತರ ಸಮಸ್ಯೆಯ ಬಗ್ಗೆ ಮನವರಿಕೆ ಮಾಡಿಕೊಡುವಿರಂತೆ ಈಗ ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿः–** ಸನ್ಮಾನ್ಯ ಸಭಾಪತಿಯವರೇ, ಈ ಸದನದ ಪರಂಪರೆಗೆ ಅನುಗುಣವಾಗಿ ವಿರೋಧ ಪಕ್ಷದವರು ನಿಲುವಳಿ ಸೂಚನೆಯನ್ನು ತಂದಂತಹ ಸಂದರ್ಭದಲ್ಲಿ ಪೂರ್ವಭಾವಿ ಪ್ರಸ್ತಾವನೆಗೆ ಅನುಮತಿಯನ್ನು ಕೊಟ್ಟಂಥ ಉದಾಹರಣೆಗಳು ಇವೆ. ಪೀಠಕ್ಕೆ ಏತಕ್ಕೋಸ್ಕರ ಈ ರೀತಿಯ ಹಠಮಾರಿತನ? ದಯವಿಟ್ಟು ತಾವು ಈ ರೀತಿ ಮಾಡಬಾರದು.

**ಸಭಾಪತಿಯವರುः–** ವಿರೋಧ ಪಕ್ಷದ ನಾಯಕರಾಗಿ ತಾವು ಈ ರೀತಿ ಹಠ ಮಾಡಬಾರದು. ನಾನು ನಿಯಮಗಳನ್ನು ಬಿಟ್ಟು ಹೋಗುವುದಿಲ್ಲ, ನಿಯಮಗಳನ್ನು ನಾನು ಪಾಲಿಸಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿः–** ಸನ್ಮಾನ್ಯ ಸಭಾಪತಿಯವರೇ, ತಾವು ನಮ್ಮ ಮೇಲೆ ಕರುಣೆತೋರಬೇಕಾಗಿದೆ.

**(ಗೊಂದಲ)**

**ಶ್ರೀ ಟಿ.ಎ. ಶರವಣः–** ಸನ್ಮಾನ್ಯ ಸಭಾಪತಿಯವರೇ, ತಾವು ರೂಲಿಂಗ್ ಕೊಟ್ಟ ಮೇಲೆ ಅದನ್ನು ಪ್ರಶ್ನೆ ಮಾಡುವುದಕ್ಕೆ ಬರುವುದಿಲ್ಲ.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು)ः–** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷಕ್ಕೆ ತನ್ನದೇ ಆಗಿರುವ ಜವಾಬ್ದಾರಿಗಳಿವೆ.

**(ಗೊಂದಲ)**

**ಸಭಾಪತಿಯವರುः–** ಮಾನ್ಯ ವಿರೋಧ ಪಕ್ಷದ ನಾಯಕರೇ, ಸದನದ ಸಮಯವನ್ನು ವ್ಯರ್ಥ ಮಾಡಬೇಡಿ. ಸದನದ ಸಮಯ ಬಹಳ ಅಮೂಲ್ಯವಾಗಿದೆ. ಎಲ್ಲರೂ ಕುಳಿತುಕೊಳ್ಳಿ. ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ಇದು ಅರ್ಥವಾಗಬೇಕು. ಒಂದು ಗಂಟೆಯ ನಂತರ ಈ ವಿಷಯವನ್ನು ತೆಗೆದುಕೊಂಡರೆ ಏನೂ ಆಗುವುದಿಲ್ಲ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನಃ–** ಸನ್ಮಾನ್ಯ ಸಭಾಪತಿಯವರೇ, ಸಮಸ್ಯೆಯ ಗಂಭೀರತೆಯ ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ. ನಮ್ಮ ಉದ್ದೇಶವನ್ನು ತಾವು ಅರ್ಥ ಮಾಡಿಕೊಳ್ಳಬೇಕು.

**ಸಭಾಪತಿಯವರುಃ–** ನಿಮ್ಮ ಉದ್ದೇಶ ನನಗೆ ಅರ್ಥವಾಗುತ್ತಿದೆ. ನಮ್ಮ ಸದನದ ನಿಯಮಗಳ ಪ್ರಕಾರ ನಾನು ಸದನವನ್ನು ನಡೆಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಒಂದು ವಿರೋಧ ಪಕ್ಷವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕಾಗಿರುವುದು ಸಂಪ್ರದಾಯ ಮತ್ತು ಜವಾಬ್ದಾರಿಯಾಗಿದೆ. ಸರ್ಕಾರ ಚರ್ಚೆ ಮಾಡುವುದಕ್ಕೆ ಸಿದ್ಧವಾಗಿದೆ. 'ಪೀಠ ತೆಗೆದುಕೊಳ್ಳುವ ನಿರ್ಧಾರದಂತೆ ನಾವು ನಡೆದುಕೊಳ್ಳುತ್ತೇವೆ' ಎಂದು ಸರ್ಕಾರ ಹೇಳಿದೆ. ಸರ್ಕಾರಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ, ಪೀಠ ನಮ್ಮನ್ನು ಪ್ರಶ್ನೆ ಮಾಡುತ್ತಿದೆ. ನಮ್ಮ ಹಕ್ಕನ್ನು ಮೊಟಕುಗೊಳಿಸುತ್ತಿದೆ. 'ದಯವಿಟ್ಟು ನಮ್ಮ ಹಕ್ಕುಗಳನ್ನು ಮೊಟಕುಗೊಳಿಸಬೇಡಿ' ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

**ಸಭಾಪತಿಯವರುಃ–** ಮಾನ್ಯ ವಿರೋಧ ಪಕ್ಷದ ನಾಯಕರೇ, ಸರ್ಕಾರ ತನ್ನ ನಿಲುವನ್ನು ಹೇಳಿದೆ, ತಾವು ತಮ್ಮ ನಿಲುವನ್ನು ಹೇಳಿದ್ದೀರಿ, ನಾನು ನನ್ನ ನಿಲುವನ್ನು ಹೇಳಿದ್ದೇನೆ. ನನ್ನ ನಿಲುವನ್ನು ತಾವು ಪದೇಪದೇ ಪ್ರಶ್ನೆ ಮಾಡಬಾರದು. ಪ್ರಶ್ನೋತ್ತರ ಮತ್ತು ಶೂನ್ಯವೇಳೆ ಆಗುವವರೆಗೂ ತಮಗೆ ಮಾತನಾಡಲು ಅವಕಾಶವನ್ನು ನೀಡುವುದಿಲ್ಲವೆಂದು ಸ್ಪಷ್ಟವಾಗಿ ನನ್ನ ನಿಲುವನ್ನು ಹೇಳುತ್ತಿದ್ದೇನೆ. ಸುಮ್ಮನೆ ಗುದ್ದಾಡಬೇಡಿ. ಪೀಠ ಏನು ಹೇಳುತ್ತದೆ ಅದನ್ನು ತಾವು ಕೇಳಬೇಕು.

**ಶ್ರೀ ಕೃಷ್ಣಭೈರೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡುವುದೇನೆಂದರೆ, ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಟ್ಟೇ ಕೊಡುತ್ತೀರಾ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಕಳೆದ ಎರಡು ಮೂರು ವರ್ಷಗಳಿಂದ ಸಂಪ್ರದಾಯದ ಆಧಾರದ ಮೇಲೆ ನಾವು ನಿಲುವಳಿ ಸೂಚನೆಯ ಮೇಲಿನ ಪೂರ್ವಭಾವಿ ಪ್ರಸ್ತಾವನೆಯನ್ನು ಸದನದ ಪ್ರಾರಂಭದಲ್ಲಿಯೇ ಮಾಡಿಕೊಂಡು ಬಂದಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಹಿಂದೆ ಏನು ನಡೆದಿದೆ ಎನ್ನುವ ವಿಚಾರ ಬೇಡ. ಈಗ ತಾವು ನಿಯಮ 63 ಅನ್ನು ಓದಿಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ತಾವು ನಮ್ಮ ಕೋರಿಕೆಯನ್ನು ಮಾನ್ಯ ಮಾಡಿ, ಒಂದು ಹತ್ತು ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶವನ್ನು ನೀಡಿದರೆ ನಾನು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ನಾನು ನಿಲುವಳಿ ಸೂಚನೆಯ ಬಗ್ಗೆ ಪೂರ್ವಭಾವಿ ಪ್ರಸ್ತಾವನೆಯನ್ನು ಮಾಡಿದ ನಂತರ ತಾವು ಪ್ರಶ್ನೋತ್ತರವನ್ನು ಕೈಗೆತ್ತಿಕೊಳ್ಳಬಹುದಾಗಿದೆ.

**ಸಭಾಪತಿಯವರು:–** ನಿಯಮಗಳನ್ನು ಕೈಬಿಡಿ ಎಂದು ತಾವು ಹೇಳುತ್ತಿದ್ದೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ತಾವು ನನಗೆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಕೃಷ್ಣಭೈರೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಯಾವುದರಲ್ಲಿಯೂ ಗೌರವವಿಲ್ಲ.

**(ಗೊಂದಲ)**

**ಶ್ರೀ ಕೃಷ್ಣಭೈರೇಗೌಡ:–** ಸನ್ಮಾನ್ಯ ಸಭಾಪತಿಯವರೇ, ನಿನ್ನೆ ಸದನವನ್ನು ಮುಂದೂಡಬೇಕೆಂದು ಅವರುಗಳು ಹೇಳಿದ ಹಿನ್ನೆಲೆಯಲ್ಲಿ ನಾವು ಅವರ ಮಾತಿಗೆ ಗೌರವ ಕೊಟ್ಟು ಸದನವನ್ನು ಮುಂದೂಡಿದೆವು. ತಾವು ಸದನವನ್ನು ಮುಂದೂಡುವುದರಲ್ಲಿ ಆಸಕ್ತರಾಗಿರಲಿಲ್ಲ; ನಾವು ಸಹ ವೈಯಕ್ತಿಕವಾಗಿ ಸದನವನ್ನು ಮುಂದೂಡುವುದರಲ್ಲಿ ಆಸಕ್ತರಾಗಿರಲಿಲ್ಲ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ನಿನ್ನೆ ಸದನದಲ್ಲಿ ಶ್ರದ್ಧಾಂಜಲಿ ಸಭೆ ನಡೆಯುತ್ತಿರುವಾಗ ಅದನ್ನು ಬಿಟ್ಟು ಪ್ರತಿಭಟನೆ ಮಾಡುವುದಕ್ಕೆ ಹೋಗಿದ್ದರು.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಕೃಷ್ಣಭೈರೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ನಾನು ಆ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ.

**(ಗೊಂದಲ)**

(325)10–30/11–12–2018/ಪಿಕೆ:ಜಿಆರ್

(ಸಭಾಪತಿಗಳ ಉಪಸ್ಥಿತಿ)

ಶ್ರೀ ಕೃಷ್ಣಭೈರೇಗೌಡ (ಮುಂದುವರೆದಿದೆ)

ನಿನ್ನೆ ಬೇಗನೆ ಸಭೆ ಮುಂದೂಡಬೇಕು ಎನ್ನುವ ಆಸಕ್ತಿ ನಮಗೆ ಇರಲಿಲ್ಲ ಮತ್ತು ಮಾನ್ಯ ಸಭಾಪತಿಗಳೇ ತಮಗಂತೂ ಸದನವನ್ನು ಮುಂದೂಡುವುದಕ್ಕೆ ಇಚ್ಛೆ ಇರಲಿಲ್ಲ. ಆದರೂ ಸಹ ವಿರೋಧ ಪಕ್ಷದವರ ಮಾತಿಗೆ ಗೌರವ ಕೊಟ್ಟು, ಅವರ ಮನವಿಗೆ ಓಗೊಟ್ಟು ನಾವು ಸಮ್ಮತಿಯನ್ನು ಸೂಚಿಸಿದ್ದೆವು. ನಿನ್ನೆ ಒಂದು ದಿನದಲ್ಲಿ ಅರ್ಧ ದಿನ ಹಾಗೆಯೇ ಕಳೆದು ಹೋಗಿದೆ. ಈಗ ಮತ್ತೆ ಈ ವಿಚಾರದಲ್ಲಿ ನಾವು ಎಲ್ಲೋ ಒಂದು ಕಡೆ ಪ್ರತಿಷ್ಠೆ ಮಾಡಿಕೊಂಡು ಕಲಾಪಗಳಿಗೆ ಅಡ್ಡಿಪಡಿಸುವುದು ಬೇಡ ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ನಿಯಮಾನುಸರಣೆ ಮಾಡೋಣ. ಒಂದು ಗಂಟೆಯ ನಂತರ, ಮಾನ್ಯ ವಿರೋಧ ಪಕ್ಷದ ನಾಯಕರು ತಂದಿರುವ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ, ಮಾನ್ಯ ಸಭಾಪತಿಗಳು ಅವಕಾಶ ಕೊಡುವುದಕ್ಕೆ ತಯಾರಿದ್ದಾರೆ. ಈ ವಿಷಯವನ್ನು ಮೊದಲೇ ಮಾತನಾಡಬೇಕು ಎಂದುಕೊಂಡರೆ, ತಮಗೆ ವಿಷಯದ ಗಂಭೀರತೆಗಿಂತ ಹೆಚ್ಚಾಗಿ ತಾವು ಹೇಳುವುದೇ ಆಗಬೇಕು ಎನ್ನುವ ಭಾವನೆ ಇದೆ ಎಂಬ ಅಭಿಪ್ರಾಯ ಮೂಡಬಹುದು. ಆ ರೀತಿಯ ಅಭಿಪ್ರಾಯ ಬರುವುದು ಬೇಡ ಎಂದು ನಾನು ಹೇಳುತ್ತಿದ್ದೇನೆ. ಈ ವಿಷಯದ ಬಗ್ಗೆ ನಿಯಮಾವಳಿ ಸ್ಪಷ್ಟವಾಗಿದೆ. ಹಿಂದೆ ಯಾವತ್ತೋ ಪೀಠದಲ್ಲಿ ಕುಳಿತುಕೊಂಡಿದ್ದವರು ಮೊದಲೇ ನಿಲುವಳಿ ಸೂಚನೆಯನ್ನು ಏಕೆ ತೆಗೆದುಕೊಂಡರು ಎನ್ನುವ ಬಗ್ಗೆ ವಿಶ್ಲೇಷಣೆ ಮಾಡುವುದು ಸರಿಯಲ್ಲ. ಆ ರೀತಿ ವಿಶ್ಲೇಷಣೆ ಮಾಡುವುದಕ್ಕೆ ಹೋದರೆ ಅದು ಎಲ್ಲೆಲ್ಲಿಗೋ ಹೋಗುತ್ತದೆ. ಇವತ್ತು ಪೀಠ ತೆಗೆದುಕೊಂಡಿರುವ ನಿರ್ಧಾರ ನಿಯಮಾವಳಿಗಳ ಪ್ರಕಾರವಾಗಿದೆ. ಎಲ್ಲರೂ ಸಹ ಸದನ ನಡೆಯಬೇಕು ಎನ್ನುವ ಅಭಿಲಾಷೆ ಹೊಂದಿರುವುದರಿಂದ, ಪೀಠಕ್ಕೆ ಗೌರವವನ್ನು ಕೊಟ್ಟು ಸದನವನ್ನು ನಡೆಸೋಣ. ಒಂದು ಗಂಟೆಯ ನಂತರ ಎಷ್ಟು ಗಂಟೆಯವರೆಗಾದರೂ ಮಾತನಾಡಲಿ, ನಾವು ರಾತ್ರಿಯ ತನಕ ಕುಳಿತು ಕೇಳುವುದಕ್ಕೆ ತಯಾರಿದ್ದೇವೆ. ಸಮಯ ಹೆಚ್ಚಾದರೂ ಪರವಾಗಿಲ್ಲ; ಇದನ್ನು ದಯವಿಟ್ಟು ಪ್ರತಿಷ್ಠೆಯಾಗಿ ಮಾಡಿಕೊಳ್ಳುವುದು ಬೇಡ ಎಂದು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಪ್ರತಿಷ್ಠೆ ಮಾಡಿಕೊಂಡರೆ ನಾವು ನಾಳೆ ಅನಿವಾರ್ಯವಾಗಿ, ತಮಗೆ ವಿಚಾರದ ಬಗ್ಗೆ ಅಷ್ಟು ಆಸಕ್ತಿ ಇಲ್ಲ ಎನ್ನುವ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ದಯವಿಟ್ಟು ಅದಕ್ಕೆ ಅವಕಾಶ ಮಾಡಿ ಕೊಡಬೇಡಿ ಎಂದು ಕೇಳಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ನಿಮ್ಮ ವಿಷಯಕ್ಕೆ ನನ್ನ ವಿರೋಧ ಇಲ್ಲ. ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಆದರೆ ನಿಯಮ 63 ಅನ್ನು ಪಾಲಿಸಬೇಕಾಗುತ್ತದೆ. ಒಂದು ಗಂಟೆಯ ನಂತರ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ. ಪ್ರಶ್ನೋತ್ತರ ಮುಗಿಸಿಕೊಂಡು ಸಚಿವರು ಕೆಳಮನೆಗೆ ಹೋಗಬೇಕಾಗುತ್ತದೆ. ಆದ್ದರಿಂದ ನಾನು ಸಭಾಪತಿಯಾಗಿ, ಸದನದ ಸಮಯವನ್ನು ಹಾಳು ಮಾಡುವುದು ಬೇಡ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಶ್ನೋತ್ತರ ಮತ್ತು ಶೂನ್ಯವೇಳೆ ಮುಗಿದ ನಂತರ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಆಗ ತಮ್ಮ ವಿಚಾರವನ್ನು ಮಂಡಿಸಿ; ನಂತರ ನಾನು ತೀರ್ಮಾನ ಮಾಡುತ್ತೇನೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:– ಮಾನ್ಯ ಸಭಾಪತಿಗಳೆ, ನಾನು ತಮ್ಮ ಆದೇಶವನ್ನು ಪ್ರಶ್ನೆ ಮಾಡುವುದಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿನ ನಿಯಮ, ಪರಂಪರೆ, ವ್ಯವಸ್ಥೆಗಳ ಹಿನ್ನೆಲೆಯಲ್ಲೂ ನೋಡಬೇಕಾಗುತ್ತದೆ.

ಸಭಾಪತಿಯವರು:– ಹಿಂದೆ ಯಾರೋ ತಪ್ಪು ಮಾಡಿದ್ದರೆ ನಾನು ಹಾಗೆಯೇ ಮಾಡಲೇ? ಒಂದು ಗಂಟೆಯ ನಂತರ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಏನು ವ್ಯತ್ಯಾಸವಾಗುತ್ತದೆ? ನಿಮ್ಮ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ನಾನು ಹೇಳಿದ್ದರೆ ನೀವು ಅದರ ಬಗ್ಗೆ ಕೇಳಬಹುದಾಗಿತ್ತು. ಆದರೆ ನಾನು, ಒಂದು ಗಂಟೆಯ ನಂತರ ಮಾತನಾಡಲು ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ. ಹಾಗಾಗಿ ಈಗ ಸಮಯವನ್ನು ವ್ಯರ್ಥ ಮಾಡುವುದು ಬೇಡ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:– ಹಿಂದೆ ಇಂತಹ ವಿಚಾರಗಳು ಬಂದಾಗ 5 ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಟ್ಟ ಉದಾಹರಣೆಗಳು ಇರುವ ಹಿನ್ನೆಲೆಯಲ್ಲಿ ನಾನು ತಮ್ಮನ್ನು ಕೇಳಿದೆ. ವಿರೋಧ ಪಕ್ಷದ ಭಾವನೆಗಳನ್ನು ಅರ್ಥ ಮಾಡಿಕೊಂಡು, 5 ನಿಮಿಷಗಳ ಕಾಲ ಮಾತನಾಡಲು ಅವಕಾಶ ಮಾಡಿ ಕೊಡದೇ ಇದ್ದರೆ, ವಿಪಕ್ಷಗಳ ಭಾವನೆಗೆ ಧಕ್ಕೆ ಆಗುತ್ತದೆ ಎಂದು ತಮ್ಮಲ್ಲಿ ಮನವರಿಕೆ ಮಾಡಿಕೊಂಡು ಅಸಹಾಯಕರಾಗಿ ಸುಮ್ಮನೆ ಇರಬೇಕಾಗುತ್ತದೆ. ನಾನು ಇದರ ಬಗ್ಗೆ ವಾದ ಮಾಡುವುದಿಲ್ಲ. 5 ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೇನೆ. ಈ ರೀತಿಯ ಪರಂಪರೆ ಇದೆ.

ಸಭಾಪತಿಯವರು:– 5 ನಿಮಿಷವಲ್ಲ; 10 ನಿಮಿಷವೇ ತೆಗೆದುಕೊಳ್ಳಿ. ಆದರೆ ಸಂಪ್ರದಾಯವನ್ನು ಏಕೆ ಬಿಡುತ್ತೀರಿ? ನಿಯಮವನ್ನೇಕೆ ಮೀರುತ್ತೀರಿ?

ಶ್ರೀ ಕೋಟ ಶ್ರೀನಿವಾಸ ಪೂಜಾರಿ:– ಇವತ್ತು ಮಾತ್ರವಲ್ಲ, ಹಿಂದಿನಿಂದ ಈ ರೀತಿಯ ಸಂಪ್ರದಾಯ ಇದೆ.

ಸಭಾಪತಿಯವರು:– ನಾನು ಇಲ್ಲಿ ಕುಳಿತುಕೊಂಡಾಗ ನಿಯಮಗಳ ರೀತಿ ನಡೆಯಬೇಕು ಎಂದು ಹೇಳುತ್ತೇನೆ. ನೀವು ಅದನ್ನು ಕೇಳುವುದಿಲ್ಲ ಎನ್ನುವುದಾದರೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:– ಇಲ್ಲಿ ವ್ಯಕ್ತಿ ಗೌಣವಾಗುತ್ತಾರೆ. ಕನಿಷ್ಠ 5 ನಿಮಿಷಗಳ ಕಾಲ ಮಾತನಾಡಲು ಅವಕಾಶ ಮಾಡಿಕೊಡಿ ಎಂದು ನಾನು ಪೀಠಕ್ಕೆ ಮನವರಿಕೆ ಮಾಡಿಕೊಂಡೆ. ಪೀಠ, ಈ ರೀತಿ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ, ಇಲ್ಲಿಯವರೆಗೆ ಸಂಪ್ರದಾಯ ಇದ್ದಿರಬಹುದು ಆದರೆ ಈಗ ಅದಕ್ಕೆ ಅವಕಾಶ ಮಾಡಿಕೊಡಲು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಧ್ಯವಿಲ್ಲ ಎಂದು ಹೇಳುವುದಾದರೆ ನಾವು ಪ್ರಶ್ನೆ ಮಾಡುವುದಿಲ್ಲ. ಆದರೆ ಪೀಠ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಪ್ರತಿಪಕ್ಷದಲ್ಲಿರುವವರು ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಣ್ಗಾವಲಾಗಿ ಇರಬೇಕಾಗುತ್ತದೆ. ನಾವು, ಹಳ್ಳಿ ಜನರ, ರೈತರ, ನೊಂದವರ ಬರದ ಪರಿಸ್ಥಿತಿಯನ್ನು ಪ್ರಸ್ತಾಪಿಸಲು ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಈ ಕುರಿತು 5 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎನ್ನುವುದಾದರೆ ಆ ಅದೇಶವನ್ನು ನಾವು ಧಿಕ್ಕರಿಸುವುದಿಲ್ಲ.

ಶ್ರೀ ಕೃಷ್ಣಭೈರೇಗೌಡ:-ಮಾನ್ಯ ಸಭಾಪತಿಗಳೆ, ಕಡತದಲ್ಲಿ ವಿಚಾರಗಳು ಸ್ಪಷ್ಟವಾಗಿರಬೇಕು. ತಾವು ತೆಗೆದುಕೊಂಡ ತೀರ್ಮಾನ ನಿಯಮಾವಳಿಗಳ ಪ್ರಕಾರವಾಗಿದೆ. ಅದು ಸಂಪ್ರದಾಯದ ವಿರುದ್ಧವಾಗಿರದೆ ಸಂಪ್ರದಾಯದ ಪರವಾಗಿಯೇ ಇದೆ. ಒಂದು ಗಂಟೆಯ ನಂತರ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಒಂದು ಗಂಟೆಯ ನಂತರ ಮಾತನಾಡಿದರೆ ಏನೂ ವ್ಯತ್ಯಾಸವಾಗುವುದಿಲ್ಲ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ವಿರೋಧ ಪಕ್ಷದ ಭಾವನೆಗಳನ್ನು ಹತ್ತಿಕ್ಕುವ ಹಾಗೆ ಆಗಬಾರದು. ಈ ಹಿಂದೆ ಈ ರೀತಿ ನಿಲುವಳಿ ಸೂಚನೆಯ ಪ್ರಸ್ತಾಪ ಮಂಡಿಸುವುದಕ್ಕೆ ಅವಕಾಶ ಮಾಡಿಕೊಟ್ಟ ಉದಾಹರಣೆಗಳು ನಮ್ಮ ಮುಂದಿದೆ.

ಶ್ರೀ ಕೃಷ್ಣಭೈರೇಗೌಡ:- ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ನಾಯಕರು ಈ ರೀತಿ ಪದೇ ಪದೇ ವಾದ ಮಾಡುವುದಾದರೆ ನಾವೂ ಕೂಡ ವಾದ ಮಾಡಬೇಕಾಗುತ್ತದೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ನಾವು, 5 ನಿಮಿಷಗಳಲ್ಲಿ ನಮ್ಮ ವಿಚಾರವನ್ನು ಪ್ರಸ್ತಾಪ ಮಾಡುತ್ತೇವೆ ಎಂದು ಹೇಳಿದೆವು. ರೈತರ ಕುಡಿಯುವ ನೀರಿನ ಸಮಸ್ಯೆಯನ್ನು, ಗುಳೆ ಹೋಗುತ್ತಿರುವುದರ ಬಗ್ಗೆ, 174 ತಾಲ್ಲೂಕುಗಳ ಪೈಕಿ 100 ತಾಲ್ಲೂಕಿಗಳಲ್ಲಿ ಬರ ಇರುವುದರ ಬಗ್ಗೆ 5 ನಿಮಿಷದಲ್ಲಿ ಮನವರಿಕೆ ಮಾಡಿಕೊಡುತ್ತೇವೆ ಎಂದು ಪ್ರತಿಪಕ್ಷದವರು ವಿನಂತಿ ಮಾಡುತ್ತಿದ್ದರೂ ಪೀಠ ಅದಕ್ಕೆ ಅವಕಾಶ ಕೊಡದೇ ಇದ್ದರೆ ನಾವು ಸುಮ್ಮನೆ ಕಳಿತುಕೊಳ್ಳುತ್ತೇವೆ.

ಶ್ರೀ ಕೃಷ್ಣಭೈರೇಗೌಡ:- ತಾವು ಪೀಠದ ಬಗ್ಗೆ ಪದೇ ಪದೇ ಈ ರೀತಿಯಾಗಿ ಮಾತನಾಡಿದರೆ ನಾವೂ ಸಹ ಅದಕ್ಕೆ ಪ್ರತಿಯಾಗಿ ಮಾತನಾಡಬೇಕಾಗುತ್ತದೆ. ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ:- ನಾವು ಪೀಠವನ್ನು ಪ್ರಶ್ನೆ ಮಾಡಿಲ್ಲ. ಸರ್ಕಾರ ವಿನಾ ಕಾರಣ ನಮ್ಮ ಮೇಲೆ ಆರೋಪ ಮಾಡುತ್ತಿದೆ. ನಮ್ಮ ಭಾವನೆಗಳನ್ನು ಬಹಳ ನೋವಿನಿಂದ ಹೇಳಿಕೊಳ್ಳಬಯಸುತ್ತಿದ್ದೇವೆ.

(ಗೊಂದಲ)

ಸಭಾಪತಿಯವರು:- ಹಿಂದಿನ ಸಭಾಪತಿಗಳಿದ್ದಾಗ ಅವರ ಜೊತೆ, ಮುಂಚೆ ನಿಲುವಳಿ ಸೂಚನೆಯ ಪ್ರಸ್ತಾವಕ್ಕೆ ಅವಕಾಶ ಮಾಡಿಕೊಟ್ಟರೆ ಅದರಿಂದ ಪ್ರಶ್ನೋತ್ತರಕ್ಕೆ ಅಡ್ಡಿ ಆಗುತ್ತದೆ, ಈ ಕುರಿತ ನಿಯಮವನ್ನು ಬದಲಾವಣೆ ಮಾಡಬೇಕೆಂದು ತೀರ್ಮಾನ ಮಾಡುವ ನಿಟ್ಟಿನಲ್ಲಿ ಚರ್ಚೆ ಮಾಡಿದ್ದೆವು. ಇವತ್ತು ಸದನ ಪ್ರಾರಂಭವಾಗಿ 40 ನಿಮಿಷವಾಗಿದೆ; ಇಷ್ಟು ಸಮಯ ವ್ಯರ್ಥವಾಯಿತು.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## 2. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ : 16(129)

(ಉತ್ತರದ ಪ್ರತಿ ಲಗತ್ತಿಸಲಾಗಿದೆ)

ಶ್ರೀ ಬಿ.ಜಿ.ಪಾಟೀಲ್:–ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಬಾಪೂಜಿ ಕೇಂದ್ರಗಳ ಸಂಖ್ಯೆಯನ್ನು ಇನ್ನಷ್ಟು ಜಾಸ್ತಿ ಮಾಡಬೇಕು ಹಾಗೂ ಇಂಟರ್‌ನೆಟ್ ಸೌಲಭ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ನೀಡಿದರೆ ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೃಷ್ಣಭೈರೇಗೌಡ:– ಮಾನ್ಯ ಸಭಾಪತಿಗಳೆ, ನಾನು ನಿಜವಾಗಿಯೂ ಮಾನ್ಯ ಸದಸ್ಯರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ನಾನು ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿದ ಸಂದರ್ಭದಲ್ಲೂ ನನಗೆ ಈ ವಿಚಾರ ಗೊತ್ತಾಗಿರಲಿಲ್ಲ. ಈ ಪ್ರಶ್ನೆ ಕೇಳುವುದರ ಮುಖಾಂತರ, ಸುಮಾರು ಕೇಂದ್ರಗಳು ಕೆಲಸ ಮಾಡುತ್ತಿಲ್ಲ ಎನ್ನುವ ವಿಚಾರದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಸದಸ್ಯರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಒಂದೆರಡು ತಿಂಗಳ ಒಳಗೆ ಎಲ್ಲಾ ಕಡೆ ಕೆಲಸ ನಿರ್ವಹಿಸುವ ಹಾಗೆ ವ್ಯವಸ್ಥೆ ಮಾಡಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ಈ ಸೌಲಭ್ಯಗಳಿಂದ ಜನರಿಗೆ ಅನುಕೂಲವಾಗುತ್ತದೆ. ಕಲ್ಬುರ್ಗಿ ಜಿಲ್ಲೆಯಲ್ಲಿ 136 ಕೇಂದ್ರಗಳು ಮತ್ತು ಯಾದಗಿರಿ ಜಿಲ್ಲೆಯಲ್ಲಿ 92 ಕೇಂದ್ರಗಳು ಕೆಲಸ ಮಾಡುತ್ತಿವೆ. ಉಳಿದ ಕೇಂದ್ರಗಳು ಕೆಲಸ ಮಾಡುತ್ತಿಲ್ಲ. ಈ ಕೇಂದ್ರಗಳೂ ಸೇರಿದಂತೆ ಇಂಟರ್‌ನೆಟ್‌ನ ಗುಣಮಟ್ಟ ಸುಧಾರಣೆ ಮಾಡುತ್ತೇವೆ. ಸೌಲಭ್ಯಗಳ ಕೊರತೆ ಇದ್ದರೆ ಅವುಗಳನ್ನೂ ಒದಗಿಸಿ ಒಂದೆರಡು ತಿಂಗಳ ಒಳಗೆ ಎಲ್ಲಾ ಕೇಂದ್ರಗಳು ಕಾರ್ಯಾರಂಭ ಮಾಡುವ ನಿಟ್ಟಿನಲ್ಲಿ ಜವಾಬ್ದಾರಿ ತೆಗೆದುಕೊಳ್ಳುತ್ತೇನೆ.

(326)11–12–2018(10–40)ಡಿಎಸ್–ಎಂಡಿ

ಪ್ರಶ್ನೆ ಸಂಖ್ಯೆ: 125
ಉತ್ತರ ಲಗತ್ತಿಸಲಾಗಿದೆ

**ಶ್ರೀ ಕೆ.ಹರೀಶ್ ಕುಮಾರ್:–** ಮಾನ್ಯ ಸಭಾಪತಿಯವರೆ, ಮಿತ್ತಬಾಗಿಲು ಗ್ರಾಮದ ಶಿರ್ಲಮನೆ ಎಂಬಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ ಎಂದು ಉತ್ತರದಲ್ಲಿ ಮಾನ್ಯ ಸಚಿವರು ತಿಳಿಸಿದ್ದಾರೆ. ಆದರೆ ಅಲ್ಲಿ ಆ ಕಾಮಗಾರಿ ಪೂರ್ಣಗೊಂಡಿಲ್ಲ. ಚೆಕ್ ಡ್ಯಾಮ್ ಮತ್ತು ಕೆರೆ ಹೂಳೆತ್ತುವ ಕೆಲಸವೂ ಆಗಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಎಸ್.ಪುಟ್ಟರಾಜು:-** ಮಾನ್ಯ ಸಭಾಪತಿಯವರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿ 2017-18ನೇ ಸಾಲಿನಲ್ಲಿ ಪಶ್ಚಿಮವಾಹಿನಿ ಯೋಜನೆಯಡಿಯಲ್ಲಿ 2 ಕಾಮಗಾರಿಗಳನ್ನು ಕೈಗೆತ್ತಿಗೊಂಡಿದ್ದೇವೆ. ಪ್ರವಾಹ ನಿಯಂತ್ರಣ ಲೆಕ್ಕ ಶೀರ್ಷಿಕೆಯಡಿ 4 ಕಾಮಗಾರಿಗಳನ್ನು ಕೈಗೆತ್ತಿಗೊಂಡಿದ್ದೇವೆ. ನಬಾರ್ಡ್ ಯೋಜನೆಯಡಿಯಲ್ಲಿ 1 ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದೇವೆ. ಒಟ್ಟಾರೆ 7 ಕಾಮಗಾರಿಗಳನ್ನು 12 ಕೋಟಿ 69 ಲಕ್ಷ ರೂಪಾಯಿಗಳಲ್ಲಿ ಕೈಗೆತ್ತಿಕೊಳ್ಳುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಹಾಗೆಯೇ 2018-19ನೇ ಸಾಲಿನಲ್ಲಿ ಪ್ರಸ್ತಾಪಿತ ಕಾಮಗಾರಿಗಳ ವಿವರ ಹೀಗಿದೆ; ಒಟ್ಟು ಪ್ರಧಾನ ಕಾಮಗಾರಿಗಳು 525 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 7 ಕಾಮಗಾರಿಗಳನ್ನು, ನಬಾರ್ಡ್ ಯೋಜನೆಯಡಿಯಲ್ಲಿ 50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 1 ಕಾಮಗಾರಿಯನ್ನು, ವಿಶೇಷ ಘಟಕ ಯೋಜನೆಯಡಿಯಲ್ಲಿ 102 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 34 ಕಾಮಗಾರಿಗಳನ್ನು, 27 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಗಿರಿಜನ ಉಪಯೋಜನೆಯಲ್ಲಿ 9 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದೇವೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದಕ್ಕೆ ಕ್ರಿಯಾ ಯೋಜನೆ ಪರಿಶೀಲನೆಯಲ್ಲಿದೆ. ತಾಂತ್ರಿಕ ಶಕ್ಯತೆ ಹಾಗೂ ಅನುದಾನದ ಲಭ್ಯತೆಯನುಸಾರ ಈ ಕಾಮಗಾರಿಗಳನ್ನು ಈ ಸಾಲಿನಲ್ಲಿ ಕೈಗೆತ್ತಿಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು, ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೆಲವು ಕಾಮಗಾರಿಗಳ ಬಗ್ಗೆ ಕೆಲವು ನ್ಯೂನತೆಗಳನ್ನು ಏನು ಹೇಳಿದ್ದಾರೆ ಅದನ್ನು ಅವರು ಲಿಖಿತ ಮೂಲಕ ತಿಳಿಸಿದರೆ ಈ ಸಾಲಿನಲ್ಲಿ ಕೈಗೆತ್ತಿಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ ಎನ್ನುವ ಮಾತನ್ನು ಹೇಳಬಯಸುತ್ತಿದ್ದೇನೆ.

ಪ್ರಶ್ನೆ ಸಂಖ್ಯೆ:318
ಉತ್ತರ ಲಗತ್ತಿಸಲಾಗಿದೆ

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೆ, ಕಳೆದ ಆಗಸ್ಟ್ ತಿಂಗಳಿನಲ್ಲಿ ಕೊಡಗು ಜಿಲ್ಲೆಯಲ್ಲಿ ವಿಪರೀತ ಮಳೆಯಿಂದ ಅತಿವೃಷ್ಟಿಯಾದಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು, ಅನೇಕ ಸಚಿವರುಗಳು ಹಾಗೂ ಎಲ್ಲಾ ಪಕ್ಷಗಳ ನಾಯಕರುಗಳು, ವಿವಿಧ ಸಂಘ-ಸಂಸ್ಥೆಗಳ ಎಲ್ಲಾ ಜನರು ಸೇರಿ ನಮ್ಮ ಕೊಡಗಿಗೆ ಭೇಟಿ ಕೊಟ್ಟಿದ್ದಾರೆ. ಅತಿವೃಷ್ಟಿಯಿಂದ ನೊಂದವರ ಕಣ್ಣೀರೊರೆಸುವ ಕೆಲಸವನ್ನು ಸರ್ಕಾರ ಮಾಡಿದೆ. ಇವತ್ತು ನಾನು ಮಾನ್ಯ ಮಂತ್ರಿಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಭೂ ಕುಸಿತದಿಂದ ನದಿಗಳಲ್ಲಿ ಅತೀ ಹೆಚ್ಚಿನ ಮಟ್ಟದಲ್ಲಿ ಹೂಳು ತುಂಬಿ, ನದಿಗಳು ಹರಿಯುವ ಮಾರ್ಗ ಬದಲಾವಣೆಯಾಗಿರುವ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಆದರೆ ಸರ್ಕಾರ ಗಮನಕ್ಕೆ ಬಂದಿಲ್ಲವೆಂದು ಉತ್ತರವನ್ನು ಕೊಟ್ಟಿದೆ. ಮಾನ್ಯ ಸಚಿವರು ಹಾರಂಗಿಗೆ ಹರಿಯುವ ನೀರಿನ ಮಟ್ಟವನ್ನು ಬಂದು ನೋಡಿದರೆ ಗೊತ್ತಾಗುತ್ತದೆ. ತೋಟಗಳಲ್ಲಿದ್ದ slide ನಿಂದಾಗಿ ಹೊಳೆಗಳೆಲ್ಲಾ ತುಂಬಿ ಹೋಗಿವೆ. ನದಿಗಳ ಹರಿಯುವಿಕೆಯ ಮಾರ್ಗಗಳೇ ಬದಲಾವಣೆಯಾಗಿದೆ. ಹಾಗಾಗಿ ನೇರವಾಗಿ ಹೇಳುವುದೇನೆಂದರೆ, ಹೂಳೆತ್ತದೇ ಇದ್ದರೆ ಬರುವಂಥ ಮಳೆಗಾಲದಲ್ಲಿ ಇನ್ನಷ್ಟು ಅನಾಹುತಗಳಾಗುವ ಸಂಭವ ಹೆಚ್ಚಾಗಿದೆ. ಈ ಹೂಳನ್ನು ಎತ್ತದೇ ಇದ್ದರೆ ಕಾವೇರಿ ನೀರನ್ನು ನಾವು ಕುಡಿಯುತ್ತಿದ್ದೇವೆ ಎಂದು ಹೆಮ್ಮೆ ಪಡುವಂಥ ಜಿಲ್ಲೆಗಳು ಖಂಡಿತವಾಗಿ ನೀರಿನ ಹರಿಯುವಿಕೆ

ಇಲ್ಲದೇ ನದಿಗಳು ಬರಿದಾಗುವಂಥ ಸಂದರ್ಭಗಳು ಇವತ್ತು ಬರಲಿದೆ. ಹಾಗಾಗಿ ಮಾನ್ಯ ಸಚಿವರು ಖುದ್ದಾಗಿ ಕೊಡಗು ಜಿಲ್ಲೆಗೆ ಮತ್ತೊಮ್ಮೆ ಭೇಟಿ ಕೊಟ್ಟು, ಈ ಒಂದು ಪರಿಸ್ಥಿತಿಯನ್ನು ಅವಲೋಕನ ಮಾಡಿ ಇಡೀ ನದಿಯ ಹೂಳನ್ನು ಎತ್ತುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಅವರಿಗೆ ಕೇಳಿಕೊಳ್ಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ಈ ವರ್ಷ ಬಹಳಷ್ಟು ಮಳೆ ಬಂದು ಹಾನಿಗಳು ಸಂಭವಿಸಿರುವುದು ಸತ್ಯ, ಇಲ್ಲವೆಂದು ನಾನು ಹೇಳುವುದಿಲ್ಲ. ಎಲ್ಲೆಲ್ಲಿ ನೀರು diversion ಆಗಿದೆ, ಎಲ್ಲೆಲ್ಲಿ damages ಆಗಿದೆ ಎಂದು ಈ ಬಗ್ಗೆ ನಾವು ಒಂದು ಸರ್ವೇ ಕಾರ್ಯವನ್ನು ಕೈಗೊಂಡಿದ್ದೇವೆ. ಆ ಒಂದು ವರದಿ ಬರಲಿ. ಯಾರ ಆಸ್ತಿಯೂ ಹಾನಿಯಾಗಬಾರದೆಂಬುದು ನಮ್ಮ ಒಂದು ಆಸೆಯಾಗಿದೆ. ವರದಿ ಬಂದ ನಂತರ ಎಲ್ಲೆಲ್ಲಿ ಹೂಳನ್ನು ತೆಗೆಯಬೇಕು, ಎಲ್ಲಿ ಇದರ ಅವಶ್ಯಕತೆ ಇದೆಯೋ ಅಲ್ಲಿ ನಾನು ಖಂಡಿತವಾಗಿ ಮಾಡುತ್ತೇವೆ.

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೆ, ನಮ್ಮ ಜಿಲ್ಲೆಯ ಬಗ್ಗೆ ನಾನು ಮಾನ್ಯ ಹಿರಿಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರು ಸಹ ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಿದ್ದರು. ಅವರು (ಅ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದಾರೆ. ಸರ್ಕಾರದವರು ಅಲ್ಲಿಗೆ ಭೇಟಿ ಕೊಟ್ಟು ಪರಿಸ್ಥಿತಿಯನ್ನು ನೋಡಿ, ಎಲ್ಲಾ ವಿಚಾರಗಳು ಪತ್ರಿಕೆಯಲ್ಲಿ ಬಂದ ನಂತರವೂ ಈ ರೀತಿಯ ಉತ್ತರವನ್ನು ನಾನು ಮಾನ್ಯ ಹಿರಿಯ ಸಚಿವರಿಂದ ಅಪೇಕ್ಷೆ ಪಟ್ಟಿರಲಿಲ್ಲ. ದಯವಿಟ್ಟು ಇದು ಒಳ್ಳೆಯ ಉತ್ತರವಲ್ಲ, ಇದು ರೈತ ವಿರೋಧಿ ಉತ್ತರವೆಂದು ಹೇಳಲು ನಾನು ಇಚ್ಛೆಪಡುತ್ತೇನೆ.

**ಶ್ರೀಮತಿ ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೆ, ನಮ್ಮ ಸಚಿವರು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸರ್ವೇ ಮಾಡಬೇಕೆಂದು ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಆ ಸರ್ವೇ ಕಾರ್ಯ ಆದಷ್ಟು ಶೀಘ್ರವಾಗಿ ಆಗಬೇಕು. ಏಕೆಂದರೆ ಇನ್ನು ಮೂರು ತಿಂಗಳಿನಲ್ಲಿ ನಮ್ಮ ಜಿಲ್ಲೆಯಲ್ಲಿ ಪುನಃ ಮಳೆ ಬರುವಂಥ ಸಂದರ್ಭಗಳಿವೆ. ಹಾಗಾಗಿ ಹೆಚ್ಚಿನ ಮುತುವರ್ಜಿಯನ್ನು ವಹಿಸಿ ಆ ಕೆಲಸವನ್ನು ಆದಷ್ಟು ಶೀಘ್ರವಾಗಿ ಮಾಡಬೇಕು. ಏಕೆಂದರೆ ಈಗಾಗಲೇ ನದಿಗಳಲ್ಲಿ ಮರಳು ತುಂಬಿ ಹೋಗಿ ನೀರಿನ ಹರಿಯುವಿಕೆಯೇ ಇಲ್ಲದಂತಾಗಿದೆ. ಇವತ್ತು ನಮ್ಮ ಹಾರಂಗಿ ಜಲಾಶಯದಲ್ಲಿಯೂ ಸಹ ನೀರಿನ ಹರಿಯುವಿಕೆ ಇಲ್ಲದಂತಾಗಿದೆ. ಹಾಗಾಗಿ ಈ ವಿಚಾರವಾಗಿ ಸರ್ಕಾರ ಎಚ್ಚೆತ್ತುಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಹಿರಿಯ ಸಚಿವರು ಎಲ್ಲಾ ವಿಚಾರಗಳ ಬಗ್ಗೆ ಅರ್ಥವತ್ತಾಗಿ ಉತ್ತರವನ್ನು ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ಅಂತಹ ಅನುಭವಿ ಸಚಿವರಿಂದ ನಾನು ಈ ರೀತಿಯ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ಆ ಪ್ರದೇಶಕ್ಕೆ ನಾನು ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಇಡೀ ಗುಡ್ಡಗಳೇ ಜರಿದು ಹೋಗಿ ನದಿಗಳು ಮುಚ್ಚಿ ಹೋಗಿರುವುದನ್ನು ಕಂಡೆ. ಅದೇ ಅರ್ಥದಲ್ಲಿ ಮಾನ್ಯ ಸದಸ್ಯರು ನದಿಗಳು ಮುಚ್ಚಿ ಹೋಗಿವೆ, ಹೂಳನ್ನು ತೆಗೆದು ಅದನ್ನು ಯಾವಾಗ ಸರಿ ಮಾಡುತ್ತೀರಿ ಎನ್ನುವ ಭಾವನೆಯಿಂದ ಕೇಳಿದ್ದಾರೆ. ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರು ಸ್ಥಳೀಯರಾಗಿರುವುದರಿಂದ ಅವರಿಗೆ ಇದರ ಬಗ್ಗೆ ಕಳಕಳಿ ಇದೆ. ಆದರೆ ನಾವು ಮಾನ್ಯ ಸಚಿವರಿಂದ ಈ ರೀತಿಯ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ಏಕೆ ಈ ರೀತಿಯಾಯಿತು? ಇಡೀ ಊರಿಗೆ ಊರೇ ಅಂದರೆ ಗುಡ್ಡಗಳು ಜರಿದು ನದಿಯ ಮೇಲೆ ಬಂದು ನದಿಗಳು ಮುಚ್ಚಿ ಹೋಗಿವೆ. ಇಂತಹ ಸಂದರ್ಭ ಇರುವಾಗ ಸರ್ಕಾರ 'ಇಲ್ಲ' 'ಉದ್ಭವಿಸುವುದಿಲ್ಲ' ಗಮನಕ್ಕೆ ಬಂದಿಲ್ಲ ಎನ್ನುವ ರೀತಿಯಲ್ಲಿ ಉತ್ತರವನ್ನು ನೀಡಿದ್ದಾರೆ. ಮಾನ್ಯ ಸಚಿವರೇ ಈ ರೀತಿಯ ಉತ್ತರವನ್ನು ಕೊಟ್ಟಿದ್ದರೆ ಅದಕ್ಕೆ ನಾನು ಆಕ್ಷೇಪಣೆ ಮಾಡುವುದಿಲ್ಲ. ಏಕೆಂದರೆ ಅವರು ಹಿರಿಯ ಸಚಿವರು. ಆದರೆ ಅಧಿಕಾರಿಗಳು ಉತ್ತರವನ್ನು ಬರೆದು ಕೊಟ್ಟು ಅವರು ನೋಡದೇ ಸಹಿಯನ್ನು ಮಾಡಿದ್ದರೆ ಈ ಬಗ್ಗೆ ಜಾಗ್ರತೆಯನ್ನು ವಹಿಸಬೇಕು. ಇದು ಅಪಹಾಸ್ಯಕ್ಕೀಡಾಗುವಂಥ ವಿಚಾರವಾಗಿದೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ವಾಸ್ತವಾಂಶ ಏನು ಮತ್ತು ಇದರಿಂದ ಎಲ್ಲರಿಗೂ ಸಮಸ್ಯೆಯಾಗಿದೆ ಎನ್ನುವುದು ಗೊತ್ತಿದೆ. ನಾನು ಏನಾದರೂ ಉತ್ತರವನ್ನು ಕೊಡಬೇಕಾದರೆ ಎಷ್ಟು ಹಾನಿಯಾಗಿದೆ ಎಂಬ ಬಗ್ಗೆ ಸರಿಯಾದ ವರದಿ ಇರಬೇಕು. ವರದಿ ಇಲ್ಲದೇ ನಾನು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಸರ್ವೇ ಕಾರ್ಯ ನಡೆಯುತ್ತಿದೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಮೊದಲು Rehabilitation Schemes ನಡೆಯುತ್ತಿವೆ. ಈ ನದಿಗಳಲ್ಲಿ ಎಲ್ಲೆಲ್ಲಿ ನೀರು ಬರುತ್ತಿದೆ, ಎಲ್ಲೆಲ್ಲಿ diversion ಆಗುತ್ತಿದೆ ಎಂಬ ಬಗ್ಗೆ ವರದಿ ಬರಲಿ. ಖಂಡಿತ ಈ ಬಗ್ಗೆ ನಾನು ಕ್ರಮ ಕೈಗೊಳ್ಳುತ್ತೇವೆ. ಎಷ್ಟು ನೀರು ಬರುತ್ತಿದೆ ಎಂಬ ಬಗ್ಗೆ ತಾಂತ್ರಿಕವಾದ ವರದಿ ಬರಲಿ. We are waiting for the report.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನೆರೆ ಬಂದು ಸುಮಾರು ಮೂರು ತಿಂಗಳುಗಳಾಗಿವೆ. ಈ ಬಗ್ಗೆ ಮೂರು ತಿಂಗಳ ಹಿಂದೆ ಒಂದು ಸಮಿತಿಯನ್ನು ನೇಮಕ ಮಾಡಲಾಗಿದೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೆ, ಅವರಿಗೆ ನಮ್ಮನ್ನು ಬೈಯಬೇಕೆಂದಿದ್ದರೆ, ಬೈಯಲಿ, ನಾವು ಬೈಯಿಸಿಕೊಳ್ಳುವುದಕ್ಕೆ ತಯಾರಿದ್ದೇವೆ. ಮಾನ್ಯ ಸದಸ್ಯರು 'ರೈತ ವಿರೋಧಿ' ಎಂದು ರಾಜಕಾರಣದ ಮಾತುಗಳನ್ನಾಡಿದರು. (ಗೊಂದಲ) ಹಾನಿಯಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವಂಥ ವಿಚಾರ. ಏನಾಗಿದೆ ಎನ್ನುವುದರ ಬಗ್ಗೆ ಸರ್ಕಾರದ ದಾಖಲೆಗಳಲ್ಲಿ ಅದಕ್ಕೊಂದು ಲೆಕ್ಕಾಚಾರ ಇರಬೇಕಾಗುತ್ತದೆ. ನಿಜವಾಗಿಯೂ ನೀರು ನಿಲ್ಲುತ್ತಿದೆಯೇ, ಕಡಿಮೆಯಾಗುತ್ತಿದೆಯೇ ಏನು, ಖಾಸಗಿ ಆಸ್ತಿ ಮುಂತಾದವುಗಳ ಬಗ್ಗೆ ನಾವು ಸಂಪೂರ್ಣವಾಗಿ ಸರ್ವೇ ಮಾಡಿಸುತ್ತಿದ್ದೇವೆ. ಇದೊಂದೇ ಅಲ್ಲ, ತಮ್ಮ ಗಮನಕ್ಕೆ ತರುವುದಾದರೆ, ನಮ್ಮ ಇಲಾಖೆಯಲ್ಲಿ ದಾಖಲೆಗಳೇ ಇರಲಿಲ್ಲ. ಇಡೀ ರಾಜ್ಯದ ಎಲ್ಲಾ ಜಲಾಶಯಗಳಲ್ಲೂ ಕೂಡ *Drone Camera* ಹಾಕಿ, ತಾಂತ್ರಿಕವಾಗಿ ಸಮೀಕ್ಷೆಯನ್ನು ನಡೆಸಿ document create ಮಾಡುತ್ತಿದ್ದೇವೆ. ಇಂತಹ ಒಂದು ಸನ್ನಿವೇಶ ಇರುವಾಗ ಪ್ರತಿಯೊಂದರಲ್ಲಿಯೂ ರಾಜಕಾರಣವನ್ನೇ ಮಾತನಾಡುತ್ತೇವೆಂದರೆ ಏನು ಹೇಳಬೇಕು? ಅವರು ರೈತ ವಿರೋಧಿ ಎಂದರು. ಹಾಗಾದರೆ ಅವರೊಬ್ಬರೇ ರೈತರ ಪರ ಇದ್ದಾರೆಯೇ? ನಾವೆಲ್ಲಾ ರೈತ ವಿರೋಧಿಗಳೇ?

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(327)11–12–2018(10–50)ಬಿಕೆಪಿ–ಎಂಡಿ

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರವನ್ನು ನೋಡಿದರೆ ರೈತರ ಬಗ್ಗೆ ಕಾಳಜಿ ಇಲ್ಲವೆಂದು ಹೇಳುತ್ತಿದ್ದೇನೆ. ಏಕೆಂದರೆ, ತಾವು ಕೊಟ್ಟಂತಹ ಉತ್ತರ ಅದೇ ರೀತಿ ಇದೆ.

**ಸಭಾಪತಿಯವರು:–** ಈಗ ಮಾನ್ಯ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯ ರವರು ಇನ್ನು ಅಲ್ಲಿ ಮೂರು ತಿಂಗಳು ಮಳೆ ಬರುತ್ತದೆ, ಹೀಗಾಗಿ, ಅದಕ್ಕಿಂತ ಮುಂಚೆ ಮಾಡಬೇಕಾದಂತಹ ಕೆಲಸವನ್ನು ಮಾಡಿ ಎಂದವರು ಹೇಳುತ್ತಿದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ವಿಚಾರದಲ್ಲಿ ಮಾರ್ಗದರ್ಶನದ ವಿಚಾರಗಳನ್ನು ಹೇಳುತ್ತಿದ್ದು, ಅದನ್ನು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾವು ರಾಜಕಾರಣ ಮಾಡಲಿಕ್ಕೆ ಹೋಗುವುದಿಲ್ಲ. ದಯವಿಟ್ಟು ನಾವು ಹೇಳುವುದನ್ನು ಕೇಳಿ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸದಸ್ಯರಾದ ಶ್ರೀ ಸುನಿಲ್ ಸುಬ್ರಮಣಿ ರವರು ಏನು ಹೇಳಿದರು ಎಂದು ತಮಗೆ ತಿಳಿಯತೇ? Did you hear what he spoke. ಅವರಿಗೊಬ್ಬರಿಗೇ ಅಲ್ಲ, ನಮಗೂ ಗೊತ್ತಿದೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ನಾನು ಸರಿಪಡಿಸುತ್ತೇನೆ. ಶ್ರೀ ಡಿ.ಕೆ.ಶಿವಕುಮಾರ್‌ರವರ ವಿಚಾರದಲ್ಲಿ ನಾವು ರಾಜಕಾರಣ ಮಾಡಿರುವುದಿಲ್ಲ. ಶ್ರೀಯುತ ಡಿ.ಕೆ.ಶಿವಕುಮಾರ್‌ರವರ ವಿಚಾರದಲ್ಲಿ ರಾಜಕಾರಣ ಮಾಡುವುದು ಅಷ್ಟು ಸುಲಭವಲ್ಲವೆನ್ನುವುದು ನಮಗೆ ಗೊತ್ತಿದೆ. ಮಾಡಿದರೆ ಅದನ್ನು ಬಹಳ ಗಟ್ಟಿಯಾಗಿಯೇ ಮಾಡಬೇಕು. ಮಾನ್ಯ ಸಚಿವರಾದ ಶ್ರೀಮಾನ್ ಶಿವಕುಮಾರ್‌ರವರು ನಾವು ಹೇಳುವುದನ್ನು ಗಮನಿಸಬೇಕು. ಮಾನ್ಯ ಸದಸ್ಯರು ಈ ವಿಚಾರವಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ಈ ಪ್ರಶ್ನೆ ಈಗ ಸದನದ ಸ್ವತ್ತು. ಅದರ ಬಗ್ಗೆ ಚರ್ಚೆಯಾಗಲಿ. ತಾವು ನಿಗದಿಪಡಿಸಿರುವ 4 ನಿಮಿಷಕ್ಕಿಂತ ಒಂದು ನಿಮಿಷ ಜಾಸ್ತಿ ಕೊಡಿ. ಈ ಜಿಲ್ಲೆಯಲ್ಲಿ ಹೂಳು ತುಂಬಿ, ನದಿಗಳು ಹರಿಯುವ ಮಾರ್ಗ ಬದಲಾಗಿ ಅಕ್ಕಪಕ್ಕದ ಜಮೀನುಗಳ ಮೂಲಕ ಹೋಗಿ ಆ ಜಮೀನುಗಳಲ್ಲಿ ಹೊಸದಾಗಿ ಮಾರ್ಗ ಸೃಷ್ಟಿಯಾಗಿ ರೈತರು ತೊಂದರೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದು ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ. ಅದಕ್ಕೆ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಈ ವಿಚಾರವಾಗಿ 'ಪರಿಶೀಲನೆ ಮಾಡುತ್ತೇವೆಚಿದು' ಹೇಳಿದರೂ ಸಹ ನಾವು ಅದರ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ಅದನ್ನು ಬಿಟ್ಟು "ಇಲ್ಲ" ಎಂದಷ್ಟೇ ಹೇಳಿದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ನಾವು ಇದರ ಬಗ್ಗೆ ಸರ್ವೆ ಮಾಡಿಸುತ್ತಿದ್ದೇವೆ. We will give a detailed report on this. ಒಂದು ವೇಳೆ ನಮ್ಮ ಕಚೇರಿಯಲ್ಲಿ ಹೆಚ್ಚು ಕಡಿಮೆ ಆಗಿದ್ದರೆ, ಅದರ ಬಗ್ಗೆ ನೀವೇ ನಮಗೆ ಈ ರೀತಿ ಮಾಡಬೇಕೆಂದು ಹೇಳಿಕೊಡಿ.



ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನೀವು ಹೇಳಿಕೊಡಿ, ನಾವು ಮಾಡಿಕೊಡುತ್ತೇವೆಂದು ಹೇಳುವುದು ಶ್ರೀ ಶಿವಕುಮಾರ್‌ರವರ ಬಾಯಿಯಿಂದ ಬರುತ್ತದೆ ಎಂದು ನಾವು ನಿರೀಕ್ಷೆ ಮಾಡಿರಲಿಲ್ಲ. ಈ ಕಡೆಯಿಂದ ನಮ್ಮ ಆಗ್ರಹ ಏನೆಂದರೆ, ಯಾವುದಾದರೊಂದು ಪ್ರಶ್ನೆಯನ್ನು ಕೇಳಿದಾಗ ಆ ಪ್ರಶ್ನೆ ಇರುವಂತಹ ಸಮಸ್ಯೆಗಳನ್ನು ಪರಿಹಾರ ಮಾಡುವಂತಹ ಉತ್ತರವನ್ನು ಮಂತ್ರಿಗಳು ಕೊಡುವುದು ರೂಢಿ. ದಯವಿಟ್ಟು, ತಾವು ಹಿರಿಯ ಮಂತ್ರಿಗಳಿದ್ದು, ಈ ರೀತಿಯ ಉತ್ತರವನ್ನು ನಾವು ತಮ್ಮ ಕಡೆಯಿಂದ ನಿರೀಕ್ಷೆ ಮಾಡಿದ್ದೇವೆ. ದಯವಿಟ್ಟು, ಆ ರೀತಿಯಲ್ಲಿ ಮಾಡಬೇಕೆನ್ನುವುದು ನಮ್ಮ ಆಗ್ರಹ.

**ಸಭಾಪತಿಯವರು:-** ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಹೋಗಬೇಕಾಗಿರುವುದರಿಂದ ಅವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಮೊದಲು ತೆಗೆದುಕೊಳ್ಳೋಣ. ಮುಂದಿನ ಪ್ರಶ್ನೆ ಶ್ರೀ ಸಿ.ಆರ್.ಮನೋಹರ್‌ರವರು ಕೇಳಬೇಕು.

**ಚುಕ್ಕೆ ಪ್ರಶ್ನೆ ಸಂಖ್ಯೆ: 276**
**(ಈ ಹಂತದಲ್ಲಿ ಸದಸ್ಯರಾದ ಶ್ರೀ ಸಿ.ಆರ್.ಮನೋಹರ್‌ರವರು ಸದನದಲ್ಲಿ ಗೈರು ಹಾಜರಿದ್ದರು)**

**ಚುಕ್ಕೆ ಪ್ರಶ್ನೆ ಸಂಖ್ಯೆ: 10**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಉತ್ತರ ಸಮರ್ಪಕವಾಗಿದೆ. ಆದರೆ, ಅದರಲ್ಲಿ ಒಂದು ವಿಷಯ ಹಲವಾರು ನ್ಯಾಯಮೂರ್ತಿಗಳು, ಕಾನೂನು ತಜ್ಞರು ನ್ಯಾಯಾಲಯದಲ್ಲಿ ಕಲಾಪಗಳು ಕನ್ನಡದಲ್ಲಿಯೇ ನಡೆಯಬೇಕೆಂದು ಹಕ್ಕು ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಗೆ ಉತ್ತರವಾಗಿ ಬಂದಿದೆ ಎಂದು ಹೇಳಲಾಗಿದೆ. ಅದರ ಬಗ್ಗೆ ಮಾನ್ಯ ಸಚಿವರು ವಿವರವಾಗಿ ತಿಳಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯ ಬಗ್ಗೆ ತಮಗೆ ಹಾಗೂ ಹಿರಿಯ ಸದಸ್ಯರುಗಳಿಗೂ, ಹಿರಿಯ ಸಚಿವರುಗಳಿಗೂ ಮಾಹಿತಿ ಇದೆ. ಬಹಳ ಪ್ರಮುಖವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಹಿಂದೆ ನಾವು ವಿಧಾನ ಮಂಡಲದಿಂದ ಒಂದು ನಿರ್ಣಯವನ್ನು ಮಂಡಿಸಿ, ಉಚ್ಚ ನ್ಯಾಯಾಲಯದಲ್ಲಿ ಕನ್ನಡದಲ್ಲಿಯೇ ವ್ಯವಹಾರಗಳು ನಡೆಯಬೇಕೆಂದು ಹೇಳಿ ಒಂದು ನಿರ್ಣಯವನ್ನು ಸಹ ಒಪ್ಪಿ ಕಳುಹಿಸಿಕೊಟ್ಟಿದ್ದೇವೆ. ಅದರ ಬಗ್ಗೆ ರಾಷ್ಟ್ರಪತಿಗಳ ಒಪ್ಪಿಗೆಯ ನಂತರ ಅವಶ್ಯಕತೆಯಿದ್ದಲ್ಲಿ ಸ್ಥಳೀಯ ಭಾಷೆಯಲ್ಲಿ ಉಚ್ಚ ನ್ಯಾಯಾಲಯದವರು ಆ ಭಾಷೆಯಲ್ಲಿ ವ್ಯವಹಾರ ನಡೆಸಬಹುದೆಂದು ಸಂವಿಧಾನದಲ್ಲಿ ಇದೆ. ಬಹುಶ: ಅದು ಸಂವಿಧಾನದ 351ನೇ ಅನುಚ್ಛೇಧದಲ್ಲಿ ಹೇಳಿದ್ದಾರೆ ಎಂದು ಕಾಣುತ್ತದೆ. ನಾವು ಈ ಬಗ್ಗೆ ನಿರ್ಣಯವನ್ನು ಮಾಡಿ ಕಳುಹಿಸಿಕೊಟ್ಟ ನಂತರ ರಾಷ್ಟ್ರಪತಿಯವರ ಪರವಾಗಿ ಗೃಹ ಇಲಾಖೆಯವರು ಸರ್ವೋಚ್ಛ ನ್ಯಾಯಾಲಯದ ಅಭಿಪ್ರಾಯವನ್ನು ಕೇಳಿದ್ದಾರೆ. ಸರ್ವೋಚ್ಛ ನ್ಯಾಯಾಲಯದ ಪೂರ್ಣ ಬೆಂಚ್‌ನವರು ತಮ್ಮ ಅಭಿಪ್ರಾಯವನ್ನು ಗೃಹ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲಾಖೆಗೆ ಕೊಟ್ಟಿದ್ದಾರೆ. ಈ ರೀತಿಯಾಗಿ ಮಾಡುವುದರಿಂದ ಉಚ್ಚ ನ್ಯಾಯಾಲಯದವರು ಕೊಡುವಂತಹ ತೀರ್ಮಾನಗಳನ್ನು ಬೇರೆ ರಾಜ್ಯಗಳ ನ್ಯಾಯಾಲಯದಲ್ಲಿಯೂ ಸಹ ಉಲ್ಲೇಖ ಮಾಡುತ್ತಾರೆ ಹಾಗೂ ಕೆಲವೊಮ್ಮೆ ಉಚ್ಚ ನ್ಯಾಯಾಲಯದ ಆದೇಶಗಳು ಸರ್ವೋಚ್ಚ ನ್ಯಾಯಾಲಯದಲ್ಲಿಯೂ ಸಹ ಚರ್ಚೆಗೆ ಬರುತ್ತವೆ. ಆ ಕಾರಣಗಳಿಂದ ಇದನ್ನು ಇಂಗ್ಲೀಷ್‌ನಲ್ಲಿಯೇ ವ್ಯವಹಾರ ಮಾಡುವುದು ಸೂಕ್ತ ಎನ್ನುವಂತಹ ಅಭಿಪ್ರಾಯವನ್ನು ಸರ್ವೋಚ್ಚ ನ್ಯಾಯಾಲಯ ಗೃಹ ಇಲಾಖೆಯ ಮುಖಾಂತರ ರಾಷ್ಟ್ರಪತಿಗಳಿಗೆ ಸಲ್ಲಿಕೆ ಮಾಡಿದೆ. ಅದರ ಜೊತೆಗೆ ಅವರು ಏನು ಹೇಳಿದ್ದಾರೆಂದರೆ ಇದೇ ರೀತಿಯ ಮನವಿ, ಗುಜರಾತ್, ಮಹರಾಷ್ಟ್ರ, ತಮಿಳುನಾಡು ಹಾಗೂ 6-7 ರಾಜ್ಯಗಳಿಂದ ಬಂದಿದ್ದು, ಆ ರಾಜ್ಯಗಳ ಮನವಿಗಳನ್ನು ಸಹ ನಾವು ಪುರಸ್ಕಾರ ಮಾಡಿರುವುದಿಲ್ಲವೆಂದು ಹೇಳಿ ಗೃಹ ಇಲಾಖೆಯವರು ನಮಗೆ ಉತ್ತರವನ್ನು ಕೊಟ್ಟಿದ್ದಾರೆ. ಹೀಗಾಗಿ, ನಾವು ಈ ದಿಕ್ಕಿನಲ್ಲಿ ಪ್ರಯತ್ನ ಮಾಡಿದರೂ ಕೂಡ ಅದು ಕಾರ್ಯಸಾಧುವಾಗಿಲ್ಲ. ಹೀಗಾಗಿ, ಬೇರೆ ರಾಜ್ಯಗಳ ಮನವಿಗಳು ಸಹ ತಿರಸ್ಕಾರವಾಗಿವೆ. ಇದರ ಬಗ್ಗೆ ಮಾನ್ಯ ಸದಸ್ಯರು ವಿವರ ಕೇಳಿದ್ದರಿಂದ, ಇದರ ಬಗ್ಗೆ ನಾನು ವಿವರವನ್ನು ತಮ್ಮ ಮೂಲಕ ಸದನಕ್ಕೆ ಸಲ್ಲಿಸಿದ್ದೇನೆ. ಏಕೆಂದರೆ, ಈ ವಿಚಾರವಾಗಿ ಈ ಹಿಂದೆ ಸದನವೇ ನಿರ್ಣಯ ಮಾಡಿತ್ತು. ಆದರೆ, ಈ ಎಲ್ಲಾ ಕಾರಣಗಳಿಂದ ಇದನ್ನು ಕಾರ್ಯರೂಪಕ್ಕೆ ತರಲಿಕ್ಕೆ ಸಾಧ್ಯವಾಗಿಲ್ಲ.

**ಪ್ರಶ್ನೆ ಸಂಖ್ಯೆ 261**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರ ನನಗೆ ದೊರಕಿದೆ. ನಾನು ಕಾವೇರಿ ಜಲಾನಯದ ಕೃಷ್ಣರಾಜ ಸಾಗರದ ಕಡೆಯ ಅಚ್ಚುಕಟ್ಟು ಭಾಗದಿಂದ ಬಂದವನಾಗಿದ್ದೇನೆ. ನಮ್ಮ ಕೃಷ್ಣರಾಜ ಸಾಗರದ ಬಯಲಿಗೆ ಸೇರಿದ ಹಾಗೆ ಮಂಡ್ಯ ಜಿಲ್ಲೆಯ ಮದ್ದೂರು ಮತ್ತು ಮಳವಳ್ಳಿ ಅಚ್ಚುಕಟ್ಟಿನ ಕಟ್ಟಕಡೆಯ ಪ್ರದೇಶವಾಗಿದೆ. ನಾವು ಪ್ರತಿ ಬಾರಿ ಅತ್ಯಂತ ಸಂಕಷ್ಟಕ್ಕೆ ಒಳಗಾಗುವಂತಹ ಜನ. ಅದರಲ್ಲೂ ವಿಶೇಷವಾಗಿ ಒಟ್ಲು ಹಾಕುವಾಗ, ಗದ್ದೆ ನಾಟಿ ಮಾಡುವಾಗ, ಭತ್ತದ ಪೈರನ್ನು ಕಟಾವು ಮಾಡುವ ಸಂದರ್ಭದಲ್ಲಿ ನೀರಿನ ಹಾಹಕಾರಕ್ಕೆ ತುತ್ತಾಗುವಂತಹ ಜನ ನಾವಾಗಿದ್ದೇವೆ. ಈ ಹಿನ್ನೆಲೆಯಲ್ಲಿ ಒಂದು ನಿರ್ಧಾರವನ್ನು ತೆಗೆದುಕೊಂಡು ಎರಡು ತಾಲ್ಲೂಕುಗಳಿಗೆ ಸಂಬಂಧಪಟ್ಟ ಹಾಗೆ, ಶಿಂಷಾ ನದಿಗೆ ಹೊಂದಿಕೊಂಡಂತೆ 13 ಏತ ನೀರಾವರಿ ಯೋಜನೆಗಳನ್ನು ಜಾರಿ ಮಾಡಿರುವುದು ಸರಿಯಷ್ಟೆ. ಇದಕ್ಕೆ ಸುಮಾರು 7 ರಿಂದ 8 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಆದರೆ, ಇವತ್ತು ಕೇವಲ 3 ಏತ ನೀರಾವರಿ ಯೋಜನೆಗಳು ಮಾತ್ರ ಚಾಲನೆಯಲ್ಲಿವೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಅವುಗಳು 1. ಹೆಮ್ಮನಹಳ್ಳಿ ಏತ ನೀರಾವರಿ ಯೋಜನೆ 2. ಕಬ್ಬಾರೆ ಏತ ನೀರಾವರಿ ಯೋಜನೆ 3. ಬಾಣೋಜಿಪಂತ್ ಏತ ನೀರಾವರಿ ಯೋಜನೆ. ಈ ಬಾಣೋಜಿಪಂತ್ ಏತ ನೀರಾವರಿ ಯೋಜನೆ ನಮ್ಮ ಸಾರಿಗೆ ಸಚಿವರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಇದೆ. ಇನ್ನುಳಿದ 10 ಏತ ನೀರಾವರಿ ಯೋಜನೆಗಳ ಕಾಮಗಾರಿ ಕೆಲಸಗಳು ಪೂರ್ಣಗೊಂಡಿದ್ದರೂ ಸಹ ಅವುಗಳು ಚಾಲನೆಯಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರುವುದಿಲ್ಲ. 3 ಏತ ನೀರಾವರಿ ಯೋಜನೆಗಳು ಚಾಲನೆಯಲ್ಲಿವೆ ಎಂದು ಹೇಳಿದರೆ ಇನ್ನುಳಿದ 10 ಏತ ನೀರಾವರಿ ಯೋಜನೆಗಳು ಏತಕ್ಕೆ ಚಾಲನೆಯಲ್ಲಿ ಇರುವುದಿಲ್ಲ? ಇದರ ಬಗ್ಗೆ ಸ್ಪಷ್ಟವಾಗಿ ಮಾರ್ಗದರ್ಶನವನ್ನು ಮಾಡಬೇಕು. ಮತ್ತೆ ಕೊಪ್ಪ ಭಾಗದಲ್ಲಿ 12 ಕೆರೆಗಳು ಬರುತ್ತವೆ. ಬೆಟ್ಟಹಳ್ಳಿಗೆ ಸಂಬಂಧಪಟ್ಟ ಹಾಗೆ ಹೀರೇಕೆರೆ ಮತ್ತು ಹಳ್ಳಿಕೆರೆ ಎಂದು ಹೇಳಿ 2 ಕೆರೆಗಳು ಬರುತ್ತವೆ. ಮತ್ತೆ ಹಂಸಾಪುರದ ಕೆರೆ ಸೇರಿಲ್ಲ. ತಾವು 12 ಕೆರೆಗಳಿಗೆ ನೀರನ್ನು ತುಂಬಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬಹಳ ದುರಂತ ಎಂದರೆ ಇವತ್ತು ಕಾವೇರಿ ಜಲಾನಯದ ನಮ್ಮ ಭಾಗದಿಂದ 399 ಟಿಎಂಸಿ ನೀರನ್ನು ನಾವು ತಮಿಳುನಾಡಿಗೆ ಬಿಟ್ಟಿದ್ದೇವೆ. 150 ಟಿಎಂಸಿ ನೀರನ್ನು ಅವರು ಬಳಸಿಕೊಂಡಿದ್ದು, 249 ಟಿಎಂಸಿ ನೀರು ಸಮುದ್ರವನ್ನು ಸೇರಿದೆ. ಸಮುದ್ರಕ್ಕೆ 249 ಟಿಎಂಸಿ ನೀರು ಹೋಗಿದ್ದರೂ ಸಹ tailend ನಲ್ಲಿರುವ ನಮ್ಮ ಕೆರೆಗಳು ಇನ್ನೂ ತುಂಬಿಲ್ಲ. ಅದಕ್ಕಾಗಿ ತಾವು ಕೆರೆಗಳನ್ನು ತುಂಬಿಸುವಂತಹ ಮಹತ್ವವಾದ ಕಾರ್ಯವನ್ನು ಕೈಗೊಂಡಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಕೆರೆಗೆ ನೀರು ತುಂಬಿಸುವಂತಹ ಯೋಜನೆಯೇ ಬೇರೆ. ಈ tailend ನ ಜಮೀನುಗಳಿಗೆ, ಅಚ್ಚುಕಟ್ಟು ಪ್ರದೇಶಗಳಿಗೆ ನೀರನ್ನು ಕೊಟ್ಟಿಲ್ಲ. ಬೇರೆ ಬೇರೆ ಅಚ್ಚುಕಟ್ಟು ಪ್ರದೇಶಗಳನ್ನು ಮಾಡಿಕೊಂಡಿರುವವರು ಇದ್ದಾರೆ. ಹಾಲಿ ಅಚ್ಚುಕಟ್ಟು ಪ್ರದೇಶಗಳಿಗೆ ನೀರುಣಿಸುವಲ್ಲಿ ಈ ಏತ ನೀರಾವರಿ ಯೋಜನೆಗಳ ಅಗತ್ಯತೆ ಇದೆ. ವಿಶೇಷವಾಗಿ ಹಳೇಹಳ್ಳಿ, ಅರಳಿಕೆರೆ ಮತ್ತು ಮೂಡ್ಯ, ತಗ್ಗಳ್ಳಿ ಈ 4 ಏತ ನೀರಾವರಿ ಯೋಜನೆಗಳು ಅತ್ಯಂತ ಅನಿವಾರ್ಯವಾಗಿವೆ. ಕೆರೆ ತುಂಬಿಸುವಂತಹ ಯೋಜನೆಗಳೇ ಬೇರೆ. ಸುಮಾರು 12 ಕೆರೆಗಳು ಸರಿ ಹೋಗುತ್ತವೆ. ಅಚ್ಚುಕಟ್ಟು ಭಾಗಕ್ಕೆ ಕೆರೆ ನೀರು ಸೇರದೇ ಇರುವ ಕಡೆ ನೀರನ್ನು ಹರಿಸಬೇಕಲ್ಲವೇ? ಆ ಕಾರಣಕ್ಕೋಸ್ಕರ ಈ ಭಾಗಕ್ಕೆ ಕನಿಷ್ಠ ಈ ಬಾಬ್ತು 4 ಏತ ನೀರಾವರಿ ಯೋಜನೆಗಳನ್ನಾದರೂ ಸುಸ್ಥಿತಿಗೆ ತರಬೇಕಾಗುತ್ತದೆ. ಮತ್ತು ಉಳಿದ 12 ಕೆರೆಗಳಿಗೆ ನೀರುಣಿಸುವ ಕೆಲಸವನ್ನು ಏನು ಕೈಗೆತ್ತಿಕೊಂಡಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ದಯಮಾಡಿ ಅಪೂರ್ಣಗೊಂಡಿರುವ ಯೋಜನೆಗಳನ್ನು ಕಾಲಮಿತಿಯೊಳಗಡೆ ಈ ಕೆಲಸವನ್ನು ಮಾಡಿಕೊಡಬೇಕು. ಏಕೆಂದರೆ, ಉತ್ತರದಲ್ಲಿ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಆದ್ದರಿಂದ ಈ ಕೆಲಸವನ್ನು ಪೂರ್ಣಗೊಳಿಸಿಕೊಡಬೇಕೆಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದರಲ್ಲಿ ಸ್ವಲ್ಪ ಮಟ್ಟಿಗೆ ಸತ್ಯ ಇದೆ. ಅವರು ಹೇಳಿದ್ದರಲ್ಲಿ ಏನೂ ತಪ್ಪಿಲ್ಲ. Tailend ನ ಸಮಸ್ಯೆ ಕೇವಲ ನಿಮ್ಮ ಭಾಗದಲ್ಲಿ ಒಂದೇ ಕಡೆ ಅಲ್ಲ. ಎಲ್ಲಾ ಜಲಾಶಯಗಳಲ್ಲಿಯೂ ಕೂಡ ಅಂದರೆ, ಅದು ರಾಜ್ಯದ ತುಂಗಾಭದ್ರಾ ಜಲಾಶಯ ಇರಬಹುದು, ನಿಮ್ಮದು ಇರಬಹುದು. ಈ ರೀತಿಯಲ್ಲಿ ಎಲ್ಲಾ ಕಡೆ ಈ tailend ನಲ್ಲಿ ಒಂದು ದೊಡ್ಡ ಸಮಸ್ಯೆ ಇದೆ. ಈ ವಿಷಯವಾಗಿ ಪಕ್ಷಾತೀತವಾಗಿ ಎಲ್ಲರೂ ಸಮಗ್ರವಾಗಿ ಸೇರಿಸಿಕೊಂಡು ತೀರ್ಮಾನ ತೆಗೆದುಕೊಂಡು ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ಪ್ರಾರಂಭದಿದ ಕೆಳಗಡೆ ಬರುವಷ್ಟರಲ್ಲಿ ಸುಮಾರು 22 ಲಕ್ಷ ಪಂಪ್‌ಸೆಟ್‌ಗಳ ಪೈಕಿ ಸುಮಾರು 7 ಲಕ್ಷ ಪಂಪ್‌ಸೆಟ್‌ಗಳನ್ನು ನಾಲೆಗೆ ಅಳವಡಿಸಿಕೊಂಡಿರುತ್ತಾರೆ. ಇದು ಕೇವಲ ಒಂದೆರಡು ಲಕ್ಷಗಳ ವಿಷಯ ಅಲ್ಲ, 25 ಲಕ್ಷ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಂಪ್‌ಸೆಟ್‌ಗಳಿವೆ. ನಾನು ಇಂಧನ ಸಚಿವನಾಗಿದ್ದಾಗಲೂ ಈ ವಿಚಾರವಾಗಿ ಗಮನಿಸಿದ್ದೇನೆ. ಈಗಲೂ ಸಹ ಈ ವಿಚಾರದಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಮೇಲ್ಭಾಗದಿಂದ ಕೆಳ ಭಾಗಕ್ಕೆ ನೀರು ಹೋಗುವುದಿಲ್ಲ. ತುಂಗಾಭದ್ರಾ ಜಲಾಶಯದ ವಿಚಾರವಾಗಿ ಹೇಳುವುದಾದರೆ ಮಧ್ಯೆ ಆಂಧ್ರಪ್ರದೇಶದಿಂದ ನೀರು ಹೋಗುತ್ತದೆ. ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕಿನವರಿಗೆ ಬೇಕಾದಷ್ಟು ಇದೆ. ಆದರೆ, ಈಗ ಮಾನ್ಯ ಸದಸ್ಯರು ಯಾವ ಕೆಲಸವಾಗಿ ಹೇಳುತ್ತಿದ್ದಾರೆ, ಅದರ ಬಗ್ಗೆ ವ್ಯಾಪಕವಾದಂತಹ ಒಂದು ಚರ್ಚೆಯನ್ನು ಮಾಡೋಣ. ಈ ವಿಷಯವಾಗಿ ನೀವು ಒಂದು ದಿನ ಚರ್ಚೆಗೆ ನಿಗದಿ ಮಾಡಿ. ಈ ವಿಷಯವಾಗಿ ಎಲ್ಲರೂ ಸಹ ಒಂದು ಒಟ್ಟಾರೆ ಅಭಿಪ್ರಾಯಕ್ಕೆ ಬರಬೇಕಾಗಿದೆ. ರಾಯಚೂರಿನ ಎಂಎಲ್‌ಎ.ಗಳು ಎಲ್ಲರೂ ಸೇರಿ ಈ ವಿಷಯವಾಗಿ ಒಂದು ಪತ್ರವನ್ನು ಬರೆದುಕೊಟ್ಟಿದ್ದಾರೆ.

(328) 11–12–2018 11–00 SV-AK

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಡಿ.ಕೆ.ಶಿವಕುಮಾರ್ (ಮುಂದು):–**

ಎಲ್ಲರೂ ಸೇರಿ ಪಕ್ಷಾತೀತವಾಗಿ ಅರ್ಧದಿನದ ಮಟ್ಟಿಗೆ tail end ವಿಚಾರದಲ್ಲಿ ಹೇಗೆ ಹೋಗಬೇಕು, ಈ ಮಧ್ಯೆ ಯಾವ ರೀತಿ tapping ಆಗುತ್ತಿದೆ. ಹೇಗೆ ರಕ್ಷಣೆ ಆಗಬೇಕು ಎಂಬುದರ ಬಗ್ಗೆ ಚರ್ಚೆಯಾಗಬೇಕಾಗಿದೆ. 10,000 ಎಕರೆಯನ್ನು ಅಚ್ಚುಕಟ್ಟು ಪ್ರದೇಶವೆಂದು ತೀರ್ಮಾನ ಮಾಡಿದ ಮೇಲೆ 12,000 ಎಕರೆಯವರೆಗೆ ವಿಸ್ತರಣೆ ಮಾಡಿಕೊಂಡು ಹೋದರೆ 10,000 ಎಕರೆಯ ವ್ಯಾಪ್ತಿಯಲ್ಲಿ ಬರುವ ರೈತನಿಗೂ ಸಿಗುವುದಿಲ್ಲ. 7000–8000ಕ್ಕೆ ನಿಂತುಬಿಡುತ್ತದೆ. ಒಂದು ಬೆಳೆಯನ್ನು ಬೆಳೆಯುವ ಬದಲು ಒಂದು ಬೆಳೆ, ಎರಡು ಬೆಳೆ, ಮೂರು ಬೆಳೆ ಈ ರೀತಿ ಬೆಳೆಯುತ್ತಾರೆ. ಅರ್ಧ ಹಾಕಿಬಿಟ್ಟು ಮಧ್ಯದಲ್ಲಿಯೇ ಒಂದು ಒತ್ತಡವನ್ನು ಹಾಕುತ್ತಾರೆ. ಇದನ್ನು ನಮ್ಮ ಸ್ಥಳೀಯ ಸಮಿತಿಗಳು ನಿರ್ಧಾರ ಮಾಡಿದರೂ ಕೆಲಸ ಮಾಡುವುದು ಕಷ್ಟವಾಗುತ್ತದೆ. ಇದನ್ನು ಮಾನ್ಯ ಡಿ.ಸಿ.ತಮ್ಮಣ್ಣನವರು ಬಹಳ ಡಿಮ್ಯಾಂಡ್ ಮಾಡಿ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಕೆಲವು ಭಾಗವನ್ನು ತೆಗೆದುಕೊಳ್ಳುತ್ತಿದ್ದಾರೆ. ಉಳಿದಂತೆ ರೂ.77 ಕೋಟಿ ಮತ್ತು ರೂ.94 ಕೋಟಿ ಎರಡು ಬೃಹತ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ವಿಚಾರದಲ್ಲಿ ತಾವು ನೀಡುತ್ತಿರುವ ಸಲಹೆಗಳನ್ನು ಮತ್ತೊಮ್ಮೆ ಪರಿಗಣಿಸಲಾಗುವುದು. ಎಲ್ಲಾ ಕಡೆಯಲ್ಲಿಯೂ cropping pattern ಬಗ್ಗೆ ಸ್ವಲ್ಪ ಚಿಂತನೆಯನ್ನು ಮಾಡಬೇಕು. ಏಕೆಂದರೆ ಎಲ್ಲೋ ಒಂದು ಕಡೆ ಮಾತ್ರ ಕಬ್ಬು ಎಂದು ಹೇಳುತ್ತಿದ್ದರು. ಆದರೆ ಎಲ್ಲಾ ಕಡೆಯಲ್ಲಿಯೂ ಕಬ್ಬು ಹಾಕಿ ಬಿಟ್ಟರೆ ನೀರಿಗೆ ಬಹಳ ತೊಂದರೆಯಾಗುತ್ತದೆ. ಬೀಗವನ್ನು ಈಗಾಗಲೇ ನಾವು ಕೇಂದ್ರದ ಅಧಿಕಾರಿಗಳಿಗೆ ಹಸ್ತಾಂತರ ಮಾಡಿರುತ್ತೇವೆ. ಇದರ ಬಗ್ಗೆ ವ್ಯಾಪಕವಾದ ಚರ್ಚೆಯನ್ನು ಮಾಡಲು ಮಾನ್ಯ ಸದಸ್ಯರಿಂದ ಸೂಕ್ತವಾದ ಸಲಹೆಗಳನ್ನು ನಾನು ನಿರೀಕ್ಷೆ ಮಾಡುತ್ತೇನೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀ ಪಿ.ಆರ್.ರಮೇಶ್ ಅವರದ್ದಾಗಿದ್ದು, ಆ ಪ್ರಶ್ನೆಯು ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ವರ್ಗಾವಣೆಯಾಗಿರುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಅಂತರ್ಜಲ ಕಾಯ್ದೆಯ ವಿಷಯವು ಸಣ್ಣ ನೀರಾವರಿ ಇಲಾಖೆಯ ಅಡಿಯಲ್ಲಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಬರುತ್ತದೆ.

**ಸಭಾಪತಿಯವರು:–** ಮಾನ್ಯ ರಮೇಶ್‌ರವರೇ, ಉತ್ತರ ಹೇಳುವವರು ಯಾರೂ ಇಲ್ಲ. ವರ್ಗಾವಣೆಯಾಗಿರುವುದರಿಂದ ನಾನು ನಂತರ ನೋಡಿ ಹೇಳುತ್ತೇನೆ. ಮುಂದಿನ ಪ್ರಶ್ನೆ ಶ್ರೀ ಆರ್.ಧರ್ಮಸೇನ ಅವರದ್ದು, ಅವರು ಸದನದಲ್ಲಿ ಹಾಜರಿರುವುದಿಲ್ಲ. ಮುಂದಿನ ಪ್ರಶ್ನೆ ಶ್ರೀ ಸಿ.ಆರ್.ಮನೋಹರ್ ಅವರದ್ದಾಗಿದ್ದು, ಅವರೂ ಸಹ ಹಾಜರಿಲ್ಲ. ನಂತರದ ಪ್ರಶ್ನೆ ಶ್ರೀ ನಿರಾಣಿ ಹಣಮಂತ ರುದ್ರಪ್ಪ ಇವರದ್ದಾಗಿದೆ.

**ಪ್ರಶ್ನೆ ಸಂಖ್ಯೆ: 280**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಜಲಾಶಯದ ಎತ್ತರವನ್ನು 519.60 ಮೀ.ನಿಂದ 524.256 ಮೀ.ಗೆ ಎತ್ತರಿಸುವ ಕಾರ್ಯದ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದು, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. '2012ರಿಂದ ಇಲ್ಲಿಯವರೆವಿಗೂ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಭೂ ಸ್ವಾಧೀನ ಪಡಿಸಿಕೊಂಡಿರುವಂತಹ ಜಮೀನಿಗೆ ಎಷ್ಟು ಪರಿಹಾರವನ್ನು ಕೊಡಲಾಗಿದೆ' ಎಂದು ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು 'ಸರ್ಕಾರದಿಂದ ಅಧಿಸೂಚನೆಗೊಂಡಿರದ ಕಾರಣ ಕಾರ್ಯ ವಿಳಂಬವಾಗಿದೆ' ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. ಅಧಿಸೂಚನೆಯನ್ನು ಹೊರಡಿಸಬೇಕಾದಂತಹ ಜವಾಬ್ದಾರಿ ಇರುವ ಸರ್ಕಾರ 2012ರಿಂದ ಇಲ್ಲಿಯವರೆವಿಗೂ ಏಕೆ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲ ಎನ್ನುವುದಕ್ಕೆ ಕಾರಣವನ್ನು ಕೇಳಬಯಸುತ್ತೇನೆ. ಈ ರೀತಿ ತಡವಾಗಿ ಅಧಿಸೂಚನೆಯನ್ನು ಹೊರಡಿಸಿದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸಾಕಷ್ಟು ವಿಳಂಬವಾಗಿ ಆ ಭಾಗದ ಸಂತ್ರಸ್ತರು ಸಾಕಷ್ಟು ನೋವನ್ನು ಅನುಭವಿಸುತ್ತಿದ್ದಾರೆ. ಹಾಗಾಗಿ ಶೀಘ್ರದಲ್ಲಿಯೇ ಪರಿಹಾರವನ್ನು ಒದಗಿಸತಕ್ಕಂತಹ ಕೆಲಸ ಈ ಭಾಗದಲ್ಲಿ ಆಗಬೇಕಾಗಿದೆ. ಎಫ್.ಆರ್.ಎಲ್ 524.256 ಮೀಟರ್‌ಗೆ ಎತ್ತರಿಸಬೇಕಾದಂತಹ ಜಮೀನಿನಲ್ಲಿ ಈಗಾಗಲೇ ಅಧಿಸೂಚನೆಯನ್ನು ಸರ್ಕಾರ ಹೊರಡಿಸಿದೆ. ಸುಮಾರು 1,33,000 ಎಕರೆ ಜಮೀನಿಗೆ ಈಗಾಗಲೇ ನೋಟಿಫಿಕೇಷನ್ ಅನ್ನು ಹೊರಡಿಸಲಾಗಿದ್ದು, ಪರಿಹಾರವನ್ನು ಕೊಟ್ಟಿರುವುದು ಕೇವಲ 14,756 ಎಕರೆಗೆ ಮಾತ್ರ. ಉಳಿದ 1,20,000 ಎಕರೆಗೆ ನೋಟಿಫಿಕೇಷನ್ ಆಗಿ ಐದು ವರ್ಷಗಳು ಕಳೆದಿದ್ದರೂ ಸಹ ಇಂದಿಗೂ ಪರಿಹಾರವನ್ನು ಒದಗಿಸಿರುವುದಿಲ್ಲ. ಹೀಗಾಗಿ ನೋಟಿಫಿಕೇಷನ್ ಆಗಿರುವ ಜಮೀನು ಸಹ ಡಿನೋಟಿಫಿಕೇಷನ್ ಆಗುತ್ತಿದೆ. Automatic ಆಗಿ ಕಾನೂನಿನಡಿಯಲ್ಲಿ vitiate ಆಗಿ ಹೋಗುತ್ತಿದೆ. ಇದರಿಂದಾಗಿ ಸಂತ್ರಸ್ತರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ನೋಟಿಫಿಕೇಷನ್ ಆಗಿ ನಾಲ್ಕೈದು ವರ್ಷದ ಅವಧಿಯಲ್ಲಿ ಯಾವ ರೈತನೂ ಕೂಡ ಆ ಜಮೀನಿನ ಮೇಲೆ ಸಾಲ ತೆಗೆದುಕೊಳ್ಳುವುದಾಗಲೀ, ವಾರ್ಸಾ ಮಾಡುವುದಾಗಲೀ, ವಾಟ್ನೀ ಮಾಡುವುದಾಗಲೀ, ಮಾರಾಟ ಮಾಡುವುದಕ್ಕಾಗಲೀ ಬರುವುದಿಲ್ಲ. ಅಲ್ಲಿ ಕಾನೂನಿನ ತೊಡಕಾಗುತ್ತಿದೆ. ಈ ಎಲ್ಲಾ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಿನ್ನೆಲೆಯಲ್ಲಿ ಸಂತ್ರಸ್ತರು ಕಳೆದ ಆರೇಳು ವರ್ಷಗಳಿಂದ ನೋವನ್ನು ಅನುಭವಿಸುತ್ತಿದ್ದಾರೆ. ಹೀಗಾಗಿ ಪುನಃ ನೋಟಿಫಿಕೇಷನ್ ಮಾಡಬೇಕಾದ ಪರಿಸ್ಥಿತಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಬಂದಿದೆ. ನೋಟಿಫಿಕೇಷನ್ ಆಗಿರತಕ್ಕಂತಹ ಜಮೀನಿಗೆ vitiate ಆಗುವಂತಹ ಪರಿಸ್ಥಿತಿ ಏಕೆ ಬರುತ್ತಿದೆ ಎಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಬಾಗಲಕೋಟೆ ನಗರದ ಕಟ್ಟಡಗಳ ಜೊತೆಯಲ್ಲಿ 20 ಗ್ರಾಮಗಳು ಸ್ಥಳಾಂತರಗೊಳ್ಳುತ್ತಿವೆ ಎಂಬ ಉತ್ತರವನ್ನು ಕೊಡಲಾಗಿದೆ. ಆ 20 ಗ್ರಾಮಗಳೂ ಸೇರಿ 23,331 ಕಟ್ಟಡಗಳು ಬಾಧಿತವಾಗುತ್ತಿದ್ದು, ಅವುಗಳನ್ನು ಸ್ಥಳಾಂತರ ಮಾಡಬೇಕಾಗಿದೆ. ಒಂದು ಮನೆಯಲ್ಲಿ ಐದು ಜನ ಸದಸ್ಯರಿದ್ದರೆ ಕಡಿಮೆಯೆಂದರೂ ಒಂದು ಲಕ್ಷ ಜನರನ್ನು ಸ್ಥಳಾಂತರ ಮಾಡಬೇಕಾಗುತ್ತದೆ. ಯಾವೊಂದು ಕಟ್ಟಡಕ್ಕೂ ಕಳೆದ ಆರೇಳು ವರ್ಷಗಳಿಂದಲೂ ಪರಿಹಾರ ಕೊಟ್ಟಿರುವುದಿಲ್ಲ. ಬಾಗಲಕೋಟೆ ನಗರವನ್ನು ಹೊರತುಪಡಿಸಿ 20 ಗ್ರಾಮಗಳಲ್ಲಿ ಒಂದು ಮನೆಗೂ ಸಹ ಪರಿಹಾರವನ್ನು ಒದಗಿಸಿರುವುದಿಲ್ಲ ಎಂದು ಹೇಳುವುದಕ್ಕೆ ಬಹಳ ನೋವೆನ್ನಿಸುತ್ತದೆ. ಯಾವಾಗ ಪರಿಹಾರವನ್ನು ನೀಡಲಾಗುವುದು, ಯಾವ ಕಾಲಮಿತಿಯೊಳಗೆ ಪರಿಹಾರವನ್ನು ನೀಡಲಾಗುವುದು ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟ ಪಡಿಸಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಪುನರ್ವಸತಿಯ ಸಲುವಾಗಿ 4,908 ಎಕರೆಯನ್ನು ಭೂಸ್ವಾಧೀನ ಪಡಿಸಿಕೊಂಡು ಅದರಲ್ಲಿ ಕೇವಲ 1770 ಎಕರೆಗೆ ಮಾತ್ರ ಪರಿಹಾರ ಒದಗಿಸಲಾಗಿದೆ. ಉಳಿದ 3158 ಎಕರೆ ಸ್ವಾಧೀನ ಪಡಿಸಿಕೊಂಡಿರುವ ಜಮೀನಿಗೆ ಪರಿಹಾರವನ್ನೇ ಕೊಟ್ಟಿರುವುದಿಲ್ಲವೆಂದ ಮೇಲೆ ಈ 20 ಪುನರ್ವಸತಿ ಕೇಂದ್ರಗಳ ಪುನರ್ ನಿರ್ಮಾಣ ಯಾವ ಹಂತದಲ್ಲಿ ಆಗುತ್ತದೆ ಎಂಬುದನ್ನು ಸ್ಪಷ್ಟ ಪಡಿಸಬೇಕು. ಭೂ ಪರಿಹಾರವನ್ನು ಕೊಡುವ ಸಂದರ್ಭದಲ್ಲಿ sales statistics ಆಧಾರದ ಮೇಲೆ ಒಪ್ಪಿಗೆಯ ಆಧಾರದ ಮೇಲೆ ಒಮ್ಮತದ ಬೆಲೆಯನ್ನು ಕೊಡಬೇಕು ಎಂಬುದು ಆ ಭಾಗದ ಜನರ ಹಕ್ಕೊತ್ತಾಯವಾಗಿರುವುದರಿಂದ ಭಾವಲತ್ತಿ ಮತ್ತು ಕುಂದರಗಿ ಗ್ರಾಮದ ಐತೀರ್ಪಿನಲ್ಲಿ ಕೇವಲ ಒಂದು ಎಕರೆ ಒಣಬೇಸಾಯ ಜಮೀನಿಗೆ ರೂ.2,40,000/– ಮತ್ತು ನೀರಾವರಿ ಜಮೀನಿಗೆ ರೂ.5,20,000/–ಗಳನ್ನು ಮಾಡಲಾಗಿದೆ. ಲಂಬಾಣಿ ತಾಂಡಾದ ಜಮೀನು ಹೆಚ್ಚಾಗಿದ್ದು ಇಂದಿಗೂ ಕೂಡ ಅದು ಪಾವತಿಯಾಗದೆ ಉಳಿದಿರುವ ಅಂಶವನ್ನು ನಾನು ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ನಿರಾಣಿಯವರು ಪ್ರಶ್ನೆಯೊಂದಿಗೆ ಅವರೇ ಉತ್ತರವನ್ನು ಹೇಳಿಬಿಟ್ಟಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆ ನಮಗೆಲ್ಲಾ ಒಂದು ದೊಡ್ಡ ಕಾಯಿಲೆಯೇ ಬಂದಂತಾಗಿದೆ. ಬಹಳಷ್ಟು ಜನ ರೈತರು ತಮ್ಮ ಜಮೀನನ್ನು ಕಳೆದುಕೊಳ್ಳುತ್ತಿದ್ದಾರೆ. 524 ಅಡಿಯಷ್ಟು ಎತ್ತರಕ್ಕೆ ಏರಿಸಿದರೆ ಎಷ್ಟು ಎಂಬುದಕ್ಕೆ ಒಂದು ಲೆಕ್ಕಾಚಾರವಿದೆ. ಅವರು ಹೇಳುತ್ತಿರುವುದು ನಿಜ. ಇದರ ಬಗ್ಗೆ ಒಂದೊಂದು ಭಾಗದವರು ಒಂದೊಂದು ರೀತಿಯಾಗಿ ಗೊಂದಲದಲ್ಲಿದ್ದಾರೆ. ಈಗ ಎಷ್ಟು ದರವನ್ನು ಕೊಡಬೇಕು ಎನ್ನುವುದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಸಚಿವ ಸಂಪುಟ ಉಪಸಮಿತಿ ಅಂತಿಮವಾಗಿದೆ. 519 ಅಡಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು, 524 ಅಡಿಗೆ ಒಂದು ಈ ರೀತಿಯಿದ್ದು, ಸಾವಿರಾರು ಕೋಟಿ ರೂಪಾಯಿಗಳ ಪರಿಹಾರವನ್ನು ನೀಡಬೇಕಾಗುತ್ತದೆ. ಇನ್ನು 15 ದಿನಗಳೊಳಗಾಗಿ ಡಾ:ಜಿ.ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ಎರಡು-ಮೂರು ಸಚಿವ ಸಂಪುಟ ಉಪಸಮಿತಿಗಳನ್ನು ಮಾಡಲಾಗುತ್ತದೆ. ಹಿಂದೆ ಮಾನ್ಯ ಕಾಗೋಡು ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಅರ್ಧ ಕೆಲಸವನ್ನು ಮಾಡಲಾಗಿತ್ತು. ಆ ಸಭೆಗೆ ತಮ್ಮೆಲ್ಲರನ್ನು ಸಹ ಕರೆಯಲಾಗುವುದು. ಜೊತೆಯಲ್ಲಿ ಕೆಲವು ರೈತರು ಐದು ಲಕ್ಷ ರೂಪಾಯಿ ಬೇಕು ಎಂದು 10 ಎಕರೆಯನ್ನು ಇಪ್ಪತ್ತೈದು ಲಕ್ಷ ರೂಪಾಯಿಗೆ ರಿಜಿಸ್ಟರ್ ಮಾಡಲಾಗಿದೆ. ಇಪ್ಪತ್ತೈದು ಲಕ್ಷ ರೂಪಾಯಿಯನ್ನು ನಾಲ್ಕು ಬಾರಿ ಕೊಡಬೇಕೆಂದಾದರೆ ಒಂದು ಕೋಟಿ ರೂಪಾಯಿ ಕೊಡಬೇಕಾಗುತ್ತದೆ. ಈ ರೀತಿಯಾಗಿ ಬಹಳಷ್ಟು internal problems ಇವೆ. ಸರ್ಕಾರಕ್ಕೆ ದೊಡ್ಡ ಹೊರೆಯಾಗಬಾರದು ಮತ್ತು ಸಂತ್ರಸ್ತರಿಗೂ ತೊಂದರೆಯಾಗಬಾರದು ಎನ್ನುವ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡುತ್ತೇವೆ.

(329) 11.12.2018 ಕೆಜಿ.ಎಕೆ 11.10 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಕೆ.ಶಿವಕುಮಾರ್ (ಮುಂದು...):-**

ತಾವು ಹೇಳಿದಂತಹ ಎಲ್ಲಾ ವಿಚಾರಗಳು ಸತ್ಯ ಇದೆ. ಈ ವಿಚಾರದಲ್ಲಿ ತಾವು ಸಹ ಸಹಕಾರ ಕೊಡಬೇಕು. ಏಕೆಂದರೆ, ನೀರನ್ನು ಉಪಯೋಗಿಸಿಕೊಳ್ಳಬೇಕು. ನಮಗೆ ತೀರ್ಪು ಬಂದಿದೆ. ಜೊತೆಗೆ notification ಆಗಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ appeal ಹಾಕಿದ್ದೇವೆ. Appeal ಅನ್ನು ವಾಪಸ್ಸು ತೆಗೆದುಕೊಳ್ಳುವವರೆಗೂ notification ಮಾಡುವುದಿಲ್ಲವೆಂದು ಕೇಂದ್ರ ಸರ್ಕಾರದವರು ಹೇಳುತ್ತಾರೆ. ನಮ್ಮಲ್ಲಿ ಈ ರೀತಿಯ ಅನೇಕ ಗೊಂದಲಗಳು ಇವೆ. ಆದ್ದರಿಂದ, ಅದನ್ನು ಆದಷ್ಟು ಬೇಗ ಸರಿ ಮಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮಗೆ 130 ಟಿ.ಎಂ.ಸಿ ನೀರು allocation ಆಗಿದೆ. 519.60 ರಿಂದ 524.256 ಮೀಟರ್‌ವರೆಗೆ ಆಲಮಟ್ಟಿ ಜಲಾಶಯವನ್ನು ಎತ್ತರಿಸದಿದ್ದರೆ 130 ಟಿ.ಎಂ.ಸಿ ನೀರು ಬಳಕೆ ಆಗುವುದಿಲ್ಲ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಇದೊಂದು ಮಾರಕವಾಗುವಂತಹ ಪರಿಸ್ಥಿತಿ ಉದ್ಭವಿಸಿದೆ. ಮಾನ್ಯ ಸದಸ್ಯರು ಬಹಳ ಮಹತ್ವದ ಪ್ರಶ್ನೆಯನ್ನು ಕೇಳಿದ್ದಾರೆ. ಭೂ-ಸ್ವಾಧೀನ ಪ್ರಕ್ರಿಯೆಯಿಂದ 22 ಹಳ್ಳಿಗಳು ಮುಳುಗಡೆ ಆಗುತ್ತವೆ. ಭೂ-ಸ್ವಾಧೀನ ಪ್ರಕ್ರಿಯೆ ಕೆಲಸ ಇನ್ನೂ ನಡೆಯುತ್ತಿಲ್ಲ. ಇನ್ನೂ 1.30 ಲಕ್ಷ ಎಕರೆ ಭೂ-ಸ್ವಾಧೀನ ಪ್ರಕ್ರಿಯೆ ಮಾಡಿಕೊಳ್ಳಬೇಕು. ಅದರ ಪ್ರಗತಿ ಬಹಳ ಕುಂಠಿತವಾಗಿ ನಡೆದಿದೆ. ಆಲಮಟ್ಟಿ ಜಲಾಶಯವನ್ನು ಎತ್ತರಿಸದಿದ್ದರೆ, 130 ಟಿ.ಎಂ.ಸಿ ನೀರನ್ನು ಬಳಕೆ ಮಾಡಿಕೊಳ್ಳದಿದ್ದರೆ, ನಮ್ಮ ಭಾಗದಲ್ಲಿನ ನೀರಾವರಿ ಯೋಜನೆಗಳ ಗತಿ ಏನು ಎಂಬ ಚಿಂತನೆಯಲ್ಲಿದ್ದೇವೆ. ನಾವು ಬಹಳ ಆತಂಕದಲ್ಲಿದ್ದೇವೆ. ಮಾನ್ಯ ಸಚಿವರು ಬಹಳ ಕ್ರಿಯಾಶೀಲ ಸಚಿವರಾಗಿದ್ದಾರೆ ಮತ್ತು ಅವರು ಹೆಚ್ಚು ಕೆಲಸ ಮಾಡುತ್ತಾರೆಂದು ನಾವು ಭಾವಿಸಿದ್ದೇವೆ. ಭೂ-ಸ್ವಾಧೀನ ಪ್ರಕ್ರಿಯೆ ಮುಗಿಯಬೇಕು. ಹೊಸ ಯೋಜನೆಗಳ ಪ್ರಕಾರ, water impound ಮಾಡಬೇಕಾದರೆ, ಭೂ-ಸ್ವಾಧೀನ ಪ್ರಕ್ರಿಯೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದ ಒಂದು ವರ್ಷದ ನಂತರ water impound ಮಾಡಬೇಕು. Water impound ಮಾಡಬೇಕಾದರೆ, ಅದಕ್ಕೂ ಪೂರ್ವದಲ್ಲಿ ಎಲ್ಲಾ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಅವುಗಳನ್ನು rehabilitate ಮಾಡಬೇಕು. ನಂತರ ಮುಳುಗಡೆ ಆಗುವಂತಹ ಭೂಮಿಗಳಿಗೆ ಪರಿಹಾರವನ್ನು ಕೊಡಬೇಕು. ಇಷ್ಟೆಲ್ಲಾ ಮಾಡಿದ ಒಂದು ವರ್ಷದ ನಂತರ water impound ಮಾಡಬೇಕು. ನಮ್ಮಲ್ಲಿ ಅನೇಕ lift irrigation schemes ಇವೆ. 130 ಟಿ.ಎಂ.ಸಿ ನೀರನ್ನು ಬಳಸಿಕೊಳ್ಳಲಿಲ್ಲವೆಂದರೆ ಉತ್ತರ ಕರ್ನಾಟಕದ ಭಾಗದ ಗತಿ ಗಂಗವ್ವ ಆಗುತ್ತದೆ. ಅದಕ್ಕೆ ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆಲಮಟ್ಟಿ ಜಲಾಶಯವನ್ನು ಎತ್ತರಿಸುವುದು ಮತ್ತು ಭೂ–ಸ್ವಾಧೀನ ಪ್ರಕ್ರಿಯೆಯ ಕೆಲಸ ಯುದ್ಧೋಪಾದಿಯಲ್ಲಿ ನಡೆಯಬೇಕು. ಅದಕ್ಕೆ ಎಷ್ಟೇ ಹಣ ಖರ್ಚಾಗಲಿ, ಏನೇ ಹೋಗಲಿ, the Government must beg, borrow or steal. ಹಣವನ್ನು ತೆಗೆದುಕೊಂಡು ಬಂದು ಉತ್ತರ ಕರ್ನಾಟಕದ ಭಾಗಕ್ಕೆ ಮೊದಲನೇ ಆದ್ಯತೆ ಕೊಟ್ಟು ಮಾಡಬೇಕು. ಕೃಷ್ಣಾ ನದಿ ಉತ್ತರ ಕರ್ನಾಟಕದ ಜೀವನಾಡಿ. ಇಲ್ಲಿ ನಾವು ಏನಾದರೂ ಹಿಂದೇಟು ಹಾಕಿದರೆ ಉತ್ತರ ಕರ್ನಾಟಕದ ಭಾಗಕ್ಕೆ ಬಹಳ ದೊಡ್ಡ ಪ್ರಮಾಣದ ಅನ್ಯಾಯವಾಗುತ್ತದೆಂದು ನಾನು ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

**ಪ್ರಶ್ನೆ ಸಂಖ್ಯೆ 244**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಜೀವನದಿಯಾದ ಕೃಷ್ಣಾ ಕೊಳ್ಳದಲ್ಲಿ "ಬಿ" ಸ್ಕೀಮ್‌ನಡಿ ರಾಜ್ಯಕ್ಕೆ ಹಂಚಿಕೆಯಾಗಿರುವ ನೀರು ಆಂಧ್ರ ಪ್ರದೇಶದ ಪಾಲಾಗುತ್ತಿರುವ ಬಗ್ಗೆ ಹಾಗೂ ನಮ್ಮ ಪಾಲಿನ ನೀರನ್ನು ಕಾಲಮಿತಿಯಲ್ಲಿ ಬಳಸಿಕೊಳ್ಳುವುದು ವಿಳಂಬವಾಗುತ್ತಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ತಾವು ಉತ್ತರವನ್ನು ಕೊಟ್ಟು, ಈ ಯೋಜನೆಗಳ ಅನುಷ್ಠಾನ ಕುರಿತು ಕೃಷ್ಣಾ ನ್ಯಾಯಾಧೀಕರಣ–2ರ ಅಂತಿಮ ಐತೀರ್ಪು ಕೇಂದ್ರ ಸರ್ಕಾರದಿಂದ ಹೊರಡಿಸಿರುವ ಅಧಿಸೂಚನೆಗೊಳಪಟ್ಟಿದ್ದು ಎಂದು ಹೇಳುತ್ತಾ, ಮುಂದೆ ಉತ್ತರದ 4ನೇ ಪ್ಯಾರಾದಲ್ಲಿ "ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರ ಅನುಷ್ಠಾನಕ್ಕಾಗಿ 130 ಟಿ.ಎಂ.ಸಿ. ನೀರಿನ ಹಂಚಿಕೆಯಾಗಿದ್ದು, ಸದರಿ ನೀರಿನ ಬಳಕೆಗಾಗಿ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್ 519.60 ಮೀಟರ್‌ನಿಂದ ಆರ್.ಎಲ್ 524.256 ಮೀಟರ್‌ವರೆಗೆ ಎತ್ತರಿಸುವುದಾಗಿದ್ದು, ಸದರಿ ಯೋಜನೆ 9 ಉಪ ಯೋಜನೆಗಳ ಅನುಷ್ಠಾನಕ್ಕೆ ಕ್ರಿಯಾ ಯೋಜನೆ ತಯಾರಿಸಲಾಗಿದೆ" ಎಂದು ಹೇಳಿದ್ದೀರಿ. ಮಾನ್ಯ ಸಚಿವರು ಮುಂದುವರೆದು, ಇದೇ ಪ್ರಶ್ನೆಗೆ ಉತ್ತರ ಕೊಡುತ್ತಾ, 'ವಿಳಂಬವಾಗಿದೆ' ಎಂಬುದನ್ನು ಒಪ್ಪಿಕೊಂಡಿದ್ದಾರೆ. ಈಗಾಗಲೇ ನಮ್ಮ ಸ್ನೇಹಿತರು ಮತ್ತು ಮಾನ್ಯ ಹಿರಿಯ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಇದರ ಬಗ್ಗೆ ಬಹಳ ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ. ಕಾವೇರಿ ಮತ್ತು ಕೃಷ್ಣಾ ನದಿಗಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ರಾಜ್ಯದ ಬಹು ದೊಡ್ಡ ನೀರಾವರಿ ಯೋಜನೆಗಳು. ಕಾವೇರಿಗೆ ತೊಂದರೆಯಾದಾಗ ಉತ್ತರ ಕರ್ನಾಟಕ ಭಾಗದ ಜನ ತಮ್ಮ ಜೊತೆಗೆ ನಿಂತಿರುವಂತಹ ಸಂದರ್ಭವನ್ನು ತಾವು ನೋಡಿದ್ದೀರಿ. ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿಯಾಗುವಂತಹ ವಿಚಾರ ಇರಬಹುದು ಅಥವಾ ಕಾವೇರಿ ಕೊಳ್ಳದಲ್ಲಿ ಯಾವುದೇ ವಿಚಾರ ಭುಗಿಲೆದ್ದಂತಹ ಸಂದರ್ಭದಲ್ಲಿ ಸಮಗ್ರ ಕರ್ನಾಟಕದ ಕನಸು ಕಂಡಂತಹ ಉತ್ತರ ಕರ್ನಾಟಕ ಭಾಗದ ಜನ ಯಾವಾಗಲೂ ಕಾವೇರಿ ಕೊಳ್ಳದ ವಿಷಯದಲ್ಲಿ ಯಾವುದೇ ಸರ್ಕಾರವಿದ್ದರೂ ಅದನ್ನು ಬೆಂಬಲಿಸಿದಂತಹ ಹಿನ್ನೆಲೆಯನ್ನು ತಾವು ನೋಡಿದ್ದೀರಿ. ಆದರೆ, ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಅಡಿಗಲ್ಲು ಇಟ್ಟು ಈ ಕೃಷ್ಣಾ ಕೊಳ್ಳದ ಯೋಜನೆ ಸುಮಾರು 4 ರಿಂದ 5 ದಶಕಗಳು ಕಳೆದು ಹೋದರೂ ಸಹ, ನಂತರ ನ್ಯಾಯಾಲಯದ ತೀರ್ಪು ಬಂದು ಸುಮಾರು ಆರು ವರ್ಷಗಳು ಕಳೆದು ಹೋಗಿದೆ. ನಮ್ಮ ಕೊರತೆ ಏನೆಂದರೆ, ಕಳೆದ ಆರು ವರ್ಷಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸುವಂತಹ ವಿಚಾರದಲ್ಲಿ ಸರ್ವಪಕ್ಷ ಸಭೆ ಆಗಲಿಲ್ಲ. ಏಕೆಂದರೆ, ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಕೇಂದ್ರ ಸರ್ಕಾರದ gazette notification ಆಗಲಿಲ್ಲವೆಂದು ಹೇಳಿದ್ದಾರೆ. ಏಕೆ gazette notification ಆಗಲಿಲ್ಲ? ತಾವು ಸರ್ವಪಕ್ಷದ ನಿಯೋಗವನ್ನು ಕರೆದುಕೊಂಡು ಮಾನ್ಯ ಪ್ರಧಾನ ಮಂತ್ರಿಗಳನ್ನಾಗಲಿ ಅಥವಾ ಸಂಬಂಧಪಟ್ಟ ಮಾನ್ಯ ಜಲಸಂಪನ್ಮೂಲ ಸಚಿವರನ್ನಾಗಲಿ ಭೇಟಿಯಾಗುವಂತಹ ವಿಚಾರದಲ್ಲಿ ಸರ್ಕಾರ ಏಕೆ ತನ್ನ ಮುಂದಿನ ಹೆಜ್ಜೆಯನ್ನು ಇಡಲಿಲ್ಲ ಎನ್ನುವಂತಹ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ಇದರ ಜೊತೆಗೆ ಆಂಧ್ರ ಪ್ರದೇಶ ಮತ್ತು ತೆಲಂಗಾಣ ಆದ ನಂತರ ಅವರು ಸಹ ನ್ಯಾಯಾಲಯಕ್ಕೆ ಹೋಗಿದ್ದಾರೆ. ಆದರೆ, ಅವರಿಗೆ ತಡೆಯಾಜ್ಞೆ ಸಿಕ್ಕಿರುವುದಿಲ್ಲ. ತಾವು ಇದನ್ನು ಗಮನಿಸಬೇಕಾಗಿದೆ. ಸುಮಾರು ಒಂದು ಲಕ್ಷ ಎಕರೆ ಭೂಮಿಗೆ ಹೆಚ್ಚುವರಿಯಾಗಿ ನೀರು ಆಗುವಂತಹ ಯೋಜನೆ ಇದು. ಈ ಯೋಜನೆಯಲ್ಲಿ ಅನೇಕ ಉತ್ತರ ಕರ್ನಾಟಕದ ಬಹು ನಿರೀಕ್ಷಿತ ನೀರಾವರಿ ಯೋಜನೆಗಳು ಜಾರಿಗೊಳ್ಳುವಂತಹ ವಿಚಾರದಲ್ಲಿ ಸರ್ಕಾರ ಕಾಲಮಿತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತದೆಯೇ ಎಂಬುದು ನಮ್ಮ ಮುಂದಿರುವಂತಹ ಪ್ರಶ್ನೆ. ಕಾವೇರಿ ಮತ್ತು ಕೃಷ್ಣಾ ನದಿಗಳು ಎರಡೂ ನಮ್ಮದು. ಮಾನ್ಯ ಸಚಿವರಿಗೆ ಉತ್ತರ ಕರ್ನಾಟಕದ ಬಗ್ಗೆ ಗೌರವ ಇದೆ. ಮಾನ್ಯ ಸಚಿವರು ಈ ಪ್ರಮುಖ ಇಲಾಖೆಯನ್ನು ಹೊಂದಿದ್ದಾರೆ. ಈ ಹಿಂದೆ ಮಾಜಿ ಸಚಿವರಾದ ಮಾನ್ಯ ಎಂ.ಬಿ.ಪಾಟೀಲ್‌ರವರು ನೀರಾವರಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಈ ಯೋಜನೆಯಡಿ ಹೆಚ್ಚು ನೀರು ಹರಿಸುವಂತಹ ಕಾಲುವೆಗಳನ್ನು ಮಾಡಿಸಿದ್ದಾರೆ. ಆದರೆ, ಆ ಕಾಲುವೆಗಳಿಗೆ ನೀರನ್ನು ಹರಿಸುವಂತಹ ಕೆಲಸ ಯಾವಾಗ ಆಗುತ್ತದೆ? ನಾವು ಇನ್ನೂ 30 ವರ್ಷಗಳ ಕಾಲ ಕಾಯಬೇಕೇ? ದಯವಿಟ್ಟು ಮಾನ್ಯ ಸಚಿವರು ಸರ್ವಪಕ್ಷ ನಿಯೋಗವನ್ನು ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ಕರೆದುಕೊಂಡು ಹೋಗುವಂತಹ ವಿಚಾರ ಇರಬಹುದು ಅಥವಾ ಈ ಯೋಜನೆಯನ್ನು ಕಾಲಮಿತಿಯಲ್ಲಿ ಮುಗಿಸುವಂತಹ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಬೇಕು. ಅಲ್ಲದೇ, ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ ಕೆಲವೊಂದು ಪೂರಕ ಪ್ರಶ್ನೆಗಳನ್ನು ಕೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಕಾಶ್ ರಾಥೋಡ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ಪ್ರಶ್ನೆಗೆ ಸರ್ಕಾರ ಉತ್ತರ ಕೊಟ್ಟಿದೆ. ಈಗಾಗಲೇ ಇದರ ಬಗ್ಗೆ ಮಾನ್ಯ ಸದಸ್ಯರಾದ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ ಮತ್ತು ಮಾನ್ಯ ಎಸ್.ಆರ್.ಪಾಟೀಲ್‌ರವರು ಪ್ರಸ್ತಾಪ ಮಾಡಿದ್ದಾರೆ. ನಮಗೆ ಸರ್ಕಾರದ ವತಿಯಿಂದ ಪುನರ್‌ವಸತಿ ಕಲ್ಪಿಸುವುದಕ್ಕೆ 30 ಸಾವಿರ ಕೋಟಿ ರೂಪಾಯಿಗಳ ಅಂದಾಜು ಮಾಡಲಾಗಿದೆ ಎಂದು ಮಾಹಿತಿ ಇದೆ. ಈ ಹಣವನ್ನು ಆಯವ್ಯಯದಲ್ಲಿ ಮೀಸಲು ಇಡದೆ ಮಾನ್ಯ ಎಸ್.ಆರ್.ಪಾಟೀಲ್‌ರವರು ಹೇಳಿದಂತೆ, ಈ ಯೋಜನೆ ಯುದ್ಧೋಪಾದಿಯ ರೀತಿಯಲ್ಲಿ ನಡೆಯದೆ ಹೋದರೆ ಒಂದೇ ಬಾರಿಗೆ ಅಷ್ಟು ಹಣವನ್ನು ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು. ಇದಕ್ಕೆ ಆಯವ್ಯಯದಲ್ಲಿ ಹಣವನ್ನು ಮೀಸಲಿಡಬೇಕು. ವಿಶೇಷವಾಗಿ ಬಿಜಾಪುರ ಜಿಲ್ಲೆಯಲ್ಲಿ ಭೂಮಿಯನ್ನು ಕಳೆದುಕೊಂಡಿದ್ದೇವೆ. ನಮಗೆ ಸಿಗುವಂತಹ ಪಾಲು ಇದುವರೆಗೂ ನಮಗೆ ಸಿಕ್ಕಿರುವುದಿಲ್ಲ ಹಾಗೂ ನಮಗೆ ಸಿಗುವಂತಹ ಸೌಲಭ್ಯಗಳು ಸಹ ಸಿಕ್ಕಿರುವುದಿಲ್ಲ. ನಮ್ಮ ಹಿಂದಿನ ಸರ್ಕಾರ 50 ಸಾವಿರ ಕೋಟಿ ರೂಪಾಯಿಗಳನ್ನು ಇದಕ್ಕೆ ವೆಚ್ಚ ಮಾಡಿ ಅದನ್ನು ಆಯವ್ಯಯದಲ್ಲಿಟ್ಟು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಸಾಕಷ್ಟು ಕೆಲಸವನ್ನು ಮಾಡಿದ್ದೇವೆ. ಈಗ ಇರುವಂತಹ ಸರ್ಕಾರವು ಕೂಡ ನಮ್ಮ ಸರ್ಕಾರ. ಮುಂದಿನ 5 ವರ್ಷದಲ್ಲಿ ಅದೇ ತರಹವಾದ ಆಯವ್ಯಯದಲ್ಲಿ ಸಾಕಷ್ಟು ಹಣವನ್ನು ಮೀಸಲಿಟ್ಟು ಪುನರ್‌ವಸತಿ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಈಗಾಗಲೇ 130 ಟಿ.ಎಂ.ಸಿ ನೀರು allocation ಆಗಿದೆ. ಈಗಾಗಲೇ ಸಾಕಷ್ಟು ನೀರು ಹರಿದುಕೊಂಡು ಹೋಗುತ್ತಿದೆ. ನಾವು ಆ ನೀರನ್ನು ತಡೆಹಿಡಿಯಬೇಕಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ಸಾಕಷ್ಟು ಜನ ರೈತರು ಸಂಕಷ್ಟದಲ್ಲಿದ್ದಾರೆ. ರೈತರಿಗೆ ಪುನರ್‌ವಸತಿಗೆ ಕೊಡುವಂತಹ ಹಣವನ್ನು ಹೆಚ್ಚಿಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಹೇಳಿದಂತೆ ಈ ಯೋಜನೆ ಬಹಳ ಶಕ್ತಿಶಾಲಿಯಾದಂತಹ ಯೋಜನೆ. ಈ ಹಿಂದಿನ ಸರ್ಕಾರಗಳು ಸಹ ಇದರ ಬಗ್ಗೆ ಬೇಕಾದಷ್ಟು ಪ್ರಯತ್ನ ಮಾಡಿವೆ. ಮಾನ್ಯ ಬಸವರಾಜ್ ಬೊಮ್ಮಾಯಿ, ಮಾನ್ಯ ಹೆಚ್.ಕೆ.ಪಾಟೀಲ್‌ರವರು ಮತ್ತು ಮಾನ್ಯ ಎಂ.ಬಿ.ಪಾಟೀಲ್‌ರವರು ಅವರವರ ಕಾಲದಲ್ಲಿ ಇದಕ್ಕೆ ಸಾಕಷ್ಟು ಒತ್ತುಗಳನ್ನು ಕೊಟ್ಟಿದ್ದಾರೆ.

(330) 11–12–2018 (11–20) ಎಂವಿ–ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಡಿ.ಕೆ.ಶಿವಕುಮಾರ್ (ಮುಂದು):–**

ಇವರು ಕೂಡ ಶ್ರೀ ಬಸವರಾಜ ಬೊಮ್ಮಾಯಿಯವರು, ಶ್ರೀ ಹೆಚ್.ಕೆ.ಪಾಟೀಲ್‌ರವರು ಮತ್ತು ಶ್ರೀ ಎಂ.ಬಿ.ಪಾಟೀಲ್‌ರವರು ಅವರವರ ಕಾಲದಲ್ಲಿ ಇದಕ್ಕೆ ಬೇಕಾದಷ್ಟು ಒತ್ತುಗಳನ್ನು ಕೊಟ್ಟಿದ್ದಾರೆ. ಇದು 2013ರಲ್ಲಿ ಆಗಿರುವುದು ನಿಜ. ಆದರೆ, ಅದರ ಗೆಜೆಟ್ ನೋಟಿಫಿಕೇಶನ್ ಇನ್ನೂ ಆಗಿಲ್ಲ. ಗೆಜೆಟ್ ನೋಟಿಫಿಕೇಶನ್ ಆಗದೇ ಹೋದರೂ ಸಹ ಕೆಲವು ಪ್ರಮುಖ ಕೆಲಸಗಳನ್ನು ಕೈಗೊಂಡಿದ್ದೇವೆ. ಅದನ್ನು ಹಂಚಬೇಕಾದರೆ ಮತ್ತೆ ಗೆಜೆಟ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೋಟಿಫಿಕೇಶನ್ ಆಗಬೇಕು. ನಾನು ಇದಕ್ಕೋಸ್ಕರ for the first time ನಾನು ಮಂತ್ರಿಯಾದ ತಕ್ಷಣ ಅಲ್ಲಿಗೆ ಹೋಗಿದ್ದೆ. ಒಂದು ವಾರ, ಹತ್ತು ದಿನದ ಹಿಂದೆ, ಎಲ್ಲಾ ಮಾಜಿ ನೀರಾವರಿ ಸಚಿವರುಗಳನ್ನು ಮತ್ತು ಮಾಜಿ ಮುಖ್ಯಮಂತ್ರಿಗಳನ್ನು ವಿಧಾನಸೌಧಕ್ಕೆ ಕರೆದು ಕಾವೇರಿ, ಮಹದಾಯಿ ಮತ್ತು ಕೃಷ್ಣೆ ವಿಚಾರವಾಗಿ ಒಂದು ಸಭೆಯನ್ನು ಮಾಡಿದ್ದೇವೆ. ಈ ಮೂರು ವಿಚಾರದಲ್ಲೂ ಏನೇನು ಸಮಸ್ಯೆ ಇದೆ ಮತ್ತು ಅವರ ಸಲಹೆ ಏನೆಂದು ಕೇಳಿದ್ದೇವೆ. ಸಲಹೆಗಳನ್ನೂ ಸಹ ನೀಡಿದ್ದಾರೆ. ಇದರ ಜೊತೆಗೆ ತಾಂತ್ರಿಕವಾಗಿ ನಮ್ಮ ಕಾನೂನು ತಂಡ ಕೂಡ ಕೆಲವು ಹೊಸ ಯೋಜನೆಗಳನ್ನು ಮಾಡುವುದಕ್ಕೆ ಆಲೋಚನೆ ಮಾಡಿದೆ. ಇನ್ನು ಮಹದಾಯಿ ಮತ್ತು ಇದರ ಬಗ್ಗೆಯು ಸಹ ನೋಟಿಫಿಕೇಶನ್ ಆಗಬೇಕು. ಈಗ SLP (Special Leave Petition) ಹಾಕಿರುವುದನ್ನು ಹಿಂತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಆರೇಳು ವರ್ಷವಾಗಿದೆ. ಅದು ಆಗುವವರೆಗೂ ನೀರಿಗೆ ಮೇಜರ್ ಚಾನಲ್‌ಗಳನ್ನು ಮಾಡಿದ್ದೇವೆ. ಆದರೆ, ಉಳಿಯುವಂತಹ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗುವುದಿಲ್ಲ, ಅದರ ಜೊತೆಗೆ ಪರಿಹಾರಕ್ಕೆ ಸಂಬಂಧಪಟ್ಟಂತೆ ಇದೆ. ಇದಕ್ಕೆ ಸುಮಾರು ಹದಿನೆಂಟು ಸಾವಿರ ಕೋಟಿ ಬಜೆಟ್ ಇದೆ. ಅದರಲ್ಲಿ ಸಣ್ಣ ನೀರಾವರಿಗೆ ಸುಮಾರು ಮೂರರಿಂದ ನಾಲ್ಕು ಸಾವಿರ ಕೋಟಿ ಹಣ ಹೋಗುತ್ತದೆ ಮತ್ತು ಅದರ ಪರಿಹಾರಕ್ಕೂ ಸಹ ಹಣ ಇದೆ. ನಮಗೆ ಹಣವಿದ್ದರೂ ಸಹ ಅದನ್ನು ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ, ಈಗ ಹೊಸ ಕಾನೂನು ಇದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಅಲ್ಲಿ ಕೆಲಸ ಮಾಡುವುದಕ್ಕೆ ಯಾರು ಸಿಬ್ಬಂದಿಯೇ ಇಲ್ಲ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಅಲ್ಲಿ ಯಾರು ಸಿಬ್ಬಂದಿ ಇಲ್ಲವೆಂದರೆ, ಅಲ್ಲಿಗೆ ಯಾರೂ ಸಹ ಬರುತ್ತಿಲ್ಲ. ಅಲ್ಲಿಗೆ ಏಳು ಜನ ಸಿಬ್ಬಂದಿಯವರು ಹೋಗಿಲ್ಲವೆಂದು ನಾನು ಏಳು ಜನ ಸಿಬ್ಬಂದಿಯನ್ನು ಅಮಾನತ್ತುಗೊಳಿಸಿದ್ದೇನೆ. ಅವರನ್ನು ಅಲ್ಲಿಗೆ ಹಾಕಿದ್ದರೂ ಅವರು ಹೋಗದೇ ಹೋದರೆ ನಾನೇನು ಮಾಡುವುದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಲ್ಲಿ ಎಷ್ಟು ಶೋಚನಿಯ ಸ್ಥಿತಿ ಇದೆ ಎಂದರೆ, ಅಲ್ಲಿ ಅಧಿಕಾರಿಗಳು ಇಲ್ಲ ಮತ್ತು ಹಣವಿಲ್ಲ. ಇವತ್ತು ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದೆ. ಕೃಷ್ಣೆಯ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಇದನ್ನು ಬಹಳ ನೋವಿನಿಂದ ಹೇಳಬೇಕಾಗುತ್ತದೆ. ಎಷ್ಟು ನೋವಾಗಿದೆ ಎಂದರೆ ಕಣ್ಣಿನಲ್ಲಿ ನೀರು ಬರುವಂತಹ ಪರಿಸ್ಥಿತಿಯಾಗಿದೆ. ಪುನರ್ ವಸತಿ ಕೇಂದ್ರಗಳಿಗೆ ಜಮೀನು ಭೂಸ್ವಾಧೀನವಾಗಿಲ್ಲ. ಪುನರ್ ವಸತಿ ಕೇಂದ್ರಗಳ rehabilitation ಆಗಿಲ್ಲ. 1.30 ಲಕ್ಷ ಎಕರೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿಲ್ಲ. ಕೆಲಸ ಮಾಡುವ ಅಧಿಕಾರಿಗಳು ಇಲ್ಲ. Regular Resettlement & Rehabilitation ಕಮೀಷನರ್ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಉತ್ತರ ಕರ್ನಾಟಕಕ್ಕೆ ಏನು ನ್ಯಾಯ ಒದಗಿಸುವುದಕ್ಕೆ ಆಗುತ್ತದೆ. ಇಲ್ಲಿ ನಾವು ಯಾವ ಪುರುಷಾರ್ಥಕ್ಕೆ ಶಾಸಕರಾಗಿ ಇರಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಈ ಕೃಷ್ಣ ಮೇಲ್ದಂಡೆ ಯೋಜನೆಯ ಸಮಗ್ರ ಚರ್ಚೆಗಾಗಿ ಒಂದು ಅವಕಾಶವನ್ನು ಮಾಡಿಕೊಡಿ.

**ಸಭಾಪತಿಯವರು:-** ಶ್ರೀ ಹಣಮಂತ್‌ರವರೇ ಮಾನ್ಯ ಸಚಿವರು ಉತ್ತರ ನೀಡಲಿ

**ಡಾ॥ ವೈ.ಎ.ನಾರಾಯಣಸ್ವಾಮಿ:-** ಈಗ ಕತ್ತಿ, ಗುರಾಣಿ, ಕುದುರೆ ಮತ್ತು ಅದರ ಲಗಾಮು ಎಲ್ಲವೂ ನಿಮ್ಮ ಕೈಯಲ್ಲಿದೆ.

**ಶ್ರೀ ಡಿ.ಕೆ.ಶಿವಕುಮಾರ್:-** ಇದು ತುಂಬಾ ಮಹತ್ವವಾದ ಸಮಸ್ಯೆಯಾಗಿರುವುದರಿಂದ ಚರ್ಚೆಗೆ ಅವಕಾಶ ಮಾಡಿ.

**ಸಭಾಪತಿಯವರು:-** ನನಗೆ ಒಂದು ಪತ್ರ ನೀಡಿ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಅರ್ಧ ಗಂಟೆ ಸಾಲುವುದಿಲ್ಲ. ಒಂದು ದಿವಸ ಚರ್ಚೆಯಾಗಲಿ. ಏಕೆಂದರೆ, ಇದು ಅರ್ಧ ಗಂಟೆಗೆ ಮುಗಿಯುವಂತಹ ಕೆಲಸವಲ್ಲ. ಕೃಷ್ಣಾ ಬೇಡ ಇದು ಒಂದೇ ಸಾಕು. ಏಕೆಂದರೆ ಇಲ್ಲಿ ಅಷ್ಟೊಂದು ಸಮಸ್ಯೆ ಇದೆ. ನಾನು ಸಮಸ್ಯೆ ಇಲ್ಲವೆಂದು ಹೇಳುವುದಿಲ್ಲ. I need all your co-operation. ಒಂದು separate ಚರ್ಚೆ ಮಾಡಬೇಕು.

**ಸಭಾಪತಿಯವರು:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ ಮಧ್ಯದಲ್ಲಿ ಮಾತನಾಡುವುದು ಬೇಡ. ಮಾನ್ಯ ಸಚಿವರೆ ಇದನ್ನು ಅರ್ಧ ಗಂಟೆ ಚರ್ಚೆಗೆ ಪರಿವರ್ತಿಸುತ್ತೇನೆ. ಇದನ್ನು ಶುಕ್ರವಾರ ಚರ್ಚೆಗೆ ತೆಗೆದುಕೊಳ್ಳೋಣ. ನೀವು ಈ ವಿಷಯಕ್ಕೆ ಶುಕ್ರವಾರ ಉತ್ತರ ನೀಡಿ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಆಯಿತು ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಪರಿವರ್ತಿಸಿ.

**ಸಭಾಪತಿಯವರು:-** ಮಾನ್ಯ ಸಚಿವರೆ ತಾವು ಇದಕ್ಕೆ ವಿಸ್ತೃತವಾದ ಚರ್ಚೆಯಾಗಬೇಕೆಂದು ಹೇಳಿದ್ದೀರಿ. ಈಗ ನಿಮ್ಮ ಮಾತು ಮತ್ತು ಸದಸ್ಯರ ಮಾತು ಎಲ್ಲವೂ ಸಹ ಒಂದೇ ಇದೆ. ಶುಕ್ರವಾರ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅನುಮತಿಯನ್ನು ಕೊಡುತ್ತೇನೆ.

**(ಪ್ರಶ್ನೆ ಸಂಖ್ಯೆ:289)**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಕೊನೆಯ ಪ್ರಶ್ನೆಯಲ್ಲಿ 76 ಕೆರೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಹೇಳಿದ್ದಾರೆ. ಆ ಕೆರೆಗಳು ಯಾವ್ಯಾವು ಮತ್ತು ಅವು ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಎಸ್.ಪುಟ್ಟರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ಹಿರಿಯ ಸದಸ್ಯರು ಕೇಳಿರುವಂತಹ ರೀತಿಯಲ್ಲಿ. ರಾಜ್ಯ ಸರ್ಕಾರ ವಿಶ್ವಬ್ಯಾಂಕಿನ ನೆರವಿನಲ್ಲಿ ಎರಡು ಹಂತಗಳ ಹಲವಾರು ಕೆರೆಗಳನ್ನು ಪುನಶ್ಚೇತನಗೊಳಿಸುವಂತಹ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡು, ಎರಡನೇ ಹಂತದಲ್ಲಿ ಶಿವಮೊಗ್ಗ ಜಿಲ್ಲೆಯ 321 ಜಿಲ್ಲಾ ಪಂಚಾಯತ್ ಕೆರೆಗಳು ಹಾಗೆಯೇ 102 ಸಣ್ಣ ನೀರಾವರಿ ಕೆರೆಗಳನ್ನು ಕೈಗೆತ್ತಿಕೊಂಡು, ರೂ.72.11 ಕೋಟಿಗಳ ವೆಚ್ಚದಲ್ಲಿ ಅದನ್ನು ಅಭಿವೃದ್ಧಿಪಡಿಸಿ ಆ ಎಲ್ಲಾ ಕೆರೆಗಳ ಉಸ್ತುವಾರಿಯ ನಿರ್ವಹಣೆಯನ್ನು ಕೆರೆ ಬಳಕೆದಾರರ ಸಂಘಗಳಿಗೆ 2013–14ರಲ್ಲಿ ವಹಿಸಲಾಗಿದೆ. ಬಹು ಮುಖ್ಯವಾಗಿ ಮಾನ್ಯ ಸದಸ್ಯರು ಕೇಳಿರುವಂತಹ ರೀತಿಯಲ್ಲಿ ಕೆರೆಗಳನ್ನು ತುಂಬಿಸಿ, ಬೋರ್‌ವೆಲ್ ರೀಚಾರ್ಜ್ ಮಾಡುವಂತೆ ಹಾಕಿ ಕೊಂಡಿರುವಂತಹ ಕಾರ್ಯಕ್ರಮದ ಬಗ್ಗೆ ಏನು ಕೇಳಿದ್ದಾರೆ, ಈ ಯೋಜನೆಯಲ್ಲಿ ಸುಮಾರು 29 ಕೆರೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈಗ ನಾಲ್ಕು ಕೆರೆಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಲಾಗಿದೆ. ಉಳಿದ 19 ಕೆರೆಗಳಿಗೆ ನೀರು ಇರುವುದರಿಂದ ಡಿಸೆಂಬರ್ ಮತ್ತು ಮಾರ್ಚ್‌ನೊಳಗೆ ಅವುಗಳನ್ನು ಪುನಶ್ಚೇತನಗೊಳಿಸಲು ಉದ್ದೇಶಿಸಲಾಗಿದೆ. ಆರು ಕೆರೆಗಳಲ್ಲಿನ ಹೂಳನ್ನು ಹೊಲಗಳಲ್ಲಿ ಉಪಯೋಗಿಸಲು ಯೋಗ್ಯವಿಲ್ಲವೆಂದು ರೈತರು ಹೂಳನ್ನು ತೆಗೆದುಕೊಳ್ಳಲು ನಿರಾಕರಿಸಿರುವಂತಹ ಹಿನ್ನೆಲೆಯಲ್ಲಿ, ಮುಂದಿನ ದಿನಗಳಲ್ಲಿ ಈ ಕೆರೆಗಳ ನಿರ್ವಹಣೆ ಮಾಡುವಂತಹ ಮತ್ತು ಅದರ ಸಾಮರ್ಥ್ಯ ಹೆಚ್ಚಿಸುವಂತಹ ಕೆಲಸವನ್ನು ನಮ್ಮ ಇಲಾಖೆಯ ವತಿಯಿಂದ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾನು ಕೊನೆಯ ಪ್ರಶ್ನೆಗೆ ಬಂದಿದ್ದೇನೆ. ಅನುಮೋದನೆ ಕೊಟ್ಟಿರುವಂತಹ ಆ 76 ಕೆರೆಗಳು ಯಾವುವು ಮತ್ತು ಅದು ಯಾವಾಗ ಕೆಲಸ ಪ್ರಾರಂಭ ಮಾಡುತ್ತದೆ ಅದನ್ನು ಯಾವಾಗ ಅಂತ್ಯಗೊಳಿಸುತ್ತಾರೆ ಎಂಬುದು ಪ್ರಶ್ನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಕೇಳುತ್ತಿರುವುದು ನೀರನ್ನು ಬಿಡುವುದಕ್ಕೆ ಯಾವಾಗ ಶುರು ಮಾಡುತ್ತೀರಿ ಎಂದು?

**ಶ್ರೀ ಆಯನೂರು ಮಂಜುನಾಥ್:–** ಆ ಕೆರೆಗಳು ಯಾವುವು ಮತ್ತು ಅವುಗಳನ್ನು ಯಾವಾಗ ಶುರು ಮಾಡಿ, ಯಾವಾಗ ಅಂತ್ಯ ಮಾಡುತ್ತೀರಿ

**ಶ್ರೀ ಸಿ.ಎಸ್.ಪುಟ್ಟರಾಜು:–** ಮಾನ್ಯ ಸಭಾಪತಿಯವರೇ, ಈ ಸಾಲಿನ ಕ್ರಿಯಾ ಯೋಜನೆಯಲ್ಲಿ ಇದನ್ನು ಕೈಗೆತ್ತಿಕೊಳ್ಳುವುದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಇದರ ಸಂಪೂರ್ಣವಾದಂತಹ ವಿವರವನ್ನು ಮಾನ್ಯ ಹಿರಿಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಪ್ರಶ್ನೆ ಸಂಖ್ಯೆ:312)**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಎಸ್.ಎಲ್.ಧರ್ಮೇಗೌಡ:–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಆರೋಗ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ತಾವು ಅಂಕಿ–ಅಂಶಗಳಲ್ಲಿ ಕೊಟ್ಟಿರುವಂಥದ್ದು ಸಖರಾಯಪಟ್ಟಣ ಗ್ರಾಮಪಂಚಾಯಿತಿಯ ಜನಸಂಖ್ಯೆ. ಈಗಾಗಲೇ ಈ ಭಾಗದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಾಡಿದ ನಂತರ, ಸುಮಾರು 20 ವರ್ಷಗಳ ನಂತರ, ಪ್ರಥಮದರ್ಜೆ ಕಾಲೇಜು, ಅದರ ಜೊತೆಗೆ ಐಟಿಐ ಕಾಲೇಜು ಇಷ್ಟೇಲ್ಲಾ ಇದ್ದು ಸುಮಾರು 120 ಹಳ್ಳಿಗಳನ್ನು ಒಳಗೊಂಡಿದೆ. ಈಗ ಕೊಟ್ಟಿರುವಂತಹ ಜನಸಂಖ್ಯೆ ಸಖರಾಯಪಟ್ಟಣ ಗ್ರಾಮಪಂಚಾಯಿತಿ ಒಂದಕ್ಕೆ ಅನ್ವಯಿಸುತ್ತಿದೆ. ತಾವು ದಯಮಾಡಿ ಇದರ ಬಗ್ಗೆ, ತುಂಬ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿರುವಂತಹ ಮಾನ್ಯ ಆರೋಗ್ಯ ಸಚಿವರು ಗಮನವನ್ನು ಹರಿಸಿ, ಈಗಾಗಲೇ ಬರುವಂತಹ ಪಂಚನಹಳ್ಳಿ ಮತ್ತು ನೀವು ಕೊಟ್ಟಿರುವಂತಹ ಯಗಟಿ ಮತ್ತು ಬಿರೂರು ಇವುಗಳೆಲ್ಲವೂ ಸಹ ಸಖರಾಯಪಟ್ಟಣದ ಗ್ರಾಮಪಂಚಾಯಿತಿಯ ವ್ಯಾಪ್ತಿಯಿಂದ ಸುಮಾರು 20 ಕಿಲೋಮೀಟರ್, 18 ಕಿಲೋಮೀಟರ್ ಮತ್ತು 30 ಕಿಲೋಮೀಟರ್ ಅಂತರದಲ್ಲಿ ಇರುವಂಥದ್ದು. ಅದನ್ನು ತಾವು ಗಮನಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಇದು ತಾಲ್ಲೂಕು ಕೇಂದ್ರ ಆಗುವುದಕ್ಕೆ ಎಲ್ಲಾ ರೀತಿಯ ಅರ್ಹತೆಯನ್ನು ಪಡೆದಿರತಕ್ಕಂಥ ಸಖರಾಯಪಟ್ಟಣ ಆಗಿರುವುದರಿಂದ, ದಯಮಾಡಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳು ಇರುವಂತಹ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತನೆ ಮಾಡಿಕೊಡಬೇಕೆಂದು ಅತ್ಯಂತ ವಿನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರು ಮನಸ್ಸು ಮಾಡಿದರೆ ಇದು ಆಗುತ್ತದೆ. ಈಗ ಇರುವಂಥದ್ದರಲ್ಲಿ ತಾವು ದಯಮಾಡಿ ನನಗೆ ಕೊಡಬೇಕಾದಂತಹ ಉತ್ತರ ಮತ್ತು ನಾನು ನಿಮ್ಮಿಂದ ಬಯಸುವಂಥದ್ದು, ತಾವು ಆಯಿತು ಇದನ್ನು ಮಾಡಿಕೊಡುತ್ತೇನೆ ಎನ್ನುವುದನ್ನು ನಾನು ಬಯಸುತ್ತೇನೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಏಕೆಂದರೆ ಇದು ಬಹಳ ವರ್ಷಗಳ ಹಿಂದಿನದು, ತಾವು ದಯಮಾಡಿ ಮನಸ್ಸು ಮಾಡಿದರೆ ಆಗುತ್ತದೆ ಎಂದು ಮತ್ತೊಮ್ಮೆ ವಿನಂತಿ ಮಾಡುತ್ತೇನೆ.

**ಶ್ರೀ ಶಿವಾನಂದ ಎಸ್. ಪಾಟೀಲ:–** ಮಾನ್ಯ ಸಭಾಪತಿಯವರೇ, ಇಲ್ಲಿ ಐಪಿಹೆಚ್‌ಎಸ್ ಸ್ಟಾಂಡರ್ಡ್ ಪ್ರಕಾರ, ಈಗಾಗಲೇ ಕಡೂರು ತಾಲ್ಲೂಕಿನಲ್ಲಿ ಮೂರು ಸಮುದಾಯ ಆರೋಗ್ಯ ಕೇಂದ್ರಗಳು ಇವೆ. ಅಲ್ಲಿ ಎರಡು ಸಮುದಾಯ ಆರೋಗ್ಯ ಕೇಂದ್ರಗಳು ಇರಬೇಕಾಗಿತ್ತು. ಆದರೆ, ಒಂದು ಹೆಚ್ಚಿಗೆ ಇದೆ. ಈ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವಂತಹ ಅವಕಾಶವಿಲ್ಲ. ಈಗ ಹಾಲಿ ವೈದ್ಯರ ಕೊರತೆಯೇ ಸಾಕಷ್ಟು ಇದೆ. ಇನ್ನು ನಿಮ್ಮ ತಾಲ್ಲೂಕಿನಲ್ಲಿ ಎಷ್ಟು ವೈದ್ಯರ ಕೊರತೆ ಇದೆ ಎಂದು ನೋಡಿ ಅದನ್ನು ಅತೀ ಶೀಘ್ರವಾಗಿ ತುಂಬುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಈ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವಂತಹ ಅವಕಾಶ ಕಾನೂನಿನಲ್ಲಿ ಇಲ್ಲದೇ ಇರುವುದರಿಂದ, ಇದನ್ನು ಕೈಬಿಟ್ಟು ಇರುವಂತಹ ವ್ಯವಸ್ಥೆಯನ್ನು ಬಲಪಡಿಸುವಂತಹ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಎಲ್.ಧರ್ಮೇಗೌಡ:–** ಮಾನ್ಯ ಸಭಾಪತಿಯವರೇ, ತಾವು ದಯಮಾಡಿ ಪಂಚನಹಳ್ಳಿಯಲ್ಲಿ ಜನಸಂಖ್ಯೆ ಎಷ್ಟಿದೆ ಎನ್ನುವುದನ್ನು ಗಮನಿಸಬೇಕು. ತಾವು ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ತಾವು ತಮ್ಮ ಅಧಿಕಾರಿಗಳು ಕೊಟ್ಟಿರುವಂತಹ ಮಾಹಿತಿಯನ್ನು ಹೇಳುತ್ತಿರುವುದು. ನಾನು ಅಲ್ಲಿರುವಂತಹ ಜನಸಂಖ್ಯೆ ಮತ್ತು ಸಮಸ್ಯೆಯನ್ನು ಸ್ಥಳೀಯವಾಗಿ ಮನಗಂಡಿರುವುದರಿಂದ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ತಾವು ದಯಮಾಡಿ ಇದನ್ನು ಮತ್ತೊಮ್ಮೆ ಪರಾಮರ್ಶಿಸಬೇಕೆಂದು ವಿನಂತಿ ಮಾಡುತ್ತಾ, ಈಗ ಪಂಚನಹಳ್ಳಿಯಲ್ಲಿ ಇರುವಂತಹ ಜನಸಂಖ್ಯೆಯನ್ನು ಸಹ ಗಮನಿಸಿ ಮತ್ತು ಸಖರಾಯಪಟ್ಟಣದಲ್ಲಿ ಇರುವಂತಹ ಜನಸಂಖ್ಯೆಯನ್ನು ಗಮನಿಸಬೇಕೆಂದು ಅತ್ಯಂತ ವಿನಮ್ರತೆಯಿಂದ ವಿನಂತಿ ಮಾಡುತ್ತೇನೆ. ನಾನು ಹೆಚ್ಚಿಗೆ ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಒಂದೊಂದು ಸಾರಿ ಕಾನೂನು ನಮಗೆ ಉಪಯೋಗವಾಗುವುದಿಲ್ಲ ಎನ್ನುವುದಕ್ಕೆ ಇದೇ ನಿದರ್ಶನವನ್ನು ಹೇಳುವುದಕ್ಕೆ ಬಯಸುತ್ತೇನೆ.

**(ಸಭಾಪತಿಯವರ ಉಪಸ್ಥಿತಿ)**

(331)11–12–2018(11–30)ಎಲ್‌ಎಲ್–ಆರ್‌ಎನ್

**ಶ್ರೀ ಶಿವಾನಂದ ಎಸ್. ಪಾಟೀಲ:–** ಮಾನ್ಯ ಸಭಾಪತಿಯವರೇ, ಹಾಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ವಾಸ್ತವಿಕವಾಗಿ ಇರಬೇಕಾಗಿದ್ದು 54, ಇರತಕ್ಕಂತಹದ್ದು 89. ಈ ಹಿನ್ನೆಲೆಯಲ್ಲಿ ಯಾವುದೇ ಅವಕಾಶ ಕಾನೂನಿನಲ್ಲಿ ಐ.ಪಿ.ಹೆಚ್.ಎಸ್. ಸ್ಟ್ಯಾಂಡರ್ಡ್ ಪ್ರಕಾರ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಅತೀ ಶೀಘ್ರದಲ್ಲಿ ಖಾಲಿ ಇರತಕ್ಕಂತಹ ಹುದ್ದೆಗಳನ್ನು ಭರ್ತಿ ಮಾಡಿ ತಮ್ಮ ಕೈಯನ್ನು ಬಲಪಡಿಸುವಂತಹ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಜೊತೆಗೆ, ಜಿಲ್ಲಾ ಕೇಂದ್ರದಿಂದ ಸಖರಾಯಪಟ್ಟಣಕ್ಕೆ ಕೇವಲ 20 ಕಿಲೋಮೀಟರ್ ಇದ್ದು, ಅಲ್ಲಿ ಮತ್ತೊಂದು ವಿಶೇಷ ಅಂಬ್ಯುಲೆನ್ಸ್ ನ್ನು ಕೊಟ್ಟು ತಮ್ಮ ಕೈಯನ್ನು ಬಲಪಡಿಸುವುದಕ್ಕೆ ಪ್ರಯತ್ನ ಪಡುತ್ತೇನೆ.

**ಪ್ರಶ್ನೆ ಸಂಖ್ಯೆ: 306**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಯವರು ಸದನದಲ್ಲಿ ಗೈರು ಹಾಜರಾಗಿದ್ದರು)**

**ಪ್ರಶ್ನೆ ಸಂಖ್ಯೆ: 06**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ಎನ್. ರವಿಕುಮಾರ್‌ರವರ ಪ್ರಶ್ನೆಗೆ ಮಾನ್ಯ ಸಣ್ಣ ನೀರಾವರಿ ಸಚಿವರು ಸ್ವಲ್ಪ ಕಾಲಾವಕಾಶ ಕೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 269**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರತಕ್ಕಂತಹ ಸರ್ಕಾರಿ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಪ್ರಾಧ್ಯಾಪಕರಿಗೆ 7ನೇ ಎ.ಐ.ಸಿ.ಟಿ.ಇ. ವೇತನ ಶ್ರೇಣಿಗಳನ್ನು ಜಾರಿ ಮಾಡುವುದಕ್ಕೆ ಯಾವ ಕ್ರಮ ಕೈಗೊಂಡಿದ್ದಾರೆಂಬ ಪ್ರಶ್ನೆ ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ಎ.ಐ.ಸಿ.ಟಿ.ಇ. ವೇತನ ಶ್ರೇಣಿ ಇನ್ನು ಜಾರಿಗೊಳಿಸಿರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಸರ್ಕಾರಕ್ಕೆ ನನ್ನ ಕಳಕಳಿಯ ವಿನಂತಿ ಏನೆಂದರೆ, ಈ ಹಿಂದೆ 6ನೇ ಎ.ಐ.ಸಿ.ಟಿ.ಇ. ವೇತನ ಶ್ರೇಣಿಯನ್ನು ಜಾರಿ ಮಾಡುವುದಕ್ಕೆ 5 ವರ್ಷ ತೆಗೆದುಕೊಂಡಿದ್ದರು. ಅದೇ ರೀತಿಯ ತಪ್ಪು ಈಗ ಆಗಬಾರದು. ಏಕೆಂದರೆ, ಮಾನ್ಯ ಸಚಿವರಾಗಿರತಕ್ಕಂತಹ ಶ್ರೀ ಡಿ.ಕೆ. ಶಿವಕುಮಾರ್‌ರವರು ಹಿರಿಯ ಸಚಿವರಾಗಿ, ಕಾರ್ಯದಕ್ಷತೆಗೆ ಹೆಸರಾದಂತಹವರು. ಈಗಾಗಲೇ ಕೇಂದ್ರ ಸರ್ಕಾರದವರು 7ನೇ ಎ.ಐ.ಸಿ.ಟಿ.ಇ. ವೇತನ ಶ್ರೇಣಿಯನ್ನು 2016 ರಿಂದಲೇ ಜಾರಿಗೆ ಕೊಟ್ಟಿದ್ದಾರೆ. ಈಗ 2 ವರ್ಷ ಆಯಿತು. ಅದಕ್ಕಾಗಿ, atleast ಒಂದು ಆಕ್ಷನ್ initiate ಮಾಡಿ 7ನೇ ಎ.ಐ.ಸಿ.ಟಿ.ಇ. ವೇತನ ಶ್ರೇಣಿಗಳನ್ನು ಜಾರಿಗೊಳಿಸುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ? ಏಕೆಂದರೆ, ಸಾಮಾನ್ಯವಾಗಿ ಎ.ಐ.ಸಿ.ಟಿ.ಇ. ಯವರು ಯಾವ ವೇತನ ಶ್ರೇಣಿಗಳನ್ನು ಕೊಡುತ್ತಾರೆ ಅದನ್ನು ಯಥಾವತ್ತಾಗಿ ನಮ್ಮ ರಾಜ್ಯ ಸರ್ಕಾರ ಜಾರಿ ಮಾಡುವುದಕ್ಕಾಗುವುದಿಲ್ಲ. ಅದನ್ನು modified AICTE scale ಗಳನ್ನು ಮಾಡಬೇಕಾಗುತ್ತದೆ. ಆ ದಿಶೆಯಲ್ಲಿ ಇವತ್ತಿನ ದಿವಸ ಯು.ಜಿ.ಸಿ. ಕೂಡ, ಯಾವ ರೀತಿ ಅದನ್ನು ಜಾರಿಗೊಳಿಸಬೇಕೆಂದು ಮತ್ತು ಅದರ ಬಗ್ಗೆ ಅಧ್ಯಯನ ಮಾಡುವುದಕ್ಕೆ ಒಂದು ಉಪ ಸಮಿತಿ ರಚನೆ ಮಾಡಿದ್ದಾರೆ. ಅದಕ್ಕಾಗಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ಒತ್ತಾಯ ಮಾಡುವುದೇನೆಂದರೆ, ದಯವಿಟ್ಟು 7ನೇ ಎ.ಐ.ಸಿ.ಟಿ.ಇ. ವೇತನ ಶ್ರೇಣಿಯನ್ನು ಜಾರಿ ಮಾಡುವುದಕ್ಕೆ ಒಂದು ಉಪ ಸಮಿತಿ ರಚನೆ ಮಾಡುವುದರ ಮೂಲಕ ಅದಕ್ಕೆ ಚಾಲನೆ ನೀಡಬೇಕೆಂದು ಮತ್ತು ಅದನ್ನು ಸದನದಲ್ಲಿ ಘೋಷಣೆ ಮಾಡಬೇಕೆಂದು ನನ್ನ ಮೊದಲನೆಯ ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ.

**ಶ್ರೀ ಡಿ.ಕೆ. ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಏತಕ್ಕೆ ವಿಳಂಬವಾಗಿದೆ ಎಂಬ ತಾಂತ್ರಿಕ ಅಂಶಗಳೆಲ್ಲವೂ ಸಹ ತಮ್ಮೆಗೆಲ್ಲರಿಗೂ ಗೊತ್ತಿದೆ. ಆದಾಗ್ಯೂ, ಖಂಡಿತ ಈ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಇದರ ಜೊತೆಗೆ, ಡಿ.ಪಿ.ಸಿ. ಆಗಬೇಕು.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು 7ನೇ ಎ.ಐ.ಸಿ.ಟಿ.ಇ. ವೇತನ ಶ್ರೇಣಿಯನ್ನು 2016 ರಿಂದ ಜಾರಿ ಮಾಡಿದ್ದಾರೆ. ಈಗ 2 ವರ್ಷ ಆಯಿತು. ಆದರೆ, ಕೇಂದ್ರ ಸರ್ಕಾರದ ಎ.ಐ.ಸಿ.ಟಿ.ಇ. ವೇತನ ಶ್ರೇಣಿಯನ್ನು ಯಥಾವತ್ತಾಗಿ ಜಾರಿ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ಮಾರ್ಪಾಡು ಮಾಡುತ್ತಾರೆ. ಆದರೆ,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅದನ್ನು ಯಾವ ರೀತಿ ಮಾರ್ಪಾಡು ಮಾಡಬೇಕು ಎಂಬುದರ ಬಗ್ಗೆ ಅಧ್ಯಯನವಾದರೂ ಮಾಡಬೇಕಲ್ಲವೇ, ಅದಕ್ಕೆ ಒಂದು Expert Committee ರಚನೆ ಮಾಡಬೇಕೆಲ್ಲವೇ? ದಯಮಾಡಿ, ಮಾನ್ಯ ಸಚಿವರು ಒಂದು ಕಮಿಟಿ ರಚನೆ ಮಾಡುವುದಕ್ಕೆ ಈ ಸದನದಲ್ಲಿ ಘೋಷಣೆ ಮಾಡಬೇಕು.

**ಶ್ರೀ ಡಿ.ಕೆ. ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಆಗಬಹುದು. We will form the Committee.

**ಸಭಾಪತಿಯವರು:–** ಮಾನ್ಯ ಸಚಿವರು ಕಮಿಟಿ ರಚನೆ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಧನ್ಯವಾದಗಳು.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಸಮಿತಿ ರಚನೆ ಮಾಡಿದಕ್ಕಾಗಿ ಸರ್ಕಾರಕ್ಕೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮ ರಾಜ್ಯದಲ್ಲಿರತಕ್ಕಂತಹ ಅತ್ಯಂತ ಪ್ರತಿಷ್ಠಿತ ವೈದ್ಯ ಕಾಲೇಜು ಕಿಮ್ಸ್. ಆ ಕಿಮ್ಸ್ ಕಾಲೇಜಿನಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ಮತ್ತು ಟೈಮ್ ಬೌಂಡ್‌ನ್ನು ಕಾಲಕಾಲಕ್ಕೆ ಕೊಡುತ್ತಿಲ್ಲ.

**ಸಭಾಪತಿಯವರು:–** ತಾವು ಕೇಳಿರುವ ಪ್ರಶ್ನೆಯಲ್ಲಿ ಈ ಪ್ರಶ್ನೆ ಇದೆಯೇ?

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಇದೆ. ಏನೆಂದರೆ, ಕಿಮ್ಸ್ ಕಾಲೇಜಿನಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ಕೊಡುತ್ತಿಲ್ಲ. ಅದನ್ನು ಯಾವ ಕಾರಣಕ್ಕಾಗಿ ಕೊಡುತ್ತಿಲ್ಲವೆಂದು ನಾನು ಪ್ರಶ್ನೆ ಕೇಳಿದ್ದೆನು. ಅದಕ್ಕೆ ನನಗೆ ಆಶ್ಚರ್ಯಕರವಾದಂತಹ ಉತ್ತರ ಬಂದಿದೆ. ಅದೇನೆಂದರೆ, ಕಾಲಕಾಲಕ್ಕೆ ವಾರ್ಷಿಕ ವೇತನ ಬಡ್ತಿ ನೀಡಲಾಗಿದೆ ಎಂದು ಉತ್ತರ ನೀಡಿದ್ದಾರೆ. ಬಹಳ ಸಂತೋಷ. ಕಳೆದ ಒಂದು ವಾರದ ಹಿಂದೆ, ನಾನು ಕಿಮ್ಸ್‌ಗೆ ಹೋಗಿ, ಅಲ್ಲಿ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಮತ್ತು ಸಿಬ್ಬಂದಿ ವರ್ಗದವರ ಜೊತೆ ನಾನು ಮೀಟಿಂಗ್ ಮಾಡಿದ್ದೇನೆ. ಅಲ್ಲಿ ನನಗೊಂದು ಪಟ್ಟಿ ಕೊಟ್ಟಿದ್ದಾರೆ. ಅದರ ಪ್ರಕಾರ 36 ಜನರಿಗೆ ವಾರ್ಷಿಕ ವೇತನ ಬಡ್ತಿ ಕೊಟ್ಟಿರುವುದಿಲ್ಲ. ಅಲ್ಲದೇ, ಶ್ರೀಮತಿ ಸುಜಾತ ಎಂಬುವ ವೈದ್ಯರಿಗೆ 3 ವರ್ಷದಿಂದ ವಾರ್ಷಿಕ ವೇತನ ಬಡ್ತಿ ಕೊಟ್ಟಿರುವುದಿಲ್ಲ. ಏತಕ್ಕೆ ವಾರ್ಷಿಕ ವೇತನ ಬಡ್ತಿ ಕೊಟ್ಟಿರುವುದಿಲ್ಲವೆಂದರೆ, ಶ್ರೀಮತಿ ಸುಜಾತರವರು ನಿರ್ದೇಶಕರ ಹುದ್ದೆಗೆ ಕಾಂಪಿಟೇಟರ್ ಇದ್ದರು. ಅವರು, "ನಾವು ಪಟ್ಟಿಯನ್ನು ಕೊಡುತ್ತೇವೆ. ನಮ್ಮ ಬಳಿ ದಾಖಲೆ ಇದೆ", ಎಂದು ಹೇಳುತ್ತಾರೆ. ಅದರ ಜೊತೆಗೆ, ಟೈಮ್ ಬೌಂಡ್ ಇವೆಲ್ಲವನ್ನೂ ಕೊಟ್ಟಿಲ್ಲ. ವಾರ್ಷಿಕ ವೇತನ ಬಡ್ತಿಯನ್ನು ಕಾಲಕಾಲಕ್ಕೆ ಕೊಡಬೇಕು. ಅಲ್ಲಿ ಪ್ರಿನ್ಸಿಪಾಲರು ಮತ್ತು ಮೆಡಿಕಲ್ ಸೂಪರ್‌ಂಟೆಂಡೆಂಟ್ ಶಿಫಾರಸ್ಸು ಮಾಡುತ್ತಾರೆ. ಅವರು ಕೆಲಸ ಮಾಡಿದ್ದಾರೋ ಅಥವಾ ಅದು ಸರಿಯಾಗಿದೆಯೋ ಎನ್ನುವುದನ್ನು ತಿಳಿದುಕೊಂಡು ಪ್ರಿನ್ಸಿಪಾಲರ ಶಿಫಾರಸ್ಸಿನ ಮೇರೆಗೆ ವಾರ್ಷಿಕ ವೇತನ ಬಡ್ತಿ ಕೊಡಬೇಕು. ಮಾನ್ಯ ಸಭಾಪತಿಯವರೇ ತಮಗೆ ತಿಳಿದಿರುವಂತೆ, ಇವತ್ತಿನ ದಿವಸ ಹೈಸ್ಕೂಲ್ ಇರಬಹುದು, ಪಿ.ಯು.ಸಿ. ಇರಬಹುದು ವಾರ್ಷಿಕ ವೇತನ ಬಡ್ತಿಯನ್ನು ಆಯಾಯ ಕಾಲೇಜಿನ ಪ್ರಿನ್ಸಿಪಾಲರೇ ಕೊಟ್ಟುಬಿಡುತ್ತಾರೆ. ಆದರೆ, ಏತಕ್ಕೆ ಈ ಕಾಲೇಜಿನಲ್ಲಿ ಕೊಡುತ್ತಿಲ್ಲ. ಇದರಿಂದಾಗಿ, ಅಲ್ಲಿ ಯಾವೊಬ್ಬ ಪ್ರಾಧ್ಯಾಪಕರುಗಳು ಮಾನಸಿಕ ನೆಮ್ಮದಿಯಿಂದ ಕೆಲಸ ಮಾಡುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ಹೇಳಲಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಮಂತ್ರಿಯಾದ ನಂತರ ಸದರಿ ಕಾಲೇಜಿಗೆ ಭೇಟಿ ಕೊಟ್ಟಿದ್ದೇನೆ. ಪ್ರತಿ ದಿವಸ ಈ ಸಮಸ್ಯೆ ಇದೆ. ಮೊನ್ನೆ ಬೆಂಗಳೂರಿನಲ್ಲಿ ಈ ಬಗ್ಗೆ ಗವರ್ನಿಂಗ್ ಕೌನ್ಸಿಲ್ ಬೋರ್ಡ್ ಮೀಟಿಂಗ್ ಕರೆದಿದ್ದೆನು. ಅವೊತ್ತಿನ ದಿವಸ ರೈತರ ವಿಷಯದಲ್ಲಿ ಗಲಾಟೆ ಆಗಿದ್ದರಿಂದ ಪೂರ್ಣ ಮೀಟಿಂಗ್ ಮಾಡುವುದಕ್ಕೆ ಆಗಲಿಲ್ಲ. ಆ ನಂತರ ಇವೊತ್ತಿನ ದಿವಸ ಬೆಳಗಾವಿಯಲ್ಲಿಯೇ ಒಂದು ಮೀಟಿಂಗ್ ಕರೆದಿದ್ದೆನು. ನಂತರ ಅದು ಕೂಡ ಬೇಡವೆಂದು, ಮತ್ತೆ ಇದೇ ತಿಂಗಳ 18ನೇ ತಾರೀಖು ಅಥವಾ 21 ನೇ ತಾರೀಖಿನಂದು ಗವರ್ನಿಂಗ್ ಕೌನ್ಸಿಲ್ ಮೀಟಿಂಗ್ ಕರೆದಿದ್ದೇನೆ. ಅದಕ್ಕೆ ಸಂಬಂಧಪಟ್ಟಂತೆ, ಹಲವು ಪ್ರತಿನಿಧಿಗಳು ಬಂದು ತಮ್ಮ ಬಳಿ ಕೊಟ್ಟಿರುವ ದಾಖಲೆಗಳೆಲ್ಲವನ್ನೂ ನನಗೂ ಸಹ ಕೊಟ್ಟಿದ್ದಾರೆ. On that basis, ಈ ವಿಷಯವನ್ನೇ ಇಡಬೇಕೆಂದು ಮೀಟಿಂಗ್ ಕರೆದಿದ್ದೇನೆ. ಏಕೆಂದರೆ, ಗರ್ವನಿಂಗ್ ಕೌನ್ಸಿಲ್‌ನಲ್ಲಿ ಇಡದೇ ಯಾವುದೇ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಈ ವಿಷಯದಲ್ಲಿ ಕೆಲವೊಂದು ತಾಂತ್ರಿಕ ಕಾರಣಗಳಿವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ವಾರ್ಷಿಕ ವೇತನ ಬಡ್ತಿ ನೀಡುವುದಕ್ಕೆ ಗವರ್ನಿಂಗ್ ಕೌನ್ಸಿಲ್ ಬೇಡ. ವಾರ್ಷಿಕ ವೇತನ ಬಡ್ತಿ ಕೊಡುವುದಕ್ಕೆ ಪ್ರಿನ್ಸಿಪಾಲರು ಸಾಕು. ಆದರೆ, ಸದರಿ ಕಾಲೇಜಿನಲ್ಲಿ ಬೇಕಂತಲೇ ಕಳುಹಿಸುವುದಿಲ್ಲವೆಂದು ಮಾನ್ಯ ಸಂಕನೂರರವರು ಹೇಳುತ್ತಿದ್ದಾರೆ. ಆದ್ದರಿಂದ, ತಕ್ಷಣವೇ ವಾರ್ಷಿಕ ವೇತನ ಬಡ್ತಿ ನೀಡಬೇಕೆಂದು ತಾವು ಒಂದು ನಿರ್ದೇಶನ ನೀಡಿ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಪ್ರಮೋಷನ್ ಕೊಟ್ಟರೆ ಕಾಂಪಿಟೇಟರ್ ಆಗಿಬಿಡುತ್ತಾರೆ ಎಂಬ ಸಮಸ್ಯೆ ಇದೆ.

**ಸಭಾಪತಿಯವರು:-** ಪ್ರಮೋಷನ್ ಅಲ್ಲ, ವಾರ್ಷಿಕ ವೇತನ ಬಡ್ತಿ ಬಗ್ಗೆ ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪ್ರಮೋಷನ್ ಕೊಟ್ಟರೆ ತೊಂದರೆ ಏನಿದೆ?

**(ಗೊಂದಲ)**

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ವಾರ್ಷಿಕ ವೇತನ ಬಡ್ತಿ ವಿಷಯದಲ್ಲಿ ಈ ರೀತಿ ಸಮಸ್ಯೆ ಆಗುತ್ತಿರುತ್ತದೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆದರೆ, ಮಾನ್ಯ ಸದಸ್ಯರು ವಾರ್ಷಿಕ ವೇತನ ಬಡ್ತಿ ಕೊಟ್ಟಿರುವುದಿಲ್ಲವೆಂದು ಹೇಳುತ್ತಿದ್ದಾರೆ.

**ಸಭಾಪತಿಯವರು:-** ನಾನು ಕೂಡ ಅದನ್ನೇ ಹೇಳುತ್ತಿದ್ದೇನೆ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ಕೆಲಸ ಮಾಡಿ, ಅದರ ಮೇಲೆ ಪತ್ರ ಬರೆದು ಇವೊತ್ತಿನ ದಿವಸವೇ ನನಗೆ ಕೊಡಿ.

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಎ.ಐ.ಸಿ.ಟಿ.ಇ. ವೇತನ ಶ್ರೇಣಿಯಲ್ಲಿ...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಸಭಾಪತಿಯವರು:-** ಮಾನ್ಯ ವೈ.ಎ. ನಾರಾಯಣಸ್ವಾಮಿಯವರೇ ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ವಾರ್ಷಿಕ ವೇತನ ಬಡ್ತಿ ಯಾರ್‍ಯಾರಿಗೆ ಕೊಟ್ಟಿಲ್ಲವೆನ್ನುವ ಬಗ್ಗೆ ನನ್ನ ಬಳಿ ದಾಖಲೆ ಇದೆ. ಅದನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ನೀಡುತ್ತೇನೆ. ಆದರೆ, ಉತ್ತರ ಏನು ಕೊಟ್ಟಿದ್ದಾರೆಂದರೆ, ವಾರ್ಷಿಕ ವೇತನ ಬಡ್ತಿ ನೀಡಲಾಗಿದೆ ಎಂದು ಲಿಖಿತ ಉತ್ತರದಲ್ಲಿ ಕೊಟ್ಟಿದ್ದಾರೆ. ಇದರಿಂದಾಗಿ, ನನಗೆ ಅನಿಸುತ್ತಿರುವುದೇನೆಂದರೆ, ಶ್ರೀ ಡಿ.ಕೆ. ಶಿವಕುಮಾರ್‌ರವರು ಸಚಿವರಾದ ತಕ್ಷಣವೇ ಸದರಿ ಕಾಲೇಜಿನವರು ಹೆದರಿ ರಾತ್ರಿಯೇ ಎಲ್ಲಾ ಫೈಲ್‌ಗಳಿಗೆ ಸಹಿ ಮಾಡಿದ್ದಾರೆಂದರೆ ನಮಗೆ ಬಹಳ ಸಂತೋಷ. ಏಕೆಂದರೆ, ನಾವು ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಆದರೆ, ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರು ಮತ್ತು ಅಲ್ಲಿನ ಸಿಬ್ಬಂದಿ ವರ್ಗದವರು ಒಂದು ಪಟ್ಟಿ ಕೊಟ್ಟಿದ್ದಾರೆ. ಆದರೆ, ಮಾಡಲಾಗಿದೆ ಎಂದರೆ ಮಾನ್ಯ ಸಚಿವರಿಗೆ ಹೆದರಿ ರಾತ್ರಿಯೇ ವಾರ್ಷಿಕ ವೇತನ ಬಡ್ತಿ ಫೈಲ್‌ಗಳಿಗೆ ಸಹಿ ಮಾಡಿದ್ದಾರೆಂದರೆ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಎರಡನೆಯದಾಗಿ, ಮಾನ್ಯ ಸಚಿವರು ಬಹಳ ಪ್ರಮುಖವಾಗಿ ಹೇಳಬೇಕಾದ ವಿಷಯವೇನೆಂದರೆ, ಟೈಮ್ ಬೌಂಡ್ ಇನ್‌ಕ್ರಿಮೆಂಟ್ ಕೊಡತಕ್ಕಂತ ಉದ್ದೇಶ ಏನೆಂದರೆ, ಎಂಪ್ಲಾಯೀಸ್‌ಗೆ ಒಂದು ಪ್ರೋತ್ಸಾಹ ಕೊಡಬೇಕೆಂದು ಟೈಮ್ ಬೌಂಡ್ ಪ್ರಮೋಷನ್ ನೀಡುತ್ತಾರೆ. ರೆಗ್ಯುಲರ್ ಪ್ರಮೋಷನ್ ಬೇರೆ, ಟೈಮ್‌ಬೌಂಡ್ ಬೇರೆ. ಮೆಡಿಕಲ್ ಕಾಲೇಜುಗಳಲ್ಲಿ 5 ವರ್ಷ ಆದ ತಕ್ಷಣ ಅಸಿಸ್ಟೆಂಟ್ ಅಸೋಸಿಯೇಟ್ ಮತ್ತು 10 ವರ್ಷ ಆದ ನಂತರ ಅಸೋಸಿಯೇಟ್ ಪ್ರೊಫೆಸರ್‌ಗೆ ಪ್ರಮೋಷನ್ ಕೊಡುತ್ತಾರೆ.

**ಸಭಾಪತಿಯವರು:-** ಉಪ ಪ್ರಶ್ನೆ ಕೇಳಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಡಿ.ಪಿ.ಸಿ.ಯಲ್ಲಿ ಮಾಡಬೇಕೆಂದು ಹೇಳಿದರು.

**ಸಭಾಪತಿಯವರು:-** ವಿವರಣೆ ನೀಡುವುದು ಬೇಡ. ಉಪ ಪ್ರಶ್ನೆಯನ್ನು ಕೇಳಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ನನಗಿರುವ ಮಾಹಿತಿ ಪ್ರಕಾರ ಡಿ.ಪಿ.ಸಿ. 6 ತಿಂಗಳಿಗೊಮ್ಮೆ ಆಗಬೇಕು ಎಂಬ ಕಾನೂನು ಇದೆ. ಆದರೆ, ಫೆಬ್ರವರಿ 2018 ಅಂದರೆ ಇಲ್ಲಿಗೆ 10 ತಿಂಗಳು ಆಯಿತು. 31 ಜನರಿಗೆ ಬಡ್ತಿಯನ್ನು ನೀಡಿರುವುದಿಲ್ಲ. ಇದನ್ನು ಅವರೇ ಪಟ್ಟಿ ಮಾಡಿ ನೀಡಿರುತ್ತಾರೆ. ಏತಕ್ಕೆ ಈ ರೀತಿ ಮಾಡಿದ್ದಾರೆ? ವಿನಾ ಕಾರಣ ವಿಳಂಬ ಮಾಡದೇ ಟೈಮ್ ಬೌಂಡ್ ಕೊಡಬೇಕು. ರೆಗ್ಯುಲರ್ ಪ್ರಮೋಷನ್ ಬೇಕಾದರೆ ವಿಳಂಬ ಆಗಲಿ. ಒಟ್ಟಾರೆಯಾಗಿ ನಾನು ಹೇಳುವುದೇನೆಂದರೆ, ಸದರಿ ಕಾಲೇಜಿನಲ್ಲಿ ಶ್ರೀ ಬಂಟ್ ರವರು ಶಿಕ್ಷಕರಿಗೆ ವಿರೋಧಿಯಾಗಿದ್ದಾರೆ. ಇದರಿಂದಾಗಿ, ಯಾರೊಬ್ಬರೂ ಸಹ ಮಾನಸಿಕ ನೆಮ್ಮದಿಯಿಂದ ಸದರಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವುದಿಲ್ಲ. ಮಾನ್ಯ ಸಚಿವರಿಗೆ ನಾನು ಕಳಕಳಿಯಿಂದ ವಿನಂತಿಸುವುದೇನೆಂದರೆ, ಕನಿಷ್ಠ ಪಕ್ಷ ಪ್ರಧಾನ ಕಾರ್ಯದರ್ಶಿಯವರನ್ನು ಸದರಿ ಕಾಲೇಜಿಗೆ ಕಳುಹಿಸಬೇಕು. ಶ್ರೀ ಬಂಟ್‌ರವರು ಸದರಿ ಹುದ್ದೆಗೆ ಬಂದು 3 ವರ್ಷವಾಗಿದ್ದು, ಇದುವರೆವಿಗೂ ಕೂಡ ಒಂದು ಸ್ಟಾಫ್ ಮೀಟಿಂಗ್

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿರುವುದಿಲ್ಲ. ಅಲ್ಲಿ ಕೆಲಸ ಮಾಡುವಂತಹ ಸಿಬ್ಬಂದಿ ವರ್ಗದವರ ಬಗ್ಗೆ ಗೌರವ ಇರುವುದಿಲ್ಲ. ಇನ್ನು ಮುಂದೆ ಮೆಡಿಕಲ್ ಕಾಲೇಜಿನಲ್ಲಿ ಕೆಲಸ ಮಾಡುವಂತಹ ಪ್ರೊಫೆಸರ್‌ಗಳು ಯಾರೂ ಸಿಗುವುದಿಲ್ಲ.

**ಸಭಾಪತಿಯವರು:–** ಸಾಕು. ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡುತ್ತಾರೆ.

**ಶ್ರೀ ಡಿ.ಕೆ. ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಈ ಎಲ್ಲಾ ವಿಷಯಗಳ ಬಗ್ಗೆ ಸ್ಥಳೀಯ ಪಕ್ಷದ ಎಲ್ಲಾ ಶಾಸಕರು ಇದರ ಬಗ್ಗೆ ನನ್ನ ಗಮನಕ್ಕೆ ತಂದು ದೂರು ನೀಡಿದ್ದಾರೆ. ಅದಕ್ಕಾಗಿ ಬೆಳಗಾವಿಯಲ್ಲಿಯೇ ಗವರ್ನಿಂಗ್ ಕೌನ್ಸಿಲ್ ಮೀಟಿಂಗ್ ಕರೆದಿದ್ದೇನೆ. ಈ ಬಗ್ಗೆ ಇನ್ನೂ ಏನಾದರೂ ವಿಷಯ ಇದ್ದರೆ ಮಾನ್ಯ ಸದಸ್ಯರು ತಮ್ಮ ಕವರಿಂಗ್ ಲೆಟರ್ ನೀಡಲಿ. ಸುಮ್ಮನೆ ಹಾಗೆ ಕೊಡುವುದಕ್ಕಿಂತ ಇದು ದಾಖಲೆಯಲ್ಲಿರಲಿ. I will see that and sought out to solve all these issues.

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿ ಮುಗಿದಿದೆ. ಈಗ ಲಿಖಿತ ಮೂಲಕ ನೀಡುವ ಉತ್ತರಗಳು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ದಿನಾಂಕ: 11ನೇ ಡಿಸೆಂಬರ್, 2018, ಸಮೂಹ–2 ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 128 ಪ್ರಶ್ನೆಗಳ ಪೈಕಿ 87 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(332) 11.40 11.12.2018 ವೈಎಲ್–ವಿಕೆ (ಸಭಾಪತಿಯವರ ಉಪಸ್ಥಿತಿ)

**3. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

ಅ) ವಿಷಯ:– ರೈತರ ಸಾಲಮನ್ನಾ ಕುರಿತು ಸಾಲ ಋಣಮುಕ್ತ ಪತ್ರ ನೀಡುವ ಕುರಿತು.

****

**ಶ್ರೀ ಶ್ರೀನಿವಾಸ ಮಾನೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಿನಾಂಕ: 09.12.2018ರಂದು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ಸುದ್ದಿಯಂತೆ, ರಾಜ್ಯದ ಸಮ್ಮಿಶ್ರ ಸರ್ಕಾರದ ಮಹಾತ್ವಾಕಾಂಕ್ಷಿ ಸಾಲಮನ್ನಾ ಯೋಜನೆಗೆ ಅಧಿಕೃತವಾಗಿ ಚಾಲನೆಯನ್ನು ನೀಡಲಾಗಿದ್ದು, ಪ್ರಾಯೋಗಿಕವಾಗಿ, ದೊಡ್ಡಬಳ್ಳಾಪುರ ಹಾಗೂ ಸೇಡಂನ ರೈತರಿಗೆ ಋಣಮುಕ್ತ ಪತ್ರವನ್ನು ನೀಡಿರುವ ವಿಷಯವು ಸ್ವಾಗತಾರ್ಹ. ಕೊಟ್ಟ ಮಾತಿನಂತೆ ನಡೆದುಕೊಂಡು, ರೈತರ ಸಾಲಮನ್ನಾ ಮಾಡಿರುವ ಸಮ್ಮಿಶ್ರ ಸರ್ಕಾರಕ್ಕೆ ನನ್ನ ಮನಃಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಆದರೆ ಬೆಳಗಾವಿ ವಿಭಾಗದಲ್ಲಿಯು ಸಹ ಸಾಕಷ್ಟು ರೈತರು ಸಾಲದ ಬಾಧೆಯಿಂದ ಚಿಂತಾಕ್ರಾಂತರಾಗಿದ್ದಾರೆ. ಆದ್ದರಿಂದ ಬೆಳಗಾವಿ ವಿಭಾಗದ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಿ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತರಿಗೆ ಋಣಮುಕ್ತ ಪತ್ರವನ್ನು ನೀಡುವ ಮೂಲಕ, ಬೆಳಗಾವಿ ವಿಭಾಗದಲ್ಲಿಯೂ ಸಹ ರೈತರ ಸಾಲಮನ್ನಾ ಪ್ರಕ್ರಿಯೆಗೆ ಅಧಿಕೃತ ಚಾಲನೆ ನೀಡುವಂತೆ ಈ ಮೂಲಕ ಸರ್ಕಾರವನ್ನು ಕೋರುತ್ತೇನೆ.

**ಶ್ರೀ ಕೃಷ್ಣಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)(ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಲಿಖಿತ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಯವರಿಂದ ಪಡೆದುಕೊಂಡು ಒದಗಿಸಲಾಗುವುದು. ಆದಾಗ್ಯೂ ಸಾಂದರ್ಭಿಕವಾಗಿ ಹೇಳುವುದೇನೆಂದರೆ, ಈಗಾಗಲೇ ಒಂದೆರಡು ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ. ಅದೇ ರೀತಿ ಮಾನ್ಯ ಸದಸ್ಯರು ಕೇಳುತ್ತಿರುವ ತಾಲ್ಲೂಕಿನಲ್ಲಿಯೂ ಸಹ ಈ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಅಲ್ಲಿನ ರೈತರಿಗೆ ಸಹ ಸಾಲಮನ್ನಾ ಸೌಲಭ್ಯವನ್ನು ತ್ವರಿತವಾಗಿ ಕೊಡುವಂಥ ಕೆಲಸವನ್ನು ಮಾಡಲಾಗುವುದು. ಈಗಾಗಲೇ ರಾಜ್ಯ ವ್ಯಾಪ್ತಿಯಲ್ಲಿ ಸಹಕಾರ ಸಂಘದ ಮೂಲಕ ಮಾಡಲಾಗುತ್ತಿದೆ. ಹಾಗೆಯೇ ಕಮರ್ಷಿಯಲ್ ಬ್ಯಾಂಕ್ ಮೂಲಕ ಸಹ ಆದಷ್ಟು ಬೇಗ ಮಾಡಲಾಗುತ್ತದೆ.

**ಶ್ರೀ ಡಿ.ಕೆ.ಶಿವಕುಮಾರ್(ಮಾನ್ಯ ಬೃಹತ್ ಮತ್ತು ಮಾಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಮೊದಲು ನಾನು ಶ್ರೀ ಎಸ್.ವಿ.ಸಂಕನೂರುರವರ ಪ್ರಶ್ನೆಗೆ ಉತ್ತರಿಸುತ್ತಾ ಶುಕ್ರವಾರದಂದು ಬೆಳಗಾವಿಯಲ್ಲಿ ಸಭೆಯನ್ನು ನಡೆಸುವ ಬಗ್ಗೆ ತಿಳಿಸಿದ್ದೆ. ಅಂದು ಬೇರೆ ಕಾರ್ಯಗಳ ನಿಮಿತ್ತ ಸದರಿ ಸಭೆಯನ್ನು ಸೋಮವಾರದಂದು ನಿಗದಿಪಡಿಸುತ್ತೇನೆ ಎಂದು ತಮ್ಮ ಮೂಲಕ ತಿಳಿಸುತ್ತಿದ್ದೇನೆ.

**ಸಭಾಪತಿಯವರು:–** ತಮಗೆ ಅನುಕೂಲ ಇದ್ದಾಗ ದಿನಾಂಕವನ್ನು ನಿಗದಿಪಡಿಸಿ ಸಭೆಯನ್ನು ಏರ್ಪಡಿಸಿ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಶುಕ್ರವಾರದಂದು ಬೇಡ. ಸೋಮವಾರ ಅಥವಾ ಮಂಗಳವಾರದಂದು ಸಭೆಯನ್ನು ಏರ್ಪಡಿಸುತ್ತೇನೆ.

**ಸಭಾಪತಿಯವರು:–** ಆಯಿತು.

ಆ) ಉತ್ತರ ಕನ್ನಡ ಜಿಲ್ಲೆಯ ಶಿರಸಿ ಶೈಕ್ಷಣಿಕ ಜಿಲ್ಲೆಯ ಅಕ್ಷರ ದಾಸೋಹ ಅಡುಗೆ ಸಿಬ್ಬಂದಿಗೆ ಏಪ್ರಾನ್ ಖರೀದಿಯಲ್ಲಿನ ಅವ್ಯವಹಾರ ಕುರಿತು.

*****

**ಶ್ರೀ ಎಸ್.ವ್ಹಿ.ಸಂಕನೂರು(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಾರವಾರ ಜಿಲ್ಲೆಯ ಶಿರಶಿ ಶೈಕ್ಷಣಿಕ ಜಿಲ್ಲೆಯ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿನ ಮಧ್ಯಾಹ್ನ ಉಪಹಾರ ಯೋಜನೆಯಡಿಯಲ್ಲಿ ಅಕ್ಷರ ದಾಸೋಹ ಅಡುಗೆ ಸಿಬ್ಬಂದಿಗಳಿಗೆ ಬಿ.ಇ.ಓ., ಬಿ.ಆರ್.ಪಿ., ಸಿ.ಆರ್.ಪಿ. ಇವರುಗಳ ನಿರ್ದೇಶನದಂತೆ ಏಪ್ರಾನ್ ಖರೀದಿಯನ್ನು ಸಂಬಂಧಪಟ್ಟ ಶಾಲೆಗಳ ಮುಖ್ಯ ಶಿಕ್ಷಕರು ಮಾಡಿರುವರು. ಅಧಿಕಾರಿಗಳು ಶಾಲಾ ಮುಖ್ಯ ಶಿಕ್ಷಕರಿಗೆ ನಿರ್ದೇಶನ ನೀಡಿ ಸಂಬಂಧಪಟ್ಟ ಕಂಪನಿ ಮಾಲೀಕರಿಗೆ ಹಣ ಸಂದಾಯ ಮಾಡಲು ಮೌಖಿಕ ಆದೇಶ ನೀಡಿರುವರು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದರಂತೆ ಮುಖ್ಯ ಶಿಕ್ಷಕರು ಸಿ.ಆರ್.ಪಿ / ಬಿ.ಆರ್.ಪಿ ಇವರಿಗೆ ಹಣ ಸಂದಾಯ ಮಾಡಿ ರಸೀದಿಯನ್ನು ಪಡೆದಿರುವರು. ಹೀಗಾಗಿ ಮುಖ್ಯ ಶಿಕ್ಷಕರು ಯಾವ ಅವ್ಯವಹಾರದಲ್ಲಿಯೂ ಕೂಡಾ ಭಾಗಿ ಆಗಿರುವುದಿಲ್ಲ. ಆದರೂ ಕೂಡಾ ನೂರಾರು ಮುಖ್ಯ ಶಿಕ್ಷಕರಿಗೆ ಡಿ.ಡಿ.ಪಿ.ಐ. ರವರು ಸಂಚಿತ ರಹಿತ ವಾರ್ಷಿಕ ವೇತನ ಬಡ್ತಿ ಕಡಿತ ಮಾಡುವುದಾಗಿ ನೋಟೀಸು ಜಾರಿ ಮಾಡಿರುವುದರಿಂದ ಆ ಎಲ್ಲಾ ಶಿಕ್ಷಕರು ಆತಂಕಕ್ಕೊಳಗಾಗಿದ್ದಾರೆ.

ಏಪ್ರಾನ್ ಖರೀದಿ ವ್ಯವಹಾರದಲ್ಲಿ ಸಂಪೂರ್ಣವಾಗಿ ಬಿ.ಇ.ಓ, ಬಿ.ಆರ್.ಪಿ. ಹಾಗೂ ಸಿ.ಆರ್.ಪಿ. ಗಳು ಭಾಗಿಯಾಗಿದ್ದಾರೆ. ಇದರಲ್ಲಿ ಮುಖ್ಯೋಪಾಧ್ಯಾಯರ ಪಾತ್ರ ಏನೂ ಇರುವುದಿಲ್ಲ. ಆದಕಾರಣ ಮುಖ್ಯ ಶಿಕ್ಷಕರಿಗೆ ಯಾವುದೇ ತೊಂದರೆ ನೀಡದೇ ಸಂಚಿತರಹಿತ ವೇತನ ಬಡ್ತಿಯನ್ನು ನಿಲ್ಲಿಸುವುದಾಗಿ ಜಾರಿ ಮಾಡಿದ ನೋಟೀಸನ್ನು ಹಿಂಪಡೆಯಬೇಕು ಹಾಗೂ ಇದರಲ್ಲಿ ಯಾರು ನಿಜವಾಗಿಯೂ ತಪ್ಪನ್ನು ಎಸಗಿರುವರು ಅವರ ಮೇಲೆ ಶಿಸ್ತಿನ ಕ್ರಮ ಜರುಗಿಸುವಂತೆ ಒತ್ತಾಯಿಸುವೆನು.

**ಶ್ರೀ ಕೃಷ್ಣಭೈರೇಗೌಡ (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಪಡೆದು ಒದಗಿಸಲಾಗುವುದು.

ಇ) ಶಿಕ್ಷಕರ ವಿಶೇಷ ವಾರ್ಷಿಕ ಬಡ್ತಿಯಲ್ಲಿ ಅನ್ಯಾಯದ ಕುರಿತು.

*****

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾರತಮ್ಯ ಸರಿಪಡಿಸಲು 12 ಸಾವಿರ ಶಿಕ್ಷಕರ ಆಗ್ರಹ, ಶಿಕ್ಷಕರ ವಿಶೇಷ ವಾರ್ಷಿಕ ವೇತನ ಬಡ್ತಿಯಲ್ಲಿ ಅನ್ಯಾಯ ಎಂಬ ವರದಿಯು ಇಂದಿನ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಪ್ರೌಢಶಾಲೆಯ ಸುಮಾರು 10 ಸಾವಿರ ಹಾಗೂ ಪದವಿ ಪೂರ್ವ ಕಾಲೇಜಿನ 02 ಸಾವಿರ ಉಪನ್ಯಾಸಕರು ಒಂದು ವಿಶೇಷ ವಾರ್ಷಿಕ ವೇತನ ಬಡ್ತಿಯಿಂದ ವಂಚಿತರಾಗಿದ್ದಾರೆ. 2008ರ ಅಕ್ಟೋಬರ್ 01 ನಂತರ ನೇಮಕಗೊಂಡ ಶಿಕ್ಷಕರಿಗೆ ಹಿಂದಿನ ಸರ್ಕಾರದ ಆದೇಶದಂತೆ ವಿಶೇಷ ವೇತನ ಭತ್ಯೆ ಪಡೆಯಲು ಅವಕಾಶವಿರಲಿಲ್ಲ. ಆದಾಗ್ಯೂ ಅಂದಿನ ಶಿಕ್ಷಣ ಸಚಿವರ ಮೌಖಿಕ ಆದೇಶದ ಮೇರೆಗೆ ಕೆಲವು ಶಿಕ್ಷಕರು ವಿಶೇಷ ವೇತನ ಭತ್ಯೆ ಪಡೆಯುತ್ತಿದ್ದರು ಮತ್ತೆ ಕೆಲವರಿಗೆ ಈ ಭತ್ಯೆ ಸಿಗದೇ ಅನ್ಯಾಯಕ್ಕೆ ಒಳಗಾದರು. ಪ್ರಸ್ತುತ 06ನೇ ವೇತನ ಆಯೋಗವು ಈ ವಿಶೇಷ ಭತ್ಯೆ ರದ್ದುಗೊಳಿಸಿ ಮೂಲ ವೇತನದಲ್ಲಿ ಸೇರಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ ನಂತರ ಆ ಶಿಫಾರಸ್ಸನ್ನು ಸರ್ಕಾರ ಅನುಷ್ಠಾನಗೊಳಿಸಿದೆ. ಜೊತೆಗೆ ಈ ಹಿಂದೆ ವಿಶೇಷ ಭತ್ಯೆಯನ್ನು ತೆಗೆದುಕೊಳ್ಳುತ್ತಿರುವವರ ವಿಶೇಷ ಭತ್ಯೆಯನ್ನು ಮೂಲ ವೇತನ ಭತ್ಯೆಯಲ್ಲಿ ವಿಲೀನಗೊಳಿಸಲಾಯಿತು. ಆದರೆ ವಿಶೇಷ ಭತ್ಯೆ ಯಾರು ಪಡೆಯುತ್ತಿರಲಿಲ್ಲವೋ ಅಂಥವರು ಒಂದು ವಾರ್ಷಿಕ ವಿಶೇಷ ವೇತನ ಬಡ್ತಿಯಿಂದ ವಂಚಿತರಾಗಿದ್ದಾರೆ. ಈ ಕುರಿತು ಈಗಾಗಲೇ ಸರ್ಕಾರಕ್ಕೆ ನಾವು ಹಲವು ಬಾರಿ ಈ ಅನ್ಯಾಯವನ್ನು ಸರಿಪಡಿಸುವಂತೆ ಆಗ್ರಹಿಸಿದ್ದರೂ ಇಲಾಖೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಇಂದು ಇವರೆಲ್ಲರಿಗೂ ಅನ್ಯಾಯವಾಗಿರುವ ವಿಷಯವು ದಿನಪತ್ರಿಕೆಯಲ್ಲಿ ಪ್ರಕಟವಾಗುವ ಹಂತಕ್ಕೆ ತಲುಪಿದೆ. ಕೂಡಲೇ ಅನ್ಯಾಯಕ್ಕೆ ಒಳಗಾದ ಶಿಕ್ಷಕರಿಗೂ ಈ ವಿಶೇಷ ವಾರ್ಷಿಕ ವೇತನ ಬಡ್ತಿಯನ್ನು ನೀಡಿ ಮೂಲ ವೇತನದಲ್ಲಿ ಸೇರಿಸಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ(ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಪಡೆದು ನಂತರ ಒದಗಿಸಲಾಗುವುದು.

ಈ) ಅತಿಥಿ ಶಿಕ್ಷಕರ ವೇತನ ನಿಗದಿತ ಸಮಯಕ್ಕೆ ಸಿಗದಿರುವ ಬಗ್ಗೆ.

****

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ರಾಜ್ಯದ ಅತಿಥಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಕಳೆದ 6 ತಿಂಗಳುಗಳಿಂದ ಗೌರವಧನ ಸಿಗುತ್ತಿಲ್ಲವೆಂದು ಶಿಕ್ಷಕರು ತಮ್ಮ ಅಹವಾಲನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಅಲ್ಲದೇ ಪತ್ರಿಕೆಗಳಲ್ಲಿ ಅತಿಥಿ ಶಿಕ್ಷಕರಿಗೆ ಗೌರವಧನ ಇಲ್ಲವೆಂದು ಪತ್ರಿಕೆಗಳ ಮುಖಪುಟದಲ್ಲಿ ಪ್ರಕಟಿಸಲಾಗಿದೆ. "ಸಿಗುವುದೆ ಅಲ್ಪ ಸಂಬಳ ಅದು ಸಕಾಲಕ್ಕೆ ಸಿಗದಿರುವುದರಿಂದ 20 ಸಾವಿರ ಶಿಕ್ಷಕ ಸಿಬ್ಬಂದಿ ಎಡವಟ್ಟಿನಿಂದ ಸಮಸ್ಯೆ" ಎಂಬ ಲೇಖನ ಪ್ರಕಟವಾಗಿದೆ.

ಊಟಕ್ಕೂ ಗತಿಯಿಲ್ಲ ಎಂಬ ಶಿರೋನಾಮೆ ಅಡಿಯಲ್ಲಿ ಗೌರವಧನವನ್ನು ನಂಬಿಕೊಂಡಿದ್ದ ಶಿಕ್ಷಕರು ಅವರ ಮಕ್ಕಳ ವಿದ್ಯಾಭ್ಯಾಸ ಔಷಧಿ ಖರ್ಚಿಗಾಗಿ ಇಷ್ಟು ಕಷ್ಟದಲ್ಲಿ ಇದ್ದು ಒಳ್ಳೆಯ ಶಿಕ್ಷಣ ಕೊಡುವುದಾದರೂ ಹೇಗೆ ಎಂದು ನನ್ನ ಬಳಿ ಹಲವಾರು ಶಿಕ್ಷಕರು ತಮ್ಮ ಅಳಲನ್ನು ತೋಡಿಕೊಂಡಿರುತ್ತಾರೆ. ಪ್ರಾಥಮಿಕ ಶಿಕ್ಷಕರಿಗೆ 7500/– ಗೌರವಧನ ಪ್ರೌಢ ಶಿಕ್ಷಕರಿಗೆ 8000/– ಗೌರವಧನವನ್ನು ಸರ್ಕಾರ ಕೂಡಲೇ ಪಾವತಿ ಮಾಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

ಖಾಯಂ ಶಿಕ್ಷಕರನ್ನು ನೇಮಕ ಮಾಡದೆ ಅತಿಥಿ ಶಿಕ್ಷಕರ ಮೂಲಕ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಕಲಿಸಬೇಕೆಂಬ ಉದ್ದೇಶ ಸರ್ಕಾರದ್ದಾದರೂ ಶಿಕ್ಷಕರಿಗೆ ಸಿಗುವ ಅಲ್ಪ ಸಂಬಳವನ್ನು ನಿಗದಿತ ಸಮಯಕ್ಕೆ ನೀಡದೇ ಇದ್ದಲ್ಲಿ ಅಂತಹ ಶಿಕ್ಷಕರು ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವೇ?–ಎಂಬುದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಕೂಡಲೇ ಅತಿಥಿ ಶಿಕ್ಷಕರಿಗೆ ಬಾಕಿಯಿರುವ ಗೌರವಧನ ಪಾವತಿಸಲು ಕ್ರಮಕೈಗೊಳ್ಳಬೇಕೆಂದು ಕೋರುತ್ತೇನೆ. ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಷಯವಾಗಿರುವುದರಿಂದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿರುವುದಕ್ಕಾಗಿ ತಮ್ಮಲ್ಲಿ ಈ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಕೃಷ್ಣಭೈರೇಗೌಡ(ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಪಡೆದು ಒದಗಿಸಲಾಗುವುದು.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉ) ವಿಷಯ: ಕುಕ್ಕೆ ಸುಬ್ರಮಣ್ಯ ದೇವಸ್ಥಾನದ ಅಭಿವೃದ್ಧಿಗಾಗಿ ಪ್ರಾಧಿಕಾರ ರಚಿಸುವ ಬಗ್ಗೆ.

*****

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನವು ಇಡೀ ರಾಜ್ಯದಲ್ಲಿ ಅತ್ಯಂತ ಪುರಾತನ ಮತ್ತು ಹೆಚ್ಚಿನ ಭಕ್ತಾಧಿಗಳನ್ನು ಹೊಂದಿದ್ದು ಕರ್ನಾಟಕ ಮಾತ್ರವಲ್ಲದೆ, ಅಕ್ಕಪಕ್ಕದ ರಾಜ್ಯಗಳಾದ ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಆಗಮಿಸುತ್ತಾರೆ. ರಾಜ್ಯದ ಮುಜರಾಯಿ ದೇವಸ್ಥಾನಗಳ ಪೈಕಿ ವಾರ್ಷಿಕ ರೂ. 90 ರಿಂದ 100 ಕೋಟಿಗೂ ಹೆಚ್ಚಿನ ಆದಾಯ ತಂದುಕೊಡುವಂತಹ ದೇವಸ್ಥಾನವಾಗಿ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನವು ಗುರುತಿಸಿಕೊಂಡಿದೆ. ಆದರೆ, ಶ್ರೀ ಕ್ಷೇತ್ರದಲ್ಲಿ ಭಕ್ತಾಧಿಗಳ ನಿರೀಕ್ಷೆಗಳನುಸಾರ ಸೌಲಭ್ಯಗಳು ಇರುವುದಿಲ್ಲ.

ರಾಜ್ಯದ ಮುಜರಾಯಿ ದೇವಸ್ಥಾನಗಳ ಪೈಕಿ ಶ್ರೀ ಮಲೈ ಮಹದೇಶ್ವರ ಸ್ವಾಮಿ ದೇವಸ್ಥಾನ, ಚಾಮರಾಜನಗರ ಹಾಗೂ ಶ್ರೀ ಕೊಲ್ಲೂರು ಮೂಕಾಂಬಿಕೆ, ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನಗಳಿಗೆ ಬರುವಂಥ ಭಕ್ತಾದಿಗಳ ಅನುಕೂಲಕ್ಕಾಗಿ ಸರ್ಕಾರ ಈ ದೇವಸ್ಥಾನಗಳಿಗೆ ಪ್ರಾಧಿಕಾರವನ್ನು ರಚಿಸಿ ಸವಲತ್ತುಗಳನ್ನು ಕಲ್ಪಿಸಿರುತ್ತದೆ.

ಇದೇ ಮಾದರಿಯಲ್ಲಿ ಸುಪ್ರಸಿದ್ಧ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಹಾಗೂ ಅಲ್ಲಿಗೆ ಬರುವಂಥ ಭಕ್ತಾಧಿಗಳ ಅನುಕೂಲಕ್ಕಾಗಿ ಹೆಚ್ಚಿನ ಸವಲತ್ತುಗಳನ್ನು ಒದಗಿಸಲು ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಪ್ರಾಧಿಕಾರವನ್ನು ರಚಿಸುವ ಸಂಬಂಧ ಮುಂದಿನ ಅಧಿವೇಶನದಲ್ಲಿ ವಿಧೇಯಕವನ್ನು ಮಂಡನೆ ಮಾಡಿ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಬೇಕೆನ್ನುವ ವಿಚಾರವನ್ನು ಮಾನ್ಯ ಮುಜರಾಯಿ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

**ಶ್ರೀ ರಾಜಶೇಖರ ಬಸವರಾಜ ಪಾಟೀಲ(ಗಣಿ ಮತ್ತು ಭೂ ವಿಜ್ಞಾನ ಸಚಿವರು ಮತ್ತು ಮುಜರಾಯಿ ಸಚಿವರು):–** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನವು ಉಪ ವರ್ಗ 'ಎ' ಅನುಸೂಚಿತ ದೇವಾಲಯವಾಗಿರುತ್ತದೆ. ಈ ದೇವಾಲಯದ ವಾರ್ಷಿಕ ಆದಾಯವು 80 ರಿಂದ 100 ಕೋಟಿ ರೂಪಾಯಿಗಳ ವರೆಗೆ ಇದ್ದು, ಇಲ್ಲಿನ ದೇವಾಲಯವು ಸರ್ಪ ಸಂಸ್ಕಾರ ಪೂಜೆ, ಮುಂತಾದ ಪೂಜೆ ವ್ಯವಸ್ಥೆಯಲ್ಲಿ ಉತ್ತಮ ಪೂಜೆ ವ್ಯವಸ್ಥೆಯನ್ನು ಉತ್ತಮ ರೀತಿಯಲ್ಲಿ ಸಾರ್ವಜನಿಕರಿಗೆ ಕಲ್ಪಿಸುತ್ತಿದೆ. ಇದರ ಜೊತೆಯಲ್ಲಿ ಮುಜರಾಯಿ ದೇವಾಲಯ ವ್ಯಾಪ್ತಿಯಲ್ಲಿ ಮಲೈ ಮಹದೇಶ್ವರ ಸ್ವಾಮಿ ದೇವಾಲಯವನ್ನು ಮಲೈ ಮಹದೇಶ್ವರ ಪ್ರಾಧಿಕಾರವನ್ನಾಗಿ ಪ್ರತ್ಯೇಕ ಅಧಿನಿಯಮ ಕಾಯ್ದೆಯನ್ನು ರಚಿಸಲಾಗಿದೆ. ಇನ್ನುಳಿದಂತೆ ಶ್ರೀ ಕೊಲ್ಲೂರು ಮೂಕಾಂಬಿಕೆ, ಶ್ರೀ ರೇಣುಕಾ ಯಲ್ಲಮ್ಮ ದೇವಾಲಯಗಳಿಗೆ ಪ್ರಾಧಿಕಾರ ರಚಿಸಿರುವುದಿಲ್ಲ ಹಾಗೂ ಪ್ರಾಧಿಕಾರ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಅದರ ಜೊತೆಗೆ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಾಲಯದ ವತಿಯಿಂದ ಪ್ರಸ್ತುತ ಭಕ್ತಾಧಿಗಳಿಗೆ ಉತ್ತಮ

ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ. ಸಧ್ಯಕ್ಕೆ ಈ ದೇವಾಲಯದ ಪ್ರಾಧಿಕಾರ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಊ) ವಿಷಯ: ಪಹಣಿ ಮ್ಯುಟೇಷನ್ ಕಂದಾಯ ದಾಖಲೆಗಳನ್ನು ಪಡೆಯುವ ಶುಲ್ಕ ಹೆಚ್ಚಳ ಮಾಡಿರುವ ಬಗ್ಗೆ.

*****

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ರಾಜ್ಯ ಸರ್ಕಾರ ಪಹಣಿ, ಮ್ಯುಟೇಷನ್ ಮತ್ತಿತರ ಕಂದಾಯ ಆಸ್ತಿಗಳ ದಾಖಲೆ ಪತ್ರಗಳನ್ನು ರೈತರಿಗೆ ನೀಡುವಾಗ ವಿಧಿಸುತ್ತಿದ್ದ ಬೆಲೆಯನ್ನು ರೂ.10 ರಿಂದ ರೂ.15 ಮತ್ತು ರೂ.15 ರಿಂದ 25 ರೂಗಳಿಗೆ ಹೆಚ್ಚಳ ಮಾಡಿರುವುದರಿಂದ ರೈತರಿಗೆ ತುಂಬ ತೊಂದರೆಯಾಗಿದೆ. ಈಗಾಗಲೇ ಸತತ ಬರದಿಂದ ಕಂಗೆಟ್ಟಿರುವ ರೈತರು ಗ್ರಾಮೀಣ ಭಾಗದಲ್ಲಿ ಕೆಲಸ ಇಲ್ಲದೆ ನಗರ ಪ್ರದೇಶಗಳಿಗೆ ಗುಳೆ ಹೋಗುತ್ತಿರುವುದು ಸರ್ಕಾರದ ಗಮನದಲ್ಲಿದ್ದರೂ ಸಹ ದರ ಹೆಚ್ಚಳದಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಹೇಳಿಕೊಳ್ಳುವಂತಹ ಆದಾಯ ಬರುವುದಿಲ್ಲ, ಬದಲಿಗೆ ರೈತರಿಗೆ ಹೆಚ್ಚು ಹೊರೆಯಾಗಲಿದೆ. ಆದ್ದರಿಂದ ರಾಜ್ಯದ ರೈತರ ಹಿತವನ್ನು ಗಮನದಲ್ಲಿಟ್ಟುಕೊಂಡು ಹೆಚ್ಚಳ ಮಾಡಿರುವ ದರವನ್ನು ರದ್ದುಪಡಿಸುವ ಕುರಿತು ಸರ್ಕಾರ ಗಮನ ಹರಿಸಿ ಮುಂದಿನ ಎಚ್ಚರಿಕೆ ಹೆಜ್ಜೆ ಇಡುವುದು ಸೂಕ್ತ ಎಂದು ಸರ್ಕಾರಕ್ಕೆ ಸಲಹೆ ನೀಡಬಯಸುತ್ತೇನೆ.

(333) 11-12-2018 ಎಸ್‌ಕೆ-ವಿಕೆ/11-50

**(ಸಭಾಪತಿಯವರ ಉಪಸ್ಥಿತಿ )**

**ಶ್ರೀ ಕೃಷ್ಣಭೈರೇಗೌಡ, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು) (ಕಂದಾಯ ಸಚಿವರ ಪರವಾಗಿ):-**ಮಾನ್ಯ ಸಭಾಪತಿಯವರೇ, ಇದು ನನ್ನ ಇಲಾಖೆಗೆ ಬರುತ್ತದೆ. ಇದಕ್ಕೆ ತಾವು ಅನುಮತಿಸಿದರೆ ಈಗಲೇ ಉತ್ತರವನ್ನು ಕೊಟ್ಟು ಬಿಡುತ್ತೇನೆ. ಅನಂತರ ಲಿಖಿತ ಉತ್ತರವನ್ನು ತರಿಸಿಕೊಡುತ್ತೇನೆ. 2006 ರಲ್ಲಿ ಸಂಸ್ಥೆಯವರ ಜೊತೆಗೆ ಒಡಂಬಡಿಕೆಯನ್ನು ಮಾಡಿಕೊಂಡು ನಾವು RTC ಯನ್ನು issue ಮಾಡುತ್ತಿದ್ದೇವೆ. ಅದರಲ್ಲಿ ಏನಾಗಿದೆ ಎಂದರೆ, ಇದು 2006 ರ ಒಡಂಬಡಿಕೆ, ಆ ಸಂಸ್ಥೆಯವರು ಅದಕ್ಕೆ ತಗಲುವಂತಹ ಖರ್ಚನ್ನು, ಅದರಲ್ಲಿ ಬರುವ ಆದಾಯದಲ್ಲಿ ಭರಿಸಿಕೊಳ್ಳಬೇಕು. ಸರ್ಕಾರ ಮತ್ತು ನಾವು ಅವರಿಗೆ ವೆಚ್ಚವನ್ನು ಭರಿಸಿಕೊಡುವುದಿಲ್ಲ. ಹಾಗಾಗಿ 2006 ರ ದರವನ್ನು ನಾವು ಪರಿಷ್ಕರಣೆಯನ್ನು ಮಾಡಲಿಲ್ಲವೆಂದು ಹೇಳಿದರೆ, ಆ ಸಂಸ್ಥೆಯವರು ಸಂಪೂರ್ಣವಾಗಿ ದಿವಾಳಿಗೆ ಹೋಗಬೇಕಾಗುತ್ತದೆ. ಆ ಕಾರಣದಿಂದ, ಇದು ನನ್ನ ಇಲಾಖೆ ಎಂದು ಹೇಳಿದೆ. ಆದರೆ ಇದು ಕಂದಾಯ ಇಲಾಖೆ. ತಾವು ಕ್ಷಮಿಸಬೇಕು. ನಾವು ಮೊನ್ನೆ ಕ್ಯಾಬಿನೆಟ್‌ನಲ್ಲಿ ಮಾತನಾಡಿದ್ದರಿಂದ, ಆ ರೀತಿಯಾಗಿ ನಾನು ಹೇಳಿದೆ. ಕಂದಾಯ ಇಲಾಖೆಯವರ ಮನವಿಯ ಮೇರೆಗೆ ಸಂಪುಟ ಒಪ್ಪಿಗೆಯನ್ನು ಕೊಟ್ಟಿದೆ. ಹತ್ತು ಇರುವುದನ್ನು ಹದಿನೈದು ಮಾಡಿದ್ದೇವೆ. ಹದಿನೈದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವುದನ್ನು ಇಪ್ಪತ್ತೈದು ಮಾಡಿದ್ದೇವೆ. ತಮಗೆ ಗೊತ್ತಿರುವ ಹಾಗೆ, ವರ್ಷದಲ್ಲಿ ಒಂದು ಅಥವಾ ಎರಡು ಬಾರಿ ಅವರು ಪಹಣಿಯ ಎರಡು ಪ್ರತಿಯ ನಕಲನ್ನು ತೆಗೆದುಕೊಳ್ಳುತ್ತಾರೆ. ಆದರೆ ಇದು ಬಹಳ ದೊಡ್ಡ ಹೊರೆ ಆಗುವುದಿಲ್ಲ. ಈ ರೀತಿಯಾದ ಪದ್ಧತಿ ಏನಿದೆ computerized ಪಹಣಿಯನ್ನು ಪಡೆದುಕೊಳ್ಳುವ ವ್ಯವಸ್ಥೆ ದೇಶದಲ್ಲಿಯೇ ಮೊದಲಿಗೆ ನಾವು ಮಾಡಿದ್ದು. ಈಗ ಗ್ರಾಮ ಪಂಚಾಯ್ತಿಯ ಮಟ್ಟದಲ್ಲಿ ಬಹಳ ಸರಳವಾಗಿ ಜನರಿಗೆ ಸಿಗುವಂತಹ ಸೌಲಭ್ಯ ಸಿಕ್ಕಿದೆ. ಆ ಸೌಲಭ್ಯಕ್ಕೆ ಹೋಲಿಕೆ ಮಾಡಿದರೆ, ಐದು ರೂಪಾಯಿ ಹೆಚ್ಚು ಮಾಡಿದ್ದೇನು ದೊಡ್ಡದಲ್ಲ. 2006 ರಿಂದ ಸುಮಾರು 12 ವರ್ಷ ನಾವು ಪರಿಷ್ಕರಣೆ ಮಾಡಿಕೊಡಲಿಲ್ಲವೆಂದರೆ, ಅದನ್ನು ಕೊಡುವ ಸಂಸ್ಥೆಯವರು ಸಹ ನಡೆಸುವುದಕ್ಕೆ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ಸದಸ್ಯರು ಇದರ ನೈಜತೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ ಎಂದು ನಾನು ಭಾವಿಸಿದ್ದೇನೆ. ನಾನು ಕಂದಾಯ ಇಲಾಖೆಯಿಂದ ಉತ್ತರವನ್ನು ತರಿಸಿಕೊಡುತ್ತೇನೆ.

**4. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

**ವಿಷಯ:– ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಭೀಕರವಾದಂತಹ ಬರಗಾಲದ ಹಿನ್ನೆಲೆಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ರಾಜ್ಯದಲ್ಲಿರುವ ಸುಮಾರು 30 ಜಿಲ್ಲೆಗಳ ಪೈಕಿ ಸುಮಾರು 17 ಜಿಲ್ಲೆಗಳಲ್ಲಿ ಭೀಕರವಾದಂತಹ ಬರಗಾಲವಿದೆ. ಸುಮಾರು 126 ತಾಲ್ಲೂಕುಗಳಲ್ಲಿ ಸುಮಾರು 100 ತಾಲ್ಲೂಕುಗಳು ಒಂದು ರೀತಿಯಲ್ಲಿ ಬರಡಾಗಿ ಹೋಗಿವೆ. ರೈತರು ಜಾನುವಾರುಗಳನ್ನು ಸಾಕುವುದಕ್ಕೆ ಆಗುತ್ತಿಲ್ಲ. ಆ ಜಾನುವಾರುಗಳನ್ನು ಅರ್ಧ ದರಕ್ಕೆ ಕೊಡುತ್ತೇವೆ. ಇಲ್ಲವಾದರೆ ಇವುಗಳನ್ನು ಧರ್ಮಕ್ಕಾದರೂ ತೆಗೆದುಕೊಂಡು ಹೋಗಿ ಎನ್ನುವಂತಹ ಪರಿಸ್ಥಿತಿಗೆ ರೈತರು ಬಂದು ಬಿಟ್ಟಿದ್ದಾರೆ. ಡಿಸೆಂಬರ್ ತಿಂಗಳಲ್ಲಿ ರಾಜ್ಯದ ಬಹುತೇಕ ಕಡೆ ಕುಡಿಯುವ ನೀರಿನ ಹಾಹಾಕಾರ ಉಂಟಾಗಿದೆ. ರಾಜ್ಯದಲ್ಲಿ ವಾಡಿಕೆ ಇರುವಂತೆ ಕಡಿಮೆ ಮಳೆ ಬಂದಿರುವುದನ್ನು ತಾವು ಗಮನಿಸಿದ್ದೀರಿ. ಉತ್ತರ ಕರ್ನಾಟಕದಲ್ಲಿ ಸರಾಸರಿ ಮಳೆಗಿಂತ ಶೇಕಡ 31 ರಷ್ಟು ಕಡಿಮೆ ಮಳೆ ಬಂದಿದೆ. ದಕ್ಷಿಣ ಕರ್ನಾಟಕದಲ್ಲಿಯೂ ಕೂಡ ವಾಡಿಕೆಯಂತೆ ಸುಮಾರು 15 ರಿಂದ 18 ರಷ್ಟು ಕಡಿಮೆ ಮಳೆ ಬಂದಿದೆ ಎಂದು ದಾಖಲೆಗಳು ಹೇಳುತ್ತೇವೆ. ಮುಂಗಾರು ಬೆಳೆಯಲ್ಲಿ ಸುಮಾರು 74 ಲಕ್ಷ ಹೆಕ್ಟೇರ್ ಬಿತ್ತನೆಯ ಗುರಿಯನ್ನು ರಾಜ್ಯದಲ್ಲಿರುವ ವಿವಿಧ ಇಲಾಖೆಗಳು ಇಟ್ಟುಕೊಂಡರೆ, ಸಂಕಷ್ಟ ಸಮಯದಲ್ಲಿಯೂ ಕೂಡ ರಾಜ್ಯದ ರೈತರು ಸುಮಾರು 62 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಬೇರೆ ಬೇರೆ ಕೃಷಿಯನ್ನು ಬಿತ್ತನೆ ಮಾಡಿದ್ದಾರೆ. ಬಹುತೇಕ ಮಳೆ ಬರಬಹುದು, ಆ ತೇವಾಂಶ ಸಿಕ್ಕಿ ಬೆಳೆ ಬರಬಹುದು ಎನ್ನುವಂತಹ ಆಶಯದಲ್ಲಿರುವ ರೈತರನ್ನು ಗುರುತಿಸುವುದಕ್ಕೆ ಸಾಧ್ಯವಾಯಿತು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಮಳೆ ಕೈಕೊಟ್ಟ ಹಿನ್ನೆಲೆಯಲ್ಲಿ, ಮಣ್ಣಿನ ತೇವಾಂಶದ ಕೊರತೆಯಿಂದಾಗಿ, ನಾನು ಹೇಳಿದಂತಹ ಸುಮಾರು 62 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೈತ ಬೆಳೆಯನ್ನು ಏನು ಬಿತ್ತಿದ್ದಾನೆ, ಅದರಲ್ಲಿ ಶೇಕಡಾ 90 ರಷ್ಟು ಒಣಗಿ ಹೋಗಿದೆ. ಇಂತಹ ಭೀಕರವಾದಂತಹ ಬರಗಾಲವನ್ನು ಇತ್ತೀಚೆಗೆ ನಾವು ಯಾರೂ ಊಹಿಸಿಲ್ಲ. ಸರ್ಕಾರ ರೈತರ ನೆರವಿಗೆ ಧಾವಿಸಬೇಕಾಗಿತ್ತು. ಇದು ನಮ್ಮೆಲ್ಲರ ಜವಾಬ್ದಾರಿ. ನಾನು ಏನು ತಿಳಿದುಕೊಂಡಿದ್ದೆ ಎಂದು ಹೇಳಿದರೆ, ಆ ಜನರಿಗೆ ಸಿಗುವಂತಹ ಅನುಕೂಲದ ಬಗ್ಗೆ ಹೇಳುವುದಾದರೆ, ಶಾಸಕರು ಯಾವುದೇ ಪಾರ್ಟಿ ಇರಬಹುದು ಅಥವಾ ಯಾವುದೇ ಪಕ್ಷ ಇರಬಹುದು ಸಚಿವ ಸಂಪುಟ ತೀರ್ಮಾನ ಮಾಡಿದೆ, ಉಪ ಸಮಿತಿ ರಚನೆ ಮಾಡಿದೆ, ಆ ಜಿಲ್ಲೆಗೆ ಸಂಬಂಧಪಟ್ಟಂತೆ ಉಸ್ತುವಾರಿ ಮಂತ್ರಿಗಳು ಹೋಗಿ ಕುಳಿತುಕೊಂಡು, ಅಲ್ಲಿರುವಂತಹ ಶಾಸಕರು, ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಮತ್ತು ಸಿಎಸ್‌ಗಳನ್ನು ಕರೆದು ಸಮಾರೋಪಾದಿಯಲ್ಲಿ ಕೆಲಸಗಳನ್ನು ಮಾಡುತ್ತಾರೆ, ಪ್ರತಿ ಗ್ರಾಮಕ್ಕೆ ಹೋಗಿ ಭೇಟಿ ಕೊಟ್ಟು, ರೈತರ ಮಧ್ಯೆ ಕುಳಿತುಕೊಳ್ಳುತ್ತಾರೆ, ಗೋಶಾಲೆಗಳನ್ನು ನಿರ್ಮಾಣ ಮಾಡುತ್ತಾರೆ, ಕುಡಿಯುವ ನೀರಿನ ವ್ಯವಸ್ಥೆ ನಿರ್ಮಾಣ ಮಾಡುತ್ತಾರೆ, ಆ ಮೇವು ಬ್ಯಾಂಕನ್ನು ತೆರೆಯುತ್ತಾರೆ ಎಂದು ಹೇಳಿ ನಾವು ಯೋಚನೆ ಮಾಡಿದ್ದೆವು. ಅದು ಒಂದು ಸರ್ಕಾರದ ಕ್ರಮ. ದುರಾದೃಷ್ಟಕ್ಕೆ ಅನೇಕ ಉಸ್ತುವಾರಿ ಮಂತ್ರಿಗಳು ಜಿಲ್ಲೆಯ ಕಡೆ ತಲೆ ಹಾಕಿಲ್ಲ. ಇಲ್ಲಿ ವ್ಯಕ್ತಿಗತ ವಿಚಾರವಲ್ಲ. ಆದರೆ ವಿಷಯದ ಬಗ್ಗೆ ಮಾತನಾಡುವಾಗ, ಅನೇಕ ಉಸ್ತುವಾರಿ ಮಂತ್ರಿಗಳು, ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಸಮಾರೋಪಾದಿಯಲ್ಲಿ ಕೆಲಸ ಮಾಡಬೇಕಾದಂತಹ ಜವಾಬ್ದಾರಿಯಿಂದ ಹೊರಗೆ ಇದ್ದಾರೆ. ಮಂತ್ರಿಗಳಿಗೆ ಅನೇಕ ಸಮಸ್ಯೆಗಳಿರಬಹುದು. ಭೇಟಿ, ಸನ್ಮಾನ, ಉದ್ಘಾಟನೆ ಇರಬಹುದು. ಅವುಗಳೆಲ್ಲದರ ನಡುವೆ ರಾಜ್ಯದಲ್ಲಿರುವ ಸುಮಾರು 100 ತಾಲ್ಲೂಕುಗಳು ಬರದಿಂದ ಪೀಡಿತವಾಗಿ ತತ್ತರವಾಗುವಾಗ ಸಮಾರೋಪಾದಿಯಲ್ಲಿ ಆ ಜಿಲ್ಲೆಯಲ್ಲಿ ಕುಳಿತುಕೊಂಡು ಉಸ್ತುವಾರಿ ಮಂತ್ರಿಗಳು, ಇಲಾಖಾ ಮಂತ್ರಿಗಳು ಕೆಲಸ ಮಾಡಬೇಕಾದಂತಹ ಜವಾಬ್ದಾರಿ ಇದೆ. ಆದರೆ ನಾನು ಹಳ್ಳಿಗೆ ಹೋಗಿ ನೋಡಿದಾಗ, ಅನೇಕ ಕಡೆಗಳಲ್ಲಿ ಸರ್ಕಾರ ನಿಷ್ಕ್ರಿಯವಾಗಿರುವಂತಹ ವಾತಾವರಣ ನೋಡುವುದಕ್ಕೆ ಅವಕಾಶವಾಯಿತು.

ಮಾನ್ಯ ಸಭಾಪತಿಯವರೇ, ಕಂದಾಯ ಸಚಿವರಾದಂತಹ ಮಾನ್ಯ ಆರ್.ವಿ ದೇಶಪಾಂಡೆಯವರು ಬರೋಬ್ಬರಿಯಾಗಿ ಸಚಿವ ಸಂಪುಟದ ಉಪ ಸಮಿತಿಯನ್ನು ನಾವು ರಚನೆ ಮಾಡಿದ್ದೇವೆಂದು ಹೇಳಿಕೆ ನೀಡುತ್ತಾರೆ. ಯಾವುದೇ ಇಲಾಖೆಯ ಯಾವುದೇ ಕಾರ್ಯದರ್ಶಿ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕರೆದು ನಿಮ್ಮಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಏನು? ಮೇವಿನ ಬ್ಯಾಂಕುಗಳನ್ನು ತೆರೆದಿದ್ದೀರಾ? ಗೋಶಾಲೆಗಳ ರಚನೆಯಾಗಿದೆಯಾ? ಉದ್ಯೋಗ ಖಾತ್ರಿಗೆ ಏನು ಯೋಜನೆಯನ್ನು ಹಾಕಿಕೊಂಡಿದ್ದೀರಿ? ಸರ್ಕಾರ ನಿಮ್ಮ ಜೊತೆಗೆ ಇದ್ದರೂ ಕೂಡ, ರೈತರಿಗೆ ಏನೇ ಸಮಸ್ಯೆಗಳಿದ್ದರೂ ಕೂಡ ರಜೆ ಇಲ್ಲದೇ ಕೆಲಸ ಮಾಡಿ ಎನ್ನುವಂತಹ ಒಂದೇ ಒಂದು ಆದೇಶವನ್ನು ಒಂದೇ ಒಂದು ಸೂಚನೆಯನ್ನು ಇಡೀ ರಾಜ್ಯದ ಸುಮಾರು 30 ಜಿಲ್ಲೆಗಳಲ್ಲಿ ಕೊಟ್ಟಂತಹ ಉದಾಹರಣೆಗಳು ಕಂಡು ಬಂದಿಲ್ಲ. ಆ ಉಪ ಸಮಿತಿ ರಚನೆಯಾಗಿದೆ ಎಂದು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿರುವುದನ್ನು ಬಿಟ್ಟರೆ, ಅದು ಕಾರ್ಯಚರಣೆಗೆ ಇಳಿದಿಲ್ಲ ಎನ್ನುವಂತಹ ವಾಸ್ತವಾಂಶಗಳು ಸರ್ಕಾರಕ್ಕೆ ಮನವರಿಕೆ ಏಕಾಗಿಲ್ಲ ಎಂಬುದು ಗೊತ್ತಿಲ್ಲ. ಸುಮಾರು 100 ತಾಲ್ಲೂಕುಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರ ಪೀಡಿತವಾಗಿದೆ ಎಂದು ಹೇಳಿದೆ. ಯಾವುದೇ ತಾಲ್ಲೂಕಿನಲ್ಲಿ ಗೋಶಾಲೆಗಳನ್ನು ತೆರೆದಿಲ್ಲ ಮತ್ತು ಮೇವು ಬ್ಯಾಂಕುಗಳು ಇಲ್ಲ. ಒಂದು ಅಂದಾಜಿನ ಪ್ರಕಾರ ಒಟ್ಟು 16,500 ಕೋಟಿ ರೂಪಾಯಿ ಬೆಳೆ ನಷ್ಟವಾಗಿದೆ. ರಾಜ್ಯದಲ್ಲಿರುವ ಜಂಟಿ ಸರ್ಕಾರ ಬರ ಪರಿಹಾರಕ್ಕೆ ಬಿಡುಗಡೆ ಮಾಡಿರುವಂತಹ ಒಟ್ಟು ಮೊತ್ತ ಎಷ್ಟು ಎಂದು ಕೇಳಿದರೆ, ನನಗೆ ಇರುವಂತಹ ಅಂಕಿ–ಅಂಶಗಳ ಪ್ರಕಾರ ಸುಮಾರು 206 ಕೋಟಿ ರೂಪಾಯಿಗಳು. ನಮ್ಮ ಸರ್ಕಾರಕ್ಕೆ ನಾನು ಹೇಳುವುದೇನೆಂದರೆ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬರ ಇರುವಂತಹ ಪರಿಸ್ಥಿತಿ ಇರುವಾಗ, ಜನರು ಮನೆಗಳನ್ನು ಬಿಟ್ಟು ಗುಳೆ ಹೋಗುವಂತಹ ಪರಿಸ್ಥಿತಿ ಇರುವಾಗ, ಎಲ್ಲಾ ಹಳ್ಳಿಗಳಲ್ಲೂ ಕೂಡ ಕುಡಿಯುವುದಕ್ಕೆ ನೀರಿಗೋಸ್ಕರ ನಾಲ್ಕೈದು ಕಿಲೋ ಮೀಟರ್ ನಡೆದುಕೊಂಡು ಹೋಗಿ, ಬಡವರು ನೀರು ತರುವಂತಹ ಪರಿಸ್ಥಿತಿ ಇರುವಾಗ ಮತ್ತು ಉದ್ಯೋಗ ಇಲ್ಲದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿರುವಂತಹ, ಸಂದರ್ಭದಲ್ಲಿ ರೈತರು ತಲೆಯ ಮೇಲೆ ಕೈ ಇಟ್ಟು ಕುಳಿತಿರುವಾಗ, ಸರ್ಕಾರ ಸುಮಾರು 206 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದರೆ, ನಿಜಕ್ಕೂ ಇದು ಕಣ್ಣೊರೆಸುವ ತಂತ್ರ ಎಂದು ಹೇಳಿ ಆಪಾದನೆ ಮಾಡಬೇಕಾದಂತಹ ಅನಿವಾರ್ಯತೆ ಇವತ್ತು ಬಂದೊದಗಿದೆ ಎನ್ನುವಂತಹ ಮಾತುಗಳನ್ನು ತಮ್ಮ ಸರ್ಕಾರಕ್ಕೆ ಹೇಳಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಜಿಲ್ಲಾಧಿಕಾರಿಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಕಂದಾಯ ಮಂತ್ರಿಗಳು ಹೇಳುತ್ತಾರೆ. ಎಲ್ಲಾ ಮಂತ್ರಿಗಳು ಕೆಲಸವನ್ನು ಮಾಡುತ್ತಿದ್ದಾರೆಯೇ? ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ವತಿಯಿಂದ ಐದು ತಂಡಗಳನ್ನು ರಚನೆ ಮಾಡಿಬಿಟ್ಟಿದ್ದೇವೆ. ರಾಜ್ಯಾಧ್ಯಕ್ಷರು ಐದು ತಂಡಗಳನ್ನು ರಚನೆ ಮಾಡಿ, ಹಳ್ಳಿಗಳಲ್ಲಿರುವಂತಹ ಸಮಸ್ಯೆಗಳೇನು ಎಂದು ಕೇಳಿ ಬಂದಿದ್ದೇವೆ ಮತ್ತು ಇದನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಅಧಿವೇಶನ ನಡೆಯುತ್ತದೆಂದು ಹೇಳುವಾಗ, ನಾನು ಸಹ ಒಂದು ತಂಡದಲ್ಲಿ ಹೋಗಿದ್ದೆ. ಇದನ್ನು ತಾವು ಗಮನಿಸಬೇಕು. ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿರುವ ಒಬ್ಬ ರೈತನ ತೋಟಕ್ಕೆ ಹೋದರೆ, ನಾಲ್ಕು ಎಕರೆ ತೆಂಗಿನ ತೋಟ ಸಂಪೂರ್ಣ ನಾಶವಾಗಿದೆ. ಆ ನಾಲ್ಕು ಎಕರೆ ತೋಟದಲ್ಲಿ ನಿಂತುಕೊಂಡು ಆಕಾಶವನ್ನು ನೋಡಿದರೆ ಒಂದೊಂದು ತೆಂಗಿನ ಮರದಲ್ಲೂ ತೆಂಗಿನ ಗರಿಗಳು ಇಲ್ಲ. ಆ ತೋಟ ಸರ್ವ ನಾಶವಾಗಿದೆ. ಸಾಮಾನ್ಯವಾಗಿ ಬದುಕುವುದಕ್ಕೆ ಸಾಧ್ಯವಿಲ್ಲ. ಒಬ್ಬರೇ ಒಬ್ಬರು ತೋಟಗಾರಿಕಾ ಇಲಾಖಾ ಅಧಿಕಾರಿ ಬರುತ್ತಾರೆ. ನಾನು ಏನಾಗಿದೆ ಎಂದು ಕೇಳಿದೆ ಮತ್ತು ಸೂಚನೆಯನ್ನು ಕೊಟ್ಟು ಹೋಗಿದ್ದೆ. ಅರಸೀಕೆರೆ ಒಂದೂ ತಾಲ್ಲೂಕಿನಲ್ಲಿ ಅಧಿಕಾರಿಗಳು ಕೊಟ್ಟಿರುವಂತಹ ಮಾಹಿತಿಯ ಪ್ರಕಾರ ಸುಮಾರು ಎಂಟು ಲಕ್ಷ ತೆಂಗಿನ ಮರಗಳು ನೀರು ಇಲ್ಲದೇ ಕಳಚಿ ಬಿದ್ದುಬಿಟ್ಟಿದೆ. ಇದು ಸಾವಿರ ತೆಂಗಿನ ಮರಗಳಲ್ಲ ಸ್ವಾಮಿ, ಒಂದು–ಎರಡು ಲಕ್ಷ ತೆಂಗಿನ ಮರಗಳಲ್ಲ. ಒಂದೇ ತಾಲ್ಲೂಕಿನಲ್ಲಿ ಸುಮಾರು ಎಂಟು ಲಕ್ಷ ತೆಂಗಿನ ಮರಗಳು. ಆ ತಾಲ್ಲೂಕು ಮಟ್ಟದ ತೋಟಗಾರಿಕಾ ಇಲಾಖಾ ಅಧಿಕಾರಿ ನಿಖರವಾದಂತಹ ಅಂಕಿ–ಅಂಶಗಳ ಮಾಹಿತಿಯನ್ನು ಕೊಡುತ್ತಾರೆ. ರೈತರ ಹೆಸರಿನಲ್ಲಿ ರಾಜಕಾರಣ ಮಾಡುವಂತಹದ್ದು ಯಾರಿಗೂ ಬೇಕಾಗಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(334) 11–12–2018 12–00 ಟಿಸಿಹೆಚ್–ಬಿಎನ್ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):–**

ಆದರೆ ಇಂತಹ ಕಷ್ಟಗಳು ಬಂದಾಗ ರಾಜಕಾರಣ ಮಾಡದೇ ಮತ್ತೆ ಏನು ಮಾಡಬೇಕು. ಮಾನ್ಯ ಸಭಾಪತಿಯವರೇ, ನಾನು ತಮಗೆ ಉಲ್ಲೇಖ ಮಾಡಬೇಕು. ಜಂಟಿ ಪಕ್ಷಗಳವರು ಸೇರಿ ಸರ್ಕಾರ ನಡೆಸುತ್ತಿದ್ದಾರೆ. ಒಂದು ವರ್ಷದ ಹಿಂದೆ ಅರಸೀಕೆರೆ ಶಾಸಕರು ತಾಲ್ಲೂಕು ಕಚೇರಿ ಮುಂಭಾಗದಲ್ಲಿ ತೆಂಗಿನ ಮರಗಳೆಲ್ಲಾ ಒಣಗಿ ನಷ್ಟ ಆಗುತ್ತಿದೆ, ಒಂದು ತೆಂಗಿನ ಮರಕ್ಕೆ ಕನಿಷ್ಟ 10 ಸಾವಿರ ರೂಪಾಯಿಗಳ ಪರಿಹಾರ ಕೊಡಬೇಕೆಂದು ಧರಣಿ ಕುಳಿತುಕೊಂಡಿದ್ದರು. ಇವತ್ತು ಅದೇ ಶಾಸಕರು ಇದ್ದಾರೆ. ಅವರದೇ ಪಕ್ಷದ ಮುಖ್ಯಮಂತ್ರಿಯವರು ಇದ್ದಾರೆ. ಒಂದು ತೆಂಗಿನ ಮರಕ್ಕೆ 400 ರೂಪಾಯಿಗಳ ಪರಿಹಾರ ಕೊಡುತ್ತಿದ್ದಾರೆ. ಅರ್ಜಿ ಕೊಟ್ಟರೆ ಸಾಕೇನು. ಅವರಿಗೆ ಪರಿಹಾರ ಕೊಡುವಂತಹ ಜವಾಬ್ದಾರಿ ಸರ್ಕಾರದ್ದು ಅಲ್ಲವೆ? ಒಂದು ಕಡೆ ಶಾಸಕರು ಇದ್ದಾಗ ಧರಣಿ ಕುಳಿತುಕೊಂಡು ಒಂದು ತೆಂಗಿನ ಮರಕ್ಕೆ ಕನಿಷ್ಠ 10 ಸಾವಿರ ರೂಪಾಯಿಗಳ ಪರಿಹಾರ ಕೊಡುವಂತೆ ಹೇಳಿದ್ದಾರೆ. ಇವತ್ತಿನ ದಿವಸ ಅವರದೇ ಪಕ್ಷ ಅಧಿಕಾರಕ್ಕೆ ಬಂದಿದೆ. ಅದಕ್ಕೂ ಮತ್ತು ನಮಗೂ ಸಂಬಂಧವಿಲ್ಲವೆಂದು ಹೇಳಿದರೆ ಹೇಗೆ? ನಾನು ಶಾಸಕರ ಆಧಾರದ ಮೇಲೆ ಮಾತನಾಡುತ್ತಿಲ್ಲ. ನಾನು ವಿಷಯದ ಆಧಾರದ ಮೇಲೆ ಮಾತನಾಡಿದೆ. ಆದ್ದರಿಂದ ದಯವಿಟ್ಟು ಇದರ ಕಡೆ ಸರ್ಕಾರ ಗಮನಿಸಬೇಕು ಎಂದು ಆಗ್ರಹ ಮಾಡುತ್ತಿದ್ದೇನೆ. ಕನಿಷ್ಠ 10 ಸಾವಿರ ರೂಪಾಯಿಗಳ ಪರಿಹಾರ ಕೊಡಬೇಕು ಎಂದು ಕೇಳಿದ್ದರು. ಆದರೆ ಇವತ್ತಿನ ದಿವಸ 400 ರೂಪಾಯಿಗಳ ಪರಿಹಾರ ಕೊಡುವಂತಹ ಪರಿಸ್ಥಿತಿಯಲ್ಲಿ ಇಲ್ಲದೇ ಇದ್ದಲ್ಲಿ, ಇದಕ್ಕೆ ಯಾರು ಉತ್ತರ ಕೊಡಬೇಕು ಎನ್ನುವುದನ್ನು ಸರ್ಕಾರ ಹೇಳಬೇಕು.

ನಾನು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿಗೆ ಹೋಗಿದ್ದೆನು. ಹುಳಿಗೆರೆ ಎನ್ನುವಂತಹ ಗ್ರಾಮ ಇದೆ. ಆ ಗ್ರಾಮದಲ್ಲಿ ಒಂದು ಕೆರೆ ಇದೆ. ಆ ಕೆರೆ 146 ಎಕರೆ ಇರುವಂಥದ್ದು. ಆ ಕೆರೆ ಸಂಪೂರ್ಣವಾಗಿ ಒಣಗಿ ಬರಡಾಗಿದೆ. ಆ ಒಣಗಿರುವಂತಹ ಕೆರೆಯಲ್ಲಿ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಹೊಂಡ ತೋಡಿದರೆ ಒಂದು ಹನಿ ನೀರು ಬರುತ್ತಿಲ್ಲ. ಹುಳಿಗೆರೆ ಕೆರೆಗೆ ಪಕ್ಕದ ವೇದಾವತಿ ನದಿಯಿಂದ ನೀರನ್ನು ಹರಿಸಿದರೆ ಕನಿಷ್ಠಪಕ್ಷ ಕುಡಿಯುವುದಕ್ಕೆ ನೀರು ಸಿಗುತ್ತದೆ ಎಂದು ಹೇಳಿ ನೂರಾರು ರೈತರು ಹೇಳುತ್ತಿದ್ದಾರೆ. ಆದರೆ ಸರ್ಕಾರ, ಕಂದಾಯ ಇಲಾಖೆ, ತಹಸೀಲ್ದಾರರು, ಜಿಲ್ಲಾಧಿಕಾರಿಯವರು ಅಲ್ಲಿಗೆ ಈ ಕ್ಷಣದವರೆಗೆ ತಲೆ ಕೂಡ ಹಾಕಿಲ್ಲ. ಇದು ಸರ್ಕಾರದ ಜವಾಬ್ದಾರಿ ಅಲ್ಲವೇ? ಒಬ್ಬರು ಜಿಲ್ಲಾಧಿಕಾರಿಯವರು ಬಂದು ಕುಳಿತುಕೊಂಡು ಆ ಕೆರೆಗೆ ನದಿಯಿಂದ ನೀರನ್ನು ಹರಿಸಬೇಕಾದರೆ, ಅದಕ್ಕೆ ಎಷ್ಟು ಹಣಬೇಕೆಂದು ಯೋಜನೆ ಮಾಡಿ ಕಳುಹಿಸಿಕೊಟ್ಟು ಆ ಇಲಾಖೆಯಿಂದ ಹಣ ಪಡೆದು, ಅಲ್ಲಿನ ರೈತರಿಗೆ ಕನಿಷ್ಠಪಕ್ಷ ಕುಡಿಯುವ ನೀರನ್ನಾದರು ಕೊಡಬೇಕು ಎನ್ನುವಂತಹ ಜವಾಬ್ದಾರಿ ಸರ್ಕಾರಕ್ಕೆ ಇಲ್ಲವೇನು? ಮಾನ್ಯ ಕಂದಾಯ ಮಂತ್ರಿಗಳು ಏನು ಮಾಡುತ್ತಿದ್ದಾರೆ.

ಮಾನ್ಯ ಸಭಾಪತಿಯವರೇ, ಕಡೂರು ತಾಲ್ಲೂಕಿನಲ್ಲಿ ಸುಮಾರು 14,573 ಹೆಕ್ಟೇರ್ ತೆಂಗು ಬೆಳೆಗೆ ಹಾನಿ ಆಗಿದೆ. ನನ್ನ ಅಂದಾಜಿನ ಪ್ರಕಾರ ಒಂದು ಹೆಕ್ಟೇರ್ ಎಂದರೆ, ಎರಡೂವರೆ ಎಕರೆ ಇರಬಹುದು. ಅದೊಂದೇ ತಾಲ್ಲೂಕಿನಲ್ಲಿ



"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು 6,11,083 ತೆಂಗಿನ ಮರಗಳು ಒಣಗಿ ಹೋಗಿವೆ. 832 ಹೆಕ್ಟೇರ್ ಭೂಮಿಯಲ್ಲಿ 3,79,710 ಅಡಿಕೆ ಗಿಡಗಳು ಸತ್ತು ಹೋಗಿವೆ. ಈ ಅಂಕಿ ಅಂಶವನ್ನು ತೋಟಗಾರಿಕೆ ಇಲಾಖೆಯವರು ಕೊಟ್ಟಿರುವುದು. ನನ್ನ ಎದುರಿಗೆ ತೋಟಗಾರಿಕೆ ಇಲಾಖೆಯ ಅಧಿಕಾರಿ ಬಂದು ಹೇಳಿದರು. 3,79,710 ಅಡಿಕೆ ಗಿಡಗಳು ಬರಕ್ಕೆ ತುತ್ತಾಗಿ ಸಂಪೂರ್ಣವಾಗಿ ಸತ್ತುಹೋಗಿರುವಂತಹ ಪರಿಸ್ಥಿತಿ ಇದೆ. 18 ಸಾವಿರ ರೈತರು ಬರಗಾಲದ ವ್ಯಾಪ್ತಿಗೆ ಒಳಪಟ್ಟು ಬದುಕನ್ನು ಕಳೆದುಕೊಂಡಿದ್ದಾರೆ. ಬೆಳೆ ಇಲ್ಲ. ಗಿಡಮರಗಳು ಸತ್ತುಹೋಗಿರುವಂತಹ ಪರಿಸ್ಥಿತಿ ಇದೆ. ಹಾಕಿರುವಂತಹ ಪೈರನ್ನು ಕೀಳುವುದಕ್ಕೆ ಸಾಧ್ಯವಿಲ್ಲ. ಕಡೂರು ತಾಲ್ಲೂಕಿನಲ್ಲಿ 8041 ರೈತರು ಸಾಲ ಮನ್ನಾಕ್ಕೆ ಪ್ರಸ್ತಾವನ್ನಿಟ್ಟಿದ್ದಾರೆ. ಈ ಸಾಲ ಮನ್ನಾದ ಬಗ್ಗೆ ನಂತರ ಮಾತನಾಡುತ್ತೇನೆ. ಒಂದು ತಾಲ್ಲೂಕಿನಲ್ಲಿ 8041 ಮಂದಿ ಸಾಲ ಮನ್ನಾ ಮಾಡಲು ಅರ್ಜಿ ಕೊಟ್ಟಿದ್ದಾರೆ. ನಾನು ಭೇಟಿ ನೀಡಿ ಬರುವವರೆಗೂ ಕೂಡ ಇಲ್ಲಿಯವರೆಗೆ ಒಂದು ರೂಪಾಯಿ ಹಣ ಕೂಡ ಬಿಡುಗಡೆ ಆಗಿಲ್ಲ. ಅದಕ್ಕಾಗಿ ಪಶುಸಂಗೋಪನೆ ಇಲಾಖೆಯ ಅಧಿಕಾರಿಗಳನ್ನು ಕರೆದು ಕೇಳಿದೆನು. ನೀವ್ಯಾರೂ ಮನುಷ್ಯರೇ ಅಲ್ಲ.

**ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ತಾವು ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಿರುವ ನಿಲುವಳಿ ಸೂಚನೆಯನ್ನು ಏಕೆ ಒಪ್ಪಿಕೊಳ್ಳಬೇಕು ಎನ್ನುವುದನ್ನು ಹೇಳಿ. ವಿಷಯದ ಆಳಕ್ಕೆ ಹೋದರೆ, ತಾವು ಚರ್ಚೆಯನ್ನು ಪ್ರಾರಂಭ ಮಾಡಿದಂತಾಗುತ್ತದೆ. ಏಕೆ ಇದನ್ನು ಒಪ್ಪಬೇಕು ಎನ್ನುವುದನ್ನು ಮೊದಲಿಗೆ ಮನವರಿಕೆ ಮಾಡಿಕೊಟ್ಟರೆ ಒಳ್ಳೆಯದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಪೀಠದಿಂದ ತಾವು ಆಗ ಏನು ಹೇಳಿದ್ದೀರಿ ಎಂದರೆ, ಪ್ರಶ್ನೋತ್ತರ ನಂತರ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೀರಿ.

**ಸಭಾಪತಿಯವರು:–** ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರೇ, ಅವಕಾಶ ಕೊಟ್ಟಿದ್ದೇನೆ ಮಾತನಾಡಿ. ಏಕೆ ನಾವು ಇದನ್ನು ನಿಲುವಳಿ ಸೂಚನೆಗೆ ಒಪ್ಪಿಕೊಳ್ಳಬೇಕು ಎನ್ನುವುದನ್ನು ಮನವರಿಕೆ ಮಾಡಿಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** Preliminary submission ಮಾಡುವುದಕ್ಕೆ ಈಗ ತಾವು ಅವಕಾಶ ಕೊಟ್ಟಿದ್ದೀರಿ.

**ಸಭಾಪತಿಯವರು:–** ತಾವು ಅದರ ಬಗ್ಗೆ ವಿವರವಾಗಿ ಹೇಳುವುದು ಬೇಡ.

**ಶ್ರೀ ಆರ್.ವಿ.ದೇಶಪಾಂಡೆ (ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರಲ್ಲಿ ವಿನಂತಿ. ಮಾನ್ಯ ವಿರೋಧಪಕ್ಷದ ನಾಯಕರು convince ಮಾಡುತ್ತಿರುವಂಥದ್ದಕ್ಕೆ ನಮಗೆ ತುಂಬಾ ಸಂತೋಷ. ಇದರ ಬಗ್ಗೆ debate ಮಾಡಿದರೆ ಒಳ್ಳೆಯದು. ಏನಾದರೂ ಲೋಪದೋಷಗಳು ಇದ್ದಲ್ಲಿ ನಾವು ಸುಧಾರಣೆ ಮಾಡುವುದಕ್ಕೆ ಅನುಕೂಲ ಆಗುತ್ತದೆ. ಅವರು ಹೇಳಲಿ ಏನೂ ತೊಂದರೆ ಇಲ್ಲ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಅವರು ಹೇಳಲಿ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ನಾನು ನಿಮಗೆ ಇಷ್ಟನ್ನೇ ಹೇಳುತ್ತೇನೆ. ತಮಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ ಮಾತನಾಡಿ. ಆದರೆ ಏಕೆ ನಿಲುವಳಿ ಸೂಚನೆಯಡಿ ಇದನ್ನು ಸ್ವೀಕರಿಸಬೇಕು ಎನ್ನುವುದನ್ನು ಕೂಡ ಮನವರಿಕೆ ಮಾಡಿಕೊಡಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ಪೀಠ ಏನು ಹೇಳುತ್ತದೆ ಎಂದರೆ, ನಾವು ನಿಯಮ 59ರಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ ಎಂದಾಗ, ನಿಮಗೆ 5 ನಿಮಿಷ ಅವಕಾಶ ಕೊಟ್ಟಿದ್ದೇನೆ. ಏಕೆ ಎಂದು ನನಗೆ ಹೇಳಿ. ಕೊನೆಗೆ ಅದನ್ನು ನಿಯಮ 68 ರಡಿಯಲ್ಲಿ divert ಮಾಡಿ ನಾನು ಎಲ್ಲರಿಗೂ ಮುಕ್ತವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳುವಂಥದ್ದು ರೂಢಿ. ಆಗ ನನಗೆ ಅವಕಾಶ ಕೊಡದೇ ಇರುವಂತಹ ಹಿನ್ನೆಲೆಯಲ್ಲಿ, ನೇರವಾಗಿ ನಿಯಮ–68 ಅಥವಾ ನಿಯಮ–59ರಡಿಯಲ್ಲಿ ನನಗೆ ಅವಕಾಶ ಕೊಟ್ಟಿದ್ದೀರಿ ಎಂದು ತಿಳಿದುಕೊಂಡುಬಿಟ್ಟೆನು.

**ಸಭಾಪತಿಯವರು:–** ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರೇ, ಇದಕ್ಕೆ ನಾನು ಏನು ಮಾಡಬೇಕು ಎನ್ನುವುದನ್ನು ತೀರ್ಮಾನ ಮಾಡುತ್ತೇನೆ. ತಾವು ಹೇಳಿದರೆ ಒಳ್ಳೆಯದು. ನಿಯಮ–59ರ ಅಡಿಯಲ್ಲಿ ಏಕೆ ಇದನ್ನು ಒಪ್ಪಿಕೊಳ್ಳಬೇಕು ಎನ್ನುವುದನ್ನು ನೀವು ಮನವರಿಕೆ ಮಾಡಬೇಕಾಗಿರುವುದು ತಮ್ಮ ಕರ್ತವ್ಯ. ಅದನ್ನು ಮಾಡಿಕೊಡಿ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಹುಣಸೆಹಾಳ ತಾಂಡದಲ್ಲಿ ಒಂದು ಸಾವಿರ ಮನೆಗಳು ಇವೆ. ಇಡೀ ತಾಂಡವನ್ನು ಸುತ್ತಾಡಿದರೆ, ಸುಮಾರು 10–15 ಮನೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಮನೆಗಳಿಗೆ ಬೀಗ ಹಾಕಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ವ್ಯವಸ್ಥೆಗಳಿವೆ. ಆ ಕೊಪ್ಪಳ ತಾಲ್ಲೂಕಿನಲ್ಲಿರುವಂತಹ ಧಾರುಣ ಪರಿಸ್ಥಿತಿಗಳನ್ನು ಪ್ರತ್ಯಕ್ಷವಾಗಿ ನೋಡಿದ್ದಾಗ, ತಮಗೆ ಅರಿವು ಆಗುತ್ತದೆ ಎನ್ನುವಂತಹ ಮಾತುಗಳನ್ನು ನಾನು ಹೇಳಬೇಕಾಗುತ್ತದೆ. ಸಂಪೂರ್ಣ ಬಿತ್ತನೆ ಮಾಡಿದಂತಹ ಪ್ರದೇಶದಲ್ಲಿ ಶೇ.70 ರಷ್ಟು ಹಾನಿಯಾಗಿರುವಂತಹ ಉದಾಹರಣೆಗಳು ನಮಗೆ ಕಂಡುಬರುತ್ತದೆ. ನಾನು ವ್ಯಕ್ತಿಗತ ದೂರುಗಳು ಇಲ್ಲದೇ ಇದ್ದರೂ ಕೂಡ ಸಾರ್ವತ್ರಿಕವಾದ ಸಮಸ್ಯೆಗಳನ್ನು ಸದನದಲ್ಲಿ ಹೇಳಲೇಬೇಕಾದಂತಹ ಅನಿವಾರ್ಯತೆ ಇದೆ. ಸಮರೋಪಾದಿಯಲ್ಲಿ ಸರ್ಕಾರ ಕೆಲಸ ಮಾಡಬೇಕಾಗುತ್ತದೆ. ಸರ್ಕಾರ ಯಾವ ರೀತಿಯಲ್ಲಿ ಇಳಿದಿದೆ ಎಂದು ಹೇಳಿದರೆ, ಪ್ರಚಾರಕ್ಕೆ ಎಲ್ಲಾ ಕೆಲಸಗಳನ್ನು ಸೀಮಿತ ಮಾಡಿಕೊಂಡಿದೆ ಎಂದು ನನಗೆ ಅನಿಸುತ್ತದೆ. ಆ ಬಜೆಟ್ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವಂತಹ ಕರೆ ಏನೆಂದರೆ, ಬಜೆಟ್ ಪುಸ್ತಕದ ಪುಟ ಸಂಖ್ಯೆ.15ರಲ್ಲಿ " ನಾನು ಕರ್ನಾಟಕ ರಾಜ್ಯದಲ್ಲಿ ಕೃಷಿಯಲ್ಲಿ ಅದ್ಭುತವಾದಂತಹ ಸಾಧನೆ ಮಾಡುವುದಕ್ಕೆ ನನ್ನ ಸರ್ಕಾರ ಪ್ರಯತ್ನ ಮಾಡುತ್ತದೆ. ಇಸ್ರೇಲ್ ಮಾದರಿಯಲ್ಲಿ ಮಾಡುವುದಕ್ಕೋಸ್ಕರ 5000 ಹೆಕ್ಟೇರ್ ಪ್ರದೇಶದಲ್ಲಿ ಇಸ್ರೇಲ್ ಮಾದರಿಯ ಕೃಷಿಯನ್ನು ಕರ್ನಾಟಕ ಜನರಿಗೆ ಪರಿಚಯಿಸುತ್ತೇವೆ. ಇದಕ್ಕೋಸ್ಕರ 150 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗುವುದು" ಎಂದು ಹೇಳಲಾಗಿದೆ. ಆ ಮೂಲಕ ಬರ ಎಲ್ಲಾ ಪರಿಹಾರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಅದು ಏನಾಯಿತು ಎಂದು ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಬೇಕು. ಸರ್ಕಾರ ಕೊಟ್ಟಿರುವಂತಹ ಒತ್ತಡಕ್ಕೆ ಹೇಳಿದೆನು.

**ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಇಸ್ರೇಲ್ ಮಾದರಿಗೂ ಇದಕ್ಕೂ ಸಂಬಂಧವಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಗಡಿಬಿಡಿಯಲ್ಲಿ ಉತ್ತರ ಕೊಡುವುದು ಬೇಡ. ಏಕೆಂದರೆ, ನಾನು ಹಿನ್ನೆಲೆಯಲ್ಲಿ ಇದ್ದೇನೆ. ನಂತರ ಪ್ರಸ್ತಾಪ ಮಾಡೋಣ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಸ್ರೇಲ್ ಮಾದರಿ ಕೃಷಿಗೂ ಬರ ಪರಿಹಾರಕ್ಕೂ ಸಂಬಂಧವಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಆ ರೀತಿಯ ಬೇಸಾಯ ಮಾಡುವುದರ ಮೂಲಕ ಕರ್ನಾಟಕ ರಾಜ್ಯಕ್ಕೆ ಒಂದು ಹೊಸ ಕನಸನ್ನು ಬಿತ್ತಿದ್ದಾರಲ್ಲಾ ಅದನ್ನು ನೆನಪು ಮಾಡಿದೆ. ಅದರಿಂದ ಬರ ಪರಿಹಾರ ಆಗುತ್ತದೆ ಎಂದು ನಾನು ಎಲ್ಲಿಯೂ ಹೇಳಿಲ್ಲ. ಅದಕ್ಕಾಗಿ ಮಾನ್ಯ ಶ್ರೀ ಕೆ.ಟಿ.ಶ್ರೀಕಂಠೇಗೌಡ ರವರು ಗಡಿಬಿಡಿ ಮಾಡಬಾರದು.

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ನಾನು ಅವರಿಗೆ ತೊಂದರೆ ಕೊಡುವುದಿಲ್ಲ. ಇಸ್ರೇಲ್ ಮಾದರಿ ಬಗ್ಗೆ ಗೌರವಾನ್ವಿತ ಮುಖ್ಯಮಂತ್ರಿಗಳು ತಮ್ಮ ಮುಂಗಡ ಪತ್ರದಲ್ಲಿ ಘೋಷಣೆ ಮಾಡಿದ್ದಾರೆ. ಅವರು ಸ್ವಲ್ಪ ಸಮಯ ಕೊಡಬೇಕು. ಇಸ್ರೇಲ್ ಮಾದರಿ ಜಾರಿಗೆ ಬರಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಏಕೆ ಗಡಿಬಿಡಿ ಮಾಡಿಕೊಳ್ಳುತ್ತಿದ್ದಾರೆ. ಹಿರಿಯರು ಇದ್ದಾರೆ. ಮಾನ್ಯ ಕಂದಾಯ ಸಚಿವರನ್ನು ಹೊಗಳುವುದಕ್ಕೆ, ಸರ್ಕಾರವನ್ನು ಹೊಗಳುವುದಕ್ಕೆ ಈ ಸ್ಥಾನದಲ್ಲಿ ನಾನು ನಿಂತಿಲ್ಲ. ಉತ್ತರ ಕೊಡುವಾಗ ಹೇಳಲಿ. ಮಾನ್ಯ ಸಚಿವರು ಹಿರಿಯರು ಇದ್ದಾರೆ. ನಾನು ಇಸ್ರೇಲ್ ಮಾದರಿ ಬಗ್ಗೆ.

**ಶ್ರೀ ಆರ್.ವಿ.ದೇಶಪಾಂಡೆ:–** ನೋಡಿ, ನಾನು ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುತ್ತೇನೆ. ಬಜೆಟ್‌ನಲ್ಲಿ ಘೋಷಣೆ ಮಾಡಿರುವುದನ್ನು ಜಾರಿಗೆ ತರಲು ಸಮಯ ಬೇಕು ಅಲ್ಲವೇ? ಬಜೆಟ್ ಮಂಡನೆಯಾದ ಮಾರನೆಯ ದಿವಸವೇ ಅದನ್ನು ಜಾರಿಗೆ ತರಲಾಗುತ್ತದೆಯೇ? ಅವರು ಸಹಕರಿಸಬೇಕು. ಅವರು ಟೀಕೆ ಟಿಪ್ಪಣಿ ಮಾಡಲಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ನಿಮ್ಮ ಸರ್ಕಾರದ ಬಗ್ಗೆ ರೈತರು ತುಂಬಾ ಆಸೆಯಲ್ಲಿ ಇದ್ದಾರೆ ಎಂದು ಹೇಳಿದೆನು.

**ಸಭಾಪತಿಯವರು:–** ಇದು preliminary submission.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಬಂಡೆಪ್ಪ ಖಾಶೆಂಪೂರ ರವರು ಹೇಳಿದ್ದು ಸರಿಯಾಗಿದೆ. ಇಸ್ರೇಲ್ ಮಾದರಿಯಲ್ಲಿ ಹೊಸದಾಗಿ ಕೃಷಿಯನ್ನು ಪರಿಚಯ ಮಾಡಬೇಕೆಂದು ನಮ್ಮ ಸರ್ಕಾರ ಯೋಚನೆ ಮಾಡಿದೆ. ಅದಕ್ಕೂ ಮತ್ತು ಬರಕ್ಕೂ ಏನು ಸಂಬಂಧ ಇದೆ ಎಂದು ತಾವು ಕೇಳುವುದರಲ್ಲಿ ಅರ್ಥವಿದೆ. ನಾನು ಅದರಿಂದ ಬರ ಪರಿಹಾರ ಆಗುತ್ತದೆ ಎಂದು ಹೇಳಿಲ್ಲ ಅಥವಾ ಬರ ಪರಿಹಾರಕ್ಕೋಸ್ಕರ ಇಸ್ರೇಲ್ ಮಾದರಿಯನ್ನು ತರುತ್ತಾರೆಂದು ನಾನು ಹೇಳಿಲ್ಲ. ಆದರೆ ಸರ್ಕಾರದ ಕನಸು ಏನಿತ್ತು ಎಂದರೆ, ಬಡವರ ಬಗ್ಗೆ, ರೈತರ ಬಗ್ಗೆ, ದುರ್ಬಲರ ಬಗ್ಗೆ, ನೊಂದವರ ಬಗ್ಗೆ ನಾವಿದ್ದೇವೆ. ಇಸ್ರೇಲ್ ಮಾದರಿಯಲ್ಲಿ ಕೃಷಿ ಮಾಡುತ್ತೇವೆಂದು ಹೇಳಿದ್ದೀರಲ್ಲಾ, ಅದನ್ನು ಏನಾದರೂ ತಂದಿದ್ದು ಇದ್ದಲ್ಲಿ, ಅದಕ್ಕೆ ಯೋಜನಾ ವರದಿ ಸಿದ್ಧವಿದ್ದಿದ್ದರೆ, ಏನಾದರೂ ಕ್ರಾಂತಿಕಾರಿಯಾಗಿ ಅನುಷ್ಠಾನ ಮಾಡಿದ್ದಿದ್ದರೆ, 5000 ಎಕರೆಯಲ್ಲಿ ಕನಿಷ್ಠ 5 ಎಕರೆ ಮಾಡಿದಿದ್ದರೆ ಏನಾದರೂ ಹೇಳಬಹುದು ಎಂದು ಯೋಚನೆ ಮಾಡಿದೆ. ಮಾನ್ಯ ಸಭಾಪತಿಯವರು ಇದರ ಗಂಭೀರತೆ ಏನು ಎಂದು ತೀರ್ಮಾನ ಮಾಡಬೇಕು. ಆ ಗಂಭೀರತೆಯನ್ನು ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದು. ಸರ್ಕಾರ ಜನರಿಗೆ ಬಹಳ ಆಶ್ವಾಸನೆಯನ್ನು ಕೊಟ್ಟಿದೆ ಎನ್ನುವ ಕಾರಣಕ್ಕಾಗಿ ಯೋಚನೆ ಮಾಡಿದ್ದು ಅಷ್ಟೆ. ಈ ಗಂಭೀರತೆಗಳನ್ನೆಲ್ಲಾ ನಿಮಗೆ ಹೇಳುತ್ತಿದ್ದೇನೆ. ಮಂಡ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೋಗಿ ಪೈರು ನಾಟಿ ಮಾಡಿದಾಗ ರಾಜ್ಯದ ಜನರಲ್ಲಿ ಇರುವಂತಹ ಕನಸು ಏನು. “ಮಾನ್ಯ ಮುಖ್ಯ ಮಂತ್ರಿಗಳೇ ನಾಟಿ ಮಾಡಿದ್ದಾರೆ.”

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಂಡ್ಯದಲ್ಲಿ ಭತ್ತ ನಾಟಿ ಮಾಡಿ ಆಗಿದೆ ಮತ್ತು ಅದನ್ನು ಕಟಾವು ಕೂಡ ಮಾಡಲಾಗಿದೆ. ಈಗ ಆ ವಿಷಯ ಏಕೆ ಹೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಳುವ ಪಕ್ಷದವರಿಗೆ ಸ್ವಲ್ಪ ತಾಳ್ಮೆ ಇರಬೇಕು. ಮಾನ್ಯ ವಿರೋಧ ಪಕ್ಷದವರು ಏನು ಹೇಳುತ್ತಾರೆ ಎಂಬುದನ್ನು ಕೇಳಬೇಕು. ನೀವೇ ವಿರೋಧ ಪಕ್ಷಕ್ಕೆ ಬನ್ನಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದವರು ಏನು ಬೇಕಾದರೂ ಹೇಳಿದ್ದನ್ನೆಲ್ಲಾ ಕೇಳುವುದಕ್ಕೋಸ್ಕರ ಆಡಳಿತ ಪಕ್ಷದಲ್ಲಿ ಇರುವುದಾ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಏನಾಗಿದೆ ಗೊತ್ತೆ ಮಾನ್ಯ ಸಭಾಪತಿಯವರೇ. . .

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಒಂದು ಇತಿ ಮಿತಿ ಇರಬೇಕಾಗುತ್ತದೆ ಅಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಲ್.ಭೋಜೇಗೌಡರ ಕಥೆ ಏನಾಗಿದೆ ಎಂದು ಕೇಳಿ. ಎಲ್ಲರ ಹತ್ತಿರವೂ ಇವರು ಹೊಗಳಿಸಿಕೊಂಡು ಹೊಗಳಿಸಿಕೊಂಡು ನಾವು ಕೂಡ ಹೊಗಳಬೇಕೆಂದು ತೀರ್ಮಾನ ಮಾಡಿದ್ದಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು ಮದುವೆ ಆಗಿ ಎರಡು ತಿಂಗಳಿಗೆ ಮಕ್ಕಳು ಏಕೆ ಆಗಲಿಲ್ಲ ಎಂದು ಕೇಳಿದಂತಾಯಿತು.

**ಡಾ॥ ತೇಜಸ್ವಿನಿಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಬೇರೆ ಸದಸ್ಯರು ತೊಂದರೆ ಕೊಡಬಾರದು. ಸರ್ಕಾರ ಇದೆ ಸರ್ಕಾರ ಉತ್ತರ ಕೊಡುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

**(335)11–12–2018(12–10)ಎಂ.ಎಂ–ಬಿ.ಎಸ್.ಎಸ್**

(ಸಭಾಪತಿಯವರ ಉಪಸ್ಥಿತಿ)

**ಡಾ: ತೇಜಸ್ವಿನಿ ಗೌಡ (ಮುಂದು):–** ಮಾನ್ಯ ಸಭಾಪತಿಯವರೇ, ವಿರೋಧಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪ್ರಜಾರಿ:–** ಮಾನ್ಯ ಸಭಾಪತಿಯವರೇ, ಶಾಸಕರಿಗಿರುವ ಜವಾಬ್ದಾರಿ ಒಂದು ಅಂಗ. ಸರ್ಕಾರಕ್ಕಿರುವ ಜವಾಬ್ದಾರಿ ಮತ್ತೊಂದು. ಮಂತ್ರಿಗಳು ಉತ್ತರ ಕೊಡುತ್ತಾರೋ ಅಥವಾ ಶಾಸಕರ ಮೂಲಕ ಉತ್ತರ ಕೊಡಿಸುತ್ತೀರೋ ಗೊತ್ತಿಲ್ಲ. ಮಂತ್ರಿಗಳ ಮಾತನ್ನು ಶಾಸಕರುಗಳು ಕೇಳುತ್ತಿಲ್ಲ ಎನ್ನುವುದು ನನಗೆ ಗೊತ್ತಿದೆ. ಆದರೂ ನಾನು ಈಗ ಸಾರ್ವಜನಿಕವಾಗಿ ಹೇಳಬೇಕಾಗಿದೆ. ಮಂತ್ರಿಗಳ ಮಾತನ್ನು ಮಾನ್ಯ ಸದಸ್ಯರಾದ ಭೋಜೇಗೌಡರು ಕೇಳುವುದಿಲ್ಲ. ಅವರ ಕಷ್ಟ ನನಗೆ ಅರ್ಥವಾಗುತ್ತದೆ. ಸರ್ಕಾರ ಹೇಳಲಿ. ಸಚಿವರು ಉತ್ತರ ಕೊಡುತ್ತೀರೋ ಅಥವಾ ಶಾಸಕರದ್ದು ಒಂದು ಅಂಗ ಅವರು ಮುಂದೆ ಮಂತ್ರಿಯಾಗುವವರು, ಅವರು ಉತ್ತರ ಕೊಡುತ್ತಾರೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಎಸ್.ಎಲ್. ಧರ್ಮೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ವಿರೋಧಪಕ್ಷದ ನಾಯಕರ ಮೇಲೆ ನನಗೆ ತುಂಬಾ ಗೌರವವಿದೆ. ತಾವು ಮಾತನಾಡುವ ಕೆಲವು ವಿಷಯಗಳನ್ನು ಸತ್ಯ ಎಂದು ಒಪ್ಪಿಕೊಳ್ಳುತ್ತೇವೆ. ಕೆಲವೊಂದು ವಿಚಾರಗಳು ಸಂಬಂಧಪಟ್ಟವರಿಗೆ ನೇರವಾಗಿ ಜವಾಬ್ದಾರಿಯಾಗಿರುವುದರಿಂದ, ನಾನು ಚಿಕ್ಕಮಗಳೂರು ಜಿಲ್ಲೆಯವನಾಗಿದ್ದು, ಕಡೂರು ತಾಲ್ಲೂಕಿನಲ್ಲಿ ಸಾಲ ಮನ್ನಾ ಆಗಿಲ್ಲ ಎಂದು ಹೇಳಿದಿರಿ. ಸಾಲ ಮನ್ನಾ ಆಗಿದೆ ಎನ್ನುವುದಕ್ಕೆ ಸಾಕ್ಷಿಯಾಗಿ ನಾನು ಇಲ್ಲಿಯೇ ಕುಳಿತಿದ್ದೇನೆ. ಸರ್ಕಾರವು ಸುಮಾರು 183 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ತಾವು ಇಲ್ಲ ಎಂದರೆ ನಿಮಗೆ ಏನು ಹೇಳುವುದು?

**ಶ್ರೀ ಕೋಟ ಶ್ರೀನಿವಾಸ ಪ್ರಜಾರಿ:–** ಮಾನ್ಯ ಸಭಾಪತಿಯವರೇ, ಕಡೂರು ತಾಲ್ಲೂಕಿನಲ್ಲಿರುವಂತಹ ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳನ್ನು ಕರೆದು ಕೇಳಿದಾಗ ಅವರು ಕೊಟ್ಟಿರುವ ಮಾಹಿತಿಗಳ ಪ್ರಕಾರ ಸಾಲ ಮನ್ನಾದ ಋಣಪತ್ರಗಳು ನಮಗೆ ಸಿಕ್ಕಿಲ್ಲ. ನೀವು ಹಣವನ್ನು ಬಿಡುಗಡೆ ಮಾಡಿದ್ದೀರಿ . . .

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಎಲ್. ಧರ್ಮೇಗೌಡ:–** ಮಾನ್ಯ ಸಭಾಪತಿಯವರೇ, ಜಿಲ್ಲಾ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷನಾಗಿದ್ದಾಗ, ನಾನೇ 183 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ.

**ಸಭಾಪತಿಯವರು:–** ಮಾನ್ಯ ಧರ್ಮೇಗೌಡರವರೇ, ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದು ಏಕಪಕ್ಷೀಯವಾದ ನಿರ್ಧಾರವಲ್ಲ. ಈ ಪ್ರಶ್ನೆಗೆ ಸರ್ಕಾರ ಉತ್ತರ ಕೊಡಬೇಕು. ಕಂದಾಯ ಸಚಿವರಾದ ಮಾನ್ಯ ಆರ್.ವಿ. ದೇಶಪಾಂಡೆಯವರು ಮತ್ತು ಕೃಷ್ಣ ಭೈರೇಗೌಡರವರು ಇಲ್ಲವೆಂದು ಹೇಳಲಿ. ವಿರೋಧ ಪಕ್ಷದಲ್ಲಿರುವಂತಹ ನಾನು ತಪ್ಪಾಗಿ ಮಾತನಾಡಿದರೆ ಅದನ್ನು ಆಕ್ಷೇಪಿಸುವಂತಹ ಅಧಿಕಾರ ನಿಮಗಿದೆ. ಯಾವಾಗ ಎಂದರೆ ಉತ್ತರ ಕೊಡುವಾಗ. ಮನಸ್ಸಿಗೆ ಬಂದ ಹಾಗೆ ಮಾತನಾಡುವ ಅಧಿಕಾರ ಸರ್ಕಾರಕ್ಕೆ ಇದೆಯೇ? ಇಲ್ಲ, ಅದೇ ರೀತಿ ನನಗೂ ಇಲ್ಲ. ನಿಮ್ಮ ಮಾತನ್ನು ಶಾಸಕರು ಕೇಳುತ್ತಾರೋ ಇಲ್ಲವೋ? ಹಾಗೆ ಮಾನ್ಯ ಸದಸ್ಯರಾದ ಧರ್ಮೇಗೌಡರಿಗೂ ಸ್ವಲ್ಪ ಹೇಳಿ.

**ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಉತ್ತರವನ್ನು ಕೊಡುತ್ತೇವೆ. ಇದರ ಬಗ್ಗೆ ತಾವು ಕಾಳಜಿ ಇಟ್ಟುಕೊಳ್ಳಿ, ಚಿಂತಿತರಾಗುವ ಅವಶ್ಯಕತೆ ಇಲ್ಲ. ಮಾನ್ಯ ದೇಶಪಾಂಡೆಯವರು ಬಹಳ ಹಿರಿಯ ಸಚಿವರಾಗಿದ್ದಾರೆ, ಅವರ ಜೊತೆ ಮಾನ್ಯ ಮುಖ್ಯಮಂತ್ರಿಯವರಿದ್ದಾರೆ, ನಿಮ್ಮ ಎಲ್ಲಾ ಪ್ರಶ್ನೆಗಳಿಗೂ ಸಮರ್ಪಕವಾದಂತಹ ಉತ್ತರವನ್ನು ಕೊಡುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರಿಗಿರುವ ಮಾಹಿತಿ ವಾಸ್ತವವಾಗಿರಬಹುದು ಅಥವಾ ವಾಸ್ತವವಿಲ್ಲದಿರಬಹುದು. ಆದರೂ ಅವರಿಗೆ ಮಾತನಾಡಲು ಹಕ್ಕು ಇದೆ, ಅದನ್ನು ನಾವು ಗೌರವಿಸುತ್ತೇವೆ. ತಾವು ಸರ್ಕಾರಕ್ಕೆ ಎಚ್ಚರಿಕೆ ಮೂಡಿಸುವ ಭರದಲ್ಲಿ ನಮ್ಮ ಸಚಿವರಾದ ಶ್ರೀ ಬಂಡೆಪ್ಪ ಖಾಶೆಂಪೂರ ಅವರ ಹೆಸರನ್ನು 'ಬಂಡಿಸಿದ್ದೇಗೌಡ' ಎಂದೇಕೆ ಬದಲಾವಣೆ ಮಾಡಿದಿರಿ ಎನ್ನುವುದಷ್ಟೇ ನನ್ನ ಪ್ರಶ್ನೆಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಆ ಶಬ್ಧವನ್ನು ತಿದ್ದುಪಡಿ ಮಾಡಿ ವಾಪಸ್ಸು ಪಡೆಯುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರ ಬಗ್ಗೆ ನಮಗೆ ಗೌರವವಿದೆ. ಅವರಿಗೆ ಸಂವಿಧಾನಬದ್ಧವಾದ ಅಧಿಕಾರಗಳು ಇವೆ. ಆದರೆ ಹೆಸರನ್ನು ಮರುನಾಮಕರಣ ಮಾಡುವ ಅವಕಾಶ ತಮಗೆ ಇತ್ತೆನ್ನುವುದು ನಮಗೆ ಗೊತ್ತಿರಲಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಬೇರೆ ಯಾವ ತಪ್ಪುಗಳನ್ನೂ ಹುಡುಕುವುದಕ್ಕೆ ಆಗಲಿಲ್ಲ ಅದಕ್ಕೆ ಇದೊಂದು ತಪ್ಪನ್ನು ಹುಡುಕಿಬಿಟ್ಟರು. ನಾನು ಕೆಲವು ಸಲ ಮಾನ್ಯ ಸಚಿವರಾದ ಕೃಷ್ಣ ಭೈರೇಗೌಡರು ಬುದ್ಧಿವಂತರು ಎಂದು ಹೇಳುತ್ತಿದ್ದೆ ಹಾಗೆಂದು ಅವರ ಹೆಸರೇ ಬುದ್ಧಿವಂತರೆಂದು ಅಲ್ಲ, ಶಬ್ಧದ ವ್ಯಾಪ್ತಿಯೊಳಗೆ ಅದು ಬಂದು ಬಿಡುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೃಷ್ಣ ಭೈರೇಗೌಡ:–** ಇದರ ಬಗ್ಗೆ ತಕರಾರೇನೂ ಇಲ್ಲ.

**ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪ್ರಜಾರಿಯವರೇ, ತಮಗೆ ಮಾತನಾಡಲು ಅವಕಾಶ ನೀಡಿ ಸುಮಾರು 15 ರಿಂದ 18 ನಿಮಿಷವಾಯಿತು. ಆದಷ್ಟು ಬೇಗನೆ ಮುಗಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರವು ಬಡವರು, ದುರ್ಬಲರ ಬಗ್ಗೆ ಕೆಲಸಗಳನ್ನು ಮಾಡಬೇಕು ಎಂದು ಆಗ್ರಹ ಮಾಡುವ ಸಂದರ್ಭದಲ್ಲಿ ಅನೇಕ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೆವು. ಸರ್ಕಾರವು ಸಾಲ ಮನ್ನಾವನ್ನು ಘೋಷಣೆ ಮಾಡಿದಾಗ ಈ ರಾಜ್ಯದಲ್ಲಿರುವ ಮಾಧ್ಯಮದವರು "ಬಡವರಿಗೆ ಕುಮಾರಸ್ವಾಮಿ ಅಲ್ಲ, ವರಮಹಾಸ್ವಾಮಿ, ದೇವರಾಜ ಅರಸ್ ಅಸ್ತ್ರ ಪ್ರಯೋಗಿಸಿದ ಕುಮಾರಣ್ಣ, ಹೆಚ್.ಡಿ.ಕೆ ಸಾಲ ಮನ್ನಾದ ಕ್ರಾಂತಿ" ಎಂದು ಬರೆದರು. ಇವತ್ತಿನ ಸ್ಥಿತಿಯೇನೆಂದರೆ, ಸುಮಾರು 56 ಸಾವಿರ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದರು. 46 ಸಾವಿರ ರೂಪಾಯಿಗಳು ಹೆಚ್ಚು ಕಡಿಮೆಯಾಗಿದೆ. ಕೊಡುತ್ತೇವೆ ಎಂದು ಹೇಳಿದ್ದರು. ಈಗ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ 50 ಕೋಟಿ ರೂಪಾಯಿಗಳಿಗೆ ಋಣಪತ್ರಗಳನ್ನು ಕೊಟ್ಟಿದ್ದಾರೆ. ಉಳಿದುದ್ದನ್ನು ಯಾವಾಗ ಕೊಡುತ್ತಾರೆ?

**ಸಭಾಪತಿಯವರು:–** ಮಾನ್ಯ ಶ್ರೀನಿವಾಸ ಪೂಜಾರಿಯವರೇ, ಇಲ್ಲಿ ಕೇಳಿ,

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರವೇನೆಂದರೆ, ಹಿಂದೆ ಈ ರೀತಿಯ ಯಾವುದಾದರೂ ವಿಷಯ ಬಂದಾಗ preliminary submission ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಕೊನೆಗೆ ಅವಕಾಶ ಕೊಟ್ಟಾಗ ಪೂರ್ಣವಾಗಿ ಹೇಳುತ್ತೇನೆ. ಏಕೆಂದರೆ, ಇನ್ನೆರಡು ನಿಮಿಷದಲ್ಲಿ ಮುಗಿಸುತ್ತೇನೆ ಎಂದು ಹೇಳಿದ್ದೇನೆ. ಸರ್ಕಾರ ಹೊರಗಿನಿಂದ ಬಂದಿರುವ ಸವಲತ್ತುಗಳನ್ನಾದರೂ ಸಹಾಯಕ್ಕೆ ತೆಗೆದುಕೊಳ್ಳುತ್ತದೆಯೇನೋ ಎಂದರೆ, ಅಲ್ಲಿಯೂ ಕೂಡ ನಿಷ್ಕ್ರಿಯತೆ. ಸರ್ಕಾರ ಕಣ್ತೆರೆಯುತ್ತಿಲ್ಲ, ಕೆಲಸ ಮಾಡುತ್ತಿಲ್ಲ, ನಿಷ್ಕ್ರಿಯವಾಗಿದೆ, ಜವಾಬ್ದಾರಿಯಿಂದ ವರ್ತಿಸುತ್ತಿಲ್ಲ ಎಂದು ನಾನೇಕೆ ಹೇಳಿದೆನೆಂದರೆ, ಒಂದು ಕಡೆ ಬರ ಮತ್ತೊಂದು ಕಡೆ ಅತಿವೃಷ್ಟಿ ಇರುವುದಕ್ಕೆ ಇನ್ಫೋಸಿಸ್‌ನ ಸಂಸ್ಥಾಪಕರಾದ ಶ್ರೀಮತಿ ಸುಧಾಮೂರ್ತಿಯವರು ಕೊಡಗು ಜಿಲ್ಲೆಗೆ 25 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. 25 ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡದಿದ್ದ ಕಾರಣಕ್ಕೋಸ್ಕರ ಶ್ರೀಮತಿ ಸುಧಾಮೂರ್ತಿಯವರು ಸರ್ಕಾರ ವ್ಯವಸ್ಥಿತವಾಗಿ ನಮಗೆ ಸ್ಪಂದಿಸುತ್ತಿಲ್ಲವಾದ್ದರಿಂದ ನಾವೇ ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಹಾಗಿದ್ದರೆ ಸರ್ಕಾರದ ಕ್ರಿಯಾಶೀಲತೆ ಹೇಗೆ? ಉಡುಪಿಯ ಪಲಿಮಾರು ಮಠದ ಸ್ವಾಮೀಜಿಯವರು ಮಡಿಕೇರಿ ಜಿಲ್ಲೆಯಲ್ಲಿರುವ 'ಮಕ್ಕಂದೂರು' ಎಂಬ ಗ್ರಾಮವನ್ನು ದತ್ತು ಪಡೆದಿದ್ದಾರೆ. 87 ಮನೆಗಳನ್ನು ಕಟ್ಟಿಸಿಕೊಡುತ್ತೇನೆ ಎಂದು ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದರೆ ಜಿಲ್ಲಾಧಿಕಾರಿಯವರು ಮೊದಲ ಸಲ ಒಪ್ಪಿಗೆ ನೀಡಿ ಎರಡನೆಯ ಬಾರಿ ನೋಟಿಸೊಂದನ್ನು ಕೊಟ್ಟು 87 ಮನೆಗಳನ್ನು ಕಟ್ಟಿಕೊಡುವುದಕ್ಕೆ ಬೇಕಾಗಿರುವ ಹಣವನ್ನು ಸರ್ಕಾರಕ್ಕೆ ಕೊಡಿ ನಾವೇ ಮನೆಗಳನ್ನು ಕಟ್ಟಿಕೊಡುತ್ತೇವೆ ಎಂದು ಹೇಳಿದ್ದಾರೆ. ಸ್ವಾಮೀಜಿಯವರು ನೀವು ಕಟ್ಟಿರುವ ಮನೆಗಳ ಮೇಲೆ ಸರ್ಕಾರದ ವ್ಯವಸ್ಥೆಗಳಿವೆ ಎಂದು ಹೇಳುತ್ತಾರೆ. ಯಾವುದೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರವಿರಲಿ ನನಗೆ ಅದರಲ್ಲಿ ವಿಶ್ವಾಸವಿಲ್ಲ. ಜಾಗ ತೋರಿಸಿ, ನಾವು ಕಟ್ಟಿಸಿಕೊಡುತ್ತೇವೆ ಎಂದು ಹೇಳಿದರೆ, ಮುಖ್ಯಮಂತ್ರಿಯವರು ಆದೇಶ ನೀಡಿದರೆ ಮಾಡುತ್ತೇವೆ ಎಂದು ಹೇಳುತ್ತಾರೆ. ಪಲಿಮಾರು ಮಠದ ಸ್ವಾಮೀಜಿಯವರು ಒಂದಷ್ಟು ಪ್ರಯತ್ನಗಳನ್ನು ಮಾಡಿ ಮುಖ್ಯಮಂತ್ರಿಯವರ ಜೊತೆ ದೂರವಾಣಿಯಲ್ಲಿ ಮಾತನಾಡಿದಾಗ ಮುಖ್ಯಮಂತ್ರಿಯವರು ಇಲ್ಲ, ನಾನು ನೋಡುತ್ತೇನೆ, ಸರಿ ಮಾಡುತ್ತೇನೆ ಎಂದು ಹೇಳಿದ್ದಾರೆ ಆದರೆ ಇವತ್ತಿನವರೆಗೂ ಒಂದು ಹೆಜ್ಜೆ ಮುಂದೆ ಹೋಗಿಲ್ಲ. ಸರ್ಕಾರವು ಯಾವುದೇ ಮೂಲದಿಂದ ಬಂದಿರುವ ಅನುದಾನವನ್ನು ಬಳಸಿಕೊಂಡು ಸಮರೋಪಾದಿಯಲ್ಲಿ ಬಡವರ ಸಂಕಷ್ಟಕ್ಕೆ ಕೆಲಸ ಮಾಡುವುದನ್ನು ಬಿಟ್ಟು ನಾವೆಲ್ಲರೂ ಮಣ್ಣಿನ ಮಗ ಎಂದು ಹೇಳುತ್ತಾರೆ, ನಾವೆಲ್ಲಾ ಕಲ್ಲಿನ ಮಕ್ಕಳಾ? ಈ ರಾಜ್ಯದಲ್ಲಿ ಎಲ್ಲರೂ ಮಣ್ಣಿನ ಮಕ್ಕಳೇ. ಪ್ರಾಥಮಿಕವಾದ ಮಾಹಿತಿಯನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ.

**ಸಭಾಪತಿಯವರು:-** ಮಾನ್ಯ ಪೂಜಾರಿಯವರು ಮಣ್ಣಿನ ಮಕ್ಕಳಾಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಈ ವಿಚಾರದಲ್ಲಿ ನಾನು ಸರ್ಕಾರಕ್ಕೆ ಆಗ್ರಹ ಪಡಿಸುವುದೇನೆಂದರೆ, ತಾವು ಪ್ರಾಥಮಿಕ ಪ್ರಸ್ತಾವನೆಯ ಬಗ್ಗೆ ಮಾತನಾಡಲು ಅವಕಾಶ ನೀಡಿರುವುದಕ್ಕೆ ಸಮಯದ ಮಿತಿಯೊಳಗೆ ಮುಗಿಸುತ್ತೇನೆ. ಈ ಅವಕಾಶವನ್ನು ಪೂರ್ಣ ಪ್ರಮಾಣದಲ್ಲಿ ವಿಸ್ತಾರವಾಗಿ ಹೇಳುವುದಕ್ಕೆ ನಾವೆಲ್ಲರೂ ತಯಾರಾಗಿ ಬಂದಿದ್ದೇವೆ, ದಯವಿಟ್ಟು ತಾವು ನಮಗೆ ಅವಕಾಶ ಕೊಡಬೇಕು. ಸರ್ಕಾರ ನಿಷ್ಕ್ರಿಯವಾಗಿರುವುದಕ್ಕೆ ಇದೊಂದು ಸ್ಪಷ್ಟವಾದ ಉದಾಹರಣೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು. ಈಗ ಶ್ರೀಯುತರಾದ ಕೋಟ ಶ್ರೀನಿವಾಸ ಪೂಜಾರಿಯವರು, ಮಹಾಂತೇಶ ಕವಟಗಿಮಠರವರು, ಆಯನೂರು ಮಂಜುನಾಥರವರು, ತೇಜಸ್ವಿನಿ ಗೌಡ, ರವಿಕುಮಾರ್ ಇಷ್ಟೆಲ್ಲಾ ಸದಸ್ಯರು ಕೇಳಿದ್ದಾರೆ. ಪ್ರಾಥಮಿಕ ಹಂತದಲ್ಲಿ ತಾವು ಹೇಳಿದಂತಹ ವಿಚಾರಗಳನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಇದನ್ನು ನಿಯಮ 59ರ ಬದಲಿಗೆ ನಿಯಮ 68ರ ಅಡಿಯಲ್ಲಿ ಮಧ್ಯಾಹ್ನ ತೆಗೆದುಕೊಳ್ಳುತ್ತೇನೆ. ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ.

**5. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

(ಲಗತ್ತಿಸಿದೆ)

**ಸಭಾಪತಿಯವರು:-** ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರು ಗೈರು ಹಾಜರಾಗಿರುವುದರಿಂದ ಮುಂದೆ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ. ಮಾನ್ಯ ಸದಸ್ಯರಾದ ಅರುಣ ಶಹಾಪೂರರವರು ಸೂಚಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ತಯಾರಾಗುತ್ತಿರುವುದರಿಂದ ಅದನ್ನು ಮಧ್ಯಾಹ್ನ ತೆಗೆದುಕೊಳ್ಳಲಾಗುವುದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(336) 11–12–2018/12–20/ಕೆಹೆಚ್–ಕೆಎಸ್

**(ಸಭಾಪತಿಯವರ ಉಪಸ್ಥಿತಿ)**

**6. <u>ಕಾರ್ಯದರ್ಶಿಯವರ ವರದಿ</u>**

**ಕಾರ್ಯದರ್ಶಿಯವರು:–** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಿಂದೀಚೆಗೆ ರಾಷ್ಟ್ರಪತಿ/ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ ಗಮನ ಸೆಳೆಯುವ ಸೂಚನೆಯ ಬಗ್ಗೆ ತಾವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿರುವುದಿಲ್ಲ. ಆದ್ದರಿಂದ ಇದಕ್ಕೆ ಉತ್ತರ ಇಲ್ಲದೆ ಇದರ ಬಗ್ಗೆ ನಾನು ಮಾತನಾಡುವುದಿಲ್ಲ.

**ಶ್ರೀ ಕೃಷ್ಣಭೈರೇಗೌಡ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಾನೂನು, ನ್ಯಾಯ ಮತ್ತು ಮಾನವ ಹಕ್ಕು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ತಾವು ಅನ್ಯತಾ ಭಾವಿಸಲಿಲ್ಲವೆಂದರೆ ಈ ಎಲ್ಲಾ ಗಮನ ಸೆಳೆಯುವ ಸೂಚನೆಯನ್ನು ಭೋಜನ ವಿರಾಮದ ನಂತರ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ತಮ್ಮಲ್ಲಿ ಮನವಿ ಮಾಡುತ್ತೇನೆ.

**ಸಭಾಪತಿಯವರು:–** ಈ ಗಮನ ಸೆಳೆಯುವ ಸೂಚನೆಯನ್ನು ಮಧ್ಯಾಹ್ನದ ನಂತರ ತೆಗೆದುಕೊಳ್ಳೋಣ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ತಾವು ಒಪ್ಪುವುದಾದರೆ ಮಾನ್ಯ ವಿರೋಧ ಪಕ್ಷದ ನಾಯಕರು ಬರ ವಿಚಾರದ ಬಗ್ಗೆ ಚರ್ಚೆಯನ್ನು ಮಾಡಲಿ.

**ಸಭಾಪತಿಯವರು:–** ಬರ ವಿಚಾರದ ಬಗ್ಗೆ ಚರ್ಚೆ ಬೇಡ. ನಿಯಮ 330 ರ ಮೇರೆಗೆ ಮಾನ್ಯ ಕೆ.ಸಿ.ಕೊಂಡಯ್ಯ ಮತ್ತು ಶರಣಪ್ಪ ಮಟ್ಟೂರ ರವರುಗಳು ಚರ್ಚೆಯನ್ನು ಮಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾವುದಾದರೂ ಕಾರಣಕ್ಕೆ ಸಾಮಾನ್ಯ ಮಂತ್ರಿಗಳು ಸದನಕ್ಕೆ ಗೈರು ಹಾಜರಾಗುವ ಹಾಗಿದ್ದರೆ ಮಾನ್ಯ ಸಭಾಪತಿಯವರಿಗೆ ಚೀಟಿಯನ್ನು ಕಳುಹಿಸಿ ಅನುಮತಿಯನ್ನು ಪಡೆಯಬೇಕಲ್ಲವೇ?

**ಸಭಾಪತಿಯವರು:–** ಯಾವ ಮಂತ್ರಿಗಳು ಸಹ ಅನುಮತಿಯನ್ನು ಪಡೆದಿರುವುದಿಲ್ಲ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಕೆಳಮನೆಯಲ್ಲಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಕೆಳಮನೆಯಲ್ಲಿದ್ದರೂ ಕೂಡ ಇಷ್ಟು ಜನ ಮಂತ್ರಿಗಳು ಮೇಲ್ಮನೆಯಲ್ಲಿ ಇರಬೇಕೆಂದು ಇದೆ. ಯಾವ ಯಾವ ಇಲಾಖೆಯಿಂದ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೀರೋ, ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಕೆಳಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಇರಬೇಕೆಂಬ ಬಗ್ಗೆ ಒಂದು ನಿಯಮ ಇದೆ. ಉಳಿದ ಮಂತ್ರಿಗಳು ಎಲ್ಲಿರಬೇಕೆಂಬ ಬಗ್ಗೆ ತಮಗೆ ಆಲೋಚನೆ ಇರುತ್ತದೆ. ಅದರ ಬಗ್ಗೆ ಪಟ್ಟಿಯನ್ನು ಕಳುಹಿಸಿ ಕೊಡುತ್ತಿರುತ್ತೀರಿ. ಮಾನ್ಯ ಸಚಿವರು ಬುದ್ಧಿವಂತರು, ಅವರೇ ಈ ರೀತಿ ಮಾತನಾಡಿದರೆ ಹೇಗೆ? ದಾರಿ ತಪ್ಪುವುದಕ್ಕಾದರೂ ಒಂದು ನಿಯಮಬೇಕಲ್ಲವೇ, ಈ ರೀತಿ ಮಾಡುವುದು ಸರಿಯಲ್ಲವೆಂದು ಹೇಳುತ್ತಿದ್ದೇನೆ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ದಾರಿ ತಪ್ಪಿಸುವುದಕ್ಕೆ ಏನಾದರೂ ನಿಯಮವಿದೆಯೇ? ಮಾನ್ಯ ವಿರೋಧ ಪಕ್ಷದ ನಾಯಕರಿಂದ ದಾರಿ ತಪ್ಪಿಸುವ ನಿಯಮದ ಬಗ್ಗೆ ಕಲಿಯಬೇಕು, ಅದರ ಬಗ್ಗೆ ನನಗೆ ಗೊತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣಭೈರೇಗೌಡರವರ ಕಡೆಯಿಂದ ಹೇಗೆ ದಾರಿ ತಪ್ಪಿಸುವ ಬಗೆ ಹೇಗೆ ಎಂಬುದು ನನಗೆ ಗೊತ್ತಾಯಿತು. ಮಾನ್ಯ ಮಂತ್ರಿಗಳು ಪೀಠದ ಅನುಮತಿಯನ್ನು ಪಡೆಯದೇ ಸದನಕ್ಕೆ ಗೈರು ಹಾಜರಾಗುವುದು ಸರಿ ಇದೆಯೇ,

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ಏಳು ಸಚಿವರು ಸದನದಲ್ಲಿ ಉಪಸ್ಥಿತರಿದ್ದಾರೆ. ಇದರ ಬಗ್ಗೆ ತಾವೇ ವಿಚಾರ ಮಾಡಬೇಕು. ಉಳಿದ ಪ್ರಶ್ನೆಗೆ ಉತ್ತರವನ್ನು ಕೊಡಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ತಾವು ಖಾತೆಯನ್ನು ಹೊಂದಿರುವ ಸಚಿವರನ್ನು ಕೊಡಿ. ಮೂರು ಗಮನ ಸೆಳೆಯುವ ಸೂಚನೆಗಳಿದ್ದು, ಯಾವುದೋ ಒಂದು ಪ್ರಶ್ನೆಗೆ ಮಧ್ಯಾಹ್ನ ಉತ್ತರವನ್ನು ಕೊಡಿಸುತ್ತೇನೆಂದು ಮಾನ್ಯ ಸಚಿವರು ಹೇಳಿದರು. ಸರ್ಕಾರ ಸದನವನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಲೇ ಇಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ, ನಮ್ಮ ಸದನದಲ್ಲಿ ಮಹತ್ತರ ವಿಷಯವಿದ್ದಾಗ ಮಾನ್ಯ ಮಂತ್ರಿಗಳು ಸದನದಲ್ಲಿ ಹಾಜರಿರಬೇಕು. ಶೇಕಡಾ 99 ರಷ್ಟು ಮೇಲ್ಮನೆಯಲ್ಲಿ ಪ್ರಶ್ನೆ ಇದ್ದಾಗ ಕೆಳಮನೆಯಲ್ಲಿ ಯಾವುದೇ ರೀತಿಯ ಪ್ರಶ್ನೆ ಇರುವುದಿಲ್ಲ. ಆದ್ದರಿಂದ ಈ ರೀತಿಯ ಪರಿಸ್ಥಿತಿಯನ್ನು ಬರುವಂತಹ ದಿನಗಳಲ್ಲಿ ದಯವಿಟ್ಟು ನಿರ್ಮಾಣ ಮಾಡಬೇಡಿ. ಮಾನ್ಯ ಮಂತ್ರಿಗಳು ಕೆಳಮನೆಯಲ್ಲಾಗಲಿ ಅಥವಾ ಮೇಲ್ಮನೆಯಲ್ಲಾಗಲಿ ಪ್ರಶ್ನೆಗಳಿದ್ದಾಗ ಯಾರೂ ಗೈರು ಹಾಜರಾಗಬಾರದು, ಸದನಕ್ಕೆ ಹಾಜರಾಗಬೇಕು.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## 7. ನಿಯಮ 330ರ ಮೇರೆಗೆ ಚರ್ಚೆ

ಅ) **ವಿಷಯ:** ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 2013–14ನೇ ಸಾಲಿನಿಂದ ಇಲ್ಲಿಯವರೆಗೆ ಆಯವ್ಯಯದಲ್ಲಿ ಅನುದಾನ ಘೋಷಣೆ ಮಾಡಲಾಗಿದ್ದರೂ ಬಿಡುಗಡೆ ಮಾಡದಿರುವ ಹಾಗೂ 2018–19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಅನುದಾನದಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನ ಹೊರತುಪಡಿಸಿ ಮಂಡಳಿಗೆ ಬಿಡುಗಡೆ ಮಾಡುವ ಕುರಿತು ಪ್ರಸ್ತಾಪಿಸುವ ಬಗ್ಗೆ.

***

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿಯಮ 330ರ ಮೇರೆಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮ ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ಆರು ಜಿಲ್ಲೆಗಳು ಸೇರಿಕೊಂಡಿವೆ. ನಮ್ಮ ಕರ್ನಾಟಕ ರಾಜ್ಯವು 1956ನೇ ಸಾಲಿನಲ್ಲಿ ರಚನೆ ಆಗುವುದಕ್ಕಿಂತ ಮೊದಲು ಈ ಹೈದರಾಬಾದ್–ಕರ್ನಾಟಕ ಪ್ರದೇಶದ ಐದು ಜಿಲ್ಲೆಗಳಾದ ಗುಲ್ಬರ್ಗಾ, ಬೀದರ್, ಕೊಪ್ಪಳ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳು ಮೊದಲು Nizam State ನಲ್ಲಿತ್ತು. ಬಳ್ಳಾರಿ ಜಿಲ್ಲೆಯು ಮದ್ರಾಸ್ ರಾಜ್ಯದಲ್ಲಿತ್ತು. ಅ ಐದು ceded districtsನ್ನು ಕರ್ನಾಟಕ ರಾಜ್ಯಕ್ಕೆ ಸೇರಿಸಲಾಯಿತು. ಕರ್ನಾಟಕ ರಾಜ್ಯಕ್ಕೆ ಸೇರಿದ ಮೇಲೆ ಹೈದರಾಬಾದ್–ಕರ್ನಾಟಕ Nizam State ನಿಂದ ಒಂದು ವರ್ಷ ತಡವಾಗಿ ಸ್ವಾತಂತ್ರ ರಾಜ್ಯದಲ್ಲಿ ಸೇರಿಕೊಂಡಿತು. ತದನಂತರ ನಾವು comparison ಮಾಡಿದಾಗ ಹಳೆ ಮೈಸೂರಿನ ಬೇರೆ ಬೇರೆ ಭಾಗಗಳಿಗೂ ಮತ್ತು ನಮಗೂ ಬಹಳ ವ್ಯತ್ಯಾಸಗಳಿದ್ದವು. ಆ ಪ್ರದೇಶದ ಹಿರಿಯ ನಾಯಕರುಗಳಾದಂತಹ ಶ್ರೀ ಧರ್ಮಸಿಂಗ್, ಶ್ರೀ ಮಲ್ಲಿಕಾರ್ಜುನ ಖರ್ಗೆ ಮತ್ತು ಶ್ರೀ ವೈದ್ಯನಾಥ್ ಪಾಟೀಲ್ ಹಾಗೂ ಪ್ರತಿ ಜಿಲ್ಲೆಗಳಿಂದ ಹೋರಾಟ ಮಾಡಿ ನಮಗೆ ಪ್ರತ್ಯೇಕವಾಗಿ ಇದಕ್ಕೆ 'special status' ಅನ್ನು ಕೊಡಬೇಕು. ನಾವು ಅಭಿವೃದ್ಧಿಗೆ ವಂಚಿತರಾಗಿದ್ದೇವೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ನಮ್ಮ ಜಿಲ್ಲೆಗಳು ಹಿಂದುಳಿದಿವೆ. ನಾನು ಸಹ ಸಂಸತ್ತಿನ ಸದಸ್ಯನಾಗಿದ್ದಾಗ ಪ್ರಯತ್ನ ಮಾಡಿದ್ದೇನೆ. ಆಗ ಮಾನ್ಯ ಅಡ್ವಾನಿಯವರು ಗೃಹ ಸಚಿವರಾಗಿದ್ದರು. ಈ 'special status' ಅನ್ನು ಕಾನೂನಿನ ಪ್ರಕಾರ ಕೊಡುವುದಕ್ಕೆ ಬರುವುದಿಲ್ಲವೆಂದು ತಿರಸ್ಕರಿಸಿದರು. ಇದಕ್ಕೆ ಸತತವಾಗಿ ಹೋರಾಟ ಮಾಡಿದ ಮೇಲೆ 2011–12ನೇ ಸಾಲಿನಲ್ಲಿ ಶ್ರೀಮತಿ ಸೋನಿಯಗಾಂಧಿ ಮತ್ತು ಶ್ರೀ ರಾಹುಲ್ ಗಾಂಧಿಯವರು ಗುಲ್ಬರ್ಗಾ ಜಿಲ್ಲೆಗೆ ಭೇಟಿ ಕೊಟ್ಟಾಗ ಈ ಪ್ರದೇಶದ ಕೊರತೆಗಳೇನು, ಏನು ಅಭಿವೃದ್ಧಿಯಾಗಬೇಕೆಂಬ ಬಗ್ಗೆ ಜನರಲ್ಲಿ ಕೇಳಿದಾಗ ಈ special status ಅನ್ನು ಕೊಟ್ಟು *'Article 371J'* ಅನ್ನು amend ಮಾಡಬೇಕು ಎಂದರು, ಆ ರೀತಿ ಮಾಡಿದರೆ ಮಾತ್ರ ನಮ್ಮ ಪ್ರದೇಶ ಅಭಿವೃದ್ಧಿಯಾಗುತ್ತದೆಂದು ಪ್ರಸ್ತಾಪಿಸಿದರು. ಆ ಮಾತಿನಂತೆ ದಿನಾಂಕ:01–01–2013ನೇ ಸಾಲಿನಲ್ಲಿ ಪ್ರತ್ಯೇಕ ಪ್ರದೇಶ *'Article 371J'* ಎಂದು amendment ಆಯಿತು. ***"ARTICLE 371J"*** of ***'CONSTITUTION OF INDIA'*** *reads as follows;*

***"SPECIAL PROVISIONS WITH RESPECT TO STATE OF KARNATAKA"***

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

*(1) The President may, by order made with respect to the State of Karnataka, provide for any special responsibility of the Governor for-*

*a) establishment of a separate development board for Hyderabad-Karnataka region with the provision that a report on the working of the board will be placed each year before the State Legislative Assembly;*

*b) equitable allocation of funds for developmental expenditure over the said region, subject to the requirements of the State as a whole; and*

*c) equitable opportunities and facilities for the people belonging to the said region, in matters of public employment, education and vocational training, subject to the requirements of the State as a whole.*

*(2) An Order made under sub-clause (c) of clause (1) may provide for-*

*a) reservation of a proportion of seats in educational and vocational training institutions in the Hyderabad-Karnataka region for students who belong to that region by birth or by domicile; and*

*b) identification of posts or classes of posts under the State Government and in any body or organisation under the control of the State Government in the Hyderabad-Karnataka region and reservation of a proportion of such posts for persons who belong to that region by birth or by domicile and for appointment thereto by direct recruitment or by promotion or in any other manner as may be specified in the order.*

ಇದು formation ಆದಾಗ್ಯ, ರಾಜ್ಯ ಸರ್ಕಾರವು ರಾಷ್ಟ್ರಪತಿಯವರ consent ಅನ್ನು ಸಹ ಪಡೆಯಿತು. ಈ ಜಿಲ್ಲೆಗಳಿಗೆ 'special status' ಎಂದು ಮಾಡಿರುವ ಉದ್ದೇಶವೇನೆಂದರೆ, ನಮ್ಮ ಪ್ರದೇಶ ಅತ್ಯಂತ ಹಿಂದುಳಿದಿದೆ. ಈ ಪ್ರದೇಶಗಳು ಸಾಕಷ್ಟು ಅಭಿವೃದ್ಧಿಯಾಗಬೇಕು. ದಿನಾಂಕ:01–01–2013ನೇ ಸಾಲಿನಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಪ್ರಾರಂಭವಾಯಿತು.

**(337) 11–12–2018 (12–30) ಎಸ್‌ಪಿಆರ್–ಕೆಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಸಿ.ಕೊಂಡಯ್ಯ(ಮುಂದು):–**

ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಪ್ರಾರಂಭವಾದ ನಂತರ ಹೈದರಾಬಾದ್–ಕರ್ನಾಟಕ ಪ್ರದೇಶದ ವ್ಯಾಪ್ತಿಗೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರಗಿ ಮತ್ತು ಬೀದರ್ ಜಿಲ್ಲೆಗಳು ಒಳಪಡುತ್ತವೆ. ಸದರಿ ಜಿಲ್ಲೆಗಳ ನಾಯಕರುಗಳು ಹೋರಾಟ ಮಾಡಿದ ನಂತರ ಸಂವಿಧಾನದ ಅನುಚ್ಛೇದ 371(ಜೆ) ರನ್ವಯ ಮೀಸಲಾತಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದೊರೆಯಿತು ಹಾಗೂ ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಸ್ಥಾಪನೆಯಾಯಿತು ಹಾಗೂ ಇದಕ್ಕೆ ಹಣದ ಹಂಚಿಕೆಯೂ ಸಹ ಆಯಿತು. ಇದು ಇಡೀ ರಾಜ್ಯದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸಂವಿಧಾನದ ಅನುಚ್ಛೇದ 371(ಜೆ) ರೀತ್ಯ ನೇಮಕಾತಿ, ಪದೋನ್ನತಿ, ಹುದ್ದೆಗಳಿಗೆ ಮೀಸಲಾತಿ, ಬ್ಯಾಕ್‌ಲಾಗ್ ನೇಮಕಾತಿ ಇವುಗಳಿಗೆ ಅವಕಾಶ ದೊರೆಯಿತು. ಇದರ ಜೊತೆಗೆ ಪ್ರತಿ ವರ್ಷದ ಆಯವ್ಯಯದಲ್ಲಿ ಸದರಿ ಪ್ರದೇಶದ ಅಭಿವೃದ್ಧಿಗಾಗಿ ಅನುದಾನದ ಘೋಷಣೆ ಮಾಡಲಾಗುತ್ತಿದೆ. ಮಂಡಳಿ ಸ್ಥಾಪನೆಯಾದ ಮೊದಲನೇ ವರ್ಷ ಅಂದರೆ 2013-14 ನೇ ಸಾಲಿನಲ್ಲಿ ಮೂರು ತಿಂಗಳ ಮಟ್ಟಿಗೆ 153 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಸರ್ಕಾರವು ಮಂಜೂರು ಮಾಡಿತು. ನಂತರ 2014-15, 2015-16, 2016-17, 2017-18 ಮತ್ತು 2018-19 ಸಾಲುಗಳಲ್ಲಿ ಅನುಕ್ರಮವಾಗಿ 600, 1000, 1000, 1000 ಮತ್ತು 1000 ಕೋಟಿ ರೂಪಾಯಿಗಳಷ್ಟು ಅಂದರೆ ಒಟ್ಟಾರೆಯಾಗಿ 4,753 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಸರ್ಕಾರವು ಮಂಜೂರು ಮಾಡಿದೆ. ಪ್ರತಿ ವರ್ಷ ಆಯವ್ಯಯದಲ್ಲಿ ಈ ಮಂಡಳಿಗೆ ಮಂಜೂರಾದ ಅನುದಾನವು lapse ಆಗುವುದಿಲ್ಲ ಎಂಬುದಾಗಿ ಹೇಳುತ್ತಾ ಬಂದರು. ಆದರೆ, ದಿನಾಂಕ: 06/11/2013 ರಂದು ಹೊರಡಿಸಲಾದ ಅಧಿಸೂಚನೆಯ ಖಂಡಿಕೆ 16(ಸಿ) ರಲ್ಲಿ ಈ ಕೆಳಗಿನಂತೆ ನಮೂದು ಮಾಡಲಾಗಿದೆ.

> "ಹಣಕಾಸು ವರ್ಷದಲ್ಲಿ ವಿನಿಯೋಗಿಸದೆ ಉಳಿದಿರುವ ನಿಧಿಯನ್ನು ರದ್ದುಗೊಳಿಸತಕ್ಕದ್ದಲ್ಲ, ಮತ್ತು ಅಂಥ ಬಾಕಿ ಮೊತ್ತವನ್ನು ಮುಂದಿನ ಹಣಕಾಸು ವರ್ಷಕ್ಕೆ ಮುಂದುವರಿಸತಕ್ಕದ್ದು. ಒಂದು ವರ್ಷದಿಂದ ಮತ್ತೊಂದು ವರ್ಷಕ್ಕೆ ಮುಂದಕ್ಕೊಯ್ಯಲಾದ ನಿಧಿಗಳು ಅಂಥ ಹಣಕಾಸು ವರ್ಷದಲ್ಲಿ ನಿಗದಿಗೊಳಿಸಲಾದ ನಿಧಿಗಳ ಶೇಕಡಾ 20 ಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ"

ಮೇಲ್ಕಂಡಂತೆ rider ಹಾಕಿದ್ದಾರೆ, ಆದರೆ ಮತ್ತೊಂದು ಕಡೆ ಅನುದಾನವು lapse ಆಗುವುದಿಲ್ಲ ಎಂದು ಹೇಳಿರುತ್ತಾರೆ. ಮೇಲ್ಕಂಡಂತೆ ಅಧಿಸೂಚನೆಯನ್ನು ಹೊರಡಿಸಿದರೆ, ಸದರಿ ಪ್ರದೇಶದ ಅಭಿವೃದ್ಧಿಯು ಯಾವ ರೀತಿಯಾಗಿ ಆಗುತ್ತದೆ? ನನಗೆ ತಿಳಿದ ಹಾಗೆ ಪ್ರತಿ ವರ್ಷ ಆಯವ್ಯಯದಲ್ಲಿ ಅನುದಾನದ ಘೋಷಣೆಯಾಗುತ್ತದೆ ಹಾಗೂ ಸದನವು ಅದಕ್ಕೆ ಅನುಮೋದನೆಯನ್ನು ನೀಡುತ್ತದೆ. ನಂತರದಲ್ಲಿ ಘೋಷಣೆಯಾದ ಅನುದಾನವು ಮಂಡಳಿಗೆ ವರ್ಗಾವಣೆಯಾಗಬೇಕು. ಆದರೆ ಇಲ್ಲಿಯವರೆಗೆ ಆ ರೀತಿಯಾಗಿ ಮಾಡಿರುವುದಿಲ್ಲ. ಆದರೆ ಪುನಃ ಸದರಿ ಅನುದಾನ ಪಡೆಯಲು ಆರ್ಥಿಕ ಇಲಾಖೆಯ ಅನುಮೋದನೆಯನ್ನು ಪಡೆಯಬೇಕು. ಮಾನ್ಯ ಸಚಿವರಾದ ಶ್ರೀ ರಾಜಶೇಖರ್ ಬಸವರಾಜ ಪಾಟೀಲರವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಮಂಡಳಿಯ ಸಭೆಯಲ್ಲಿ ಈ ಬಗ್ಗೆ review ಮಾಡಲಾಯಿತು ಹಾಗೂ ಇತ್ತೀಚಿನ ಐದು ವರ್ಷಗಳಲ್ಲಿ ಸರ್ಕಾರದ ಘೋಷಣೆಯನ್ವಯ ಒಟ್ಟಾರೆಯಾಗಿ 6,412 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿತ್ತು. ಆದರೆ ಕೇವಲ 2,928 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದು ಕಂಡು ಬಂದಿರುತ್ತದೆ. ಅದರರ್ಥ ಶೇಕಡಾ 50 ರಷ್ಟು ಅನುದಾನವು ಮಾತ್ರವೇ ಬಿಡುಗಡೆಯಾಗಿದೆ. ಈ ರೀತಿಯ ತಾರತಮ್ಯವನ್ನು ಯಾವಾಗ ಸರಿಪಡಿಸುತ್ತೀರಿ? ಮಂಡಳಿಯ ಸಭೆಯಲ್ಲಿ ವಿಧಾನ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಭಾ, ವಿಧಾನ ಪರಿಷತ್‌ನ ಸದಸ್ಯರುಗಳು ಹಾಗೂ ಸಂಸದರು ಒಳಗೊಂಡಂತೆ 40 ಜನ ಭಾಗವಹಿಸಿದ್ದರು. ವಿಭಾಗೀಯ ಆಯುಕ್ತರು ಸದರಿ ಮಂಡಳಿಯ ಕಾರ್ಯದರ್ಶಿಯಾಗಿದ್ದು, ಈ ವಿಚಾರದಲ್ಲಿ ಎಷ್ಟೆಲ್ಲಾ ಪತ್ರ ವ್ಯವಹಾರ ಮಾಡಿದರೂ ಸಹ ಸರ್ಕಾರದಿಂದ ಯಾವುದೇ ಪ್ರತ್ಯುತ್ತರ ಬಂದಿಲ್ಲ ಎಂಬುದಾಗಿ ಅವರು ತಮ್ಮ ನಿಸ್ಸಹಾಯಕತೆಯನ್ನು ತೋರಿಸಿದರು. ಪರಿಸ್ಥಿತಿ ಹೀಗಾದರೆ, ಮಂಡಳಿ ಏಕೆ ಅಸ್ತಿತ್ವದಲ್ಲಿರಬೇಕು? ನಮ್ಮ ಭಾಗದ ರಾಜಕೀಯ ವಿಚಾರವನ್ನೇ ತೆಗೆದುಕೊಳ್ಳಿ, ಪ್ರಸ್ತುತ ಸರ್ಕಾರದಲ್ಲಾಗಲೀ ಅಥವಾ ಹಿಂದಿನ ಸರ್ಕಾರದಲ್ಲಾಗಲೀ ನಮ್ಮ ಪ್ರದೇಶದಿಂದ ಯಾರೂ ಸಹ ಮುಖ್ಯ ಮಂತ್ರಿಗಳಾಗಿ ಆಯ್ಕೆಗೊಂಡಿಲ್ಲ. ಪ್ರಸ್ತುತ ಅಸ್ತಿತ್ವದಲ್ಲಿರುವ ಸಮ್ಮಿಶ್ರ ಸರ್ಕಾರದಲ್ಲಿ ಹೈದರಾಬಾದ್-ಕರ್ನಾಟಕ ಹಾಗೂ ಮುಂಬೈ-ಕರ್ನಾಟಕ ಪ್ರದೇಶ ವ್ಯಾಪ್ತಿಗಳಿಂದ ಅನುಕ್ರಮವಾಗಿ 21 ಹಾಗೂ 19 ವಿಧಾನ ಸಭಾ ಸದಸ್ಯರು ಚುನಾಯಿತರಾಗಿದ್ದಾರೆ. ಆದರೆ ನಮ್ಮ ಭಾಗದಲ್ಲಿ ಚುನಾಯಿತರಾದ ಸದಸ್ಯರ ಪೈಕಿ ಕೇವಲ ಐವರಿಗೆ ಮಾತ್ರವೇ ಸಚಿವ ಸ್ಥಾನವನ್ನು ನೀಡಲಾಗಿದೆ. ಆದರೆ ಹಳೆಯ ಮೈಸೂರು ಭಾಗದಲ್ಲಿ ಸುಮಾರು 40 ಜನರು ವಿಧಾನ ಸಭಾ ಸದಸ್ಯರಾಗಿ ಚುನಾಯಿತರಾಗಿದ್ದು, ಆ ಪೈಕಿ 11 ಸದಸ್ಯರಿಗೆ ಸಚಿವ ಸ್ಥಾನವನ್ನು ನೀಡಲಾಗಿದೆ. ವಿಧಾನ ಸಭೆಯ ಸಭಾಧ್ಯಕ್ಷರ ಹಾಗೂ ರಾಜ್ಯದ ಉಪ ಮುಖ್ಯಮಂತ್ರಿಗಳ ಸ್ಥಾನಗಳನ್ನೂ ಸಹ ಆ ಭಾಗದ ಸದಸ್ಯರಿಗೆ ನೀಡಲಾಗಿದೆ. ಹೀಗಾಗಿ ನಮ್ಮ ಭಾಗದ ಸದಸ್ಯರಿಗೆ ತಾರತಮ್ಯವುಂಟಾಗಿದೆ. ನಮ್ಮ ಪ್ರದೇಶ ವ್ಯಾಪ್ತಿಯ ಬೀದರ್ ಜಿಲ್ಲೆಯ ಸದಸ್ಯರಿಗೆ ಗಣಿ ಮತ್ತು ಭೂ ವಿಜ್ಞಾನ, ಮುಜರಾಯಿ ಖಾತೆಗಳನ್ನು ಹಂಚಿಕೆ ಮಾಡಲಾಗಿದೆ. ಅದೇ ರೀತಿಯಾಗಿ ಕಲಬುರಗಿ ಜಿಲ್ಲೆಯ ಸದಸ್ಯರಿಗೆ ಸಮಾಜ ಕಲ್ಯಾಣ ಇಲಾಖೆಯನ್ನು ವಹಿಸಿ, ಹಿಂದುಳಿದ ವರ್ಗಗಳ ಕಲ್ಯಾಣ ಖಾತೆಯನ್ನು ಹಿಂಪಡೆಯಲಾಗಿದೆ. ವಿಜಯಪುರ ಜಿಲ್ಲೆಯ ಸದಸ್ಯರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಖಾತೆಯನ್ನು ಹಂಚಿಕೆ ಮಾಡಲಾಗಿದೆ. ಬೆಳಗಾವಿ ಜಿಲ್ಲೆಯ ಸದಸ್ಯರಿಗೆ ಪೌರಾಡಳಿತ ಇಲಾಖೆಯನ್ನು ವಹಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸದಸ್ಯರಾದ ಶ್ರೀಯುತ ಆರ್.ವಿ.ದೇಶಪಾಂಡೆ ರವರಿಗೆ ಕಂದಾಯ ಇಲಾಖೆಯ ಖಾತೆಯನ್ನು ವಹಿಸಲಾಗಿದೆ. ಒಟ್ಟಾರೆಯಾಗಿ ಅಭಿವೃದ್ಧಿಗೆ ಸಂಬಂಧಪಟ್ಟಂತಹ ಖಾತೆಗಳನ್ನು ನಮ್ಮ ಭಾಗದ ಸದಸ್ಯರುಗಳಿಗೆ ಹಂಚಿಕೆ ಮಾಡಿಲ್ಲ. ಒಳಾಡಳಿತ, ಬೆಂಗಳೂರು ನಗರಾಭಿವೃದ್ಧಿ, ಯುವಜನ ಸೇವೆ ಮತ್ತು ಕ್ರೀಡೆ, ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ, ಅರಣ್ಯ, ಪರಿಸರ ಮತ್ತು ಜೀವಿ ಶಾಸ್ತ್ರ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ ಹಾಗೂ ಐ.ಟಿ., ಬಿ.ಟಿ., ವಿಜ್ಞಾನ ಮತ್ತು ತಂತ್ರಜ್ಞಾನ, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್, ಕೃಷಿ, ನಗರಾಭಿವೃದ್ಧಿ ಮತ್ತು ವಸತಿ, ಹಿಂದುಳಿದ ವರ್ಗಗಳ ಕಲ್ಯಾಣ, ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು, ಕಾರ್ಮಿಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇತ್ಯಾದಿ ಇಲಾಖೆಗಳ ಖಾತೆಗಳನ್ನು ಹಳೆಯ ಮೈಸೂರು ಭಾಗದ ಸದಸ್ಯರುಗಳಿಗೆ ಹಂಚಿಕೆ ಮಾಡಲಾಗಿದೆ. ನಮ್ಮ ಹೈದರಾಬಾದ್-ಕರ್ನಾಟಕ ಪ್ರದೇಶವು ಅತ್ಯಂತ ಹಿಂದುಳಿದ ಪ್ರದೇಶವಾಗಿದೆ ಎನ್ನುವ ಕಾರಣಕ್ಕಾಗಿ ಈ ವಿಚಾರವನ್ನು ನಾನು ಸದನದಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಈ ಪ್ರದೇಶಕ್ಕೆ Constitutional

provision ಮಾಡಿದ್ದರೂ ಸಹ ಈ ಭಾಗದ ಜನರಿಗೆ ತಾರತಮ್ಯವುಂಟಾಗುತ್ತಿದೆ. ನಮ್ಮ ಭಾಗದ ಪ್ರದೇಶಗಳಿಗೆ ಹಂಚಿಕೆಯಾಗಬೇಕಾದ ಅನುದಾನಗಳು ಬಿಡುಗಡೆಯಾಗುತ್ತಿಲ್ಲ. ಒಂದು ವೇಳೆ ಮಂಜೂರಾದ ಅನುದಾನವು ಸಂಪೂರ್ಣವಾಗಿ ವಿನಿಯೋಗವಾಗಿಲ್ಲವೆಂದಾದರೆ ಹಾಗೂ lapse ಆದರೆ ಈ ಬಗ್ಗೆ ಸ್ಪಷ್ಟೀಕರಣವನ್ನು ಪಡೆಯಬೇಕು. ಈ ರೀತಿ ಏಕೆ ಆಗಬೇಕು? ನಮ್ಮ ಭಾಗದ ಪ್ರದೇಶಗಳಿಗೆ ಒಟ್ಟು 6,412 ಕೋಟಿ ರೂಪಾಯಿಗಳಷ್ಟು ಅನುದಾನದ ಅರ್ಹತೆ ಇದ್ದರೂ ಸಹ ಕೇವಲ ಶೇಕಡಾ 50 ರಷ್ಟು ಅನುದಾನವು ಮಾತ್ರವೇ ಬಿಡುಗಡೆಯಾಗಿದೆ. ಹೀಗಾಗಿ ಆ ಭಾಗದ ಪ್ರದೇಶಗಳ ಅಭಿವೃದ್ಧಿಯಾಗಿಲ್ಲ. ಇದು ಎಷ್ಟರಮಟ್ಟಿಗೆ ಸರಿ? ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಗೊಂಡ ಆ ಭಾಗದ ವಿಧಾನ ಪರಿಷತ್ತಿನ ಸದಸ್ಯರಾಗಿ ನಾವು ಕಳೆದ ಎರಡು ವರ್ಷಗಳಿಂದ ಆ ಭಾಗದ ಅಭಿವೃದ್ಧಿಗಾಗಿ ಪ್ರಸ್ತಾವನೆಗಳನ್ನು ಕಳುಹಿಸುತ್ತಿದ್ದೇವೆ. ಆದರೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಗೊಂಡಿಲ್ಲ ಎಂಬುದಾಗಿ ಸರ್ಕಾರಿ ಅಧಿಕಾರಿಗಳು ಹೇಳುತ್ತಿದ್ದಾರೆ. ಆಯವ್ಯಯದಲ್ಲಿ ಅನುದಾನದ ಘೋಷಣೆಯಾದ ಮೇಲೆ ಸ್ವಯಂಚಾಲಿತವಾಗಿ ಅನುದಾನದ ಮೊತ್ತವು ಮಂಡಳಿಗೆ ವರ್ಗಾವಣೆಯಾಗಬೇಕು. ಆದರೆ ಈ ರೀತಿಯಾಗಿ ಆಗಿಲ್ಲ. ಹೈದರಾಬಾದ್–ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ಸಾಕಷ್ಟು ಸಮಸ್ಯೆಗಳಿವೆ. ಅವುಗಳ ಬಗೆಹರಿಸುವಿಕೆಯ ಸಂಬಂಧ ಮಂಡಳಿಯ ವತಿಯಿಂದ ಸರ್ಕಾರಕ್ಕೆ ಸುಮಾರು 11 ಪತ್ರ ವ್ಯವಹಾರಗಳನ್ನು ಮಾಡಲಾಗಿದೆ. ಆದರೆ ಸದರಿ ಸಮಸ್ಯೆಗಳು ಇನ್ನೂ ಬಗೆಹರಿದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಶರಣಪ್ಪ ಮಟ್ಟೂರ ಹಾಗೂ ಮಂಡಳಿಯ ಅಧ್ಯಕ್ಷರಾದ ಶ್ರೀ ರಾಜಶೇಖರ ಬಸವರಾಜ ಪಾಟೀಲ ರವರುಗಳೂ ಸಹ ಈ ವಿಚಾರದಲ್ಲಿ ಹೆಚ್ಚಿನ ಅಂಶಗಳ ಬಗ್ಗೆ ಮಾತನಾಡುತ್ತಾರೆ. ಹೀಗಾಗಿ ಈ ವಿಚಾರದಲ್ಲಿ ನಾನು ಹೆಚ್ಚು ಮಾತನಾಡುವುದಿಲ್ಲ. ಪ್ರತಿ ವರ್ಷದ ಆಯವ್ಯಯದಲ್ಲಿ ಈ ಭಾಗಕ್ಕಾಗಿ ಘೋಷಣೆ ಮಾಡಿದ ಅನುದಾನಗಳು ಕಡಿತಗೊಳ್ಳಬಾರದು ಹಾಗೂ ಅವುಗಳ ಸಂಪೂರ್ಣ ವಿನಿಯೋಗವಾಗಬೇಕು ಹಾಗೂ lapse ಆಗಬಾರದು.

ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು, ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013 ಮತ್ತು ನಿಯಮಗಳು, 2017 ರ ಅಧ್ಯಾಯದ 13 ನೇ ಖಂಡಿಕೆಯಲ್ಲಿ ನಮೂದಿಸಿರುವಂತೆ, ಅಲ್ಲಿನ ಅನುದಾನಗಳು lapse ಆಗುವುದಿಲ್ಲ. ಅನುದಾನ ಬಿಡುಗಡೆಗೊಂಡ ಎರಡು ವರ್ಷಗಳ ನಂತರವೂ ಸಹ ಅದನ್ನು ಮುಂದುವರೆಸಬಹುದು. ಆದರೆ ರಾಜ್ಯಾಂಗಬದ್ಧವಾಗಿ ಸ್ಥಾಪಿತಗೊಂಡ ಹೈದರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಪ್ರತ್ಯೇಕವಾಗಿ ಅನುದಾನ ಬಿಡುಗಡೆ ಮಾಡಿದರೂ ಸಹ ಸರ್ಕಾರವು ವಿನಿಯೋಗಗೊಳ್ಳದ ಅನುದಾನವನ್ನು lapse ಮಾಡುವುದು ಏಕೆ? ನಮ್ಮ ಹೈದರಾಬಾದ್–ಕರ್ನಾಟಕ ಪ್ರದೇಶವು ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿದೆ. ಹೀಗಾಗಿ ಹಾಲಿ ಇರುವ ತಾರತಮ್ಯವನ್ನು ಹೋಗಲಾಡಿಸಬೇಕು. ಆದ್ದರಿಂದ ಘೋಷಣೆಯಾದ ಅನುದಾನವನ್ನು ಮಂಡಳಿಗೆ ತಕ್ಷಣವೇ ವರ್ಗಾವಣೆ ಮಾಡಬೇಕು. ಈ ವಿಚಾರದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಸಶಕ್ತಗೊಳಿಸಲು ಒಂದು ಇಂಜಿನಿಯರಿಂಗ್ ವಿಭಾಗವನ್ನು ಪ್ರಾರಂಭ ಮಾಡಬೇಕು. 2000 ನೇ ಸಾಲಿನಲ್ಲಿ ಮಾನ್ಯ ಎಸ್.ಎಂ.ಕೃಷ್ಣರವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಅವಧಿಯಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಪ್ರತಿ ವರ್ಷ ಸುಮಾರು 90-100 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಬಿಡುಗಡೆ ಮಾಡಿದ್ದರು. ಆಗಿನ ಸಂದರ್ಭದಲ್ಲಿ ಸುಮಾರು 40 ವಿಧಾನ ಸಭಾ ಸದಸ್ಯರಗಳಿಗೆ ಇದ್ದ ಅಭಿವೃದ್ಧಿ ಯೋಜನೆಗಳಿಗೆ ಅನುಮೋದನೆ ನೀಡಲಾಗಿತ್ತು. ಆದರೆ ಇವತ್ತಿನ ದಿವಸ ಆ ಭಾಗದ ಅಭಿವೃದ್ಧಿಗಾಗಿ ಬಿಡುಗಡೆಯಾಗುತ್ತಿರುವ ಸುಮಾರು 1,500 ಕೋಟಿ ರೂಪಾಯಿಗಳಷ್ಟು ಹಣದ ಯೋಜನೆಗಳನ್ನು ಕಾರ್ಯಗತಗೊಳಿಸಲು ಅಲ್ಲಿ ಇಂಜನಿಯರಿಂಗ್ ವಿಭಾಗವಿಲ್ಲ ಹಾಗೂ ಯಾವುದೇ ರೀತಿಯಾದ ವ್ಯವಸ್ಥೆಗಳಿಲ್ಲ. ಆದ್ದರಿಂದ ಈ ವಿಚಾರದಲ್ಲಿ ನನ್ನ ತಕ್ಷಣ ಬೇಡಿಕೆ ಏನೆಂದರೆ, ಅಧೀಕ್ಷಕ ಇಂಜಿನಿಯರ್ ವೃಂದದ ಅಧಿಕಾರಿಯೋರ್ವರನ್ನು ಸದರಿ ಮಂಡಳಿಗೆ ನೇಮಕ ಮಾಡಿ. ಅವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸಲು ಪ್ರತಿ ಜಿಲ್ಲೆಗೆ ಒಬ್ಬರಂತೆ ಕಾರ್ಯಪಾಲಕ ಇಂಜಿನಿಯರ್‌ಗಳನ್ನು ನೇಮಿಸಬೇಕು. ತಕ್ಷಣ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದು ಹಾಗೂ ಬಡ್ತಿ ಅವಕಾಶಗಳನ್ನು ಒದಗಿಸುವುದು.

(338) 11-12-2018 (12-40) ಎಲ್‌ಎಂ/ಜಿಆರ್

**ಶ್ರೀ ಕೆ.ಸಿ.ಕೊಂಡಯ್ಯ(ಮುಂದು)**:-ಮಾನ್ಯ ಸಭಾಪತಿಯವರೇ, 2000ನೇ ಸಾಲಿನಲ್ಲಿ ಹೈದ್ರಾಬಾದ್ -ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಸ್ಥಾಪನೆ ಮಾಡಲಾಯಿತು. ಆಗ 93 ಕೋಟಿ ಅನುದಾನ ಇಡಲಾಗಿತ್ತು. ಈಗ 1500 ಕೋಟಿ ರೂಪಾಯಿಗಳಾಗಿದೆ. ಇದನ್ನು ಇನ್ನು ಅಭಿವೃದ್ಧಿಪಡಿಸಬೇಕು. ಸುಮಾರು 1500 ರಿಂದ 1600 ಕೋಟಿ ರೂಪಾಯಿಗಳ ಅನುದಾನ ಬಿಡುಗಡೆಯಾಗಿರುವುದರಿಂದ ಕಾನೂನು ರೀತಿ ಪ್ರತಿ ವರ್ಷ ರೊಟೇಷನ್ ಪ್ರಕಾರ ಅದಕ್ಕೆ ಅಧ್ಯಕ್ಷರನ್ನಾಗಿ 6 ಜಿಲ್ಲೆಗಳ ಮಂತ್ರಿಗಳನ್ನು ನೇಮಕ ಮಾಡಲಾಗುತ್ತದೆ. ಇಲ್ಲಿ ಸಾಕಷ್ಟು ಕೆಲಸಗಳು ಇರುತ್ತವೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಯೋಚನೆ ಮಾಡಿ full-fledged ಆಗಿ ಅಧ್ಯಕ್ಷರನ್ನು ನೇಮಕ ಮಾಡಿದರೆ ಇನ್ನು ಹೆಚ್ಚಿನ ರೀತಿಯಲ್ಲಿ ಕೆಲಸಗಳನ್ನು ಮಾಡಲು ಅನುಕೂಲವಾಗುತ್ತದೆ ಎನ್ನುವುದು ನನ್ನ ಸಲಹೆ. ಡಾ: ನಂಜುಂಡಪ್ಪನವರ ವರದಿ ಪ್ರಕಾರ 175 ತಾಲ್ಲೂಕುಗಳ ಪೈಕಿ 35 ತಾಲ್ಲೂಕುಗಳು ಈ ಪ್ರದೇಶಗಳಲ್ಲಿಯೇ ಬರುತ್ತವೆ. ಆದರೆ ಡಾ: ನಂಜುಂಡಪ್ಪ ವರದಿ ಪ್ರಕಾರ ಕೊಡುವ ಅನುದಾನವನ್ನು HKDB ನಲ್ಲಿ ಸೇರಿಸುತ್ತಾರೆ. ಆದರೆ ಇದು normal grant ನಿಂದ ಪ್ರತ್ಯೇಕವಾದ ಅನುದಾನ. ಆದ್ದರಿಂದ ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದು, ಹೈದ್ರಾಬಾದ್ ಕರ್ನಾಟಕ ಅತ್ಯಂತ ಹಿಂದುಳಿದ ಪ್ರದೇಶವಾದರಿಂದ ನಮಗೆ ಏನು ಸೌಲಭ್ಯಗಳನ್ನು ಕೊಡಬೇಕು ಕೊಡಿ. ಅದು ಆರ್ಥಿಕವಾಗಿ ಇರಬಹುದು ಮತ್ತು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಮುಖಾಂತರ ನಮ್ಮ ಜನರಿಗೆ ಅನುಕೂಲ ಮಾಡಿಕೊಡಬೇಕು. ಇಲ್ಲದಿದ್ದರೆ differences create ಆಗಿ ಯಾವತ್ತೊ ಒಂದು ದಿನ ಪ್ರತ್ಯೇಕ ರಾಜ್ಯವಾಗಬೇಕು ಎನ್ನುವ ಕೂಗು ಬರುತ್ತದೆ. ಆದ್ದರಿಂದ ನಾನು ತಮ್ಮ ಮುಖಾಂತರ ಸರ್ಕಾರವನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೇಳುವುದೇನೆಂದರೆ, ಬಿಡುಗಡೆಯಾದ ಹಣ ಪ್ರತಿವರ್ಷ lapse ಆಗದಂತೆ ಖರ್ಚು ಮಾಡಲು ಪ್ರತಿವರ್ಷ ಬಜೆಟ್‌ನಲ್ಲಿ ಮಂಜೂರು ಮಾಡಿಕೊಟ್ಟು ಎಲ್ಲ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಅನುಕೂಲ ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, 15ನೇ ಆಗಷ್ಟ್ 1947 ರಂದು ಎಲ್ಲರಿಗೂ ಸ್ವತಂತ್ರ ಸಿಕ್ಕರೆ ಹೈದ್ರಾಬಾದ್-ಕರ್ನಾಟಕದವರಾದ ನಮಗೆ 17ನೇ ಸೆಪ್ಟಂಬರ್ 1948 ರಲ್ಲಿ ಸ್ವತಂತ್ರವನ್ನು ಪಡೆದಿದ್ದೇವೆ. ಆದರೆ ಅಂದು ನಿಜಾಮರ್ ಹೊಡೆತಕ್ಕೆ ಹೈದ್ರಾಬಾದ್ ಕರ್ನಾಟಕ ತುತ್ತಾಗಿ ಹೋಯಿತು. ಇಂದು ನಮ್ಮವರಿಂದಲೇ ಅನ್ಯಾಯಕ್ಕೆ ಒಳಗಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ.

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ:-** ನಮ್ಮಿಂದ ಎಂದರೆ ಸಮ್ಮಿಶ್ರ ಸರ್ಕಾರದಿಂದ ಎಂದು ತಾವು ಹೇಳಬೇಕು.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಗಳೇ, ಹೈದ್ರಬಾದ್ ಕರ್ನಾಟಕದ ವಿಚಾರದಲ್ಲಿ ನಾನು ಪಕ್ಷಾತೀತವಾಗಿ ಮಾತನಾಡಬಯಸುತ್ತೇನೆ. ನಮ್ಮಿಂದ ಎಂದರೆ ನೀವು-ನಾವು ಎಲ್ಲರೂ ಸೇರುತ್ತೇವೆ. ಇದರಲ್ಲಿ ಇರುವ ನೋವಿನ ಸಂಗತಿಗಳನ್ನು ಇನ್ನು ವಿಸ್ತಾರವಾಗಿ ಹೇಳಬೇಕಾಗಿದೆ. ಇನ್ನು ಗಟ್ಟಿಯಾಗಿ ಮಾನ್ಯ ಕೊಂಡಯ್ಯನವರು ಹೇಳಬೇಕಾಗಿತ್ತು. ಅವರು ಏಕೆ ಹೇಳಲಿಲ್ಲ ಎನ್ನುವುದು ಗೊತ್ತಾಗಲಿಲ್ಲ.

**ಶ್ರೀ ಅರುಣ ಶಹಾಪೂರ:-** ರಾಜಕೀಯವಾಗಿ ಧ್ವನಿ ಅಡಗಿಸಲಾಗಿದೆ ಎಂದು ಮೊದಲೇ ಹೇಳಲಾಗಿದೆ. ಅದಕ್ಕಾಗ ಅವರ ಧ್ವನಿ ಬರುತ್ತಿಲ್ಲ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಗಳೇ, ಸಂವಿಧಾನದ ಅಧ್ಯಾಯ 21ರಲ್ಲಿ ವಿಶೇಷವಾದ ತಿದ್ದುಮಾಡಿ ನಮಗೆ ಅನುಕೂಲ ಮಾಡಿಕೊಡುವ ಅವಕಾಶವಿದೆ. ಇದನ್ನು ಉಪಯೋಗಿಸಿಕೊಂಡು 1956ರಲ್ಲಿ 371ನೇ ಕಲಂ ಗೆ ತಿದ್ದುಪಡಿಯನ್ನು ತಂದು ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ವಿಶೇಷ ಸ್ಥಾನ-ಮಾನಗಳನ್ನು ಕೊಟ್ಟಿದ್ದಾರೆ. ತದನಂತರ 13ನೇ ತಿದ್ದುಪಡಿಯನ್ನು ತಂದು 371ಜೆ ಯನ್ನು ಸೇರಿಸಿ 1963ರಲ್ಲಿ ನಾಗಾಲ್ಯಾಂಡ್‌ಗೆ ವಿಶೇಷ ಸ್ಥಾನ-ಮಾನವನ್ನು ಒದಗಿಸಿದರು. ದಿನಾಂಕ:25-9-1969ರಲ್ಲಿ 22ನೇ ತಿದ್ದುಪಡಿಯನ್ನು ತಂದು ಆಸಾಂಗೆ ವಿಶೇಷ ಸ್ಥಾನ-ಮಾನವನ್ನು ಒದಗಿಸಿದರು. 1971ರಲ್ಲಿ 27ನೇ ತಿದ್ದುಪಡಿ ತಂದು 371ಸಿ ಸೇರಿಸಿ ಮಣಿಪುರಕ್ಕೆ ವಿಶೇಷ ಸ್ಥಾನ-ಮಾನ ಒದಗಿಸಿದರು. 1973ರಲ್ಲಿ 32ನೇ ತಿದ್ದುಪಡಿ ಮಾಡಿ 371ಡಿ ತಂದು ದಿನಾಂಕ: 1-7-1974ರಲ್ಲಿ ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನ-ಮಾನವನ್ನು ಒದಗಿಸಿದರು. ಸಂವಿಧಾನಕ್ಕೆ 371ಇ ತಿದ್ದುಪಡಿಯನ್ನು ತಂದು ಆಂಧ್ರಪ್ರದೇಶಕ್ಕೆ ವಿಶ್ವವಿದ್ಯಾನಿಲಯವನ್ನು ಕೊಟ್ಟರು. ನಂತರ ದಿನಾಂಕ: 24-10-1975ರಲ್ಲಿ 36ನೇ ತಿದ್ದುಪಡಿ ಮಾಡಿ 376ಎಫ್ ತಂದು ಸಿಕ್ಕಿಂಗೆ ವಿಶೇಷ ಸ್ಥಾನ-ಮಾನವನ್ನು ಒದಗಿಸಲಾಗಿತ್ತು. ಇದರ ಹಿನ್ನಲೆ ಏನು ಎನ್ನುವುದನ್ನು ಹೇಳುತ್ತಿದ್ದೇನೆ. ಪ್ರತಿ ಸಾರಿ 371ಜೆ ಎಂದು ಹೇಳುತ್ತಾರೆ. ಆದರೆ 371ಜೆ ಎಂದರೆ ಏನು? ಯಾವ concept ಇಟ್ಟುಕೊಂಡು ಡಾ:



"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂಬೇಡ್ಕರ್‌ರವರು ಸಂವಿಧಾನದಲ್ಲಿ ಇದನ್ನು ರೂಪಿಸಿ ಕೊಟ್ಟಿದ್ದಾರೆ. ಅದನ್ನು ಜಾರಿಗೆ ತರಲು ಲೋಕಸಭೆಯಿಂದ ಆದೇಶ ಮಾಡಿಕೊಟ್ಟರು ಸಹಾ ಇಲ್ಲಿ ಇದನ್ನು ಸಮಗ್ರವಾಗಿ ಜಾರಿಗೆ ತರುತ್ತಿಲ್ಲ. 1986ರಲ್ಲಿ ಸಂವಿಧಾನಕ್ಕೆ 53ನೇ ತಿದ್ದುಪಡಿ ತಂದು 371ಜಿ ಸೇರಿಸಿ ದಿನಾಂಕ: 20–2–1987ರಲ್ಲಿ ಮಿಜೋರಾಂಗೆ ವಿಶೇಷ ಸ್ಥಾನ–ಮಾನವನ್ನು ಕೊಟ್ಟಿದ್ದಾರೆ.

**(ಈ ಹಂತದಲ್ಲಿ ಪ್ಯಾನಲ್ ಸದಸ್ಯರಾದ ಮಾನ್ಯ ಶ್ರೀ ರಘುನಾಥ್‌ರಾವ್ ಮಲ್ಕಾಪೂರೆಯವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

1986ರಲ್ಲಿ 56ನೇ ತಿದ್ದುಪಡಿ ತಂದು 371ಎಚ್ ಸೇರಿಸಿ ಅರುಣಾಚಲ ಪ್ರದೇಶಕ್ಕೆ ವಿಶೇಷ ಸ್ಥಾನ–ಮಾನವನ್ನು ನೀಡಲಾಯಿತು. 1987ರಲ್ಲಿ 57ನೇ ತಿದ್ದುಪಡಿ ಗೋವಾ ರಾಜ್ಯಕ್ಕೆ ವಿಶೇಷ ಸ್ಥಾನ–ಮಾನ ಕೊಡಲಾಯಿತು. ಅದೇ ರೀತಿಯಲ್ಲಿ ನಮಗೆ ವಿಶೇಷ ಸ್ಥಾನ–ಮಾನ ಬೇಕು ಎಂದು ಮಾನ್ಯ ವೈಜನಾಥ್ ಪಾಟೀಲ್‌ರವರು ಮತ್ತು ಆ ಭಾಗದ ಹಿರಿಯ ನೇತಾರರ ಹೋರಾಟದ ಫಲವಾಗಿ ನಮಗೆ ವಿಶೇಷ ಸ್ಥಾನ–ಮಾನ ಸಿಕ್ಕಿದೆ. ಆದರೆ 2011–12ರಲ್ಲಿ ಇದಕ್ಕೆ ಸಾಕಷ್ಟು ಆಕ್ಷೇಪಣೆಗಳು ಬಂದು ನಿಂತು ಹೋಗಿತ್ತು. ಇದು ಹೇಗೆ ಬಂತು ಎನ್ನುವುದನ್ನು ಮಾನ್ಯ ಕೊಂಡಯ್ಯನವರು ಹೇಳಿದ್ದಾರೆ. 2012ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಗೆ ಚುನಾವಣಾ ಪ್ರಚಾರಕ್ಕಾಗಿ ಬಂದಿದ್ದ ಹಿರಿಯ ನಾಯಕರಾದ ಶ್ರೀಮತಿ ಸೋನಿಯಾ ಗಾಂಧಿಯವರು ಮತ್ತು ಶ್ರೀ ರಾಹುಲ್ ಗಾಂಧಿಯವರು ಈ ಸಾರಿ ನಮ್ಮ ಪಕ್ಷವನ್ನು ಅಧಿಕಾರಕ್ಕೆ ತಂದರೆ ನಾವು 371ಜೆ ತಿದ್ದುಪಡಿ ತಂದು ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನ–ಮಾನವನ್ನು ಕೊಡುತ್ತೇವೆ ಎಂದು ಮಾತು ಕೊಟ್ಟಿದರು. ಆದರೆ ಅಂದು ಕೇಂದ್ರದಲ್ಲಿ ಅಧಿಕಾರದಲ್ಲಿರುವವರು ಇದನ್ನು ಕೊಡಲು ಅವಕಾಶವನ್ನು ಕೊಡಲಿಲ್ಲ. ನಂತರ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಮಾನ್ಯ ರಾಹುಲ ಗಾಂಧಿಯವರ ಗಮನಕ್ಕೆ ಈ ವಿಚಾರವನ್ನು ತಂದು, ಮಾನ್ಯ ಮಲ್ಲಿಕಾರ್ಜುನ್ ಖರ್ಗೆಯವರ ಸತತ ಪ್ರಯತ್ನದ ಫಲವಾಗಿ 98ನೇ ತಿದ್ದುಪಡಿ ಮಾಡಿ 371ಜೆ ಕಾಲಂನ್ನು ಅಳವಡಿಸಿ ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನ–ಮಾನ ಕೊಟ್ಟಿರುವ ಆದೇಶ ಬಂದಿರುವುದು. ಅದಕ್ಕಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಮತ್ತು ಮಾನ್ಯ ರಾಹುಲ ಗಾಂಧಿಯವರಿಗೆ ಅಭಿನಂದನೆಗಳನ್ನು ಸಲ್ಲಿಸಲು ಬಯಸುತ್ತೇನೆ. ನಂತರ ದಿನಾಂಕ: 1–1–2013ರಲ್ಲಿ ಒಂದು ಡ್ರಾಫ್ಟ್ ರೂಲ್‌ನ್ನು ಮಾಡಿ, ಯಾವ ರೀತಿ ಕಾರ್ಯವನ್ನು ರೂಪಿಸಬೇಕು, ಈ 371ಜೆ ಏನು ಇದೆ ಆ ಪ್ರಕಾರ ಮಾಡಬೇಕೆಂದು ಒಂದು ಕಾಯಿದೆಯನ್ನು ನಾವು ರೂಪಿಸಿಕೊಂಡಿದ್ದೇವೆ. ಇದರ ಬಗ್ಗೆ ಅಧಿಸೂಚನೆ ಕೂಡಾ ಆಗಿದೆ. ಇಲ್ಲಿ ಏನು ಇದೆ ಎನ್ನುವುದನ್ನು specially I would like to bring to the notice of all the respectable Hon’ble Senior Members of this House. It reads thus:

**“Special provisions with respect to State of Karnataka**:

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

> 371J.(1) The President may, by order made with respect to the State of Karnataka, provide for any special responsibility of the governor for-
>
> (a) establishment of a separate development board for Hyderabad-Karnataka region with the provision that a report on the working of the board wil be placed each year before the State Legislative Assembly; ....”

ವಿಶೇಷವಾಗಿ 371ಜೆ ಗೆ ಆ ವರ್ಷದಲ್ಲಿ ಇರುವ ಬಜೆಟ್‌ನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಸರ್ಕಾರದ ಮುಂದೆ ಇಟ್ಟು ಅಪ್ರೂವಲ್ ತೆಗೆದುಕೊಳ್ಳಬೇಕು. ಇದರ ಬಗ್ಗೆ ರೆಫರೆನ್ಸ್ ಕೊಟ್ಟು ಮಾನ್ಯ ಕೊಂಡಯ್ಯನವರು ಈಗಾಗಲೇ ಹೇಳಿದ್ದಾರೆ. ಪುನ: ಅದನ್ನೇ ನಾನು ಹೇಳಲು ಬಯಸುವುದಿಲ್ಲ. 2013ರಿಂದ ಇಲ್ಲಿಯವರೆ ನಮಗೆ ಸಿಗಬೇಕಾಗಿರುವ 6412 ಕೋಟಿ ರೂಪಾಯಿಗಳು ಬಿಡುಗಡೆಯಾಗಬೇಕಾಗಿತ್ತು. ಆದರೆ ಇಲ್ಲಿಯವರೆಗೆ ನಮಗೆ ಬಿಡುಗಡೆ ಮಾಡಿರುವುದು, 2928 ಕೋಟಿ ರೂಪಾಯಿಗಳು ಮಾತ್ರ. ಇನ್ನು ನಮಗೆ ಬರಬೇಕಾಗಿರುವುದು 3488 ಕೋಟಿ ರೂಪಾಯಿಗಳು. ಆದರೆ ಆ ಹಣ ಇಲ್ಲಿಯವರೆಗೂ ಬಿಡುಗಡೆಯಾಗಿರುವುದಿಲ್ಲ.

(339)11–12–2018(12–50)ಬಿಎಸ್‌ಡಿ–ಜಿಆರ್
ಶ್ರೀ ಶರಣಪ್ಪ ಮಟ್ಟೂರ (ಮುಂದು)

ಇದು ನಮಗೆ ಬಜೆಟ್‌ನಲ್ಲಿ ಘೋಷಣೆಯಾಗಿ allocation ಆಗಿರುವ ಹಣವಾಗಿದ್ದು, ಇದು ನಮಗೆ ಬರದೇ ಇರುವುದು ಅನ್ಯಾಯ ಎಂದು ತಮಗೆ ಅನಿಸುವುದಿಲ್ಲವೇ? ಎರಡನೆಯದಾಗಿ ರೂ.2928 ಕೋಟಿಗಳಲ್ಲಿ ಖರ್ಚಾಗದೇ ಹಣ ಉಳಿಯಲು ಕಾರಣವೇನು ಎಂಬುದನ್ನು ನಾವು ವಿಮರ್ಶೆ ಮಾಡಬೇಕಾಗಿದೆ. ಆ ಭಾಗದಲ್ಲಿ 50% ಹುದ್ದೆಗಳು ಖಾಲಿ ಉಳಿದಿದ್ದು ಭರ್ತಿಯಾಗಬೇಕಾಗಿದೆ. ಇಂಜಿನಿಯರ್‌ಗಳು ಇಲ್ಲ, ಮುಖ್ಯ ಸ್ಥಾನದಲ್ಲಿರಬೇಕಾದ ಅಧಿಕಾರಿಗಳು ಬೆಂಗಳೂರಿನಿಂದಲೇ ಕಾರ್ಯನಿರ್ವಹಿಸುತ್ತಿದ್ದು, ಒಂದು ವಾರ ಅಥವಾ 15 ದಿವಸಗಳಿಗೊಮ್ಮೆ ಹೋಗಿ ಬರುತ್ತಾರೆ. ಅಲ್ಲಿ ಕೆಲಸಗಳು ನಡೆಯುವುದಿಲ್ಲ ಮತ್ತು ಹಣ ಖರ್ಚಾಗುವುದಿಲ್ಲ. ಕೊಟ್ಟಿರುವ ಹಣದ ಬಗ್ಗೆ ಅನೇಕ ಮಾನ್ಯ ಸದಸ್ಯರು ಉಲ್ಲೇಖ ಮಾಡಿದ್ದಾರೆ. ನಮ್ಮ Draft Rule of 1.1.2013 ನ ರೂಲ್ 16(ಸಿ) ಪ್ರಕಾರ ಖರ್ಚಾಗದೇ ಉಳಿದಿರುವ ಹಣವನ್ನು ಮುಂದಿನ ವರ್ಷದಲ್ಲಿ 20% ಹಣವನ್ನು ಉಳಿಸಿಕೊಂಡು ಬಾಕಿ ಎಲ್ಲವನ್ನೂ ಕೊಡಬೇಕೆಂದು ಇದೆ. ಈಗ ನಮಗೆ ಕೊಟ್ಟಿರುವುದನ್ನೇ ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ. ಅಲ್ಲಿ employment ಅನ್ನು ಮಾಡುತ್ತಿಲ್ಲ, ಖರ್ಚು ಮಾಡುವ ಎಂಪ್ಲಾಯೀಸ್ ಇಲ್ಲ. ಇಂಜಿನಿಯರ್‌ಗಳು ಇಲ್ಲ, ಎಲ್ಲಿ ನೋಡಿದರೂ in-charge officers ಗಳನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಟ್ಟಿದ್ದಾರೆ. ಅದಕ್ಕಾಗಿ ಈ ವಿಷಯವನ್ನು ಗಮನಕ್ಕೆ ತರಬಯಸುತ್ತೇನೆ. ನಮಗೆ 2013ನೇ ಇಸವಿಯಿಂದ ಇಲ್ಲಿಯವರೆಗೂ ಬಿಡುಗಡೆಯಾಗದಿರುವ ರೂ.3,484 ಕೋಟಿಗಳನ್ನು ಬಿಡುಗಡೆ ಮಾಡಬೇಕು. ಈ ಹಣವು ಯಾವುದೇ ಕಾರಣದಿಂದ ಖರ್ಚಾಗದಿದ್ದರೆ carry forward ಮಾಡಬೇಕು. Lethargic attitude ನಿಂದ ಖರ್ಚು ಮಾಡದೇ ಉಳಿದ ಪಕ್ಷದಲ್ಲಿ ಅದಕ್ಕೆ ಒಂದು ರೂಪುರೇಷೆಯನ್ನು ರೂಪಿಸಿದ್ದಾರೆ. ನನ್ನ ಮನವಿ ಏನೆಂದರೆ 371(ಜೆ)ನ 16(ಸಿ)ಗೆ ತಿದ್ದುಪಡಿ ಮಾಡಬೇಕು. ಯಾವುದೇ ಕಾರಣದಿಂದಲೂ ಹಣವನ್ನು ಹಿಂಪಡೆಯುವುದಿಲ್ಲ ಎಂಬ ಒಂದು ಆದೇಶವನ್ನು ಮಾಡಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಜಬ್ಬಾರ್‌ರವರು ಬಹಳ ಕಾಳಜಿಯಿಂದ ಒಂದು ವಿಷಯವನ್ನು ನೆನಪು ಮಾಡುತ್ತಿದ್ದಾರೆ. ಅದೇನೆಂದರೆ, ನಮ್ಮ ಸರ್ಕಾರದಲ್ಲಿ ಮಾನ್ಯ ಸಿದ್ದರಾಮಯ್ಯನವರು ಹರಪನಹಳ್ಳಿ ಪ್ರದೇಶವನ್ನು 371(ಜೆ) ವ್ಯಾಪ್ತಿಗೆ ಸೇರಿಸಿದ್ದು, ಈಗಾಗಲೇ ಅಲ್ಲಿ ಸಾಕಷ್ಟು ಬದಲಾವಣೆಗಳಾಗಿ ತಹಶೀಲ್ದಾರ್ ಮತ್ತು ಎ.ಸಿ ಕಛೇರಿಗಳು ಬಂದಿವೆ. Allocation ಕೂಡ ಮಾಡಬೇಕಾಗಿದ್ದು, ಅದನ್ನು ಕೂಡಲೇ expedite ಮಾಡಬೇಕೆಂಬ ಮನವಿಯನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗಾಗಲೇ ದಿನಾಂಕ 01-01-2013ರಂದು Draft Rule ಆದ ನಂತರ ರಾಷ್ಟ್ರಪತಿಯವರ ಅಂಕಿತ ಪಡೆದು ದಿನಾಂಕ 06-11-2013ರಂದು ಸರ್ಕಾರದ ಆದೇಶ ಆಗಿದೆ. ನಾನು ಇಲ್ಲಿವರೆಗೂ 371(ಜೆ) ಭಾಗ 1 ರ ಬಗ್ಗೆ ತಿಳಿಸಿದ್ದು, ಭಾಗ 2 ರಲ್ಲಿ ಈ ರೀತಿ ಹೇಳಿದೆ:

> "(b) equitable allocation of funds for developmental expenditure over the said region, subject to the requirements of the State as a whole; and ..."

ಇದನ್ನು ಯಾವ ರೀತಿ ಕನ್ಸಿಡರ್ ಮಾಡಿದರು, allocation ಹೇಗೆ ಆಯಿತು, ನಮಗೆ ಕೊಡದೇ ಕೊಟ್ಟಿರುವುದನ್ನೂ ನಿರ್ವಹಿಸಲಾರದೇ ಹಾಗೆ ಉಳಿಸಲಾಗಿದೆ. Due to dearth of employment ಎಂಬ ವಿಷಯ ಹಾಗೂ ಅಲ್ಲಿ ಖಾಲಿ ಹುದ್ದೆಗಳಿದ್ದು, ಹಣವನ್ನು ಖರ್ಚು ಮಾಡಲು ಆಗುತ್ತಿಲ್ಲ. ತಕ್ಷಣ ನೇಮಕಾತಿ ಮಾಡಬೇಕಾಗಿದೆ. ವಿಶೇಷವಾಗಿ ಆರ್ಟಿಕಲ್ 371(ಜೆ)ನ (1)(ಸಿ) ರಲ್ಲಿ ಈ ರೀತಿ ಹೇಳಿದೆ:

> "(c) equitable opportunities and facilities for the people belonging to the said region, in matters of public employment, education and vocational training, subject to the requirements of the State as a whole."

ಮಾನ್ಯ ಸಭಾಪತಿಯವರೇ, ಎಲ್ಲಾ ಗೌರವಾನ್ವಿತ ಸದಸ್ಯರ ಸಹಕಾರ ಅಗತ್ಯವಾಗಿದೆ. ಇಲ್ಲಿ ಇದುವರೆಗೂ ನಮ್ಮಲ್ಲಿ ನೇಮಕಾತಿ ಆಗುತ್ತಿಲ್ಲ. ನೇಮಕಾತಿ ಅತೀ ಕಡಿಮೆ ಪ್ರಮಾಣದಲ್ಲಿ ಆಗಿದೆ. ಅಲ್ಲಿನ ಖಾಲಿ ಇರುವ ಹುದ್ದೆಗಳನ್ನು ಸಂಪೂರ್ಣವಾಗಿ ಭರ್ತಿ ಮಾಡದೇ ಮೈಸೂರು ಹಳೆ ಭಾಗದವರ ಜೊತೆಗೆ ಹೋಲಿಕೆ ಮಾಡಲು ಸಾಧ್ಯವೇ ಇಲ್ಲ. ರಸ್ತೆಗಳ ವಿಚಾರ ಇರಬಹುದು, ಆಸ್ಪತ್ರೆಗಳ ವಿಚಾರ ಇರಬಹುದು, ಶಾಲಾ-ಕಾಲೇಜುಗಳ ವಿಚಾರ ಇರಬಹುದು, ವೈದ್ಯಕೀಯ ಸಂಸ್ಥೆಗಳ ವಿಚಾರ ಅಥವಾ industries ವಿಚಾರಗಳೆಲ್ಲದ್ದರಲ್ಲೂ ಹೋಲಿಕೆ ಮಾಡಲು ಸಾಧ್ಯವಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, with your rich experience, you are also having a very good knowledge about this issue. ತಮಗೂ ಇದರ ಬಗ್ಗೆ ಬಹಳ ಅರಿವು ಇದೆ. ಈಗ ನಾವು 371(ಜೆ)ನ (1) (ಸಿ) ರಲ್ಲಿ ನೇಮಕಾತಿಗೆ ಅವಕಾಶ ಕೊಡಬೇಕು. ಎರಡನೆಯದಾಗಿ educational development ಬಗ್ಗೆ ಹೇಳಬೇಕಾದರೆ ಹಾಸ್ಟೆಲ್‌ಗಳನ್ನು ಕೊಡಬೇಕು. ಐ.ಟಿ.ಐ, ಪಾಲಿಟೆಕ್ನಿಕ್ ಕಾಲೇಜು ಮತ್ತು ಪದವಿ ಕಾಲೇಜುಗಳು ಇರಬಹುದು, ವಿದ್ಯಾರ್ಥಿ-ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳಿಗೆ ಹೆಚ್ಚು ಒತ್ತು ಕೊಡಬೇಕಾಗಿದೆ. ನಮ್ಮ ಭಾಗದಲ್ಲಿರುವ ಅನುದಾನಿತ ಸಂಸ್ಥೆಗಳಿಗೂ there is a provision under the Rule that they should also give financial support to support the...

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, 371(ಜೆ) ಬಗ್ಗೆ ಕೇಂದ್ರ ಸರ್ಕಾರದಿಂದ ಅನುಮತಿ ನೀಡಿ 5 ವರ್ಷಗಳು ಕಳೆದರೂ ಇದನ್ನು ಅನುಷ್ಠಾನಕ್ಕೆ ತರುವುದರಲ್ಲಿ ಈ ಸದನದಲ್ಲಿ ಯಾರದ್ದಾದರೂ ವಿರೋಧ ಇದೆಯೇ? ಯಾರೂ ಇಲ್ಲ. ಮಾನ್ಯ ಸದಸ್ಯರಾದ ಶ್ರೀ ಕೊಂಡಯ್ಯನವರು ಮಾತನಾಡಿದ್ದಾರೆ, ಮಾನ್ಯ ಸದಸ್ಯರಾದ ಶರಣಪ್ಪ ಮಟ್ಟೂರ್ ರವರು ಮಾತನಾಡುತ್ತಿದ್ದಾರೆ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಮಾತನಾಡುತ್ತಾರೆ, ಶ್ರೀ ರಾಜಶೇಖರ್ ಪಾಟೀಲರು ಮಾತನಾಡುತ್ತಾರೆ. ಈ ಕಡೆ ಎಲ್ಲಾ ಸದಸ್ಯರು ಮಾತನಾಡುತ್ತಾರೆ. ನಾವೆಲ್ಲರೂ ಅವರ ಜೊತೆಗಿದ್ದೇವೆ. ಆದರೆ ಇದನ್ನು ಜಾರಿಗೆ ತರಲು ತೊಂದರೆ ಏನು? ಅವರದೇ ಸರ್ಕಾರ ಇದ್ದರೂ ಏಕೆ ಮಾಡಿಸಲಿಲ್ಲ? ಈಗ ಚರ್ಚೆ ಮಾಡುತ್ತಿದ್ದಾರೆ.

(ಗೊಂದಲ)

**ವೈಸ್ ಚೇರ್ಮನ್:-** ಅವರ ಮಾತು ಮುಕ್ತಾಯವಾಗಲೀ, ತಮಗೂ ಅವಕಾಶ ಕೊಡೋಣ.

**ಶ್ರೀ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದನ್ನು ಮಾನ್ಯ ಖರ್ಗೆಯವರು ಹೇಳಲಿ, ಏಕೆ ಇಂಪ್ಲಿಮೆಂಟ್ ಮಾಡಲು ಆಗಲಿಲ್ಲ? ಅಭಿವೃದ್ಧಿ ಮಾಡಲು ಇಚ್ಛಾಶಕ್ತಿ ಇಲ್ಲ. ಕಾಂಗ್ರೆಸ್ ಸರ್ಕಾರ ಇದ್ದದ್ದು ಹಾಗೆ ಮುಂದಕ್ಕೆ ಹೊರಟು ಹೋಯಿತು. ನಾನು ವಿರೋಧ ಮಾಡುತ್ತಿಲ್ಲ. ಮಾನ್ಯ ಮಟ್ಟೂರ್‌ರವರು ವಕೀಲರಾಗಿದ್ದು, ಬಹಳ ಚೆನ್ನಾಗಿ ಚಿಡಿಂಣಜ ಮಾಡುತ್ತಿದ್ದಾರೆ. ಹಿಂದಿನ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರು. 5 ವರ್ಷದ ಪ್ರಗತಿ ಏನಾಗಿದೆ? ಎಷ್ಟು ಹಣ ಖರ್ಚು ಮಾಡಿದ್ದಾರೆ?

(ಗೊಂದಲ)

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

**ಶ್ರೀ ಪ್ರಿಯಾಂಕ ಖರ್ಗೆ (ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರು):-** ಮಾನ್ಯ ಸಭಾಪತಿಯವರೇ, 371(ಜೆ) ಬಹಳ ವರ್ಷಗಳ ನಂತರ ನಮಗೆ ಸಿಕ್ಕಿದ್ದು, ಬಹಳ ಕಷ್ಟಪಟ್ಟು ಸಂವಿಧಾನಾತ್ಮಕವಾಗಿ ಜನರ ಹೋರಾಟದಿಂದ ಸಿಕ್ಕಿದೆ. ಆ ಸವಲತ್ತನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರಲು ಪ್ರಯತ್ನ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡುತ್ತೇವೆ. ಸಂವಿಧಾನದ ತಿದ್ದುಪಡಿಯ ಅನುಷ್ಠಾನವನ್ನು ತರುವುದು ಬಹಳ ಕಷ್ಟ. ಮುಂಚೆ ಎಲ್ಲ financial implication Governor ಮುಖಾಂತರ ಆಗಬೇಕಾಗಿತ್ತು. ಅದೆಲ್ಲ ನ್ಯೂನತೆಗಳನ್ನು ಸರಿಪಡಿಸಿ, ಒಂದೆರಡು ವರ್ಷಗಳು ನಮಗೆ ಕಷ್ಟವಾಗಿದ್ದು ನಿಜ. ಈಗ ಅದನ್ನು ಸರಿಪಡಿಸಿ, ನೇಮಕಾತಿಯಲ್ಲಿಯೂ 15ರಿಂದ 18 ಸಾವಿರ ಜನರ ನೇಮಕವಾಗಿರುವುದು ಮಾನ್ಯ ಮಟ್ಟೂರ್ ರವರಿಗೂ ಗೊತ್ತಿದೆ. ಈಗಲೂ fresh recruitment ಅನ್ನು ಕರೆದಿದ್ದೇವೆ. ಅಲ್ಲದೇ ರೂ.1,500 ಕೋಟಿಗಳನ್ನು ಖರ್ಚು ಮಾಡಲು ಸರ್ಕಾರ ಬದ್ಧವಾಗಿದೆ ಎಂದು repeatedly we have expressed on the floor of the House. ವಿಶೇಷವಾಗಿ ಮಾನ್ಯ ವಿರೋಧ ಪಕ್ಷದ ಸದಸ್ಯರೆಲ್ಲರೂ 371(ಜೆ) ಅನುಷ್ಠಾನಕ್ಕೆ ತರಲು ಬದ್ಧರಿದ್ದೇವೆ ಎಂದು ಹೇಳುತ್ತಿದ್ದಾರಷ್ಟೇ ಎಂದು ಹೇಳುತ್ತಿದ್ದಾರೆ. ಇದು ಜಾರಿಗೆ ಬಂದು 5 ವರ್ಷಗಳು ಕಳೆದಿವೆ. ನಾವು ಸುವರ್ಣ ಕರ್ನಾಟಕದ ಕನಸನ್ನು ಕಾಣುತ್ತಿದ್ದು, ಇದನ್ನು ಅನುಷ್ಠಾನಕ್ಕೆ ತರಲು ಸ್ವಲ್ಪ ಸಮಯ ಬೇಕಾಗುತ್ತದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ವಿರೋಧ ಪಕ್ಷದವರು ಸಹ ಬದ್ಧರಿದ್ದಾರೆ ಎಂದು ಹೇಳಿರುವ ಮಾತನ್ನು ನಂಬುವುದಕ್ಕೆ ಆಗುತ್ತಿಲ್ಲ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಸರ್ಕಾರ ಮಾಡಬೇಕು. ಬಜೆಟ್ ಯಾರ ಕೈಲಿದೆ ಮತ್ತು ಕಾರ್ಯಕ್ರಮವನ್ನು ಯಾರು ರೂಪಿಸುತ್ತಾರೆ? ಎಲ್ಲವೂ ಅವರ ಕಾರ್ಯಕ್ರಮಗಳಲ್ಲವೇ?

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಅನುಷ್ಠಾನವನ್ನು ಯಾರು ತರಬೇಕು?

(ಗೊಂದಲ)

**ಸಭಾಪತಿಯವರು:–** ಮಾನ್ಯ ವೈ.ಎ. ನಾರಾಯಣಸ್ವಾಮಿಯವರೇ, ಎರಡನೆ ಸಾರಿಗೆ ಶಾಸಕರಾಗಿದ್ದೀರಿ. ಸಭಾಪತಿಯವರು ಎದ್ದು ನಿಂತಾಗ ಕನಿಷ್ಠ ಗೌರವ ಕೊಡುವುದನ್ನು ಕಲಿಯಿರಿ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಪೀಠದ ಬಗ್ಗೆ ನನಗೆ ತುಂಬಾ ಗೌರವ ಇದೆ. ತಾವು ನಿಂತ ತಕ್ಷಣ ನಾನು ಕುಳಿತುಕೊಂಡಿದ್ದೇನೆ.

**ಸಭಾಪತಿಯವರು:–** ಎಲ್ಲರೂ ಸಮಾಧಾನದಿಂದ ಕೇಳಬೇಕು.

**(340)11–12–2018(1–00)ಹೆಚ್‌ವಿ–ಎಂಡಿ** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಿಯಾಂಕ ಖರ್ಗೆ(ಪ್ರವಾಸೋದ್ಯಮ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಇವರು ಪದೇಪದೇ ‘ನಾವು ಬದ್ಧರಿದ್ದೇವೆ......ಬದ್ಧರಿದ್ದೇವೆ’ ಎಂದು ಹೇಳುತ್ತಿರುತ್ತಾರೆ. ಅದಕ್ಕಾಗಿ ಒಂದು ಪತ್ರವನ್ನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. Letter dated 22nd November 2002 written by the Deputy Prime Minister Sri L.K.Advani.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಸಚಿವರೇ ಅದರ ಪ್ರಸ್ತಾಪ ಈಗ ಬೇಡ. ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಡಾಃ ವೈ.ಎ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಕೆಲಸ ಮಾಡಿ ಅಂದರೆ ಕಥೆ ಓದುತ್ತಾರೆ.

**ಶ್ರೀ ಪ್ರಿಯಾಂಕ ಖರ್ಗೆಃ–** ಸನ್ಮಾನ್ಯ ಸಭಾಪತಿಯವರೇ, ಆ ಪತ್ರವನ್ನು ಓದಿಬಿಡುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಪತ್ರ ಓದುವುದು ಬೇಡ. ಮಾನ್ಯ ಮಟ್ಟೂರ್‌ರವರೇ, ತಾವು ತಮ್ಮ ಮಾತುಗಳನ್ನು ಮುಂದುವರಿಸುವುದಿಲ್ಲವೇ? ಹಾಗಾದರೆ ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಹೇಳುತ್ತಾರೆ, ಆಮೇಲೆ ಮಾತನಾಡಿ. ಉತ್ತರ ಹೇಳುವ ಸಚಿವರು ಯಾರು?

**ಶ್ರೀ ಶರಣಪ್ಪ ಮಟ್ಟೂರಃ–** ಸನ್ಮಾನ್ಯ ಸಭಾಪತಿಯವರೇ, ತಾವು ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ.

**ಸಭಾಪತಿಯವರು:–** ಎಷ್ಟು ಹೊತ್ತು? ಹೇಳುವುದು ಬೇಗ ಹೇಳಿ ಮುಗಿಸಿ.

**ಶ್ರೀ ಶರಣಪ್ಪ ಮಟ್ಟೂರಃ–** ಸನ್ಮಾನ್ಯ ಸಭಾಪತಿಯವರೇ, ನನ್ನ ಸಮಯವನ್ನು ಬೇರೆಯವರು ತೆಗೆದುಕೊಂಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಮಟ್ಟೂರ್‌ರವರೇ, ತಾವು ಯಾಕೆ ಬೇರೆಯವರನ್ನುದ್ದೇಶಿಸಿ ಮಾತನಾಡುತ್ತೀರಿ?

**ಶ್ರೀ ಶರಣಪ್ಪ ಮಟ್ಟೂರಃ–** ಸನ್ಮಾನ್ಯ ಸಭಾಪತಿಯವರೇ, ತಾವು ಪೀಠದಲ್ಲಿ ಇರಲಿಲ್ಲ. ಅದಕ್ಕೆ ಪುನಃ ಹೇಳುತ್ತಿದ್ದೇನೆ.

**ಸಭಾಪತಿಯವರು:–** ನಾನು ಎಲ್ಲವನ್ನು ಕೇಳಿಸಿಕೊಂಡಿದ್ದೇನೆ. ತಾವು ತಮ್ಮ ಮಾತುಗಳನ್ನು ಬೇಗನೆ ಮುಗಿಸಿ .

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರು:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ನಾರಯಣಸ್ವಾಮಿಯವರು, ಕಳ್ಳರು ಎಂದರೆ ಇವರು ಯಾಕೆ ಹೆಗಲು ಮುಟ್ಟಿ ನೋಡಿಕೊಂಡರು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಾನು ಯಾರನ್ನೂ ಉದ್ದೇಶಿಸಿ ಹೇಳಿಲ್ಲ.

**ಸಭಾಪತಿಯವರು:–** ಮಾನ್ಯ ಮಟ್ಟೂರ್‌ರವರೇ, ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಿ.

**ಡಾ:ವೈ.ಎ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಹೆಗಲು ಮುಟ್ಟಿ ನೋಡಿಕೊಳ್ಳುವ ಪ್ರಶ್ನೆ ಬೇಡ. 371(ಜೆ) ಬಗ್ಗೆ ಅವರು ಮಾತನಾಡಲಿ. ಕಳ್ಳರು ಯಾರು ಎನ್ನುವುದರ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ.

**(ಗೊಂದಲ)**

**SRI SHARANAPPA MATTUR:-** I know how to put my presentation.

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ನಾನು ತಮಗೆ ಮಾತನಾಡಲು ಅನುಮತಿ ಕೊಡದಿದ್ದರೂ ತಾವು ಯಾಕೆ ಮಾತನಾಡುತ್ತಿದ್ದೀರಿ?

**ಶ್ರೀ ಶರಣಪ್ಪ ಮಟ್ಟೂರು:–** ಸನ್ಮಾನ್ಯ ಸಭಾಪತಿಯವರೇ, ನಾನು ಅವರಿಗೆ yield ಆಗಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ನಾನು ಹೇಳುತ್ತಿರುವುದನ್ನು ಸ್ವಲ್ಪ ಕೇಳಿ. ನಾನು ಅವರ ಪರ ವಹಿಸಿಕೊಂಡು ಮಾತನಾಡುತ್ತಿಲ್ಲ. ಮಾನ್ಯ ಮಟ್ಟೂರ್‌ರವರೇ, ತಾವು ತಮ್ಮ ಮಾತುಗಳನ್ನು ಮುಂದುವರಿಸಿ. ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಿ.

**ಶ್ರೀ ಶರಣಪ್ಪ ಮಟ್ಟೂರು:–** ಸನ್ಮಾನ್ಯ ಸಭಾಪತಿಯವರೇ, ನಾನು ಯಾರ ಹೆಸರನ್ನು ಉಲ್ಲೇಖ ಮಾಡಿ ಮಾತನಾಡುತ್ತಿಲ್ಲ. ತಮ್ಮನ್ನುದ್ದೇಶಿಸಿ ಮಾತನಾಡುತ್ತಿದ್ದೇನೆ. ಸಂವಿಧಾನದ ಅನುಚ್ಛೇಧ 371(ಜೆ)ಗೆ ತಂದಿರುವ ತಿದ್ದುಪಡಿ ಅಡಿಯಲ್ಲಿ ನಮ್ಮ ಭಾಗಕ್ಕೆ ಕೊಟ್ಟಿರುವ ಆಯವ್ಯಯದ ಅನುದಾನದ ಬಗ್ಗೆ, ಶೈಕ್ಷಣಿಕ ಅವಕಾಶಗಳ ಬಗ್ಗೆ ಮತ್ತು ನೇಮಕಾತಿ ಹಾಗೂ ಬಡ್ತಿಯಲ್ಲಿ ನೀಡಬೇಕಾಗಿರುವ ಮೀಸಲಾತಿಯ ಬಗ್ಗೆ ನಾನು ಈಗಾಗಲೇ ಮಾತನಾಡಿದ್ದೇನೆ. ನಮ್ಮ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಭಾಗಗಕ್ಕೆ ಒದಗಿಸಬೇಕಾಗಿರುವ ಮೂಲಭೂತ ಸೌಲಭ್ಯಗಳಿಗೆ ಹೆಚ್ಚಿನ ಗಮನವನ್ನು ನೀಡಬೇಕಾಗುತ್ತದೆ. ತಮಗೂ ಈ ಬಗ್ಗೆ ಸಾಕಷ್ಟು ತಿಳಿದಿದೆ. ತಮ್ಮ ಜೊತೆಗೆ ಭರವಸೆಗಳ ಸಮಿತಿಯಿಂದ ಬೀದರ್ ಜಿಲ್ಲೆಗೆ ಎರಡು ಬಾರಿ ಭೇಟಿ ನೀಡಿದಂತಹ ಸಂದರ್ಭದಲ್ಲಿ ಅಲ್ಲಿ ಎಲ್ಲರೂ ಇನ್‌ಚಾರ್ಜ್ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರು. ಈಗ ಅಲ್ಲಿಗೆ ಜಿಲ್ಲಾಧಿಕಾರಿಗಳು ಬಂದಿದ್ದಾರೆ. ಮಾನ್ಯ ರಾಜಶೇಖರ್ ಪಾಟೀಲ್‌ರವರು ಮಂತ್ರಿಗಳಾಗಿದ್ದಾರೆ. ಬಡ್ತಿಯಲ್ಲಿ ಈ ಭಾಗದವರಿಗೆ ಮೀಸಲಾತಿ ಕಲ್ಪಿಸಿಕೊಡುವ ವಿಚಾರವನ್ನು ಸಹ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

**ಸಭಾಪತಿಯವರುः–** ಮಾನ್ಯ ಶರಣಪ್ಪ ಮಟ್ಟೂರ್‌ರವರೇ, ಕಾಂಗ್ರೆಸ್ ಪಕ್ಷದ ಶಾಸಕಾಂಗ ಸಭೆ ಇರುವುದರಿಂದ, ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ, ಮಾನ್ಯ ಸಚಿವರು ಉತ್ತರ ಹೇಳಲಿ. ಆಮೇಲೆ ಸ್ಪಷ್ಟೀಕರಣ ಕೇಳೋಣ.

**ಶ್ರೀ ಶರಣಪ್ಪ ಮಟ್ಟೂರः–** ಸನ್ಮಾನ್ಯ ಸಭಾಪತಿಯವರೇ, ಎರಡೇ ಎರಡು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಸಭಾಪತಿಯವರುः–** ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆ ಮಾತನಾಡಿ. ತಾವು ಮಾತನಾಡಲು ಪ್ರಾರಂಭಿಸಿ ಸುಮಾರು ಒಂದು ಗಂಟೆಯಾಗಿದೆ. ಮಾನ್ಯ ಕೊಂಡಯ್ಯನವರು ತಮ್ಮ ಮಾತುಗಳನ್ನು ಮುಗಿಸಿ ಒಂದು ಗಂಟೆಯಾಗಿದೆ.

**ಶ್ರೀ ಶರಣಪ್ಪ ಮಟ್ಟೂರः–** ಸನ್ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ತಾವು 15 ನಿಮಿಷಗಳ ಕಾಲಾವಕಾಶವನ್ನು ಸಹ ಕೊಟ್ಟಿಲ್ಲ.

**ಸಭಾಪತಿಯವರುः–** ಇಲ್ಲ, ತಾವು ಆ ರೀತಿ ಹೇಳಬಾರದು. ಇನ್ನು ಎರಡು ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

**ಶ್ರೀ ಶರಣಪ್ಪ ಮಟ್ಟೂರः–** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡಲು ಪ್ರಾರಂಭಿಸಿ 15 ನಿಮಿಷಗಳಾಗಿಲ್ಲ. ಅದರಲ್ಲಿ 5 ನಿಮಿಷಗಳನ್ನು ವಿರೋಧ ಪಕ್ಷದ ಸದಸ್ಯರೇ ತೆಗೆದುಕೊಂಡಿದ್ದಾರೆ. ಅದಕ್ಕಾಗಿಯೇ ನಾನು ತಮಗೆ ಬರವಣಿಗೆಯಲ್ಲಿ ಕಳುಹಿಸಿಕೊಟ್ಟಿದ್ದು.

ಸನ್ಮಾನ್ಯ ಸಭಾಪತಿಯವರೇ, ಸಚಿವಾಲಯದಲ್ಲಿರುವ ಅಧಿಕಾರಿಗಳು validity of that promotion and recruitment ಬಗ್ಗೆ ಕೆ.ಎ.ಟಿ.ಯಲ್ಲಿ ಪ್ರಶ್ನಿಸಿದ ಸಂದರ್ಭದಲ್ಲಿ ಕೆ.ಎ.ಟಿ. ಅವರ ವಾದವನ್ನು ತಳ್ಳಿ ಹಾಕಿ ದಿನಾಂಕः06.11.2013ರ ಸರ್ಕಾರದ ಆದೇಶವನ್ನು ಎತ್ತಿ ಹಿಡಿದಿದೆ. ಆದಾಗ್ಯೂ ಸಹ ಇಲ್ಲಿಯವರೆಗೆ ಬಡ್ತಿಯ ವಿಚಾರಗಳು



“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮತ್ತು ನೇಮಕಾತಿಯ ವಿಚಾರಗಳು ಹಾಗೆಯೇ ಉಳಿದಿವೆ. ಮಾನ್ಯ ಸಚಿವರು ಈ ವಿಚಾರದಲ್ಲಿ ಹೆಚ್ಚು ಗಮನಹರಿಸ ಬೇಕಾಗುತ್ತದೆ. He is a well Learned Minister. ದಿನಾಂಕಃ06.11.2013ರ ರಿಟ್ ಅರ್ಜಿಗೆ ಸಂಬಂಧಪಟ್ಟಂತೆ ದಿನಾಂಕಃ 17.08.2017ರಂದು ಕೆ.ಎ.ಟಿ. ಅರ್ಜಿ ಸಂಖ್ಯೆಃ4368 ರಿಂದ 4372/2014, ಅರ್ಜಿ ಸಂಖ್ಯೆಃ5516 ನಿಂದ 5526/2015, ಅರ್ಜಿ ಸಂಖ್ಯೆಃ5558 ರಿಂದ 5563/2015 ಇವುಗಳನ್ನು ಇತ್ಯರ್ಥಗೊಳಿಸಿದೆ. After the disposal of all these Writ Petitions, the court has upheld the Government Order itself. So, being aggrieved by that, they have also filled a Writ Petition and as far as my knowledge is concerned, it is still pending before the court. ನಮ್ಮ ಭಾಗದವರಿಗೆ ಬರಬೇಕಾಗಿರುವ ಬಡ್ತಿಗಳನ್ನು ಕೊಡುವುದಕ್ಕೂ ಸಹ ಸಚಿವಾಲಯದಲ್ಲಿ ಆಕ್ಷೇಪಣೆಗಳು ಬಂದಿದ್ದು, ಅದು ಹಾಗೆಯೇ ಉಳಿದಿದೆ. ಇದರ ಬಗ್ಗೆಯೂ ಮಾನ್ಯ ಸಚಿವರು ಗಮನಹರಿಸ ಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ವಿಶೇಷವಾಗಿ ನಮ್ಮ ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ಸಹಾಯಕ ಶಿಕ್ಷಕರ ಹುದ್ದೆಯಿಂದ ಮುಖ್ಯೋಪಾಧ್ಯಾಯರ ಹುದ್ದೆಗೆ ಬಡ್ತಿ ನೀಡುವ ವಿಚಾರವಾಗಿರಬಹುದು ಅಥವಾ ಪದವಿ ಪೂರ್ವ ಕಾಲೇಜಿನಲ್ಲಿರುವ ಹುದ್ದೆಗಳಿಗೆ ಬಡ್ತಿ ನೀಡುವುದು ಇರಬಹುದು ಅಥವಾ ವಿವಿಧ ಇಲಾಖೆಗಳಲ್ಲಿ ಕೊಡುವ ಬಡ್ತಿಗಳು ಸಹ ಪೆಂಡಿಂಗ್ ಉಳಿದಿವೆ. ಆದ್ದರಿಂದ ಆದಷ್ಟು ಬೇಗನೇ ಬಡ್ತಿ ನೀಡುವ ವಿಚಾರವನ್ನು ಕೈಗೆತ್ತಿಕೊಳ್ಳಬೇಕೆನ್ನುವ ಮನವಿ ಮಾಡುವುದಕ್ಕೆ ಬಯಸುತ್ತೇನೆ. ಮಾನ್ಯ ಪ್ರಿಯಾಂಕ ಖರ್ಗೆಯವರು ಈ ಸದನದಲ್ಲಿದ್ದಾರೆ. ಈ ಬಗ್ಗೆ ನಾನು ಅವರಿಗೆ ಬರವಣಿಗೆಯ ರೂಪದಲ್ಲಿ ಕೊಟ್ಟಿದ್ದೇನೆ. ಕಳೆದ ತಿಂಗಳ 17ನೇ ತಾರೀಖಿನಂದು ನಡೆದಂತಹ ಸಚಿವ ಸಂಪುಟದ ಉಪ ಸಮಿತಿ ಸಭೆಯಲ್ಲಿ ಈ ವಿಚಾರ ಚರ್ಚೆಗೆ ಬಂದಿತ್ತು. ಮಾನ್ಯ ಕೃಷ್ಣಭೈರೇಗೌಡರು ಸಹ ಈ ಸದನದಲ್ಲಿ ಉಪಸ್ಥಿತಿರಿದ್ದಾರೆ.

**ಸಭಾಪತಿಯವರುಃ–** ತಾವು ಉತ್ತರ ಹೇಳುವುದು ಬೇಡ. ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಿ.

**ಶ್ರೀ ಶರಣಪ್ಪ ಮಟ್ಟೂರಃ–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರ ಬಹಳ ಗಂಭೀರವಾಗಿದೆ. I should request to the Hon'ble Minister. ಈ ಬಡ್ತಿಗಳನ್ನು ಕೂಡಲೇ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇರುವ ರಿಟ್ ಅರ್ಜಿಗಳನ್ನು ಸಹ expedite ಆಗಿ ಇತ್ಯರ್ಥಗೊಳಿಸುವುದಕ್ಕೆ ಪ್ರಯತ್ನಿಸಬೇಕು.

ಸನ್ಮಾನ್ಯ ಸಭಾಪತಿಯವರೇ, 16(ಸಿ) ಬಗ್ಗೆ ಒಂದೆರಡು ಮಾತುಗಳನ್ನಾಡಲು ಬಯಸುತ್ತಿದ್ದೇನೆ. 16(ಸಿ) ಏನು ಹೇಳುತ್ತದೆ ಎಂದರೆ;

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

> **"ಹಣಕಾಸು ವರ್ಷದಲ್ಲಿ ವಿನಿಯೋಗಿಸದೇ ಉಳಿದಿರುವ ನಿಧಿಯನ್ನು ರದ್ದುಗೊಳಿಸತಕ್ಕದ್ದಲ್ಲ ಮತ್ತು ಅಂತಹ ಬಾಕಿ ಮೊತ್ತವನ್ನು ಮುಂದಿನ ಹಣಕಾಸು ವರ್ಷಕ್ಕೆ ಮುಂದುವರಿಸತಕ್ಕದ್ದು, ಒಂದು ವರ್ಷದಿಂದ ಮತ್ತೊಂದು ವರ್ಷಕ್ಕೆ ಮುಂದಕ್ಕೆ ಒಯ್ಯಲಾದ ನಿಧಿಗಳು ಎಂದು ಹಣಕಾಸು ವರ್ಷದಲ್ಲಿ ನಿಗದಿಗೊಳಿಸಲಾದ ನಿಧಿಗಳು ಶೇಕಡಾ 20ಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ."**

ಎಂದು ಇದೆ. ಆಯವ್ಯಯದಲ್ಲಿ ಘೋಷಣೆಯಾಗಿ ಹಂಚಿಕೆಯಾಗಿರುವ ಸುಮಾರು ಆರೂವರೆ ಸಾವಿರ ಕೋಟಿ ರೂಪಾಯಿಗಳು ನಮಗೆ ಲಭ್ಯವಿದೆ. ಅದರಲ್ಲಿ ಬಿಡುಗಡೆಯಾಗಿರುವುದು ಸುಮಾರು 2928 ಕೋಟಿ ರೂಪಾಯಿಗಳಾಗಿದ್ದು, ಸುಮಾರು 3484 ಕೋಟಿ ರೂಪಾಯಿಗಳು ಉಳಿದಿವೆ. 16(ಸಿ) ಪ್ರಕಾರ ಮಾಡುವುದಾದರೇ ಏನೂ ಮಾಡುವುದಕ್ಕೆ ಆಗುವುದಿಲ್ಲ. With great difficulties the then Opposition Leader of Lok Sabha Sri Mallikarjuna Khargeji has struggled a lot to bring this amendment. But, the purpose of that amendment under Article 371(J) is not fully implemented. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಪರಿಶ್ರಮ ಇಲ್ಲಿ ಹಾಳಾಗಿ ಹೋಗುತ್ತಿದೆ. ಸಂವಿಧಾನದ ಅನುಚ್ಛೇಧ 371(ಜೆ)ಗೆ ತಂದಿರುವಂತಹ ತಿದ್ದುಪಡಿ ನಮ್ಮ ಪ್ರದೇಶಕ್ಕೆ ಫಲಪ್ರದವಾಗುವುದಿಲ್ಲ. ದಿನಾಂಕಃ06.11.2013ರ ಆದೇಶವೂ ಕೂಡ ಉಪಯೋಗಕ್ಕೆ ಬರುವುದಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ, That amount should be carry forward ಎನ್ನುವಂತಹ ಒಂದು ತಿದ್ದುಪಡಿಯನ್ನು ಇದಕ್ಕೆ ತರಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಈ ಬಗ್ಗೆ ಚರ್ಚೆಯಾದಂತಹ ಸಂದರ್ಭದಲ್ಲಿ ತಾವು ಸಭಾಪೀಠದಲ್ಲಿ ಕುಳಿತಿದ್ದಾಗ, ದಿನಾಂಕಃ22.11.2012ರಂದು ಮಾನ್ಯ ಎಲ್.ಕೆ.ಅಡ್ವಾನಿಯವರು ಬರೆದಿರುವ ಪತ್ರವನ್ನು ಕಳುಹಿಸಿಕೊಡುವಂತೆ ನನಗೆ ನಿರ್ದೇಶನವನ್ನು ನೀಡಿದ್ದಿರಿ. ಮಾನ್ಯ ರಘುನಾಥ್ ರಾವ್ ಮಲ್ಕಾಪೂರೆಯವರು ತಮಗೂ ಕೂಡ ಆ ಪತ್ರದ ಪ್ರತಿಯನ್ನು ಕಳುಹಿಸಿಕೊಡಬೇಕೆಂದು ಕೇಳಿದ್ದರು. ತಮಗೂ ಮತ್ತು ಅವರಿಗೂ ಆ ಪತ್ರದ ಪ್ರತಿಯನ್ನು ಕಳುಹಿಸಿ ಕೊಡುತ್ತಿದ್ದೇನೆ. ಅದು ದಾಖಲೆಗೂ ಹೋಗಲಿ. ದಿನಾಂಕಃ22.11.2012ರ ಪತ್ರದಲ್ಲಿ;

> *"Kindly refer to your D.O. letter No. CM 5701 GOI 2001 dated 12.11.2001 and D.O. No. DPAR 17 PLX 98 dated 27.8.2002 regarding the proposal of the State Government of Karnataka for amendment of Article 371 of the Constitution of India to provide for regional reservation in Karnataka on the pattern of Article 371 (D) of the Constitution in respect of Andhra Pradesh.*

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*I have had the matter examined. The circumstances in Andhra Pradesh that led to the insertion of Article 371-D in the Constitution in 1973 do not exist in Karnataka. The Central Government, therefore, do not find the proposal of the Government of Karnataka feasible.”*

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಸನ್ಮಾನ್ಯ ಸಭಾಪತಿಯವರೇ, ಅವರು ಏತಕ್ಕೋಸ್ಕರ ಆ ಪತ್ರವನ್ನು ಬರೆದಿದ್ದಾರೆ ಎನ್ನುವುದರ ರೆಫರೆನ್ಸ್ ಅನ್ನು ಸಹ ಅವರು ಹೇಳಬೇಕಾಗುತ್ತದೆ. ಅದು ಏಕಪಕ್ಷೀಯವಾಗುವುದಿಲ್ಲ. ಇಲ್ಲದಿದ್ದರೆ, ಇದು ಏಕಪಕ್ಷೀಯವಾಗುತ್ತದೆ.

**ಸಭಾಪತಿಯವರು:–** ಸರ್ಕಾರ ಉತ್ತರ ಕೊಡುತ್ತಿಲ್ಲ, ಅವರು ಉಲ್ಲೇಖ ಮಾಡುತ್ತಿದ್ದಾರೆ. ಮಾಡಲಿ ಬಿಡಿ.

**ಶ್ರೀ ಶರಣಪ್ಪ ಮಟ್ಟೂರ:–** ಇಷ್ಟು ನೇರವಾಗಿ ಅವತ್ತು ಆಗುವುದಿಲ್ಲವೆಂದು ಬರೆದವರು ಇವರೇ, ಇವತ್ತು ವಾದ ಮಾಡುತ್ತಿರುವವರು ಇವರೇ. ಇದರ ಬಗ್ಗೆ ನಾವು ಏನು ಹೇಳಬೇಕು?

**(ಗೊಂದಲ)**

(341)11–12–2018(1.10)ಪಿಕೆ–ಎಂಡಿ

(ಸಭಾಪತಿಗಳ ಉಪಸ್ಥಿತಿ)

(ಗೊಂದಲ)

**(ಈ ಹಂತದಲ್ಲಿ ಅನೇಕ ಜನ ಸದಸ್ಯರು ಮತ್ತು ಕೆಲವು ಸಚಿವರು ಒಟ್ಟಾಗಿ ಮಾತನಾಡುತ್ತಿದ್ದುದರಿಂದ ಆ ಮಾತುಗಳು ಕಡತಕ್ಕೆ ಹೋಗಬಾರದೆಂದು ಸಭಾಪತಿಗಳು ಆದೇಶಿಸಿದರು)**

ಶ್ರೀ ಶರಣಪ್ಪ ಮಟ್ಟೂರ:–ಮಾನ್ಯ ಸಭಾಪತಿಗಳೆ, ತಮ್ಮ ನಿರ್ದೇಶನದಂತೆ ನಾನು ನನ್ನ ಹತ್ತಿರ ಇರುವ ಪ್ರತಿಯನ್ನು ಕಳುಹಿಸುತ್ತಿದ್ದೇನೆ. ತಾವೆಲ್ಲರೂ ಇದನ್ನು ಮನದಲ್ಲಿ ಇಟ್ಟುಕೊಳ್ಳಬೇಕು. ಯಾರ್‍ಯಾರು ಈ ವಿಚಾರವಾಗಿ ಆಕ್ಷೇಪಣೆಯನ್ನು ಎತ್ತುತ್ತಿದ್ದಾರೋ ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಬೀದರ್‌ನಿಂದ ಹಿಡಿದು ಹಿರಿಯೂರಿನವರೆಗೆ ಇರುವ ರಸ್ತೆಗಳ ಪರಿಸ್ಥಿತಿಯನ್ನು ನೋಡಿದರೆ ಗೊತ್ತಾಗುತ್ತದೆ. ಮೈಸೂರು–ಬೆಂಗಳೂರು, ಮೈಸೂರು–ಹಾಸನ, ಬೆಂಗಳೂರು–ಕೋಲಾರ, ಬೆಂಗಳೂರು–ಚಿಕ್ಕಬಳ್ಳಾಪುರ ರಸ್ತೆಗಳನ್ನು ಮತ್ತು ಬೆಂಗಳೂರು–ಹಿರಿಯೂರಿನ ನಡುವೆ ಇರುವ ರಸ್ತೆಗಳನ್ನು ನೋಡಿದರೆ ವ್ಯತ್ಯಾಸ ಗೊತ್ತಾಗುತ್ತದೆ. ಅಲ್ಲದೇ, ಅಲ್ಲಿನ ವಿದ್ಯಾಸಂಸ್ಥೆಗಳ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪರಿಸ್ಥಿತಿ ಏನಿದೆ, ಆಸ್ಪತ್ರೆಗಳ ಪರಿಸ್ಥಿತಿ ಹೇಗಿದೆ ಎಂಬುದನ್ನು ನೋಡಬೇಕು. ಈ ಭಾಗಕ್ಕೆ ಸಾಕಷ್ಟು ಮಾಡಿದ್ದೀರಿ; ಆದರೆ ಇನ್ನೂ ಕೂಡ ಮಾಡಬೇಕಾಗಿದೆ. ಈಗಾಗಲೇ ಏನು ಆದೇಶ ಇದೆಯೋ ಅದರ ಪ್ರಕಾರ ಕೂಡಲೇ 371(ಜೆ) ಅಡಿಯಲ್ಲಿ ಬರುವ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡುವ ನಿಟ್ಟಿನಲ್ಲಿ ಸಂಬಂಧಪಟ್ಟ ಕಾರ್ಯಗಳನ್ನು ಅನುಷ್ಠಾನಗೊಳಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೃಷ್ಣಭೈರೇಗೌಡ:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಸಿ.ಕೊಂಡಯ್ಯ ಮತ್ತು ಶ್ರೀ ಶರಣಪ್ಪ ಮಟ್ಟೂರರವರು ನಿಯಮ 330ರ ಅಡಿಯಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಪಟ್ಟಂತೆ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಕೊಟ್ಟಿರುವಂತಹ ಅನುದಾನದ ಬಗ್ಗೆ ಗಮನ ಸೆಳೆದಿದ್ದಾರೆ. ಅದಕ್ಕೆ ಲಿಖಿತ ಉತ್ತರವನ್ನು ಮಾನ್ಯ ಸದಸ್ಯರುಗಳಿಗೆ ಕಳುಹಿಸುತ್ತಿದ್ದೇನೆ.

(ಲಿಖಿತ ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಕೃಷ್ಣಭೈರೇಗೌಡ:- ಮಾನ್ಯ ಸಭಾಪತಿಗಳೆ, ನಾನು ಮೊದಲನೆಯದಾಗಿ, ಸಮಸ್ಯೆಗೆ ಕಾರಣವಾಗಿರುವ ಅಂಶಗಳೇನು ಎನ್ನುವುದರ ಬಗ್ಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಕಡೆಯ ಸದಸ್ಯರು ಮತ್ತು ಆ ಕಡೆಯ ಸದಸ್ಯರು, ಅನುದಾನದ ಬಳಕೆ ಯಾವ ಪ್ರಮಾಣದಲ್ಲಿ ಆಗಬೇಕೋ ಅಷ್ಟು ಪ್ರಮಾಣದಲ್ಲಿ ಬಳಕೆ ಆಗುತ್ತಿಲ್ಲ ಎಂಬ ಮಾತನ್ನು ಹೇಳಿದರು. ಅದು ಮೂಲ ಸಮಸ್ಯೆಯಾಗಿದೆ. ಇಲ್ಲಿ ಅನುದಾನದ ಕೊರತೆ ಇಲ್ಲ ಅಥವಾ ಅನುದಾನ ಬಿಡುಗಡೆಯ ಸಮಸ್ಯೆಯೂ ಇಲ್ಲ. ಯಾವ ಪ್ರಮಾಣದಲ್ಲಿ ಹಣ ಪ್ರತಿವರ್ಷ ಖರ್ಚಾಗಬೇಕೋ ಆ ಪ್ರಮಾಣದಲ್ಲಿ ಖರ್ಚಾಗದೇ ಇರುವುದು ಮೂಲ ಸಮಸ್ಯೆಯಾಗಿದೆ. ಇದೂ ಕೂಡ ಸರ್ಕಾರದ ಜವಾಬ್ದಾರಿಯಾಗಿದೆ. ಈ ಕುರಿತು ನಾನು ಬೇರೆಯವರ ಮೇಲೆ ಆರೋಪ ಮಾಡುವುದಕ್ಕೆ ಹೋಗುವುದಿಲ್ಲ. ಹಣ ಖರ್ಚಾಗದೇ ಇರುವ ಪ್ರಕ್ರಿಯೆಯನ್ನು ನಾವು ಬಳುವಳಿಯಾಗಿ ಪಡೆದುಕೊಂಡಿದ್ದೇವೆ. ಸುಮಾರು ವರ್ಷಗಳಿಂದ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದರಿಂದ, ಸಾಕಷ್ಟು ಖಾಲಿ ಹುದ್ದೆಗಳು ಹಾಗೆಯೇ ಇರುವುದರಿಂದ, ಭರ್ತಿ ಆಗುವಂತಹ ಪ್ರಕ್ರಿಯೆ ಆಗದೇ ಇದ್ದುದರಿಂದ, ಐತಿಹಾಸಿಕವಾಗಿ ಖಾಲಿ ಹುದ್ದೆಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದುದರಿಂದ ಕೊಟ್ಟಂಥ ಅನುದಾನ ಸಮಯಕ್ಕೆ ಸರಿಯಾಗಿ ಬಳಕೆ ಆಗುತ್ತಿಲ್ಲ. ಆದರೆ ತಾವು, ಕಳೆದ ಐದು ವರ್ಷಗಳ ಕಾಲ ನೀವು ಸರ್ಕಾರ ನಡೆಸಿದಿರಿ; ಈಗ ಸಮ್ಮಿಶ್ರ ಸರ್ಕಾರ ಇದೆ ಎನ್ನುವ ಮಾತನ್ನು ಹೇಳಿದಿರಿ. ತಮಗೆ ಗೊತ್ತಿರುವ ಹಾಗೆ, ನಾವು ಕಲ್ಬುರ್ಗಿಯಲ್ಲಿ ಸಂಪುಟ ಸಭೆಯನ್ನು ಮಾಡಿ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿರುವ ಖಾಲಿ ಹುದ್ದೆಗಳ ಭರ್ತಿ ಸಂಬಂಧ ಸರ್ಕಾರದಲ್ಲಿರುವ ಬೇರೆ ಬೇರೆ ನಿಯಮಾವಳಿಗಳಿಗೆ, ಮಾನದಂಡಗಳಿಗೆ ವಿನಾಯಿತಿಯನ್ನು ಕೊಟ್ಟು, ಏಕಕಾಲದಲ್ಲಿ ಹುದ್ದೆಗಳ ಮಂಜೂರಾತಿಗೆ ಅನುಮತಿ ಕೊಟ್ಟಿದ್ದೇವೆ. ಏಕಕಾಲದಲ್ಲಿ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದಕ್ಕಾಗುವುದಿಲ್ಲ. ಸುಮಾರು 45 ಸಾವಿರಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇತ್ತು ಎಂದು ಗುರ್ತಿಸಿದ್ದೆವು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏಕಕಾಲದಲ್ಲಿ ಆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದೇವೆ. ಆದರೆ, ಅನುಮತಿ ಕೊಟ್ಟ ಕೂಡಲೇ ಏಕಕಾಲದಲ್ಲಿ ಭರ್ತಿ ಮಾಡುವುದಕ್ಕಾಗುವುದಿಲ್ಲ. ಈ ಸಂಬಂಧ ಇದು ಸಂಪುಟದ ಒಪ್ಪಿಗೆಗೆ ಬರುವ ಅವಶ್ಯಕತೆ ಇರದೇ, ಆಯಾಯ ಇಲಾಖೆಗಳಿಗೆ ಅಧಿಕಾರ ಕೊಟ್ಟು ಸದರಿ ಹುದ್ದೆಗಳನ್ನು ಭರ್ತಿ ಮಾಡಿ ಎಂದು ಸರ್ಕಾರದಿಂದ ಒಪ್ಪಿಗೆ ಕೊಟ್ಟಿದ್ದೇವೆ. ನನಗೆ ಜ್ಞಾಪಕ ಇರುವ ಮಾಹಿತಿ ಪ್ರಕಾರ ಸುಮಾರು 20-25 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸ ಎರಡೂವರೆ ವರ್ಷದ ಅವಧಿಯಲ್ಲಾಗಿದೆ. ವಿಶೇಷ ಪ್ರಾವದಾನದ ಅಡಿಯಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ವಿಶೇಷ ಅವಕಾಶವನ್ನೇನು ಮಾಡಿಕೊಟ್ಟಿದ್ದೇವೆಯೋ ಅದರಲ್ಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಇವತ್ತಿಗೂ ನಡೆದಿದೆ. ಈಗಾಗಲೇ ಸುಮಾರು 20-25 ಸಾವಿರ ಹುದ್ದೆಗಳು ಭರ್ತಿ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಸರ್ಕಾರದಿಂದ ಬರುವಂತಹ ಯೋಜನೆಗಳು ಸಮಯಕ್ಕೆ ಸರಿಯಾಗಿ, ಸಮರ್ಪಕವಾಗಿ ಅನುಷ್ಠಾನ ಆಗಬೇಕಾದರೆ ಹುದ್ದೆಗಳು ಖಾಲಿ ಇರಬಾರದು ಎನ್ನುವ ಉದ್ದೇಶದಿಂದ ಅವರಿಗೆ ಎಲ್ಲಾ ವಿನಾಯಿತಿಯನ್ನು ಕೊಟ್ಟು ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದೇವೆ. ನಾನು ಆರಂಭದಲ್ಲಿ ಹೇಳಿದ ಹಾಗೆ, ಮೀಸಲಿಟ್ಟಿರುವ ಹಣ ಖರ್ಚಾಗದೇ ಇರುವುದು ಈ ಸಮಸ್ಯೆಗೆ ಮೂಲ ಕಾರಣವಾಗಿದೆ. ಹುದ್ದೆಗಳನ್ನು ಸಮಯಕ್ಕೆ ಸರಿಯಾಗಿ ಭರ್ತಿ ಮಾಡುವ ಕೆಲಸ ಮಾಡುವುದರ ಮೂಲಕ ಕೂಡ ಆ ಹಣ ಖರ್ಚು ಮಾಡುತ್ತಿದ್ದೇವೆ. ಈಗ ನಾನು ತಮ್ಮ ಮೂಲ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಹೇಳಬಯಸುತ್ತೇನೆ. ಮಾನ್ಯ ಸಭಾಪತಿಗಳೆ, ನಾವು ಆಯವ್ಯಯದಲ್ಲಿ ಈ ಭಾಗಕ್ಕೆ ಹೆಚ್ಚಿಗೆ ಹಣ ಹಂಚಿಕೆ ಮಾಡಿರುವುದು ನಿಜ. ಆದರೆ ಆ ವರ್ಷಗಳಲ್ಲಿ ಬಿಡುಗಡೆಯಾದ ಹಣ ಸಂಪೂರ್ಣವಾಗಿ ಹಂಚಿಕೆಯಾಗಿಲ್ಲ. ತಮಗೆ ಗೊತ್ತಿರುವ ಹಾಗೆ, ನಿಯಮಾವಳಿಗಳ ಪ್ರಕಾರ ಹಣವನ್ನು 4 ಕಂತುಗಳಲ್ಲಿ ಬಿಡುಗಡೆ ಮಾಡುತ್ತೇವೆ. 1 ಮತ್ತು 2ನೇ ಕಂತಿನ ಹಣವನ್ನು ಪಡೆದುಕೊಳ್ಳುವ ಅಧಿಕಾರ ಆಯಾಯ ಇಲಾಖೆಗಳಿಗೆ ಕೊಟ್ಟಿದ್ದೇವೆ. ಅದನ್ನು ಹಣಕಾಸು ಇಲಾಖೆಯಲ್ಲಿ ಇಟ್ಟುಕೊಂಡಿಲ್ಲ. ಅಂದರೆ, ಡ್ರಾಯಿಂಗ್ ಪವರ್ಸ್ ಏನಿದೆ ಅದನ್ನು ಆ ಇಲಾಖಾ ಕಾರ್ಯದರ್ಶಿಗಳಿಗೆ ಕೊಟ್ಟುಬಿಡುತ್ತೇವೆ. ಆರ್ಥಿಕ ಇಲಾಖೆ ಹೊರಡಿಸುವ ಆದೇಶವನ್ನು ಅವರೇ ಹೊರಡಿಸುತ್ತಾರೆ. ಆದರೆ, 3ನೇ ಮತ್ತು 4ನೇ ಕಂತನ್ನು ಕೊಡಬೇಕಾದರೆ, ಮೊದಲಿನ ಎರಡು ಕಂತುಗಳಲ್ಲಿ ಏನು ಹಣ ಕೊಟ್ಟಿರುತ್ತೇವೆಯೋ ಅದರಲ್ಲಿ ಶೇಕಡ 75 ರಷ್ಟು ಖರ್ಚಾಗಿರಬೇಕು ಎಂದು ಎಲ್ಲಾ ಇಲಾಖೆಗಳಿಗೆ ಎಲ್ಲಾ ಯೋಜನೆಗಳಿಗೆ ಸಂಬಂಧಪಟ್ಟಂತೆ ನಿಬಂಧನೆ ಹಾಕಿದ್ದೇವೆ. ಅದಕ್ಕೆ ತಕ್ಕ ಹಾಗೆ 3ನೇ ಮತ್ತು 4ನೇ ಕಂತನ್ನು ಬಿಡುಗಡೆ ಮಾಡಲು ರೆಗ್ಯುಲೇಟ್ ಮಾಡುತ್ತೇವೆ. ಏಕೆ ಹೀಗೆ ಮಾಡುತ್ತೀರಿ ಎಂದು ತಾವು ಕೇಳಬಹುದು. ಯಾವ ಯಾವ ಇಲಾಖೆಗಳು ಯಾವ ಯಾವ ಪ್ರಮಾಣದಲ್ಲಿ ಹಣ ಖರ್ಚು ಮಾಡುತ್ತಿವೆಯೋ ಅದಕ್ಕೆ ತಕ್ಕ ಹಾಗೆ ಹಣ ಬಿಡುಗಡೆ ಮಾಡಿದರೆ ಆ ವರ್ಷದಲ್ಲಿ ಬಿಡುಗಡೆಯಾದ ಬಹುತೇಕ ಹಣ ಖರ್ಚಾಗುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಇದ್ದರೆ, ಆ ಇಲಾಖೆಗಳಿಗೆ ಹಣ ಹೋಗಿ ಖರ್ಚಾಗದೇ ಉಳಿದುಕೊಂಡರೆ ಜನರಿಗೆ ಆ ಹಣದ ಉಪಯೋಗ ಮಾಡಿಕೊಟ್ಟ ಹಾಗೆ ಆಗುವುದಿಲ್ಲ. ಕರ್ನಾಟಕದಲ್ಲಿ ಪ್ರತಿವರ್ಷ ಆಯವ್ಯಯದಲ್ಲಿ ಮೀಸಲಿಟ್ಟ ಶೇಕಡ 96-97ರಷ್ಟು ಹಣವನ್ನು ಖರ್ಚು ಮಾಡುವ ಇತಿಹಾಸವನ್ನು ಮುಂದುವರೆಸಿಕೊಂಡು ಬರುತ್ತಿದ್ದೇವೆ. ಇದು, 3ನೇ ಮತ್ತು 4ನೇ ಕಂತನ್ನು ಖರ್ಚಿನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಧಾರದ ಮೇಲೆ ಮರುಹೊಂದಾಣಿಕೆ ಮಾಡಿಕೊಂಡು ಹೋಗುತ್ತಿರುವುದರಿಂದ ಸಾಧ್ಯವಾಗುತ್ತಿದೆ. 3ನೇ ಮತ್ತು 4ನೇ ಕಂತನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಎಲ್ಲಿ ಬೇಡಿಕೆ ಜಾಸ್ತಿ ಇದೆಯೋ ಅಲ್ಲಿ ಜಾಸ್ತಿ ಕೊಡುತ್ತಾರೆ, ಕಡಿಮೆ ಇರುವ ಕಡೆ ಹೋಲ್ಡ್ ಮಾಡುತ್ತಾರೆ. 2016ನೇ ಇಸವಿಯಿಂದ ನೋಡುವುದಾದರೆ, ಆ ವರ್ಷದಲ್ಲಿ ನಾವು ಬಿಡುಗಡೆ ಮಾಡಿದ ಹಣ ಕೂಡ ಖರ್ಚಾಗಿಲ್ಲ. 2016-17ರ ವರ್ಷದ ಕೊನೆಯಲ್ಲಿ 116 ಕೋಟಿ ಹಣ ಬಾಕಿ ಉಳಿದಿತ್ತು.

(342)11-12-2018(1.20)ಡಿಎಸ್-ಎಕೆ

**ಶ್ರೀ ಕೃಷ್ಣಭೈರೇಗೌಡ(ಮುಂದು):-**

2017-18ನೇ ಸಾಲಿನಲ್ಲಿ 286 ಕೋಟಿ ರೂಪಾಯಿಗಳು ಖರ್ಚಾಗದೆ ಉಳಿದಿದೆ. 2018-19ನೇ ಸಾಲಿನಲ್ಲಿ 436 ಕೋಟಿ ರೂಪಾಯಿಗಳು ಖರ್ಚಾಗದೆ ಉಳಿದಿದೆ. ಇದು ವರ್ಷದ ಅಂತ್ಯದಲ್ಲಿ ಖರ್ಚಾಗದೆ ಮಂಡಳಿಯಲ್ಲೇ ಉಳಿದಿರುವಂತಹ ಹಣ. ಖರ್ಚಾಗದೆ ಉಳಿದಿರುವುದಕ್ಕೆ ನಾವೇ ಜವಾಬ್ದಾರರು, ನಾನು ಇಲ್ಲ ಎಂದು ಹೇಳುತ್ತಿಲ್ಲ. ಅದನ್ನು ಪರಿಹಾರ ಮಾಡುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಹುದ್ದೆಗಳನ್ನು ಭರ್ತಿ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಸರ್ಕಾರದ ಅಧಿಸೂಚನೆಯ ಕಂಡಿಕೆ 16(ಸಿ) ಪ್ರಕಾರ ಬಿಡುಗಡೆಯಾಗಿ ವಿನಿಯೋಗಿಸದೇ ಉಳಿದ ಹಣವನ್ನು ನಾವು ವಾಪಸ್ ತೆಗೆದುಕೊಳ್ಳುತ್ತಿಲ್ಲ. 16(ಸಿ) ಪ್ರಕಾರವಾಗಿ ಬೇರೆ ಇಲಾಖೆಗಳಲ್ಲಿ ಬಿಡುಗಡೆಯಾದ ಹಣ ಖರ್ಚಾಗದಿದ್ದರೆ ನಾವು ವಾಪಸ್ ತೆಗೆದುಕೊಳ್ಳುತ್ತೇವೆ. ಆದರೆ, ಇಲ್ಲಿ ಬಿಡುಗಡೆಯಾದಂತಹ ಹಣವನ್ನು ನಾವು ವಾಪಸ್ ಪಡೆದುಕೊಳ್ಳುತ್ತಿಲ್ಲ. ಅದು ಮಂಡಳಿಯಲ್ಲೇ ಉಳಿದುಕೊಳ್ಳುತ್ತದೆ. ಆದರೆ, ಮಾನ್ಯ ಸದಸ್ಯರು ಮತ್ತೊಂದು ಅಂಶವನ್ನು ಗಮನಿಸಬೇಕು. ಕಳೆದ ಎರಡು-ಮೂರು ವರ್ಷಗಳಿಂದ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಾಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಿಂದಿನ ಆ ಭಾಗದ ಸಚಿವರು ಮತ್ತು ಹಾಲಿ ಆ ಭಾಗದ ಸಚಿವರು ಎಲ್ಲರೂ ಕೂಡ ಹಣ ಖರ್ಚಾಗುತ್ತಿಲ್ಲವೆನ್ನುವುದನ್ನು ಎಲ್ಲರೂ ಗಮನಿಸಿದ್ದಾರೆ. ಅದಕ್ಕೆ ವಿಶೇಷವಾದ ಪ್ರಯತ್ನಗಳನ್ನು ಎಲ್ಲರೂ ಮಾಡುತ್ತಿದ್ದಾರೆ. ಹಿಂದಿನ ಮಂಡಳಿಯ ಅಧ್ಯಕ್ಷರಿಂದ ಒಳಗೊಂಡು ಇವತ್ತು ಅಧ್ಯಕ್ಷರಾಗಿರುವವರು ಕೂಡ ಸಮಯಕ್ಕೆ ಸರಿಯಾಗಿ ಹಣ ಖರ್ಚು ಮಾಡಬೇಕೆನ್ನುವ ಪ್ರಯತ್ನವನ್ನು ಬಹಳ ತೀವ್ರವಾಗಿ ಸರ್ಕಾರದ ಮಟ್ಟದಲ್ಲಿ ನಡೆಯುತ್ತಿದೆ. ಆ ಸಮಸ್ಯೆಯನ್ನು ನಾವು ಒಪ್ಪಿಕೊಂಡಿದ್ದೇವೆ. ಅದನ್ನು ನಾವು ಹೇಗಾದರೂ ಖರ್ಚು ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಆ ಕಾರಣಕ್ಕಾಗಿಯೇ ಈ ವರ್ಷ ಈಗಾಗಲೇ ಇನ್ನು ನಾಲ್ಕು ತಿಂಗಳ ಮೊದಲೇ 693 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ವರ್ಷ ನಾವೇನು ಮಂಡಳಿಗೆ ಅನುದಾನ ಕೊಡುತ್ತಿದ್ದೇವೆ ಗರಿಷ್ಠ ಪ್ರಮಾಣದ ಖರ್ಚನ್ನು ಈ ವರ್ಷ ಮಾಡುತ್ತೇವೆ ಎನ್ನುವ ವಿಶ್ವಾಸ ಸರ್ಕಾರಕ್ಕೆ ಇದೆ. ಇವತ್ತು ಏಕೆ ವಿಶ್ವಾಸವಿದೆ ಎಂದರೆ ಕಳೆದ ಎರಡು-ಮೂರು ವರ್ಷಗಳಿಂದ ನಾವು ತೆಗೆದುಕೊಂಡಿರುವಂತಹ ಪರಿಹಾರ ಕಾರ್ಯಕ್ರಮಗಳು ಖರ್ಚು ಮಾಡುವಂತಹ ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಿದೆ. ಆ ಕಾರಣದಿಂದ ಈ ಸಮಸ್ಯೆ ಬರುವ ದಿನಗಳಲ್ಲಿ ಕಡಿಮೆಯಾಗುತ್ತದೆ, ಸಮಯಕ್ಕೆ ಸರಿಯಾಗಿ ಖರ್ಚು ಮಾಡುವಂತಹ ಕೆಲಸ ಸರ್ಕಾರದಿಂದ ಆಗುತ್ತದೆ. ಖರ್ಚು ಆದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೆ ಹಣ ಬಿಡುಗಡೆ ಮಾಡುವುದಕ್ಕೆ ಸರ್ಕಾರ ಸನ್ನದ್ದವಾಗಿದೆ, ಅದಕ್ಕೆ ಬದ್ಧವಾಗಿದೆ. ಉತ್ತರದ ಕೊನೆ ಭಾಗದಲ್ಲಿ ತಾವು ನೋಡಿದರೆ, ಸಮಯಕ್ಕೆ ಬಳಸಿಕೊಂಡರೆ ವರ್ಷದ ಆಯವ್ಯಯದ ಜೊತೆಗೆ ಅವಶ್ಯ ಹೆಚ್ಚುವರಿಯಾಗಿಯೂ ಕೂಡ ಬಿಡುಗಡೆ ಮಾಡಬಹುದು. ನಾನು ಸರ್ಕಾರದ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಇದು ಶಾಸಕಾಂಗವಾಗಿದ್ದರೂ ಕೂಡ ಖರ್ಚು ಮಾಡುವಂತಹ ಜವಾಬ್ದಾರಿ ಕಾರ್ಯಾಂಗಕ್ಕೆ ಇದ್ದರೂ ಕೂಡ ಆದರೂ ನಾನು ಸದನದ ಎಲ್ಲಾ ಸದಸ್ಯರಿಗೂ ಮನವಿ ಮಾಡುತ್ತೇನೆ. ತಮ್ಮ ತಮ್ಮ ಭಾಗದಲ್ಲಿ ಖಾಲಿ ಹುದ್ದೆ ಸಮಸ್ಯೆ ಇರುವುದು ನನಗೆ ಗೊತ್ತಿದೆ. ಅದನ್ನು ಭರ್ತಿ ಮಾಡುವಂತಹ ಪ್ರಕ್ರಿಯೆಯನ್ನು ನಾವು ಮಾಡುತ್ತಿದ್ದೇವೆ, ಅದನ್ನು ಇನ್ನಷ್ಟು ವೇಗದಲ್ಲಿ ಮಾಡುವುದಕ್ಕೂ ನಾವು ಬದ್ಧರಿದ್ದೇವೆ. ಆ ಬದ್ಧತೆಯಿಂದ ನಾವು ಹಿಂದೆ ಸರಿಯುವುದಿಲ್ಲ. ಆದರೆ ಮಾನ್ಯ ಸದಸ್ಯರೆಲ್ಲರೂ ಆಸಕ್ತಿ ತೆಗೆದುಕೊಂಡು ಸಮಯಕ್ಕೆ ಸರಿಯಾಗಿ ಹಣವನ್ನು ಖರ್ಚು ಮಾಡುವಂತಹ ಕೆಲಸ ಮಾಡಿದರೆ ಈ ಸಮಸ್ಯೆ ತಾನೇ ತಾನಾಗಿ ಪರಿಹಾರವಾಗುತ್ತದೆ. ಖರ್ಚು ಆದ ಹಾಗೆ ಹಣ ಕೊಡುವುದಕ್ಕೆ ನಾವು ಸನ್ನದ್ದರಾಗಿದ್ದೇವೆ, ಬದ್ಧವಾಗಿದ್ದೇವೆ, ನಮ್ಮ ಭರವಸೆಯಿಂದ ಹಿಂದೆ ಸರಿಯುವಂತಹ ಮಾತಿಲ್ಲ. ಆದರೆ ಹಣ ಬಿಡುಗಡೆಯಾಗಿ ಬ್ಯಾಂಕ್ ಅಕೌಂಟ್‌ನಲ್ಲಿ ಉಳಿದುಕೊಳ್ಳುವಂಥದ್ದಾಗಬಾರದು. ಹಾಗಾಗಿ ಸಮಸ್ಯೆ ಇರುವುದು ನಿಜ. ಮಾನ್ಯ ಸದಸ್ಯರುಗಳು ಏನು ಹೇಳಿದ್ದಾರೆ ಅದನ್ನು ನಾವೆಲ್ಲರೂ ಒಪ್ಪುತ್ತೇವೆ. ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಈ ವಿಚಾರದಲ್ಲಿ ಬಹಳ ಬದ್ಧತೆಯನ್ನು ಪ್ರದರ್ಶನ ಮಾಡಿ ಅವರು one time exemption ಕೊಟ್ಟಿರುವುದರಿಂದ ನಾವು ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದೇವೆ. ಪ್ರತಿಯೊಂದು ಸಭೆಯಲ್ಲೂ ಅವರು ಹಣ ಖರ್ಚಾಗಲೇಬೇಕೆಂದು ಬಹಳ ಸೂಚನೆಯನ್ನು ಕೊಡುತ್ತಿದ್ದರು. ಇವತ್ತಿನ ಮುಖ್ಯಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿಯವರು ಅದೇ ಬದ್ಧತೆಯನ್ನು ಹೊಂದಿದ್ದಾರೆ. ಅವರು ಸೂಚನೆ ಕೊಟ್ಟಿದ್ದಾರೆ. ಇದನ್ನು ಸರಿ ಮಾಡಿಕೊಳ್ಳುತ್ತೇವೆ. ಹೆಚ್ಚು ಅನುದಾನವನ್ನು ಖರ್ಚು ಮಾಡಿ ಕೆಲಸವನ್ನು ಕೂಡ ಮಾಡುತ್ತೇವೆಂದು ಮಾನ್ಯ ಸದಸ್ಯರುಗಳಿಗೆ ಭರವಸೆ ಕೊಡುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಆಡಳಿತ ಪಕ್ಷದ ಸದಸ್ಯರಾಗಿರುವಂತಹ ಮಾನ್ಯ ಕೊಂಡಯ್ಯನವರಿಗೆ ಮತ್ತು ಮಾನ್ಯ ಶರಣಪ್ಪ ಮಟ್ಟೂರುರವರಿಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ಅವರು ಆಡಳಿತ ಪಕ್ಷದ ಸದಸ್ಯರಾಗಿದ್ದರೂ ಕೂಡ ತಾರತಮ್ಯ ಮಾಡದೆ ನಮ್ಮ ಪ್ರದೇಶ ಅಭಿವೃದ್ಧಿಯಾಗದಿರುವಂತಹ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ.

ಮಾನ್ಯ ಸಭಾಪತಿಯವರೆ, ನಮ್ಮ ಹೈದ್ರಾಬಾದ್–ಕರ್ನಾಟಕ ಭಾಗ ಶೋಷಣೆಗೆ ಒಳಗಾಗಿರುವುದು ಇದು ಮೊದಲನೆ ಬಾರಿ ಅಲ್ಲ. ಒಂದು ರೀತಿ ಯಾವ ವಾತಾವರಣವಾಗಿದೆ ಎಂದರೆ ಕರ್ನಾಟಕ ರಾಜ್ಯದಲ್ಲಿ ಉತ್ತರ ಕರ್ನಾಟಕವೆಂದರೆ 'B' category citizens. ಅದರಲ್ಲಿ ಹೈದ್ರಾಬಾದ್ ಕರ್ನಾಟಕವೆಂದರೆ 'C' category citizens. ಇವರು ಹುಟ್ಟಿರುವುದೇ ಕೇಳುವುದಕ್ಕಾಗಿ ಎನ್ನುವ ಪರಿಸ್ಥಿತಿ ಬಂದಿದೆ. ನಮ್ಮ ದೇಶಕ್ಕೆ 1947ರ ಆಗಸ್ಟ್ 15ನೇ ತಾರೀಖಿನಂದು ಸ್ವಾತಂತ್ರ್ಯ ಸಿಕ್ಕಿತು. ಆದರೆ ಪಾಪಿಗಳಾದ ನಾವು ಒಂದು ವರ್ಷ ಒಂದು ತಿಂಗಳು ಎರಡು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿವಸಗಳ ನಂತರ 1948 ಸೆಪ್ಟೆಂಬರ್ 17 ರಂದು ಸ್ವಾತಂತ್ರ್ಯ ಪಡೆದಿದ್ದೇವೆ. ಆ ತಾರತಮ್ಯ ಇವತ್ತಿಗೂ ಹಾಗೆಯೇ ಉಳಿದುಕೊಂಡು ಬಂದಿದೆ. ಮಾನ್ಯ ಮಂತ್ರಿಗಳು ಉತ್ತರವನ್ನು ಸವಿಸ್ತಾರವಾಗಿ ಕೊಟ್ಟಿದ್ದಾರೆ. ಆ ಉತ್ತರದಲ್ಲಿ ಪ್ರಾಮಾಣಿಕತೆ ಕೂಡ ಇದೆ. ಆದರೆ ಅವರು essay writing ನಲ್ಲಿ ಉತ್ತರ ಕೊಟ್ಟಿಲ್ಲ, précis writing ನಲ್ಲಿ ಉತ್ತರ ಕೊಟ್ಟಿದ್ದಾರೆ. ಅವರು ಸಣ್ಣದಾಗಿ ಸೊಗಸಾಗಿ ಉತ್ತರ ಕೊಟ್ಟಿದ್ದಾರೆ. ಅವರು ವಿವರಕ್ಕೆ ಹೋಗಿಲ್ಲ. ಪ್ರತಿ ವರ್ಷ ಅನುದಾನ ಬಿಡುಗಡೆಯಾಗಿರುವುದನ್ನು ಉತ್ತರದಲ್ಲಿ ತೋರಿಸಿದ್ದಾರೆ. ಆದರೆ, ಅವರು ಒಪ್ಪಿಕೊಂಡಿಲ್ಲ. ನಾವು ಎಷ್ಟು ಅನುದಾನವನ್ನು ಘೋಷಣೆ ಮಾಡಿದ್ದೆವು ಅಷ್ಟು ಅನುದಾನವನ್ನು ದೇವರಾಣೆಗೂ ಒಂದು ವರ್ಷವೂ ಕೊಟ್ಟಿಲ್ಲ ಎನ್ನುವ ಮಾತನ್ನು ಉತ್ತರದಲ್ಲಿ ಉಲ್ಲೇಖ ಮಾಡಿಲ್ಲ. ಹಣ ಬಿಡುಗಡೆ ಮಾಡಿರುವುದು ಸಂತೋಷ. On an average, ಇಲ್ಲಿಯವರೆಗೂ ಶೇಕಡ 25–30 ರಷ್ಟು ಹಣ ಬಿಡುಗಡೆ ಮಾಡಿರಬಹುದು ಎಂದು ನನಗನಿಸುತ್ತಿದೆ. ಅದರಲ್ಲೂ ಖರ್ಚಾಗದೆ ಪ್ರತಿ ವರ್ಷ ಪ್ರಾಮಾಣಿಕವಾಗಿ ಉಳಿಸಿರುವಂತಹ ಕೆಲಸ ಮಾಡಿದ್ದಾರೆ. ಬಿಡುಗಡೆಯಾಗಿರುವ ಹಣದಲ್ಲೂ ಖರ್ಚಾಗಿಲ್ಲ. ಆ ಪ್ರಾಮಾಣಿಕ ಪ್ರಯತ್ನವನ್ನು ಆಗ ಇದ್ದಂಥವರು ಮಾಡಿಕೊಂಡಿದ್ದಾರೆ. ನಾನು ಯಾವ ವ್ಯಕ್ತಿಯ ಬಗ್ಗೆ ಅಥವಾ ಯಾವ ಪಕ್ಷದ ಬಗ್ಗೆಯೂ ಹೇಳುತ್ತಿಲ್ಲ. ಆದರೆ ಇದರ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳಬೇಕು? ಹಣ ಬಿಡುಗಡೆಯಾಗದಿರುವುದಕ್ಕೆ ಯಾರು ಜವಾಬ್ದಾರಿ? ಬಿಡುಗಡೆಯಾಗಿರುವ ಹಣ ಖರ್ಚಾಗದಿರುವುದಕ್ಕೆ ಯಾರು ಜವಾಬ್ದಾರಿ? ಖರ್ಚಾಗಿಲ್ಲ ಎಂದು ಹೇಳಿದ ತಕ್ಷಣ ಪ್ರಾಮಾಣಿಕ ಉತ್ತರ ಕೊಟ್ಟಿದ್ದೇವೆಂದು ಆಗುವುದಿಲ್ಲ. ಆ ಖರ್ಚಾಗದಿರುವ ಹಣದ ಬಗ್ಗೆ ಜವಾಬ್ದಾರಿ ತೆಗೆದುಕೊಳ್ಳಬೇಕಲ್ಲವೇ? ಇದು ಅಭಿವೃದ್ಧಿ ದಿಕ್ಕಿನಲ್ಲಿ ಅಂಕಿ–ಸಂಖ್ಯೆಯಾದರೆ, ಕಲಬುರಗಿಯಲ್ಲಿ ನಾವು ವಿಶೇಷ ಸಚಿವ ಸಂಪುಟ ಸಭೆಯನ್ನು ಮಾಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಮಾನ್ಯ ಸಚಿವರಿಗೆ ಧನ್ಯವಾದಗಳು. ಈ ಸರ್ಕಾರ ಹೈದ್ರಾಬಾದ್–ಕರ್ನಾಟಕ ಭಾಗವನ್ನು ಅಭಿವೃದ್ಧಿ ಮಾಡುವ ದಿಕ್ಕಿನಲ್ಲಿ ಪ್ರಯತ್ನ ಮಾಡಿರುವುದನ್ನು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅಭಿವೃದ್ಧಿ ಆಗುತ್ತಿದೆಯೇ ಇಲ್ಲ, 2014ನೇ ಆಗಸ್ಟ್‌ನಲ್ಲಿ ಸಚಿವ ಸಂಪುಟ ಸಭೆಯನ್ನು ಕಲಬುರಗಿಯಲ್ಲಿ ನಡೆಸಿದ್ದಾರೆಂದು ನನಗನಿಸುತ್ತಿದೆ. ಅವತ್ತಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ದರಾಮಯ್ಯನವರು 40,000 ಹುದ್ದೆಗಳನ್ನು 14ನೇ ಡಿಸೆಂಬರ್ ಒಳಗೆ ಭರ್ತಿ ಮಾಡುತ್ತೇವೆಂದು ಹೇಳಿದ್ದರು. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಸಚಿವ ಸಂಪುಟ ಸಭೆಯಲ್ಲಿ ನೇರವಾಗಿ ಉದ್ಯೋಗವನ್ನು ಸೃಷ್ಟಿ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟರು. ಅದರ ಬಗ್ಗೆಯೂ ನಾನು ಅಪಪ್ರಚಾರದ ಮಾತನಾಡುವುದಿಲ್ಲ. ಅವರು ಅಭಿನಂದನೆಗೆ ಅರ್ಹರು. ಆದರೆ ಯಶಸ್ವಿಯಾಗಿದ್ದು ಎಲ್ಲಿ? ಎಷ್ಟು ಜನರಿಗೆ ಉದ್ಯೋಗವನ್ನು ಕೊಟ್ಟಿದ್ದಾರೆ? ಒಂದು ಸಚಿವ ಸಂಪುಟದ ಸಭೆ ಮಾಡಿದ ತಕ್ಷಣ ಜವಾಬ್ದಾರಿಯಿಂದ ಮುಕ್ತರಾಗಿದ್ದಾರೆಯೇ? ಆ ಭಾಗ ಅಭಿವೃದ್ಧಿ ಆಗಿದೆಯೇ? ಎಲ್ಲೋ ಒಂದು ಕಡೆ ಆ ಭಾಗವನ್ನು ಅಭಿವೃದ್ಧಿ ಮಾಡಬೇಕೆಂದು ಇದ್ದರೂ ಕೂಡ ಅಭಿವೃದ್ಧಿ ಮಾಡುವ ದಿಕ್ಕಿನಲ್ಲಿ ಸರಿಯಾದ ಹೆಜ್ಜೆಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿಲ್ಲ ಎಂದು ಹೇಳಬಯಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೆ, ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿನಲ್ಲಿ ಹೈದ್ರಾಬಾದ್–ಕರ್ನಾಟಕ ಭಾಗದ ಜನರಿಗೆ ಕಲಂ 371(ಜೆ) ಅಡಿಯಲ್ಲಿ ಬಿ, ಸಿ ಮತ್ತು ಡಿ ಗುಂಪಿನವರಿಗೆ ರಾಜ್ಯ ಮಟ್ಟದಲ್ಲಿ ಶೇಕಡ 8 ರಷ್ಟು ಮೀಸಲಾತಿಯನ್ನು ಕೊಡಬೇಕು. ಅದನ್ನು ಕೊಡದೇ ಇರಬಾರದೆಂದು ಅಘೋಷಿತವಾದ ಸಂಘವನ್ನು ರಚನೆ ಮಾಡಿಕೊಂಡಿದ್ದಾರೆ. ಅವರಿಗೆ ಈ ಭಾಗದಲ್ಲಿ ಶೇಕಡ 8 ರಷ್ಟು ಉದ್ಯೋಗಾವಕಾಶದಲ್ಲಿ ಮೀಸಲಾತಿ ಸಿಗಬೇಕು, ಅದು ಸಿಗದಿರುವ ಹಾಗೆ ಕೋರ್ಟ್‌ಗೆ ಹೋಗಿ ಸ್ಟೇ ತಂದಿದ್ದಾರೆ. ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದು ಎರಡು ವರ್ಷಗಳಾಯಿತು. ಇವತ್ತು ಸರ್ಕಾರ ತಡೆಯಾಜ್ಞೆಯನ್ನು ತೆರವುಗೊಳಿಸುವುದಕ್ಕೆ ಯಾವ ಪ್ರಯತ್ನವನ್ನು ಮಾಡಿದೆ ಎಂಬುದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಒಂದು ತಡೆಯಾಜ್ಞೆಯನ್ನು ತೆರವುಗೊಳಿಸುವುದಕ್ಕೆ ಎರಡು ವರ್ಷಗಳು ಬೇಕೇ? ಇವತ್ತು ಸಾವಿರಾರು ಮಕ್ಕಳಿಗೆ ಮೆಡಿಕಲ್ ಕಾಲೇಜಿನಲ್ಲಿ ಅವಕಾಶ ಸಿಗುತ್ತಿಲ್ಲ.

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೆ, ಅದಕ್ಕೆ ಪೂರಕವಾಗಿ ಹೇಳುತ್ತಿದ್ದೇನೆ. ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದು. ಕೋರ್ಟ್‌ನಲ್ಲಿ ತಡೆಯಾಜ್ಞೆ ಇಲ್ಲ. ಕೆಎಟಿ ದಿನಾಂಕ:06.11.2013ರ ಆದೇಶವನ್ನು ಎತ್ತಿಹಿಡಿದಿದೆ. ಅದನ್ನು ಹೈಕೋರ್ಟ್‌ನಲ್ಲಿ ಛಾಲೆಂಜ್ ಮಾಡಿದ್ದಾರೆ ಅಷ್ಟೆ. ಯಾವುದೇ ತಡೆಯಾಜ್ಞೆ ಇರುವುದಿಲ್ಲ.

(343)11–12–2018(1–20)ಬಿಕೆಪಿ–ಎಕೆ

**ಶ್ರೀ ರಘುನಾಥ್ ರಾವ್ ಮಲ್ಕಾಪುರೆ(ವಿಧಾನಸಭಾ ಕ್ಷೇತ್ರ) :–** ಮಾನ್ಯ ಸಭಾಪತಿಯವರೇ, ಮಾನ್ಯ ಶರಣಪ್ಪ ಮಟ್ಟೂರರವರು ಯಾವುದೇ ತಡೆಯಾಜ್ಞೆ ಇಲ್ಲವೆಂದು ಹೇಳುತ್ತಿದ್ದಾರೆ. ಆದರೆ ಇವತ್ತಿಗೂ ಕೂಡ ತಡೆಯಾಜ್ಞೆ ಇದೆ. ಇದನ್ನು ತೆರವುಗೊಳಿಸುವುದು ಸರ್ಕಾರದ ಒಂದು ಜವಾಬ್ದಾರಿಯಾಗಿದೆ. 2014 ರಲ್ಲಿ 40 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ, ಆ ಕೆಲಸ ಆಗಿಲ್ಲ. ಈ ವಿಚಾರದಲ್ಲಿ ಮಾನ್ಯ ಸಚಿವರು ಅಂದಾಜು 25 ಸಾವಿರ ಹುದ್ದೆಗಳು ಸೃಷ್ಟಿಯಾಗಿವೆ ಎಂದು ಹೇಳಿದರು. ನನ್ನ ಅಂದಾಜಿನ ಪ್ರಕಾರ ಆಗಿರುವುದು 12 ಸಾವಿರ ಹುದ್ದೆಗಳು. ನಿಮಗೆ ಒಂದು ಅಂದಾಜು ಇದ್ದರೆ ನನಗೊಂದು ಅಂದಾಜು ಇದೆ.

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೇ, ಇದೇ ಸದನದಲ್ಲಿ ನಮ್ಮ ಹಿಂದಿನ ಸರ್ಕಾರದ ಅವಧಿಯಲ್ಲಿ ನಾನೇ ಈ ಬಗ್ಗೆ ಉತ್ತರ ಕೊಟ್ಟಿದ್ದೆ. ಅಂದಿನ ದಿವಸ 19 ಸಾವಿರ ಹುದ್ದೆಗಳ ನೇಮಕಾತಿ ಮುಗಿದಿತ್ತು. ಸುಮಾರು 10 ಸಾವಿರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿತ್ತು, ನಾನು ಈ ಬಗ್ಗೆ ಮಾಹಿತಿಯನ್ನು ಸಂಗ್ರಹ ಮಾಡುತ್ತಿದ್ದೇನೆ, 19 ಸಾವಿರ ಹುದ್ದೆಗಳಾಗಿವೆ ಎಂದು ಹೇಳಿ ನಾನೇ ಹಿಂದೆ ಉತ್ತರವನ್ನು ಕೊಟ್ಟಿದ್ದೇನೆ. ಜೊತೆಗೆ ಈ ವಿಚಾರದಲ್ಲಿ ತಡೆಯಾಜ್ಞೆ ಇಲ್ಲದ ಹಾಗೆ ನಾವು ನೋಡಿಕೊಂಡಿದ್ದೇವೆ. ಇದರ ಬಗ್ಗೆ ನಡವಳಿಕೆಯಲ್ಲಿ ನನ್ನ ಉತ್ತರ ಇದ್ದು, ತೆಗೆಸಿ ನೋಡಿ. ಇದರ ಬಗ್ಗೆ ನಾನು ತಪ್ಪು ಮಾಹಿತಿಯ ಉತ್ತರವನ್ನು ಕೊಟ್ಟಿದ್ದರೆ . . .

(ಗೊಂದಲ)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಘುನಾಥ್ ರಾವ್ ಮಲ್ಕಾಪುರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದರಲ್ಲಿ ಸತ್ಯ ಇದೆ. ಆದರೆ, ಅದರಲ್ಲಿ ಬಹಳಷ್ಟು ಹುದ್ದೆಗಳು ಪ್ರಕ್ರಿಯೆಯಲ್ಲಿವೆ. ಹುದ್ದೆಗಳನ್ನು ತುಂಬಿಲ್ಲ. ಸಂಪೂರ್ಣವಾಗಿ 12 ಸಾವಿರ ಹುದ್ದೆಗಳನ್ನು ತುಂಬಿದ್ದಾರೆ. ಉಳಿದ ಹುದ್ದೆಗಳು ಪ್ರಕ್ರಿಯೆಯಲ್ಲಿದ್ದವು.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಮಧ್ಯೆ ಪ್ರವೇಶ ಮಾತನಾಡಲಿಕ್ಕೆ ನನಗೂ ಇಷ್ಟವಿಲ್ಲ. ವಿರೋಧ ಪಕ್ಷದ ಸದಸ್ಯರು ಮಾತನಾಡಲಿಕ್ಕೆ ಅವಕಾಶವನ್ನು ಕೇಳಿದಾಗ ಅವರಿಗೆ ಅವಕಾಶ ಕೊಡಬೇಕೆನ್ನುವ ಭಾವನೆ ನನ್ನದೂ ಸಹ ಇದೆ. ಆದರೆ, ಪ್ರತಿಯೊಂದು ಪದವನ್ನು ಈ ರೀತಿಯಲ್ಲಿ ತಿರುಗಿಸಿದರೆ ವಿಚಾರವನ್ನು ಬಿಟ್ಟು ಬೇರೆ ಎಲ್ಲಿಯೋ ಹೋಗುತ್ತದೆ.

(ಗೊಂದಲ)

**ಶ್ರೀ ರಘುನಾಥ ರಾವ್ ಮಲ್ಕಾಪುರೆ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನು ಮಾನ್ಯ ಮಂತ್ರಿಗಳಿಗೆ, ಮಾನ್ಯ ಸದಸ್ಯರಿಗೆ ಹಾಗೂ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಿದ್ದೇನೆ,

**ಸಭಾಪತಿಯವರು:-** ಮಾನ್ಯ ಸಚಿವರು ಹೇಳಿರುವುದರಲ್ಲಿ ಸತ್ಯಾಂಶ ಇದೆ. ನೀವು ಬೇಕಾದರೆ ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಿ. ಸರ್ಕಾರದವರು ನಂತರ ಅವರು ಉತ್ತರವನ್ನು ಹೇಳುತ್ತಾರೆ.

**ಶ್ರೀ ರಘುನಾಥ ರಾವ್ ಮಲ್ಕಾಪುರೆ:-** ಮಾನ್ಯ ಸಭಾಪತಿಯವರೇ, ಆಗಬಹುದು. ನಾನು ಈ ಸದನದ ಸದಸ್ಯರಗಳ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳಲಿಕ್ಕೆ ಬಯಸುವುದೇನೆಂದರೆ, ಹೈದ್ರಾಬಾದ್-ಕರ್ನಾಟಕ ಭಾಗದಲ್ಲಿ ಇಲ್ಲಿಯವರೆಗೆ ಅಭಿವೃದ್ಧಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಏನಾಗಿದೆ ಎನ್ನುವುದರ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಿ. ನಾನು ಅದನ್ನು ಸ್ವಾಗತ ಮಾಡುತ್ತೇನೆ.

**ಸಭಾಪತಿಯವರು:-** ಇದಕ್ಕೆ ಸಂಬಂಧಪಟ್ಟಂತೆ ಸಚಿವರು ಉತ್ತರವನ್ನು ಹೇಳುತ್ತಾರೆ.

**ಶ್ರೀ ರಘುನಾಥ ರಾವ್ ಮಲ್ಕಾಪುರೆ:-**ಮಾನ್ಯ ಸಭಾಪತಿಯವರೇ, ದೂದ್‌ಕಾ ದೂದ್, ಪಾನಿಕಾ ಪಾನಿ ರೀತಿಯಲ್ಲಿ ಬಂದು ಬಿಡುತ್ತದೆ. ಒಂದು ಶ್ವೇತಪತ್ರವನ್ನು ಸರ್ಕಾರ ಹೊರಡಿಸಲಿ. ಕೊನೆಯದಾಗಿ ನಾನು ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ದಯವಿಟ್ಟು ನನಗೆ ಅವಕಾಶ ಕೊಡಿ. ನಾನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಕೊನೆಯದಾಗಿ ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಪ್ರತಿ ವರ್ಷ ಏನು ಅನುದಾನವನ್ನು ಘೋಷಣೆ ಮಾಡಿದ್ದೀರಿ, ಅದನ್ನು ಯಾವ ವರ್ಷವೂ ಸಂಪೂರ್ಣವಾಗಿ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. 2013-14 ರಿಂದ 2017-18 ರವರೆಗೆ ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು 1500 ಕೋಟಿ ರೂಪಾಯಿಗಳು, 1000 ಕೋಟಿ ರೂಪಾಯಿಗಳೆಂದು ಹೇಳಿಕೊಂಡು ಬರಲಾಗಿದೆ. ಈ ರೀತಿ ಘೋಷಣೆ ಮಾಡಿದಾಗ ನಮಗೂ ಮತ್ತು ನಮ್ಮ ಭಾಗದ ಜನರು ಬಹಳ ಸಂತೋಷವಾಗಿದ್ದರು. ಶ್ರೀಮಾನ್ ಮಲ್ಲಿಕಾರ್ಜುನ್ ಖರ್ಗೆಯವರಂತೂ ಬಹಳ ಸಂತೋಷವಾಗಿದ್ದರು. ಆದರೆ, ಹಣ ಬಿಡುಗಡೆ ಮಾಡಿದ್ದು ಮಾತ್ರ 300 ರಿಂದ 500 ಕೋಟಿ ರೂಪಾಯಿಗಳು ಮಾತ್ರ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೆ, ಆಗಿದ್ದು, ಆಯಿತು. Past is past. ಹೋಗಲಿ. ಈ ವರ್ಷದ ಬಜೆಟ್‌ನಲ್ಲಿ 1500 ಕೋಟಿ ರೂಪಾಯಿಗಳು ಎಂದು ಏನು ಹೇಳಿದ್ದಾರೆ, ಅದರ ಪೈಕಿ ಈಗ ಬಿಡುಗಡೆಯಾಗಿರುವುದು 550 ಕೋಟಿ ರೂಪಾಯಿಗಳು ಮಾತ್ರ. ಈ ವರ್ಷವಾದರೂ ಸಹ 1500 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ. ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:–** ಈಗ ಶ್ರೀಯುತ ಬಸವರಾಜ ಪಾಟೀಲ್ ಇಟಗಿಯವರು ಮಾತನಾಡಬೇಕು. ಆದರೆ, ಈ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕೇ ಹೊರತು ಕಥೆ ಹೇಳುವುದು ಬೇಡ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶ್ರೀಯುತ ರಘುನಾಥ್‌ರಾವ್ ಮಲ್ಕಾಪುರೆಯವರು ಹೇಳಿದ ರೀತಿಯಲ್ಲಿ ನಮಗೆ ಕಥೆ ಹೇಳಲಿಕ್ಕೆ ಬರುವುದಿಲ್ಲ. ಒಂದೆರಡು ಮಾತುಗಳನ್ನು ಮಾತ್ರ ಹೇಳಲಿಕ್ಕೆ ಬಯಸುತ್ತೇನೆ. ಈಗ ಮಾನ್ಯ ಸಚಿವರು ಏತಕ್ಕೆ ದುಡ್ಡು ಖರ್ಚಾಗುತ್ತಿಲ್ಲವೆನ್ನುವುದಕ್ಕೆ ಕೆಲವು ಅಂಶಗಳನ್ನು ಗಮನಕ್ಕೆ ತಂದರು. ಈ ವಿಚಾರದಲ್ಲಿ ನನ್ನ ಅನಿಸಿಕೆಗಳನ್ನು ತಮ್ಮ ಮೂಲಕ ಹೇಳಲಿಕ್ಕೆ ಬಯಸುತ್ತೇನೆ.

ಮೊದಲನೆಯದಾಗಿ, ಹೇಳಬೇಕೆಂದರೆ C.D.I (Comprehensive Development Index) Matrix ಎಂದು ಹೇಳಿ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಹಿಂದುಳಿದಿದೆ ಎನ್ನುವ ಬಗ್ಗೆ ತಿಳಿದು ಬರುತ್ತದೆ. Comprehensive Development Index ಎಂದು ಹೇಳಿ ಒಂದು framework ಮಾಡಿ, ಯಾವ ಭಾಗ ಹಿಂದುಳಿದಿದೆ, ಯಾವ ಭಾಗ ಹೆಚ್ಚು ಹಿಂದುಳಿದಿದೆ ಎನ್ನುವುದರ ಪ್ರಕಾರ ದುಡ್ಡು ಬಿಡುಗಡೆಯಾಗುವಂತಹ ಕೆಲಸ ಆಗುತ್ತದೆ. ಇದನ್ನು ಬಹಳ ವರ್ಷಗಳ ಹಿಂದೆ ಅಂದರೆ ಸುಮಾರು 10 ವರ್ಷಗಳ ಹಿಂದೆ ಈ C.D.I ಮಾಡಿದ್ದಾರೆ. ನಾನು ಈ ವಿಚಾರದಲ್ಲಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ ಈ C.D.I ಅನ್ನು ಮತ್ತೊಮ್ಮೆ ಹೊಸದಾಗಿ ಮಾಡಬೇಕು. ಏಕೆಂದರೆ, ಕಳೆದ 10 ವರ್ಷಗಳಲ್ಲಿ ಎಷ್ಟು ನೀರಾವರಿ ಪ್ರಾಜೆಕ್ಟ್ಸ್ ಬಂದಿವೆ, ಮತ್ತೆ, ಹೆಚ್‌ಕೆಆರ್‌ಡಿಬಿ ಇಂದ ಎಷ್ಟು ಕೆಲಸಗಳಾಗಿವೆ, ಯಾವ್ಯಾವ ಕೆಲಸಗಳು ಮುಂದುವರಿದಿವೆ ಅವುಗಳಿಗೆ ಹಣವನ್ನು ಕಡಿಮೆ ಮಾಡಿ, ಯಾವ್ಯಾವ ಕೆಲಸಗಳು ಹಿಂದುಳಿದಿವೆ, ಅವುಗಳಿಗೆ ಹೆಚ್ಚು ಹಣ ಕೊಡತಕ್ಕಂತಹದ್ದು ಒಂದು ವಿನಂತಿ.

ಮಾನ್ಯ ಸಭಾಪತಿಯವರೇ, ಇನ್ನೊಂದು ಪ್ರಮುಖ ಸಮಸ್ಯೆ ಏನೆಂದರೆ ಈ ಸಂಬಂಧದ ನಮ್ಮ ಇಂಜಿನೀಯರಿಂಗ್ ವಿಂಗ್ ವಿಷಯದಲ್ಲಿ ಬಹಳ ಸಮಸ್ಯೆ ಇದೆ. 2016–17ನೇ ಸಾಲಿನಲ್ಲಿ ಎಸ್ಟಿಮೇಟ್ ಆಗಿ ಹಣ ಮಂಜೂರಾದರೂ ಸಹ ಇವತ್ತಿನವರೆವಿಗೂ ಸಹ ಎಸ್ಟಿಮೇಟ್ ಆಗಲಾರದಂತಹ ಪರಿಸ್ಥಿತಿ ನಮ್ಮಲ್ಲಿ ಇದೆ. ಇದಕ್ಕೆ ಕಾರಣ ಏನೆಂದರೆ, ಪ್ರತ್ಯೇಕವಾದ ಇಂಜಿನೀಯರಿಂಗ್ ವಿಂಗ್ ಇರುವುದಿಲ್ಲ. ಇವತ್ತು 1000, 1500, ಮತ್ತು 2000 ಕೋಟಿ ರೂಪಾಯಿಗಳನ್ನು ಖರ್ಚು ಮಾಡತತಕ್ಕಂತಹ ಸಂದರ್ಭದಲ್ಲಿ ಪ್ರತ್ಯೇಕವಾದಂತಹ ಒಂದು ಇಂಜಿನೀಯರಿಂಗ್

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ವಿಂಗ್ ಅನ್ನು ರಾಜ್ಯ ಸರ್ಕಾರ ನೇಮಿಸುವಂತಹ ಕೆಲಸ ಮಾಡಬೇಕು. ಅಲ್ಲಿಗೆ ಒಬ್ಬರು ಮುಖ್ಯ ಇಂಜಿನೀಯರ್, ಒಬ್ಬ ಸೂಪರಿಂಟೆಂಡೆಂಟ್ ಇಂಜಿನೀಯರ್ ಮತ್ತೆ 3–4 ಮಂದಿ ಕಾರ್ಯನಿರ್ವಾಹಕ ಇಂಜಿನೀಯರ್‌ಗಳನ್ನು ಪ್ರತ್ಯೇಕವಾಗಿ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆಂದು ನೇಮಕ ಮಾಡಬೇಕು.

**ಸಭಾಪತಿಯವರು:–** ನೀವು ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ನಾನು ಒಂದೆರಡು ನಿಮಿಷದಲ್ಲಿ ಮುಗಿಸುತ್ತೇನೆ. ನೀವು ಬೇರೆಯವರಿಗೆ ಮಾತನಾಡಲಿಕ್ಕೆ ಸಾಕಷ್ಟು ಸಮಯವನ್ನು ಕೊಡುತ್ತೀರಿ. ಅಲ್ಲಿಗೆ ಒಂದು ಇಂಜಿನೀಯರಿಂಗ್ ವಿಂಗ್ ಮಾಡುವಂತಹದ್ದು ಬಹಳ ಅವಶ್ಯವಿದೆ. ಈಗ 16(ಸಿ) ಪ್ರಕಾರ ಹೇಳಿದರು. ಅದು 20% ಗಿಂತ ಜಾಸ್ತಿ. ಆದ್ದರಿಂದ, 16(ಸಿ) ಅನ್ನು ತೆಗೆಯಬೇಕು. ಎಷ್ಟು ಹಣ ಬರುತ್ತದೆ, ಆ ಹಣವೆಲ್ಲವೂ ಸಹ ಹೆಚ್‌ಕೆಆರ್‌ಡಿಬಿನಲ್ಲಿಯೇ ಇರಬೇಕು. ಅದನ್ನು 10 ವರ್ಷಗಳಲ್ಲಿಯಾದರೂ ಖರ್ಚು ಮಾಡಲಿ, 20 ವರ್ಷಗಳಿಗಾದರೂ ಖರ್ಚು ಮಾಡಲಿ. ಅದು carry forward ಆಗಬೇಕು. ಇಲ್ಲಿ ಖಾಯಂ ಕಾರ್ಯದರ್ಶಿ ಇರುವುದಿಲ್ಲ. ಮಾನ್ಯ ಸಚಿವರು ಈ ವಿಚಾರದಲ್ಲಿ ಗಮನಹರಿಸಬೇಕು. ಹೆಚ್‌ಕೆಆರ್‌ಡಿಬಿಗೆ ಖಾಯಂ ಆಗಿ ಕಾರ್ಯದರ್ಶಿಯವರನ್ನು ಮಾಡುವರೆಗೆ ಇಲ್ಲಿ ಯಾವ ಕೆಲಸಗಳು ಸಹ ಆಗುವುದಿಲ್ಲ. ನೀವು ಪ್ರತಿ ವರ್ಷ ಏನು ಮಾಡುತ್ತೀರಿ ಎಂದರೆ ಆ ವಿಭಾಗೀಯ ಆಯುಕ್ತರಿಗೆ ಚಾರ್ಜ್ ಕೊಟ್ಟುಬಿಡುತ್ತೀರಿ. ಅವರಿಗೆ ಐದೈದು ಚಾರ್ಜ್‌ಗಳನ್ನು ಕೊಡುವುದರಿಂದ ಈ ನಿಟ್ಟಿನಲ್ಲಿ ಕೆಲಸಗಳು ವಿಳಂಬವಾಗುತ್ತವೆ. ಅಲ್ಲಿಗೆ ಖಾಯಂ ಆಗಿ ಕಾರ್ಯದರ್ಶಿಯವರನ್ನು ಮಾಡಿದಾಗ ಮಾತ್ರ ಇದು ಹೆಚ್ಚಿನ ರೀತಿಯಲ್ಲಿ ಉಪಯೋಗವಾಗುತ್ತದೆ ಮತ್ತು ಅಲ್ಲಿನ ಹಣವನ್ನು ಖರ್ಚು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು 100 ಕೋಟಿ ರೂಪಾಯಿಗಳು ಬಿಡುಗಡೆ ಆಗಿದೆ ಎಂದರೆ ಅದಕ್ಕೆ ಕಟ್ಟುನಿಟ್ಟಾದ ಸೂಚನೆಗಳಿರಬೇಕು. ಅದಕ್ಕೆ 3 ತಿಂಗಳುಗಳಲ್ಲಿ ಎಸ್ಟಿಮೇಟ್ ಆಗಿ ಅದನ್ನು 6 ತಿಂಗಳುಗಳಲ್ಲಿ ಜಾರಿಗೆ ತರುವಂತಹ ಕೆಲಸ ಆಗಬೇಕು. ಅದಕ್ಕೆ ಇವತ್ತು 3 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ನಾವು ಏತಕ್ಕೆ ಖರ್ಚು ಮಾಡಿಲ್ಲವೆಂದರೆ ಅದಕ್ಕೆ ಕಾರಣಗಳಿವೆ. ಈ ಮೂಲ ಕಾರಣಗಳನ್ನು ಹುಡುಕಿ ತೆಗೆದು ಅಲ್ಲಿ ಹೆಚ್ಚು ಬಲಪಡಿಸಿದಾಗ ಇನ್ನೂ ಹೆಚ್ಚಿನ ರೀತಿಯಲ್ಲಿ ನಮ್ಮ ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ಅನುಕೂಲವಾಗುತ್ತದೆ ಎನ್ನುವುದಿದೆ. ಆದರೆ, ಇವತ್ತು ಎಲ್ಲರೂ ಕೂಡ ಈ 371(ಜೆ) ಬಂದಿರುವುದರಿಂದ ಸಾಕಷ್ಟು ಆ ಭಾಗದಲ್ಲಿ ಬರತಕ್ಕಂತಹ ಎಲ್ಲಾ ಜನಾಂಗಕ್ಕೂ ಹೆಚ್ಚಿನ ರೀತಿಯಲ್ಲಿ ಒಂದು ರೀತಿಯ ಸವಲತ್ತುಗಳು ಸಿಗುವಂತಹದ್ದಾಗಿದೆ. ಇದಕ್ಕೆ ತಾವೆಲ್ಲರೂ ಕೂಡ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ ಹಾಗೂ ಇನ್ನಿತರ ಮುಖಂಡರಿಗೆ ಅಭಿನಂದನೆಯನ್ನು ಸಲ್ಲಿಸಬೇಕು. ಏಕೆಂದರೆ, ಈ ವಿಚಾರವಾಗಿ ಸುಮಾರು 50–60 ವರ್ಷಗಳ ಕಾಲ ಎಲ್ಲಾ ಪಕ್ಷದ, ಎಲ್ಲಾ ಮುಖಂಡರು ಹೋರಾಟ ಮಾಡಿದ್ದಾರೆ. ಒಂದೇ ಪಕ್ಷದವರು ಹೋರಾಟ ಮಾಡಿದ್ದಾರೆಂದು ಹೇಳುವುದಿಲ್ಲ. ಆದರೆ, ಬಹಳಷ್ಟು ಹೋರಾಟ ಮಾಡಿದರೂ ಕೂಡ ಕಡೆಗೆ ಒಂದು ದಿಕ್ಕಿಗೆ, ಒಂದು ಹಂತಕ್ಕೆ ತರಲಿಕ್ಕೆ ಬಹಳಷ್ಟು ಶ್ರಮ ಪಟ್ಟು ತರಲಾಗಿದೆ. ಈ ನಿಟ್ಟಿನಲ್ಲಿ ಜಾರಿಗೆ ತರಲಿಕ್ಕೆ ಪ್ರಾರಂಭದಲ್ಲಿ ಏನೇನು ತೊಂದರೆ ಬರುತ್ತದೆ, ಅದೆಲ್ಲವನ್ನು ಸರ್ಕಾರದಿಂದ ಪರಿಹಾರ ಮಾಡುವಂತಹ ಕೆಲಸ ಆಗುತ್ತಿದೆ. ಅದರಲ್ಲೂ ಕೂಡ ನಾವು ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದ

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಎಂ.ಎಲ್.ಸಿ.ಗಳಿದ್ದೇವೆ, ನಾಮ ನಿರ್ದೇಶಿತ ಎಂ.ಎಲ್.ಸಿ.ಗಳಿದ್ದು, ನಮಗೂ ಕೂಡ ಈ ನಿಟ್ಟಿನಲ್ಲಿ ಪರಿಗಣನೆ ಮಾಡಬೇಕೆಂದು ನಾವು ವಿನಂತಿ ಮಾಡಿದ್ದೇವೆ. ಏಕೆಂದರೆ, ಅಲ್ಲಿ ಕೇವಲ ಎಂ.ಎಲ್.ಎ.ಗಳನ್ನು ಪರಿಗಣಿಸುತ್ತಾರೆ. ಎಂ.ಎಲ್.ಸಿ.ಗಳು ಸಂಬಂಧವಿಲ್ಲವೆಂದು ಹೇಳುತ್ತಾರೆ. ನಾವು ಗ್ರಾಮ ಪಂಚಾಯಿತಿಯಿಂದ ಚುನಾಯಿತರಾಗಿರುತ್ತೇವೆ. ಅಲ್ಲಿ ಗ್ರಾಮ ಪಂಚಾಯಿತಿಗೆ ಕಟ್ಟಡವಿರುವುದಿಲ್ಲ. ಅಲ್ಲಿ ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯವರಿಗೆ ಈ ನಿಟ್ಟಿನಲ್ಲಿ ಕೇಳಿದರೆ ನಿಮಗೂ ಇದಕ್ಕೂ ಏನು ಸಂಬಂಧವಿಲ್ಲ, ನೀವು ಎಂಎಲ್‌ಸಿ ಇದ್ದೀರಿ, ನೀವು ಆರಾಮ ಆಗಿ ಇದ್ದುಬಿಡಿ ಎಂದವರು ಹೇಳುತ್ತಾರೆ. ನಿಮಗೆ ಏತಕ್ಕೆ ಹಣ ಬೇಕೆಂದು ಹೇಳುತ್ತಾರೆ. ಆಗ ನಾವು ಏನು ಮಾಡಬೇಕೆಂದು ಗೊತ್ತಾಗುವುದಿಲ್ಲ. ಅಲ್ಲಿ ಹೋದರೆ ಅಲ್ಲಿನ ಜನರಿಂದ ಬೈಸಿಕೊಳ್ಳಬೇಕು, ಇಲ್ಲಿ ಬಂದರೆ ಇಲ್ಲಿಯೂ ಬೈಸಿಕೊಳ್ಳಬೇಕು. ಕೊಡಬೇಕಾದ ಹಣವನ್ನು ಕಾನೂನಾತ್ಮಕವಾಗಿ ಕೊಡಬೇಕಲ್ಲವೇ? ಇದೆಲ್ಲಾ ವಿಷಯಗಳನ್ನು ಪರಿಗಣಿಸುವಂತಹ ಕೆಲಸಗಳನ್ನು ಮಾನ್ಯ ಸಚಿವರು ಮಾಡಬೇಕು. ಈ ನಿಟ್ಟಿನಲ್ಲಿ ಏನೇನು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ, ಅದನ್ನು ಮಾನ್ಯ ಸಚಿವರು ಕೈಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತಾ, ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಂತ ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಮಾತನಾಡಿದ ಮೇಲೆ ಮಾನ್ಯ ಸಚಿವರು ಉತ್ತರ ಕೊಟ್ಟರೆ ಒಳ್ಳೆಯದು. 2018–19ನೇ ಸಾಲಿನಲ್ಲಿ Closing Balance 436 ಕೋಟಿ ರೂಪಾಯಿಗಳು ಇದೆ. ಇವತ್ತು ಬೋರ್ಡ್‌ನಿಂದ ಮನವಿಯನ್ನು ಮಾನ್ಯ ಸಚಿವರಿಗೆ ಕೊಡುತ್ತೇನೆ. ಕೆಲಸ ಆಗಿರುವುದಕ್ಕೆ ಸುಮಾರು ಹನ್ನೊಂದು ನೂರ ಇಪ್ಪತ್ತು ಲಕ್ಷ ರೂಪಾಯಿಗಳು ಬರಬೇಕೆಂದು ಕೇಳಿದ್ದಾರೆ. ತದನಂತರ ಮಂತ್ರಿಗಳು ಏನು ಹೇಳಿದರು ಎಂದರೆ ಈ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡಬೇಕೆಂದು ಹೇಳಿದರು. ಇವರು ಪತ್ರ ಬರೆದಾಗ ಹಣಕಾಸು ಇಲಾಖೆಯವರು clearance ಮಾಡುವುದಿಲ್ಲ. Action Plan ಮಾಡುವುದನ್ನು ನಿಲ್ಲಿಸಿಬಿಡುತ್ತಾರೆ. ಈ ವಿಚಾರದಲ್ಲಿ ನಾನು ಒಂದು ಉದಾಹರಣೆಯನ್ನು ಹೇಳಲಿಕ್ಕೆ ಬಯಸುತ್ತೇನೆ. ಮೊನ್ನೆಯ ದಿವಸ 2–3 ಪ್ರಸ್ತಾವನೆಗಳನ್ನು ಕಳುಹಿಸಿದಾಗ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಈ ಕುರಕುಪ್ಪೇ ಫಾರಂನದ್ದು ಒಂದು ಪತ್ರವನ್ನು ಕೊಟ್ಟಿದ್ದಾರೆ. ಹನ್ನೊಂದು ನೂರ ಇಪ್ಪತ್ತು ಲಕ್ಷ ರೂಪಾಯಿಗಳದ್ದು ಕೊಟ್ಟಿದ್ದಾರೆ. ಕೆಳಗೆ ಏನು ಕೊಟ್ಟಿದ್ದಾರೆಂದರೆ ಸದರಿ ವಿಷಯದ ಕುರಿತು ಪರಿಶೀಲಿಸಿದಾಗ 2017–18ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸದರಿ ಕಾಮಗಾರಿಗಳನ್ನು ಮಂಜೂರು ಮಾಡಲು ಹೆಚ್ಚುವರಿ ಅನುದಾನ ಲಭ್ಯವಿರುವುದಿಲ್ಲವೆಂದು ಹೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(344) 11-12-2018 1-40 ಎಸ್‌ವಿ–ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಸಿ.ಕೊಂಡಯ್ಯ (ಮುಂದು):–** ನಾವು ಕೊಟ್ಟಿರುವಂತಹ ಪ್ರಸ್ತಾವನೆಯನ್ನು ಸರ್ಕಾರ ಪರಿಗಣಿಸುವುದಿಲ್ಲ. ಖರ್ಚು ಮಾಡಿರುವ ದುಡ್ಡನ್ನು ಇನ್ನೂ ಕೊಟ್ಟಿರುವುದಿಲ್ಲ. ಉತ್ತರ ಕೊಡುವಾಗ ಹೈದರಾಬಾದ್ – ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಇನ್ನೂ ಬ್ಯಾಲೆನ್ಸ್ ಇದೆ ಎಂದರು. ಇದನ್ನು ಸರಿಪಡಿಸಲು ಮಾನ್ಯ

ಮುಖ್ಯಮಂತ್ರಿಯವರು ಸಭೆಯೊಂದನ್ನು ಕರೆದು ಆ ಭಾಗದ ಅಭಿವೃದ್ಧಿಯ ಬಗ್ಗೆ ಚರ್ಚೆ ಮಾಡಿ ಪರಿಹಾರವನ್ನು ಕಂಡುಕೊಳ್ಳಬೇಕೆಂಬ ಮಾತನ್ನು ಹೇಳಬಯಸುತ್ತೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವೂ ಸಹ ಹೈದರಾಬಾದ್ – ಕರ್ನಾಟಕದವರ ಜೊತೆ ಮಾನಸಿಕವಾಗಿ ಇರುವುದರಿಂದ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಸಚಿವ ಸಂಪುಟ ಉಪಸಮಿತಿ ಮುಂದೆ ಎಷ್ಟು ವಿಷಯಗಳು ಬಾಕಿ ಇವೆ? ಎಷ್ಟು ದಿನಗಳಿಂದಿವೆ? ಅವು ಏಕೆ ಬಾಕಿ ಉಳಿದಿವೆ ಎಂಬುದನ್ನು ಶೀಘ್ರಗತಿಯಲ್ಲಿ ತೀರ್ಮಾನ ಮಾಡಬೇಕು. ಏಕೆಂದರೆ Non-Hyderabad Karnataka issues ಅದರಲ್ಲಿ ಬಾಕಿ ಉಳಿದಿವೆ. ಎಲ್ಲಿಯವರೆವಿಗೆ ನಮಗೆ ಬೇಕಾದ ಪಾಲನ್ನು ಕೊಡುವುದಿಲ್ಲವೋ, ಅಲ್ಲಿಯವರೆವಿಗೆ ಆ ಭಾಗಕ್ಕೆ ಬೇಕಾದ ಪಾಲು ಸರಿಯಾಗಿ ಸಿಗುವುದಿಲ್ಲ. ಹೈದರಾಬಾದ್ – ಕರ್ನಾಟಕ ವಿಚಾರದಲ್ಲಿ 371 ಜೆ ಎಂಬುದು ಒಂದು ಮಂತ್ರದಂಡವಾಗುತ್ತದೆ ಎಂದು ಎಲ್ಲರೂ ಭಾವಿಸಿದ್ದರು. ಆದರೆ ಅದು ಕೈಗೆ ಬಂದ ತುತ್ತು ಬಾಯಿಗಿಲ್ಲ ಎಂಬಂತಾಗಿದೆ. ಇಬ್ಬರೂ ಆಡಳಿತಾರೂಢ ಶಾಸಕರಿದ್ದು, ಹೈದ್ರಾಬಾದ್ ಕರ್ನಾಟಕದ ವಿಷಯದಲ್ಲಿ ದನಿಯನ್ನು ಎತ್ತಿದುದಕ್ಕಾಗಿ ಅವರನ್ನು ನಾನು ಮೆಚ್ಚುತ್ತೇನೆ. ಮಾನ್ಯ ಮಂತ್ರಿಗಳು ಸಹ ಅವರಿಂದ ಪ್ರೇರಣೆಯನ್ನು ಪಡೆದುಕೊಂಡು ದನಿ ಎತ್ತಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ದನಿ ಎತ್ತುವುದಲ್ಲ, ಪರಿಹಾರವನ್ನು ಹುಡುಕಬೇಕಾಗುತ್ತದೆ. ಮಾನ್ಯ ಸದಸ್ಯರು ಒಂದೆರಡು ವಿಚಾರಗಳನ್ನು ಏನು ಗಮನಕ್ಕೆ ತಂದಿದ್ದಾರೆ, ಅದರ ಬಗ್ಗೆ ನಾನು ಹೆಚ್ಚಿನ ಬೆಳಕು ಚೆಲ್ಲುವುದಕ್ಕೆ ಬಯಸುತ್ತಿದ್ದೇನೆ. ಡಾ.ನಂಜುಂಡಪ್ಪ ವರದಿಯ ಪ್ರಕಾರ CDI (Comprehensive Development Index) ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಕುರಿತು ಹೈದರಾಬಾದ್ – ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಮುಂದೆ ಒಂದು ಪ್ರಸ್ತಾವನೆ ಕೂಡ ಇದೆ. ಏಕೆಂದರೆ ಡಾ.ನಂಜುಂಡಪ್ಪ ವರದಿಯು 15–20 ವರ್ಷಗಳಷ್ಟು ಹಳೆಯದಾದುದರಿಂದ ಅದಕ್ಕೆ ಒಂದು ಹೊಸ Socio-economic ಸರ್ವೆ ಮಾಡಿ, demographic-wise ವರದಿಯನ್ನು ಮಾಡಬೇಕೆಂದು ಕೂಡ ಮಂಡಳಿಯ ಮುಂದೆ ಶಿಫಾರಸ್ಸಿದೆ. ಮಾನ್ಯ ಅಧ್ಯಕ್ಷರು ಒಪ್ಪುವುದಾದರೆ, ಹೊಸ Comprehensive Development Index ಅನ್ನು ಆದಷ್ಟು ಬೇಗ ತಯಾರು ಮಾಡಿ city based index ಆಗಬಹುದು. ಸಾಕಷ್ಟು ಶಾಸಕರ ಆರೋಪವೆಂದರೆ ಇದರ ಅಡಿಯಲ್ಲಿ ನಮಗೇನೂ ಸಿಗುತ್ತಿಲ್ಲ. ಆದ್ದರಿಂದ ಡಾ:ನಂಜುಂಡಪ್ಪ ವರದಿಯನ್ನು ಮರುಪರಿಶೀಲನೆ ಮಾಡಿ ಹೊಸ CDI ಮಾಡಬೇಕೆಂಬ ಪ್ರಸ್ತಾವನೆ ಇದೆ. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯದರ್ಶಿಯವರ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಬೇಕೆಂಬುದರ ಬಗ್ಗೆಯೂ ಸಹ ಚರ್ಚೆ ಆಗಿದೆ. ಸರ್ಕಾರದ ಕಾರ್ಯದರ್ಶಿಯವರಿಗೆ ಇರುವ ಅಧಿಕಾರ ವ್ಯಾಪ್ತಿಯು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯದರ್ಶಿಯವರಿಗೆ ಇರುವುದಿಲ್ಲ. ಅಷ್ಟೇ ಅನುಭವ ಹಾಗೂ ಸಿ ಅಂಡ್ ಆರ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವ್ಯಾಪ್ತಿಯೂ ಸಹ ಅಷ್ಟೇ ಇದ್ದರೂ ಅವರಿಗೆ ಹೆಚ್ಚಿನ ಪವರ್ಸ್ ಇರುವುದಿಲ್ಲ. ಅದನ್ನೂ ಸಹ ಉನ್ನತೀಕರಣಗೊಳಿಸುತ್ತೇವೆ.

ಚುನಾವಣೆ ಇದ್ದ ಕಾರಣ SCP/TSP ನಲ್ಲಿ ಫಂಡ್ಸ್ ಸ್ವಲ್ಪ ತಡವಾಯಿತು. General funds ಬರಬೇಕಾಗಿದ್ದು, ಅದನ್ನೂ ಸಹ ಆದಷ್ಟು ಶೀಘ್ರವಾಗಿ ನಾವು ಬಿಡುಗಡೆ ಮಾಡುತ್ತೇವೆ. ಅದಲ್ಲದೆ ಇಂಪ್ಲಿಮೆಂಟೇಷನ್‌ನಲ್ಲಿ ನಮ್ಮ ಶಾಸಕರು ಸ್ವಲ್ಪ ಮುತುವರ್ಜಿಯನ್ನು ವಹಿಸಿ ಪ್ಲಾನಿಂಗ್ ಅನ್ನು ಸರಿಯಾಗಿ ಮಾಡಬೇಕು. ಅಲ್ಲಿ ಸ್ವಲ್ಪ ಕುಂಠಿತವಾಗುತ್ತಿದೆ. ಏಕೆಂದರೆ flexiblity of funds ಅಂತ ಇದ್ದು, institution, social funds, roads and drinking water – ಇಂತಿಷ್ಟು ಎಂದು ಇದೆ. ಮಾನದಂಡಗಳನ್ನು ಸರಿಯಾಗಿ ಅರ್ಥೈಸಿಕೊಂಡು ಸರಿಯಾಗಿ ಪ್ಲಾನಿಂಗ್ ಆದರೆ ಶೇ.100 ರಷ್ಟು ಅನುದಾನ ಖರ್ಚಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಮುಂದಿನ ದಿನಗಳಲ್ಲಿ ಈ ಅನುದಾನವನ್ನು ಇನ್ನೂ ಹೆಚ್ಚು ಸಮರ್ಥಕವಾದ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ನಾವು ಪ್ರಯತ್ನಿಸುತ್ತೇವೆ.

**8. ಸಭಾಪತಿಯವರ ಅನುಮತಿಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ವಿಷಯ:– ಕಾರವಾರ ಜಿಲ್ಲೆಯ ಶಿರಸಿ ಶೈಕ್ಷಣಿಕ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಮಧ್ಯಾಹ್ನ ಅಕ್ಷರ ದಾಸೋಹ ಅಡುಗೆ ಸಿಬ್ಬಂದಿಗೆ ನೀಡಲಾದ ಫೈರ್ ಪ್ರೂಫ್ ಏಪ್ರಾನ್ ಖರೀದಿಯಲ್ಲಿ ಆದ ಅವ್ಯವಹಾರದ ಹಿನ್ನೆಲೆಯಲ್ಲಿ ಮುಖ್ಯಶಿಕ್ಷಕರ ಸಂಚಿತ ರಹಿತ ವಾರ್ಷಿಕ ಬಡ್ತಿ ತಡೆಹಿಡಿಯಲು ಡಿಡಿಪಿಐ ಅವರು ಕಳುಹಿಸಿದ ನೋಟಿಸ್ ಕುರಿತು.**

***

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ ಅವರು ದಿನಾಂಕ 10.12.2018ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಆ) ವಿಷಯ:- ಶಿಕ್ಷಕರ ವಿಶೇಷ ವಾರ್ಷಿಕ ವೇತನ ಬಡ್ತಿಯಲ್ಲಿ ಆಗಿರುವ ಅನ್ಯಾಯ ಹಾಗೂ ತಾರತಮ್ಯವನ್ನು ಸರಿಪಡಿಸುವ ಬಗ್ಗೆ**

***

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರ ಅವರು ದಿನಾಂಕ 10.12.2018ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

## 9. ಗಮನ ಸೆಳೆಯುವ ಸೂಚನೆಗಳು

**ಅ) ವಿಷಯ: ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕ್ರೀಡಾ ನೀತಿಯನ್ನು ಜಾರಿಗೆ ತರಲು ಮತ್ತು ಕ್ರೀಡೆಯಲ್ಲಿ ಭಾಗವಹಿಸುವವರಿಗೆ ಉದ್ಯೋಗಗಳನ್ನು ಮೀಸಲಿಡುವಂತೆ ಕ್ರಮ ಕೈಗೊಳ್ಳುವ ಕುರಿತು**

***

**ಶ್ರೀ ಐವನ್ ಡಿ'ಸೋಜ (ಸರ್ಕಾರದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕ್ರೀಡಾ ನೀತಿಯನ್ನು ಜಾರಿಗೆ ತರಲು ಮತ್ತು ಕ್ರೀಡೆಯಲ್ಲಿ ಭಾಗವಹಿಸುವವರಿಗೆ ಉದ್ಯೋಗಗಳನ್ನು ಮೀಸಲಿಡುವಂತೆ ಕ್ರಮ ಕೈಗೊಳ್ಳುವ ಕುರಿತು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಜಿ.ಟಿ.ದೇವೇಗೌಡ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ,

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ.)**

**ಶ್ರೀ ಐವನ್ ಡಿ'ಸೋಜ:-** ಮಾನ್ಯ ಸಭಾಪತಿಯವರೇ, ರಾಜ್ಯಮಟ್ಟದಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲಿ ಬಹಳಷ್ಟು ಕ್ರೀಡಾಪಟುಗಳು ಇದ್ದಾರೆ. ಅವರು ಸನ್ಮಾನ ಸ್ವೀಕರಿಸುವಾಗ ಅಥವಾ ಯಾವುದಾದರೂ ಪದಕವನ್ನು ಪಡೆದುಕೊಂಡು ಬಂದ ಸಂದರ್ಭದಲ್ಲಿ "ಬಹಳ ಕಷ್ಟ ಪಟ್ಟು ಮುಂದೆ ಬಂದಿದ್ದೇವೆ, ನಮಗೆ ಯಾರ ಸಹಾಯವೂ ಇಲ್ಲ. ಬೇರೆ ರಾಜ್ಯಗಳ ಅಥವಾ ಬೇರೆ ದೇಶಗಳ ಕ್ರೀಡಾಪಟುಗಳ ಜೊತೆ ನಾವು ಸ್ಪರ್ಧಿಸುವಾಗ ಇಲ್ಲಿ ನಮಗೆ ದೊರಕುತ್ತಿರುವ ಸೌಲಭ್ಯಗಳು ಬಹಳ ಕಡಿಮೆ" ಎಂದು ಹೇಳುತ್ತಾರೆ. ನಾನು ವಿಶ್ವವಿದ್ಯಾಲಯ ಮಟ್ಟದಲ್ಲಿ ಕ್ರಿಕೆಟ್ ಅನ್ನು ಪ್ರತಿನಿಧಿಸುತ್ತಿದ್ದೆನು. ಬಹಳಷ್ಟು zonal match ಗಳನ್ನು ಆಡಿದ್ದೆನು. ನಾನು ಕಾಲೇಜಿಗೆ ಹೋಗುವಾಗ ನಮ್ಮ ಸಮಸ್ಯೆ ಏನೆಂದರೆ ಎಲ್ಲಿಯಾದರೂ ಹೋಗಿ zonal match ಗಳನ್ನು ಆಡಿಕೊಂಡು ಬಂದರೆ, ಕಾಲೇಜಿನಲ್ಲಿ shortage of attendance ಇರುತ್ತದೆ. ನಮಗೆ ಹೆಚ್ಚು ಹಾಜರಾತಿ ಇರುತ್ತಿರಲಿಲ್ಲ. ಪರೀಕ್ಷೆಗಳ ಸಂದರ್ಭದಲ್ಲಿ ಮ್ಯಾಚ್‌ಗಳನ್ನು ಆಡಲಿಕ್ಕೆ ಹೋದರೆ, ಪರೀಕ್ಷೆಗಳು ತಪ್ಪಿಹೋಗಿ ವಿದ್ಯಾಭ್ಯಾಸ ಮುಂದುವರೆಸಲಿಕ್ಕೆ ಅವಕಾಶ ಇರುವುದಿಲ್ಲ. ಹೀಗಾಗಿ ನಾನು ಮಂಗಳೂರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಶ್ವವಿದ್ಯಾಲಯದ ಸದಸ್ಯನಾಗಿದ್ದಾಗ ಪ್ರತಿಯೊಂದು ವಿಶ್ವವಿದ್ಯಾಲಯದ ಮಟ್ಟದಲ್ಲಿ ಕ್ರೀಡಾನೀತಿ ಇರಬೇಕು ಎಂಬ ಒಂದು statute ಅನ್ನು ಕೊಟ್ಟಿದ್ದೆವು. ಆದರೆ ಅದು ಬಹಳ ಸಮಯದಿಂದ ಜಾರಿಗೆ ಬಂದಿರಲಿಲ್ಲ. ಈಗ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಕ್ರೀಡಾನೀತಿಯನ್ನು ಜಾರಿಗೆ ತಂದಿದ್ದು, ಅದು academic council ನಲ್ಲಿ pass ಆಗಿ ರಾಜ್ಯಪಾಲರ consent ಗಾಗಿ ಬಂದಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಸುಮಾರು 21 ವಿಶ್ವವಿದ್ಯಾಲಯಗಳು ಇವೆ. ಇಂತಹ ಸಂದರ್ಭದಲ್ಲಿ ಸರಿಯಾದಂತಹ ಪಾಲಿಸಿಯನ್ನು ಎಲ್ಲಿಯೂ ಮಾಡಿಲ್ಲ. ಕ್ರೀಡಾ ಪಾಲಿಸಿ ಎನ್ನುವುದಂತೂ ಇಲ್ಲವೇ ಇಲ್ಲ. ವಿಶ್ವವಿದ್ಯಾಲಯಗಳಲ್ಲಿಯೂ ಇಲ್ಲ; ರಾಜ್ಯದಲ್ಲಿಯೂ ಕ್ರೀಡಾ ನೀತಿ ಇರುವುದಿಲ್ಲ. ಕಳೆದ ಬಾರಿ ಇದೇ ಸದನದಲ್ಲಿ ನಾವು ಕ್ರೀಡಾನೀತಿಯನ್ನು ತರುವ ಬಗ್ಗೆ ಚರ್ಚೆಯನ್ನು ಮಾಡಿದ್ದೆವು. ಅಂದಿನ ಸಚಿವರು 'ಕ್ರೀಡಾ ನೀತಿಯನ್ನು ಸಿದ್ಧ ಪಡಿಸಲಾಗಿದೆ. ಅದನ್ನು ಸಚಿವ ಸಂಪುಟದಲ್ಲಿ ಅನುಮೋದಿಸಿ ರಾಜ್ಯಪಾಲರ ಅಂಕಿತಕ್ಕಾಗಿ ಕಳುಹಿಸಲಾಗುವುದು' ಎಂದು ಹೇಳಿದ್ದರು. ಸದನದಲ್ಲಿಯೂ ಮಂಡನೆ ಮಾಡುವುದಾಗಿ ಹೇಳಿದ್ದರು. ಆದರೆ ಇದುವರೆವಿಗೂ ಕ್ರೀಡಾನೀತಿಯು ಬಂದಿರುವುದಿಲ್ಲ. ನಾವು ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆಂದರೆ ವಿಶ್ವವಿದ್ಯಾಲಯದಲ್ಲಿ ಅಥವಾ constituent college ನಲ್ಲಿ ಸಹಾಯ ಮಾಡಬೇಕು. ಅವರಿಗೆ ವಿಮೆಯನ್ನು ಮಾಡಿಸಿಕೊಡಬೇಕು. ಅವರು ರಾಷ್ಟ್ರೀಯ ಮಟ್ಟ ಅಥವಾ ಅಂತರರಾಷ್ಟ್ರೀಯ ಮಟ್ಟಕ್ಕೆ ಹೋಗುವಾಗ ಅವರಿಗೆ sponsorship ಅನ್ನು ಕೊಡಬೇಕು. ಅವರಿಗೆ ಬೇಕಾದಂತಹ infrastructure ಅನ್ನು ಒದಗಿಸಿಕೊಡಬೇಕು. ಕಾಲೇಜುಗಳಲ್ಲಿ ಅಟೆಂಡೆನ್ಸ್ ಅನ್ನು ಕೊಡಬೇಕು. Grace marks ಅನ್ನು ಕೊಡಬೇಕು. ಪರೀಕ್ಷೆ ಬರೆಯಲು ಸಾಧ್ಯವಾಗದಿದ್ದರೆ, ಪುನಃ ಪರೀಕ್ಷೆಯನ್ನು ನಡೆಸಿ ಅವರಿಗೆ promote ಮಾಡಲು ಅನುಕೂಲ ಮಾಡಿಕೊಡಬೇಕು. ಇವೆಲ್ಲವೂ ನಮ್ಮ ರಾಜ್ಯದಲ್ಲಿ ಇಲ್ಲದಿರುವುದರಿಂದ ನಮ್ಮ ರಾಜ್ಯದ ವಿದ್ಯಾರ್ಥಿಗಳು ಇಂದು ಕ್ರೀಡೆಗಳಲ್ಲಿ ಭಾಗವಹಿಸಲು ಮುಂದೆ ಬರುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ. ಒಂದು ವೇಳೆ ಯಾರಾದರೂ ಶ್ರಮ ವಹಿಸಿ ಪದಕವನ್ನು ತಂದುಕೊಟ್ಟರೆ, ತಂದ ಮೇಲೆ ಅವರಿಗೆ ಸನ್ಮಾನ ಮಾಡಲಾಗುವುದು.

**(345) 11–12–2018 ಕೆಜಿ–ಆರ್‌ಎನ್ 1–50**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಐವನ್ ಡಿ'ಸೋಜಾ (ಮುಂದು...):–**

ಅವರನ್ನು promote ಮಾಡುವುದಕ್ಕೆ ಸಹಾಯ ಮಾಡುವುದಿಲ್ಲ, ಅವರಿಗೆ funds ಕೊಡುವುದಿಲ್ಲ, ಅವರಿಗೆ sponsorship ಕೊಡುವುದಿಲ್ಲ, ಅವರಿಗೆ scholorship ಕೊಡುವುದಿಲ್ಲ, ಅವರು ಕೈ–ಕಾಲು ಮುರಿದುಕೊಂಡರೆ ಅವರಿಗೆ insurance ಇಲ್ಲ, ಅವರಿಗೆ ಕಾಲೇಜಿನಲ್ಲಿ ಹಾಜರಾತಿ ಇಲ್ಲ, ಅವರಿಗೆ ಗ್ರೇಸ್ ಅಂಕಗಳು ಇಲ್ಲ, ಅವರಿಗೆ ಯಾವುದೇ ಸೌಲಭ್ಯ ಇಲ್ಲದೇ ಇದ್ದಾಗ ಒಬ್ಬ ವಿದ್ಯಾರ್ಥಿ sports event ನನ್ನ ಜೀವನದ ಭಾಗ

ಎಂದು ಹೇಳಿಕೊಂಡು ಯಾವ ರೀತಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಕಳೆದ ಬಜೆಟ್‌ನಲ್ಲಿ ಸರ್ಕಾರ sports promote ಮಾಡುತ್ತೇವೆಂದು ಹಾಗೂ ಅದಕ್ಕೆ ಹೆಚ್ಚು ಹಣವನ್ನು ಕೊಡುತ್ತೇವೆಂದು ಹೇಳಿದೆ. 2018–2019ನೇ ಸಾಲಿನ ಆಯವ್ಯಯದ ಪ್ಯಾರಾ–59 ರಲ್ಲಿ ಸರ್ಕಾರ ಈ ರೀತಿ ಹೇಳಿದೆ. "ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಹಂತದಲ್ಲಿಯೇ ಕ್ರೀಡೆಯನ್ನು ಪಠ್ಯಕ್ರಮದಲ್ಲಿ ಸೇರಿಸಲಾಗಿದೆ. ಆದರೆ, ಉನ್ನತ ಶಿಕ್ಷಣದಲ್ಲಿ ಸಾಂಪ್ರದಾಯಿಕ ವ್ಯವಸ್ಥೆ ಪದವಿ ಸರ್ಟಿಫಿಕೇಟ್ ಇದ್ದರೆ ಒಳ್ಳೆಯದು ಎಂಬ ಭಾವನೆ ನಮ್ಮ ಯುವ ಜನರಲ್ಲಿ ಇದೆ. ಇದರಿಂದಾಗಿ ಬಹುತೇಕ ವಿದ್ಯಾರ್ಥಿಗಳು ಕ್ರೀಡೆ ಮತ್ತು ಅಂಗ ಸಾಧನೆಯನ್ನು ಒಂದು ವಿಷಯವನ್ನಾಗಿ ಕಲಿಯಲು ಮುಂದೆ ಬರುತ್ತಿಲ್ಲ. ಈ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯಲ್ಲಿ ಕ್ರೀಡಾ ಮತ್ತು ಅಂಗಸಾಧನೆಗೆ ಸಂಬಂಧಿಸಿದ ವಿಶ್ವವಿದ್ಯಾನಿಲಯವನ್ನು ಖಾಸಗಿ ಸಹಭಾಗಿತ್ವದಲ್ಲಿ ತೆರೆಯಲು ಯೋಚಿಸಿದೆ. ಇದಕ್ಕೆ ಪೂರಕವಾಗಿ ತುಮಕೂರು ಜಿಲ್ಲೆಯಲ್ಲಿ ಕ್ರೀಡೆ ಮತ್ತು ಅಂಗಸಾಧನೆಗೆ ಬೇಕಾದಂತಹ ಉಪಕರಣ ಮತ್ತು ಇತರೆ ವಸ್ತುಗಳನ್ನು ತಯಾರು ಮಾಡುವಂತಹ cluster ಅನ್ನು ಸಹ ಸೇರಿಸಲಾಗಿದೆ. ಇದರ ಪ್ರಾಥಮಿಕ ಕಾರ್ಯಗಳಿಗಾಗಿ ಮೂರು ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ ಎಂದು ಸರ್ಕಾರ ಕಳೆದ ಆಯವ್ಯಯದಲ್ಲಿ ಘೋಷಣೆ ಮಾಡಿದೆ. ತಾವು ಯಾವುದನ್ನು ಮಾಡಿದರೂ ಸಹ, ನಿಜವಾದಂತಹ ಮಕ್ಕಳಿಗೆ ಇದರ ಲಾಭ ಸಿಗಬೇಕಾದರೆ ಅವರನ್ನು ಕಾಲೇಜು ಶಿಕ್ಷಣದಲ್ಲಿಯೇ ಬೆಳೆಸಿ ಮುಂದಕ್ಕೆ ತರಬೇಕಾಗುತ್ತದೆ. ಹಾಗಾಗಿ, ಈ ರಾಜ್ಯದಲ್ಲಿ ಒಂದು ಸ್ಪಷ್ಟವಾದಂತಹ ಕ್ರೀಡಾ ನೀತಿಯನ್ನು ಜಾರಿಗೆ ತರಬೇಕು. 2016 ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Sports Policy ಅನ್ನು ಜಾರಿಗೆ ತಂದಿದ್ದಾರೆ. ತಾವು ಇದೇ ತರಹ ಮತ್ತು ಇದೇ ಮಾದರಿಯಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ Sports Policy ಅನ್ನು ಜಾರಿಗೆ ತಂದರೆ ಎಲ್ಲಿಯೋ ಒಂದು ಕಡೆ ವಿದ್ಯಾರ್ಥಿಗಳಿಗೆ ಹೆಚ್ಚು ಧೈರ್ಯ ಕೊಡುತ್ತದೆ ಮತ್ತು sports ನಲ್ಲಿ ಭಾಗವಹಿಸುವುದಕ್ಕೆ ಅವಕಾಶ ಆಗುತ್ತದೆ. ಅವರು ಶ್ರಮಪಟ್ಟು ಆಟದ ಮೈದಾನದಲ್ಲಿ ಆಟ ಆಡಿ ಆ ಆಟದಲ್ಲಿ ಏನಾದರೂ ಪದಕ ಗೆದ್ದರೆ ಆಗ ಅವರಿಗೆ ಎಲ್ಲೋ ಒಂದು ಕಡೆ ಉದ್ಯೋಗ ಸಿಗುತ್ತದೆ. ನಮ್ಮಲ್ಲಿ ಅನೇಕ ವಿದ್ಯಾರ್ಥಿಗಳು ಕಲಿತುಕೊಂಡು ಬರುತ್ತಾರೆ. ಆದರೆ, ಅವರಿಗೆ ಉದ್ಯೋಗ ಸಿಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಇದು ನಿಯಮ 72. ಸಾಕು ಬಿಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ತಾವು Physical Education ಶಿಕ್ಷಕರಾಗಿದ್ದವರು. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಎಲ್ಲಿಯೂ ಅವಕಾಶಗಳು ಕೊಡುತಿಲ್ಲ. ಹಾಗಾಗಿ, ಸರ್ಕಾರದಿಂದ ಒಂದು ಸ್ಪಷ್ಟವಾದ ಉತ್ತರವನ್ನು ಕೊಟ್ಟರೆ ಒಳ್ಳೆಯದು. ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ Sports Policy ಅನ್ನು ಮಾಡುವುದಕ್ಕೆ ಏನು ತೊಂದರೆ ಇದೆ? Sports Policy ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಇದೆ. ಅದನ್ನು ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಕೂಡ ಮಾಡಬೇಕು. ತಾವು ರಾಜ್ಯದಲ್ಲಿ Sports Policy ಅನ್ನು ಜಾರಿಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತನ್ನಿ ಎಂದು ಸಲಹೆ ನೀಡಿ. ಹಲವಾರು ಕಂಪನಿಗಳು ನಮ್ಮ ಜಾಗ ತೆಗೆದುಕೊಂಡು ಕಂಪನಿಗಳನ್ನು ಪ್ರಾರಂಭ ಮಾಡುತ್ತಾರೆ. ಆ ಕಂಪನಿಗಳಲ್ಲಿ ಇಂತಿಷ್ಟು percentage ಎಂದು sportsmen ಗೆ ಉದ್ಯೋಗ ಕೊಡಬೇಕೆಂಬ ಷರತ್ತನ್ನು ತಾವು ಏಕೆ ವಿಧಿಸಬಾರದು? ಅದಕ್ಕೆ ಅಗತ್ಯವಾಗಿ ಬೇಕಾದಂತಹ ಕಾನೂನನ್ನು ಏಕೆ ತರಬಾರದು ಎನ್ನುವುದು ನನ್ನ ಪ್ರಶ್ನೆ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ಬಹಳ ಒಳ್ಳೆಯ ಪ್ರಶ್ನೆಯನ್ನು ಎತ್ತಿದ್ದಾರೆ. ನಾನು ಸಹ ಕಬಡ್ಡಿ ಆಟಗಾರನಾಗಿ ವಿಶ್ವವಿದ್ಯಾನಿಲಯದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡಿದ್ದೇನೆ. ಬೆಂಗಳೂರು ವಿಶ್ವವಿದ್ಯಾನಿಲಯವನ್ನು ರಾಷ್ಟ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಮೂಲಕ ಭಾರತವನ್ನು 2ನೇ ಸ್ಥಾನಕ್ಕೆ ತಂದಿದ್ದೇವೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಗಲೂ ಪಕ್ಷದಲ್ಲಿ ಕಬಡ್ಡಿ ಆಡುತ್ತಿದ್ದಾರೆಂದು ನಮಗೆ ಮಾಹಿತಿ ಇದೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಅದಕ್ಕೇ ಬಿ.ಜೆ.ಪಿ.ಯವರು ಸೋಲುತ್ತಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ರಾಜಕಾರಣಿಗಳ ಪ್ರೀಯವಾದ ಆಟವೇ ಕಬಡ್ಡಿ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಕಬಡ್ಡಿಯನ್ನು ಆಡುವುದರಿಂದ ಬಹಳಷ್ಟು ಒಳ್ಳೆಯದು ಇದೆ. ಕಬಡ್ಡಿಯಲ್ಲಿ ಒದೆಯುವುದಕ್ಕೆ ಮತ್ತು ಹಿಡಿದುಕೊಳ್ಳುವುದಕ್ಕೆ ಬಹಳ ಸುಲಭ ಇರುತ್ತದೆ. ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ಹೇಳಿದಂತೆ ಕ್ರೀಡಾ ತರಬೇತಿಯಲ್ಲಿ ನಾವು ಸಾಕಷ್ಟು ಹಿಂದೆ ಇದ್ದೇವೆ. ಬಿಜಾಪುರ ಜಿಲ್ಲೆಯಲ್ಲಿ 'ಸೈಕಲ್‌ನಲ್ಲಿ ಹಾಲು ಮಾರುವ' ಜನರನ್ನು ಗುರುತಿಸಿದ್ದರಿಂದ ಇವತ್ತು ಅವರು ರಾಷ್ಟ್ರೀಯ ಮಟ್ಟದಲ್ಲಿ Cycling ನಲ್ಲಿ ಮುಂದೆ ಬಂದಿದ್ದಾರೆ. 'ಸಿದ್ದಿ ಜನಾಂಗ'ವನ್ನು North Kanara ದಲ್ಲಿ ಗುರುತಿಸಿದ್ದರಿಂದ ಅವರು ನಮ್ಮಲ್ಲಿ ಉತ್ತಮ ಕ್ರೀಡಾ ಪಟುಗಳಾಗಿ ಬರುತ್ತಿದ್ದಾರೆ. ನಮ್ಮಲ್ಲಿ ಕ್ರೀಡಾ ವಸತಿ ನಿಲಯಗಳು ಇವೆ. ಆದರೆ, ಅವುಗಳಿಗೆ ಹೆಚ್ಚಿನ ಒತ್ತನ್ನು ಕೊಡುತ್ತಿಲ್ಲ. ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾ ರವರು ಹೇಳಿದಂತೆ, ವಿಶ್ವವಿದ್ಯಾನಿಲಯಗಳಲ್ಲಿ ಓದುತ್ತಿರಬೇಕಾದರೆ ವಿದ್ಯಾರ್ಥಿಗಳು ಬಹಳ ಸದೃಢವಾಗಿ ಮತ್ತು ಸಾಮರ್ಥ್ಯವಾಗಿ ಇರುತ್ತಾರೆ. ಅದರಲ್ಲೂ ನನ್ನ ಪ್ರಕಾರ, ನಗರ ಪ್ರದೇಶದ ಮಕ್ಕಳಿಗಿಂತ ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಕ್ರೀಡೆಗಳ ಬಗ್ಗೆ ಹೆಚ್ಚಿನ ಆಸಕ್ತಿ ಇರುತ್ತದೆ. ಅಲ್ಲಿಯೇ ಅವರನ್ನು ಗುರುತಿಸಿ ಅವರಿಗೆ ಉತ್ತೇಜನ ಕೊಟ್ಟರೆ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಹೆಸರು ಮತ್ತು ಕೀರ್ತಿ ಬರುತ್ತದೆ. ಆದರೆ, ನಾವು ಅವರು medal ತಂದ ಮೇಲೆ ಅವರನ್ನು ಗುರುತಿಸುತ್ತೇವೆ. ಆದರೆ, ಅವರು medal ತರುವುದಕ್ಕೆ ನಾವು ಏನು ಮಾಡುತ್ತೇವೆ ಎನ್ನುವುದು ಬಹಳ ಮುಖ್ಯ. ಚೈನಾ ದೇಶದಲ್ಲಿ ಯಾರ್‍ಯಾರು ಯಾವ ಯಾವ ವೃತ್ತಿಯಲ್ಲಿರುತ್ತಾರೆ ಆ ಕ್ರೀಡೆಯಲ್ಲಿ ಅವರನ್ನು ಬೆಳೆಸುತ್ತಾರೆ. ನಾವು ಅವರ ಆಕಾರಗಳನ್ನು ನೋಡಿದರೆ ಅವರು ಕುಳ್ಳರು ಮತ್ತು ಸಣ್ಣಕ್ಕೆ ಇದ್ದಾರೆ ಎಂದು ಹೇಳುತ್ತೇವೆ. ಆದರೆ, ಅವರನ್ನು ಆ ರೀತಿಯಲ್ಲಿ ತಯಾರು ಮಾಡಿರುತ್ತಾರೆ. ಇದು ಆ ರಾಷ್ಟ್ರದಲ್ಲಿ ಆಗುವಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರಿವರ್ತನೆ. ಮಾನ್ಯ ಕ್ರೀಡಾ ಸಚಿವರು, ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತು ಮಾನ್ಯ ಶಿಕ್ಷಣ ಸಚಿವರು ಸೇರಿ ಇದಕ್ಕೆ ಒಂದು ಸರಿಯಾದಂತಹ ರೂಪುರೇಷೆಯನ್ನು ಮಾಡಿ ಯುವಕರನ್ನು ಇದರಲ್ಲಿ ತೊಡಗಿಸಿದರೆ ನಮ್ಮ ರಾಜ್ಯಕ್ಕೆ ಮತ್ತು ನಮ್ಮ ರಾಷ್ಟ್ರಕ್ಕೆ ಹೆಸರು ಬರುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮಾಡಿರುವಂತಹ Sports Policy ಯನ್ನು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ತರಲಿ ಎಂದು ನಾನು ಆಶಿಸುತ್ತೇನೆ.

**ಶ್ರೀ ಎಂ.ಸಿ.ವೇಣುಗೋಪಾಲ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಶಿಕ್ಷಣಕ್ಕೆ ಎಷ್ಟು ಒತ್ತು ಕೊಡುತ್ತೇವೆಯೋ ಅಷ್ಟೇ ಒತ್ತು ಕ್ರೀಡೆಗೂ ಸಹ ಕೊಡಬೇಕಾಗಿರುವುದು ಬಹಳ ಪ್ರಾಮುಖ್ಯತೆ ಇದೆ. ನಾವು ಇಲ್ಲಿ ಕೆಲವು ಕ್ರೀಡೆಗಳಿಗೆ ಮಾತ್ರ ಮಾನ್ಯತೆ ಕೊಡುತ್ತಿದ್ದೇವೆ. ಕ್ರಿಕೆಟ್ ಕ್ರೀಡೆಗೆ ಮಾತ್ರ ಹೆಚ್ಚಿನ ಒತ್ತು ಕೊಡುತ್ತಿದ್ದೇವೆ. ಆದರೆ, ಗ್ರಾಮೀಣ ಪ್ರದೇಶದಲ್ಲಿರುವಂತಹ ಕ್ರೀಡೆಗಳಿಗೆ ಹೆಚ್ಚಿನ ಒತ್ತು ನೀಡುತ್ತಿಲ್ಲ. ಇದಕ್ಕೆ ಒಂದು ರೀತಿಯಲ್ಲಿ ಮಲತಾಯಿ ಧೋರಣೆ ತೋರಿಸಿದಂತೆ ಆಗುತ್ತದೆ. ಈ ಸದನದಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು, ಮಾನ್ಯ ಕ್ರೀಡಾ ಸಚಿವರು ಹಾಗೂ ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರು ಇವರೆಲ್ಲರೂ ಸೇರಿ ಒಂದು ಹೊಸ ರೀತಿಯಲ್ಲಿ Sports Policy ಅನ್ನು ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರುಗಳಾದ ಹೆಚ್.ಎಂ.ರೇವಣ್ಣರವರು ಮತ್ತು ಐವನ್ ಡಿ'ಸೋಜಾರವರು ಹೇಳಿದಂತೆ ಒಬ್ಬ ಕ್ರೀಡಾ ಪಟು ಆತನ ಪ್ರತಿಭೆಯನ್ನು ಕಾಪಾಡಿಕೊಂಡು ಮೆಡಲ್ ತಂದ ಮೇಲೆ ನಾವು ಆತನನ್ನು ಗುರುತ್ತಿಸುತ್ತೇವೆ. ಆದರೆ, ಆ ಪ್ರತಿಭೆ ಬರಬೇಕಾದರೆ ಅದಕ್ಕೆ ಅಗತ್ಯವಾದ ಪ್ರೇರಣೆ ನೀಡುವಂಥದ್ದು ನಮ್ಮಲ್ಲಿ ಕಾಣುತ್ತಿಲ್ಲ. ಇವತ್ತು ಬೇರೆ ದೇಶಗಳಿಗೆ ಹೋಲಿಸಿಕೊಂಡರೆ ನಮ್ಮ ದೇಶದಲ್ಲಿ ಅದರ ಕೊರತೆ ಸಾಕಷ್ಟು ಇದೆ. ನಾನು ಕ್ರೀಡಾ ಪ್ರಾಧಿಕಾರದಲ್ಲಿ ಕೆಲಸ ಮಾಡಿರುವುದರಿಂದ ಮತ್ತೊಂದು ವಿಷಯವನ್ನು ತಮಗೆ ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ತಾವು competetion ಅನ್ನು ಕೆಲವು ಕ್ರೀಡೆಗಳಲ್ಲಿ ಮಾತ್ರ ಇಡುತ್ತೀರಿ. ಅದರಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಗೆದ್ದವರಿಗೆ ಸಿ.ಇ.ಟಿ, ಮೆಡಿಕಲ್ ಮತ್ತು ಇಂಜಿನಿಯರಿಂಗ್‌ನಲ್ಲಿ ಸೀಟು ಕೊಡುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದೀರಿ. ಅದೇ ರೀತಿಯಲ್ಲಿ ಎಲ್ಲಾ ರೀತಿಯ ಕ್ರೀಡೆಗೂ ಒಂದೇ ರೀತಿಯ ಮಾನ್ಯತೆ ಕೊಡಬೇಕು. ಈಗ ತಾವು ಮಾಡುತ್ತಿರುವಂತಹದ್ದು "ಮೂಗಿಗೆ ತುಪ್ಪ ಸುರಿದು ವಾಸನೆ ನೋಡಿದಂತೆ" ಆಗಿದೆ. ಅದು ಯಾವ ರೀತಿ ಆಗಿದೆ ಎಂದರೆ, ಕೆಲವು ಕ್ರೀಡೆಗಳಲ್ಲಿ ಕೇವಲ ಅವರು ಅವರ ಸ್ವಂತ ಪ್ರತಿಭೆಯಿಂದ ಮುಂದೆ ಬರಬೇಕಾಗುತ್ತದೆ. ನಾನು ಕ್ರೀಡಾ ಪ್ರಾಧಿಕಾರದ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಒಬ್ಬ ಕೋಚ್‌ಗೆ ರೂ.1500/- ಗಳನ್ನು ಕೊಡುತ್ತಿದ್ದರು. ನಾನು ಆ ಕುರಿತು ಎಲ್ಲಾ ರೀತಿಯಲ್ಲೂ ಚರ್ಚೆ ಮಾಡಿದ ನಂತರ ಒಬ್ಬ ಕೋಚ್‌ಗೆ ರೂ.5000/- ಗಳನ್ನು ನಿಗದಿ ಮಾಡಿದೆ. ಕೋಚ್‌ಗಳು ಖಾಯಂ ಆಗಿಲ್ಲ. ಅದಕ್ಕೆ ಸಿ ಅಂಡ್ ಆರ್ ನಿಯಮ ರಚನೆ ಆಗಿಲ್ಲ. ಕೋಚ್‌ಗಳನ್ನು ಸರಿಯಾದಂತಹ ರೀತಿಯಲ್ಲಿ ನೇಮಕಾತಿ ಮಾಡಲಿಲ್ಲವೆಂದರೆ ಅವರು ಯಾವ ರೀತಿ ಉತ್ಸಾಹದಿಂದ ಇರುತ್ತಾರೆ. ಮಾನ್ಯ ಸಭಾಪತಿಯವರೇ, ಇದು ಬಹಳ ಮುಖ್ಯವಾದಂತಹ ವಿಷಯ. ಇದಕ್ಕೆ ಸುಧೀರ್ಘವಾದಂತಹ ಚರ್ಚೆ ಆಗಬೇಕಾಗಿದೆ. ಇದರಲ್ಲಿ ಸಾಧ್ಯವಾದರೆ ಸಮನ್ವಯ ಕಾಪಾಡಬೇಕಾಗುತ್ತದೆ. ವಿದ್ಯಾ ಇಲಾಖೆ ಮತ್ತು ಕ್ರೀಡಾ ಇಲಾಖೆ ಸಮನ್ವಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯಲ್ಲಿ ಮಾತುಕತೆ ಮಾಡಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಸೀಟುಗಳನ್ನು ಕೊಡುವಂತಹ ಸಂದರ್ಭದಲ್ಲಿ ಎಲ್ಲಾ ಕ್ರೀಡೆಗಳಿಗೂ ಸಹ ಒಂದೇ ರೀತಿಯ ಮಾನ್ಯತೆ ಕೊಡಬೇಕಾಗುತ್ತದೆ. ಅದನ್ನು ಮಾಡಲಿಲ್ಲವೆಂದರೆ, ವಿದ್ಯಾರ್ಥಿಗಳಿಗೆ ದ್ರೋಹ ಮಾಡಿದಂತೆ ಆಗುತ್ತದೆ. ಆದ್ದರಿಂದ, ಮಾನ್ಯ ಸಚಿವರುಗಳು ಇದರ ಬಗ್ಗೆ ದಯವಿಟ್ಟು ಗಮನ ಹರಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕ್ರೀಡಾ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುತ್ತೇನೆಂದು ಹೇಳಿಕೆ ಕೊಟ್ಟಿದ್ದರು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನಾನು ತಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ತಾವು ಸುಮ್ಮನೆ ಎದ್ದು ಮಾತನಾಡುತ್ತೀರಿ. ನೀವು ಕ್ರೀಡೆಯನ್ನು ಹೊರಗಡೆ ಮಾಡಿ. ಇಲ್ಲಿ ಯಾಕೆ ಮಾಡುತ್ತೀರಿ?

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೇ, ತಾವು ಕ್ರೀಡೆಯಲ್ಲಿ ಇದ್ದವರು. ಅದಕ್ಕೆ ಇದರಲ್ಲಿ ಏನಾದರೂ ಬದಲಾವಣೆ ಆಗಲಿ ಎನ್ನುವ ದೃಷ್ಟಿಯಲ್ಲಿ ಹೇಳಿದ್ದೇನೆ ಅಷ್ಟೇ.

**ಶ್ರೀ ಅ.ದೇವಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಲ್ಲಿ ಏನಾಗಿದೆ ಎಂದರೆ, ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಕಾಲೇಜು ಶಿಕ್ಷಣದವರೆಗೂ ದೈಹಿಕ ಶಿಕ್ಷಕರನ್ನು ನೇಮಕ ಮಾಡಿರುವುದಿಲ್ಲ. ಇದನ್ನು ಮುಖ್ಯವಾಗಿ ಮಾಡಬೇಕು. ಅದಕ್ಕೆ ಸರ್ಕಾರ ಒಂದು ಪಾಲಿಸಿ ಮಾಡಿ ಅವರನ್ನು ನೇಮಕ ಮಾಡಿಕೊಳ್ಳುವಂತಹ ಕೆಲಸವನ್ನು ಮಾಡಬೇಕು. ಮಕ್ಕಳಿಗೆ ತರಬೇತಿಯನ್ನೇ ಕೊಡದೇ ಇದ್ದು ವಿಶ್ವವಿದ್ಯಾನಿಲಯಗಳಲ್ಲಿ ನಡೆಸುವಂತಹ ಪಂದ್ಯಗಳಲ್ಲಿ ಆಟ ಆಡುವುದಕ್ಕೆ ಹೋದರೆ ಏನಾಗುವುದಕ್ಕೆ ಸಾಧ್ಯವಾಗುತ್ತದೆ? ಯಾವುದೇ ಸರ್ಕಾರಿ ಕಾಲೇಜಿನಲ್ಲಿ ದೈಹಿಕ ಶಿಕ್ಷಕರನ್ನು ನೇಮಕ ಮಾಡುತ್ತಿಲ್ಲ. ಅದಕ್ಕೆ ತಾವು ದಯವಿಟ್ಟು ಸರ್ಕಾರಕ್ಕೆ ಒಂದು ಮನವಿಯನ್ನು ಕಳುಹಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಜಿ.ಟಿ.ದೇವೇಗೌಡ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕ್ರೀಡೆಯ ಬಗ್ಗೆ ಬಹಳಷ್ಟು ವಿಸ್ತಾರವಾಗಿ ಚರ್ಚೆ ಮಾಡಿದ್ದಾರೆ. ತಾವು ವಿದ್ಯಾಭ್ಯಾಸ ಮಾಡುವಂತಹ ಕಾಲದಲ್ಲಿ ಆಗಲಿ ಅಥವಾ ನಾವು ಓದುವಂತಹ ಕಾಲದಲ್ಲಿಯೂ ಸಹ ಪ್ರಾಥಮಿಕ ಶಾಲೆಯಿಂದ ಹಿಡಿದು, ಪ್ರತಿಯೊಬ್ಬರು ಸಹ ಒಂದಲ್ಲಾ ಒಂದು ಆಟವನ್ನು ಆಡಿಕೊಂಡೇ ಬಂದಿದ್ದೇವೆ. ಮಾನ್ಯ ಸದಸ್ಯರಾದ ಹೆಚ್.ಎಂ.ರೇವಣ್ಣನವರು ಹೇಳಿದಂತೆ ಶಿಕ್ಷಣದ ಜೊತೆಗೆ ಕಬಡ್ಡಿ ಮತ್ತು ಇತರೆ ಕ್ರೀಡೆಗಳನ್ನು ಆಡಿಕೊಂಡು ಶಿಕ್ಷಣವನ್ನು ಕಲಿಯುತ್ತಿದ್ದೆವು.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(346) 11–12–2018 (2–00) ಎಂವಿ–ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜಿ.ಟಿ.ದೇವೇಗೌಡ (ಮುಂದು):–**

ಇವತ್ತು ಏನಾಗಿದೆ ಎಂದರೆ, ಎಲ್‌ಕೆಜಿಯಿಂದ ಪುಸ್ತಕವನ್ನು ಹೊತ್ತಿಕೊಂಡು, ಅವರು ಬೆಳಿಗ್ಗೆ ಐದು ಗಂಟೆಗೆ ಎದ್ದು ಓದುವುದು ಶುರುವಾದರೆ, ಅವರು ಮನೆಯಲ್ಲಿ ಓದಬೇಕು ಮತ್ತೆ ಮನೆಯ ಹೋಂವರ್ಕ್ ಮಾಡುವುದು. ಇದರಿಂದ

ಕ್ರೀಡೆ, ಆಟಪಾಠ, ಕಲೆ, ಸಾಹಿತ್ಯ ಯಾವುದು ಇಲ್ಲ. ಇದರಿಂದ ನಾವು ಮನುಷ್ಯರೆ ಅಲ್ಲ. ಆದುದರಿಂದ ನಾವು ಕ್ರೀಡೆಗೆ ಬಹಳ ಪ್ರಾಮುಖ್ಯತೆಯನ್ನು ಕೊಡಬೇಕು. ಈಗಾಗಲೇ ನಮ್ಮ ಸರ್ಕಾರ ಇದಕ್ಕೆ ಆದ್ಯತೆಯನ್ನು ಕೊಟ್ಟಿದೆ. ಅದಕ್ಕೆ ನೀತಿ ನಿಯಮಗಳನ್ನು ರೂಪಿಸುವಂತಹ ಸಂದರ್ಭಗಳಲ್ಲಿ, ಈಗ ಮಾನ್ಯ ಸದಸ್ಯರುಗಳು ಏನನ್ನು ಹೇಳಿದ್ದಾರೆ ಅವುಗಳೆಲ್ಲಾ ತುಂಬಾ ಅವಶ್ಯಕವಾಗಿದೆ. ನನಗೆ ಅನಿಸುವಂತೆ ಪ್ರಾಥಮಿಕ ಶಿಕ್ಷಣದಿಂದ ಹಿಡಿದು, ಉನ್ನತ ಶಿಕ್ಷಣದವರೆಗೂ ಕೂಡ ಕ್ರೀಡಾ ನೀತಿಯನ್ನು ಕಡ್ಡಾಯವಾಗಿ ಜಾರಿಗೊಳಿಸುವಂಥದ್ದಕ್ಕೆ ಸರ್ಕಾರ ಸಂಪೂರ್ಣ ಪ್ರಯತ್ನವನ್ನು ಮಾಡುತ್ತದೆ. ಮಾನ್ಯ ಸದಸ್ಯರು ಅಂಗವಿಕಲರ ಬಗ್ಗೆಯೂ ಸಹ ಹೇಳಿದ್ದಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಬೇಗ ನೇಮಕಾತಿ ಮಾಡುವುದಕ್ಕೆ ಹೇಳಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈಗ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಏನು ಮಾಡುತ್ತಾರೆ. ಈಗ ಮಂಗಳೂರು ವಿಶ್ವವಿದ್ಯಾನಿಲಯ ಇದೆ ಅದೇರೀತಿ ಬೇರೆ ವಿಶ್ವವಿದ್ಯಾನಿಲಯದಲ್ಲಿ ಏನು ಮಾಡುತ್ತಾರೆ?

**ಶ್ರೀ ಜಿ.ಟಿ.ದೇವೇಗೌಡ:–** ಸದಸ್ಯರಾದ ಮಾನ್ಯ ಐವನ್ ಡಿ'ಸೋಜಾರವರೆ ಸ್ವಲ್ಪ ಕೇಳಿ. ಕ್ರೀಡೆಯನ್ನು ಕಡ್ಡಾಯವಾಗಿ ಮಾಡಲೇಬೇಕು. ಕ್ರೀಡೆಗೆ ಒಂದು ಗಂಟೆಯನ್ನಾದರೂ ನಿಗದಿ ಮಾಡಬೇಕು. ಶಿಕ್ಷಣವನ್ನು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಮಾಡುವಂಥದ್ದಲ್ಲ. ನಾಲ್ಕು ಗಂಟೆ ಪಾಠ ಮಾಡುವಂತಹ ವಿಶ್ವವಿದ್ಯಾನಿಲಯಗಳಲ್ಲಿ, ಒಂದು ಗಂಟೆ ಕ್ರೀಡೆಗೆ ಅವಕಾಶ ಮಾಡುವಂಥದ್ದು ಮತ್ತು ದೈಹಿಕ ಶಿಕ್ಷಕರನ್ನು ನೇಮಕಾತಿ ಮಾಡುವಂಥದ್ದಕ್ಕೆ ನಾವು ಖಂಡಿತವಾಗಿ ಆದ್ಯತೆಯನ್ನು ಕೊಡುತ್ತೇವೆ. ಅದರ ಜೊತೆಗೆ ಅಂಗವಿಕಲರಿಗೂ ಸಹ ಆದ್ಯತೆಯನ್ನು ಕೊಡುತ್ತೇವೆ. ಇದನ್ನು ಖಂಡಿತವಾಗಿ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ಈಗ ಎರಡು ಗಮನ ಸೆಳೆಯುವ ಸೂಚನೆಗಳು ಮತ್ತು ಎರಡು ನಿಯಮ 330 ಮೇರೆಗೆ ಚರ್ಚೆಯನ್ನು ಮಧ್ಯಾಹ್ನ ಊಟದ ನಂತರ ತೆಗೆದುಕೊಳ್ಳಬೇಕು. ಈಗ ಯಾರು ಇದ್ದಾರೆ ಅವರಿಗೆ ಹೇಳಿ. ಸಭೆಯನ್ನು 3 ಗಂಟೆ 15 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(ಸದನವನ್ನು ಭೋಜನಾ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 3 ನಿಮಿಷಕ್ಕೆ ಮುಂದೂಡಲಾಯಿತು)**

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(347)11–12–2018(03–15)ಎಲ್‌ಎಲ್–ವಿಕೆ

**(ಸದನವು ಭೋಜನ ವಿರಾಮದ ನಂತರ 3 ಗಂಟೆ 26 ನಿಮಿಷಕ್ಕೆ ಪ್ರಾರಂಭವಾಯಿತು)**
**(ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಾದರು)**

## 9. ಗಮನ ಸೆಳೆಯುವ ಸೂಚನೆ

**ಆ) ವಿಷಯ:–** ದಿನಾಂಕ:01.04.2006ರ ನಂತರ ನೇಮಕಾತಿ ಹೊಂದಿರುವ ಸರ್ಕಾರಿ ನೌಕರರುಗಳಿಗೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಕುರಿತು.

– – –

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಿನಾಂಕ:01.04.2006ರ ನಂತರ ನೇಮಕಾತಿ ಹೊಂದಿರುವ ಸರ್ಕಾರಿ ನೌಕರರುಗಳಿಗೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಉತ್ತರವನ್ನು ನೀಡುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

(348) 3.30 11.12.2018 ವೈಎಲ್–ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರವು ನಮಗೆ ಬಾರಿ ನಿರಾಶೆಯಾಗುವ ಉತ್ತರವನ್ನು ನೀಡಿದೆ. ನೂತನ ಪಿಂಚಣಿ ಯೋಜನೆಯಿಂದ ಹಳೆಯ ಪಿಂಚಣಿ ಯೋಜನೆಗೆ ಮತ್ತೆ ಒಳಪಡಿಸುತ್ತೇವೆ ಎಂದು ಸರ್ಕಾರದ ಚುಕ್ಕಾಣಿ ಹಿಡಿದಿರುವಂಥ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರುತ್ತೇವೆ ಎಂದು ಹೇಳಿದ್ದರು. ಹೋರಾಟ ನಡೆದಂಥ ಸಂದರ್ಭದಲ್ಲಿ ಸ್ವತಃ ಮಾನ್ಯ ಮುಖ್ಯಮಂತ್ರಿಯವರು ಉಪಸ್ಥಿತಿಯಲ್ಲಿದ್ದು, ಅದರ ಬಗ್ಗೆ ಪುನರುಚ್ಚರಿಸುವಂಥ ಕೆಲಸವನ್ನು ಮಾಡಿದ್ದಾರೆ. ಆದರೆ, ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರುತ್ತೇವೆ ಎಂದು ಸದನದಲ್ಲಿ ಹೇಳುವಂಥ ಸಂದರ್ಭದಲ್ಲಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರುವುದಿಲ್ಲವೆಂದು ಹೇಳುತ್ತಿದ್ದಾರೆ. ಇದು ಬಾರಿ ನಿರಾಶೆ ತರುವಂಥ ಒಂದು ಉತ್ತರವಾಗಿದೆ. ಆದ್ದರಿಂದ ಸರ್ಕಾರ ಮತ್ತೊಮ್ಮೆ ಪುನರ್ ಪರಿಶೀಲನೆ ಮಾಡಿ, ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರುವಂಥ ಕೆಲಸ ಮಾಡಬೇಕೆಂಬುದು ನನ್ನ ಮೊದಲನೆ ಆಗ್ರಹವಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಳೆಯ ಪಿಂಚಣಿ ಯೋಜನೆಯಲ್ಲಿ, ಸರ್ಕಾರಿ ನೌಕರರು ನಿವೃತ್ತಿಯಾಗುವ ಸಂದರ್ಭದಲ್ಲಿ ನೌಕರರು ಪಡೆಯುವ ಸಂಬಳದ ಬಹುತೇಕ ಅರ್ಧದಷ್ಟು ಸಂಬಳವನ್ನು ಪಿಂಚಣಿಯಾಗಿ ತೆಗೆದುಕೊಳ್ಳುವ ಅವಕಾಶ ಇತ್ತು. D.C.R.G. (Death-cum-Retirement Gratuity), Commutation of Pension ನ ಹಣವನ್ನು ಪಡೆದುಕೊಳ್ಳುವ ಅವಕಾಶ ಇತ್ತು. ಜೀವನ ಪೂರ್ತಿ ಕೆಲಸ ಮಾಡಿರುವ ಸರ್ಕಾರಿ ನೌಕರರು ತನ್ನ ಜೀವನದ ಸಂಧ್ಯಾ ಕಾಲದ ಸಮಯದಲ್ಲಿ ಎಷ್ಟು ಪಿಂಚಣಿ ಬರುತ್ತದೆ ಎನ್ನುವಂಥ ನಿಶ್ಚಿತತೆ ಇಲ್ಲದಿರುವ ನೂತನ ಪಿಂಚಣಿ ಯೋಜನೆಯು ಎಲ್ಲಾ ಸರ್ಕಾರಿ ನೌಕರರಿಗೂ ಮುಂದಿನ ಜೀವನ ಹೇಗೆ, ನಿವೃತ್ತಿ ನಂತರ ನಮ್ಮ ಬದುಕು ಹೇಗೆ ಎಂದು ಒಂದು ರೀತಿಯ ಆತಂಕದ ಸ್ಥಿತಿಯನ್ನು ಸರ್ಕಾರಿ ನೌಕರರಲ್ಲಿ ನಿರ್ಮಾಣ ಮಾಡಿದೆ.

ಸರ್ಕಾರಿ ನೌಕರರು ನೆಮ್ಮದಿಯಿಂದ ಇದ್ದರೆ ಮಾತ್ರ ಸರ್ಕಾರದ ಯಂತ್ರ ಸರಿಯಾಗಿ ನಡೆಯುವುದಕ್ಕೆ ಸಾಧ್ಯ ಎಂಬುದು ತಮಗೂ ಗೊತ್ತಿದೆ. ಈಗ ತಾನೇ ತಾವು ಸಹ ಇದೇ ಸದನದಲ್ಲಿ ಇಡೀ ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ಕೆಲಸ ಮಾಡಿಸುವುದಕ್ಕೆ ಆಗುತ್ತಿಲ್ಲ ಎಂದು ಚರ್ಚೆ ಮಾಡಿದ್ದೆವು. ಕಾರಣವೇನೆಂದರೆ, ಅಲ್ಲಿ ನೌಕರರು ಇಲ್ಲವೆಂದು ನಾವೇ ಹೇಳುತ್ತೇವೆ. ನೌಕರರನ್ನು ಇಂತಹ ಸ್ಥಿತಿಯಲ್ಲಿಟ್ಟು ಅವರಿಂದ ಯಾವ ರೀತಿಯ ದಕ್ಷತೆಯನ್ನು ನಿರೀಕ್ಷಿಸುತ್ತಾರೆ. ಅವರ ಬದುಕಿನ ಬಗ್ಗೆ ಆಸೆಯನ್ನು ಕಳೆದುಕೊಳ್ಳುವಂತಹ ಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿದರೆ ಹೇಗೆ ಆಗುತ್ತದೆ? ನಾನು ಜಾಸ್ತಿ ಮಾತನಾಡುವುದಿಲ್ಲ ನೇರವಾಗಿ ಹೇಳುತ್ತೇನೆ. ದಯವಿಟ್ಟು ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರುತ್ತೇವೆ ಎಂದು ಚುನಾವಣಾ ಪ್ರಣಾಳಿಕೆಯಲ್ಲಿ ಸರ್ಕಾರ ಘೋಷಣೆ ಮಾಡಿದೆ, ಅದರ ಪ್ರಕಾರ ನಡೆದುಕೊಳ್ಳಲಿ. ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರುತ್ತೇವೆ ಎಂದು ಇವತ್ತು ಸದನದಲ್ಲಿ ದಯವಿಟ್ಟು ಘೋಷಣೆ ಮಾಡಬೇಕೆಂದು ಸರ್ಕಾರಕ್ಕೆ ಆಗ್ರಹ ಮಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವಂಥ ಉತ್ತರದಲ್ಲಿ ವಿವರವಾದ ವಿವರಣೆ ಇದೆ. ವಾಸ್ತವವಾಗಿ ಕೇಂದ್ರ ಸರ್ಕಾರ 2004 ರಲ್ಲಿ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿತ್ತು. ಇದಕ್ಕೆ ಪ್ರೇರಣೆ ಪಾಶ್ಚಿಮಾತ್ಯ ರಾಷ್ಟ್ರಗಳು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನೌಕರರಿಂದ ಕಟಾಯಿಸಿದ ಹಣವನ್ನು. . .

**ಸಭಾಪತಿಯವರು:–** ನಮ್ಮ ರಾಷ್ಟ್ರದ ಬಗ್ಗೆ ಮಾತನಾಡಿ, ಪಾಶ್ಚಿಮಾತ್ಯ ರಾಷ್ಟ್ರದ ಬಗ್ಗೆ ಮಾತನಾಡುವುದು ಬೇಡ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ರಾಷ್ಟ್ರದ ಬಗ್ಗೆಯೂ ಮಾತನಾಡುತ್ತೇನೆ. ಆದರೆ, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಯಾವ ರೀತಿಯ ಕಷ್ಟವಾಗಿದೆ ಎಂದು ಹೇಳಬೇಕಲ್ಲವೇ? ಏಕೆ ಬದಲಾವಣೆ ಮಾಡಬೇಕೆಂದು ಹೇಳಬೇಕಲ್ಲವೇ? ಏಕೆಂದರೆ, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿಯೇ ಅದರ ಬಗ್ಗೆ ಮರುಚಿಂತನೆ ಮಾಡುತ್ತಿದ್ದಾರೆ. ಅವರು ಎಲ್ಲೆಲ್ಲಿ ಹಣವನ್ನು ತೊಡಗಿಸಿದ್ದರೋ ಅದೆಲ್ಲವೂ ದಂಧೆಯಾಗಿ ಮುಳುಗಿ ಹೋಗಿರುವುದು ಗೊತ್ತಿದೆ. ಷೇರು ಪೇಟೆಯಲ್ಲಿ ಹಣವನ್ನು ತೊಡಗಿಸುವುದೆಂದರೆ ಅದು ಜೂಜಾಟಕ್ಕೆ ಸಮಾನ. ಷೇರುಪೇಟೆಯ ವ್ಯವಹಾರ, ಬೆಳವಣಿಗೆ ಸ್ಥಿರವಾಗಿರುವುದಿಲ್ಲ. ಇವತ್ತಿನ ದಿನ ನಮ್ಮ ಸರ್ಕಾರಿ ನೌಕರರನ್ನು 2 ರೀತಿಯಲ್ಲಿ ವರ್ಗೀಕರಣ ಮಾಡಲಾಗಿದೆ. ಒಂದು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡೆ ನಿವೃತ್ತಿ ವೇತನವನ್ನು ಪಡೆಯುವಂಥ ವರ್ಗ, ಮತ್ತೊಂದು ಕಡೆ ನಿವೃತ್ತಿ ವೇತನವನ್ನು ಪಡೆಯದೇ ಇರುವಂಥ ವರ್ಗ. ಇಲ್ಲಿ ಎರಡು ರೀತಿಯ ಮಹತ್ವವಾದ ವಿಚಾರವು ಅಡಕವಾಗಿದೆ. ಒಂದು ಭವಿಷ್ಯದ ಭದ್ರತೆಯ ವಿಚಾರವಾದರೆ, ಮತ್ತೊಂದು ಸೇವಾ ಅವಧಿಯಲ್ಲಿರುವಾಗ ಆ ನೌಕರರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕಾದಂಥ; ಬದ್ಧತೆಯಿಂದ ಕೆಲಸ ಮಾಡಬೇಕಾದಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡುವಂಥದ್ದಾಗಿದೆ. ನಾವು ಇವತ್ತಿನ ದಿನ ವಯಸ್ಸಾದ ನಿವೃತ್ತ ನೌಕರರಿದ್ದರೆ ಅವರ ಮಕ್ಕಳು-ಮೊಮ್ಮಕ್ಕಳು, ಅವರಿಗೆ ಬಹಳ ಚೆನ್ನಾಗಿ ಸ್ನಾನ ಮಾಡಿಸಿ, ಬಟ್ಟೆ ತೊಡಿಸಿ ಅವರನ್ನು Treasury ಅಥವಾ ಬ್ಯಾಂಕಿಗೆ ಕರೆದುಕೊಂಡು ಹೋಗುವುದನ್ನು ನೋಡುತ್ತಿದ್ದೇವೆ. ವಯಸ್ಸಾದವರನ್ನು ಬಹಳ ದಿವಸ ಚೆನ್ನಾಗಿ ಇರಲಿ, ಆರೋಗ್ಯವಾಗಿರಲಿ ಎಂದು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಾರೆ. ಏಕೆಂದರೆ, ಅವರಿಗೆ ಬರುವ ಪಿಂಚಣಿ ಉದ್ದೇಶದಿಂದ ನೋಡಿಕೊಳ್ಳುತ್ತಾರೆ. ಹಾಗೆಯೇ ನಿವೃತ್ತಿ ಸಮಯದಲ್ಲಿ ಪಿಂಚಣಿ ಬರುತ್ತದೆ ಏತಕ್ಕೆ ಆತಂಕ ಪಡಬೇಕೆಂದು ಬಹಳ ಜನ ಯಾವ ಕಾರಣಕ್ಕೂ ಲಂಚ ಮುಟ್ಟುವುದಕ್ಕೆ ಹೋಗುವುದಿಲ್ಲ. ಒಂದು ಕಡೆ ಪಿಂಚಣಿ ಇಲ್ಲವೆಂದರೆ ಆ ನೌಕರ ಆತಂಕಕ್ಕೆ ಒಳಗಾಗುತ್ತಾನೆ. ಸರ್ಕಾರವು ನೌಕರರ ಸಂಬಳದಿಂದ 10% ಕಟಾಯಿಸಿ, ಸರ್ಕಾರದಿಂದ 10% ಸೇರಿಸುತ್ತೇವೆ ಎಂದು ಉತ್ತರ ನೀಡಿದೆ. ಆದರೆ, ಹಣ ಎಲ್ಲಿ ಹೋಗುತ್ತಿದೆ ಎಂದು ಯಾರಿಗೂ ಗೊತ್ತಾಗುತ್ತಿಲ್ಲ. ಎಲ್ಲಿ ತೊಡಗಿಸಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ಇದು ಅತ್ಯಂತ ಆತಂಕದ ವಿಚಾರವಾಗಿದೆ. ಇವತ್ತು ಇದರ ಬಗ್ಗೆ ದೆಹಲಿ ಸರ್ಕಾರ ಮರುಚಿಂತನೆ ಮಾಡಿದೆ. ಹತ್ತಾರು ರಾಜ್ಯಗಳು ಸಹ ಮರುಚಿಂತನೆ ಮಾಡುತ್ತಿದೆ. ಅವರು ಕಟಾಯಿಸಿದ ಹಣ ಒಂದು ಕಡೆ ಇದೆ, ಆತಂಕ ಪಡಬೇಕಾಗಿಲ್ಲ. ಅವರು ಆ ಹಣವನ್ನು ವಾಪಸ್ಸು ನೀಡುವುದಕ್ಕೂ ತಯಾರಿದ್ದಾರೆ. ಹಾಗಾಗಿ ಎಲ್ಲಿಯೋ ಒಂದು ಕಡೆ ನೌಕರ ತನ್ನ ಸೇವಾ ಅವಧಿಯಲ್ಲಿ ಬದ್ಧತೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಬೇಕಾದಂಥ ವಿಚಾರ ಒಂದು ಕಡೆ ಇದೆ. ಇನ್ನೊಂದು ಕಡೆ ತನ್ನ ನಿವೃತ್ತಿಯ ನಂತರ ಬದುಕಿನ ಭದ್ರತೆ ವಿಚಾರವಾಗಿದೆ. ಈ ಎರಡೂ ಕಾರಣಗಳ ಹಿನ್ನೆಲೆಯಲ್ಲಿ... ಹೌದು ಕೇಂದ್ರ ಸರ್ಕಾರ ಇಡೀ ದೇಶ ವ್ಯಾಪ್ತಿಯಲ್ಲಿ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದೆ. ಅದರಲ್ಲಿ ಮಾನ್ಯ ಅರುಣ ಶಹಾಪುರರವರ ಜವಾಬ್ದಾರಿಯೇ ಜಾಸ್ತಿ ಇದೆ. ಮಾನ್ಯ ಸದಸ್ಯರು ಬರೀ ರಾಜ್ಯ ಸರ್ಕಾರಕ್ಕೆ ಮಾತ್ರವಲ್ಲ, ಕೇಂದ್ರ ಸರ್ಕಾರಕ್ಕೂ ಹೇಳಬೇಕಾಗಿದೆ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರವು 2004ರಲ್ಲಿ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿತು.

(ಗೊಂದಲ)

**ಸಭಾಪತಿಯವರು:-** ಬಿಡಿ, ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಏತಕ್ಕೆ ಗುದ್ದಾಡುತ್ತೀರಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ವಾಸ್ತವಾಂಶವನ್ನು ಹೇಳಬೇಕಲ್ಲವೇ? ನಾನು ಯಾವುದಾದರೂ ಸಂಗತಿಯನ್ನು ಮರೆಮಾಚುತ್ತಿದ್ದೇನೆಯೇ? ನಾವು ತಡವಾಗಿ ನಮ್ಮ ರಾಜ್ಯದಲ್ಲಿ 2006ರಲ್ಲಿ ಎರಡು ವರ್ಷಗಳ ನಂತರ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿರುತ್ತದೆ. ಈ ವಿಚಾರದಲ್ಲಿ ಎಲ್ಲೋ ಒಂದು ಕಡೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಮುಖ್ಯಮಂತ್ರಿಗಳು ಪರಿಶೀಲನೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಹಾಗಾಗಿ ಇವತ್ತಿಗೂ ಮಾನ್ಯ ಮುಖ್ಯಮಂತ್ರಿಗಳು ನಾವುಗಳು ಕೇಳಿದಾಗಲೆಲ್ಲಾ, ‘ಮುಂದಿನ ದಿನಗಳಲ್ಲಿ ನೋಡೋಣ’ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಹಾಗಾಗಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಯ ಪೂರ್ವಕವಾಗಿ ಆಗ್ರಹ ಮಾಡುವುದೇನೆಂದರೆ, ಸರ್ಕಾರಿ ನೌಕರ ಪ್ರಾಮಾಣಿಕವಾಗಿ ಬದ್ಧತೆಯಿಂದ ಕೆಲಸ ಮಾಡುವ ದಿಸೆಯಲ್ಲಿ ಮತ್ತು ಭವಿಷ್ಯದ ಬದುಕಿನ ಭದ್ರತೆ ವಿಚಾರದಲ್ಲಿ ನೂತನ ಪಿಂಚಣಿ ಯೋಜನೆಯನ್ನು ಬದಿಗೆ ಸರಿಸಿ, ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವುದು ಸರಿ. ಇದರಿಂದ ಸರ್ಕಾರಕ್ಕೆ ಯಾವ ಬಾಧಕವು ಆಗುವುದಿಲ್ಲ. ಏಕೆಂದರೆ, ಆಗ ಸರ್ಕಾರದಿಂದಲೂ ಸಹ 10% ಸೇರಿಸುವಂಥ ಪ್ರಶ್ನೆ ಬರುವುದಿಲ್ಲ.

**ಸಭಾಪತಿಯವರು:–** ಅದೆಲ್ಲಾ ಮಾತನಾಡುವುದು ಬೇಡ, ನಿಮ್ಮ ಅಭಿಪ್ರಾಯವನ್ನು ತಿಳಿಸಿ ಸಾಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನೌಕರರ ಸಂಬಳದಿಂದ 10% ಕಟಾಯಿಸಿದರೆ, ಸರ್ಕಾರದಿಂದಲೂ 10% ಸೇರಿಸಬೇಕಲ್ಲವೇ? ಆ ಪ್ರಶ್ನೆ ಉಳಿಯುತ್ತದೆ. ಆ 10% ಸೇರಿಸುವ ಪ್ರಶ್ನೆಯೇ ಬರುವುದಿಲ್ಲ. ಹಾಗಾಗಿ ಸರ್ಕಾರ ಈ ಕುರಿತು ಮರುಚಿಂತನೆ ಮಾಡಬೇಕು. ಏನು ಸರ್ಕಾರಿ ನೌಕರರಿದ್ದಾರೆಯೋ, ಅವರಿಗೆ ಭದ್ರತೆ ನೀಡುವ ವಿಚಾರದಲ್ಲಿ ಸರ್ಕಾರ ಒಂದು ವಿಶೇಷವಾದ ಪ್ರಕಟಣೆ ಮಾಡುವಂಥ ದಿಸೆಯಲ್ಲಿ ಮುಂದಾಗಬೇಕೆಂದು ನೌಕರರ ಪರವಾಗಿ ನಾನು ಆಗ್ರಹಿಸುತ್ತೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನೂತನ ಪಿಂಚಣಿ ಯೋಜನೆಯಲ್ಲಿ 2006ರ ನಂತರ ಸುಮಾರು 1,75,000 ನೌಕರರಿದ್ದಾರೆ. ಹಳೆಯ ಪಿಂಚಣಿ ಯೋಜನೆಯಲ್ಲಿ ಉಳಿದುಕೊಂಡಿರುವಂಥವರು ಸುಮಾರು 4.00 ಲಕ್ಷಕ್ಕಿಂತ ಹೆಚ್ಚು ನೌಕರರಿದ್ದಾರೆ. ಆದರೆ, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಅಥವಾ ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುವಂಥ ನೌಕರರಿಗೆ ಅವರ ಸಂಬಳದಿಂದ 10% ಕಟಾಯಿಸಿ, ಸರ್ಕಾರದಿಂದ 10% ಸೇರಿಸುತ್ತೇವೆ ಎಂದು ಹೇಳಲಾಗಿದ್ದು, 10% ಹಣವನ್ನು ನೌಕರರಿಂದ ಕಟಾಯಿಸಲಾಗುತ್ತಿದೆ. ಆದರೆ, ಯಾವ ನೇಮಕಾತಿ ಪ್ರಾಧಿಕಾರದಿಂದ 10% ಹಣವನ್ನು ಸೇರಿಸಬೇಕೆಂದು ಇತ್ತೋ, 2006 ರಿಂದ ಆ 10% ಹಣವನ್ನು ಅವರು ಪಾವತಿಸುತ್ತಿಲ್ಲ. ಒಂದು ಕಡೆ ಸರ್ಕಾರದಿಂದ ನೇರವಾಗಿ ನೇಮಕವಾದವರಿಗೆ ಹಳೆಯ ಪಿಂಚಣಿ ಯೋಜನೆ ಇಲ್ಲದಿರುವುದರಿಂದ ತೊಂದರೆಯಾಗುತ್ತಿದ್ದರೆ, ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಯಾವುದನ್ನು ನೀಡುತ್ತಿಲ್ಲ. ಆದ್ದರಿಂದ ಸರ್ಕಾರ ದಯಮಾಡಿ... ನಾನು ಚುನಾವಣಾ ಪ್ರಣಾಳಿಕೆ ವಿಷಯದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಮಾನವೀಯತೆ ದೃಷ್ಟಿಯಿಂದ ಒಬ್ಬ ನೌಕರ 60 ವರ್ಷ ಸೇವೆ ಸಲ್ಲಿಸಿ, 60 ವರ್ಷದ ನಂತರ ಏನು ಕೆಲಸ ಮಾಡುವುದಕ್ಕೆ ಸಾಧ್ಯ? ಇವತ್ತಿನ ದಿನ ಬರದೇ ಇರುವಂಥ ಕಾಯಿಲೆಗಳೆಲ್ಲಾ ಬಂದು ಯಾವುದೇ ರೀತಿಯ ಕೆಲಸ ಮಾಡುವುದಕ್ಕೆ ಆಗದೇ ಇರುವ ಸ್ಥಿತಿಗೆ ಅವರು ತಲುಪಿರುತ್ತಾರೆ. ಇಂತಹ ಸ್ಥಿತಿಯಲ್ಲಿ ಇತ್ತೀಚೆಗೆ ‘ನಾವು ಪರಿಶೀಲನೆ ಮಾಡುತ್ತೇವೆ, ಸಮಿತಿಯನ್ನು ರಚಿಸುತ್ತೇವೆ’ ಎನ್ನುವಂಥ ಸರ್ಕಾರದ ಹೇಳಿಕೆಯನ್ನು ಪತ್ರಿಕೆಗಳಲ್ಲಿ ನೋಡಿದ್ದೇವೆ. ಆದರೆ, ಈ ಕೂಡಲೇ ಸರ್ಕಾರ ನೂತನ ಪಿಂಚಣಿ ಯೋಜನೆಯನ್ನು ದಯವಿಟ್ಟು ಸ್ಥಗಿತ ಮಾಡಬೇಕು. ಹಳೆಯ ಪಿಂಚಣಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯೋಜನೆ ಏನಿದೆ, ಆ ಯೋಜನೆ ನಿಜಕ್ಕೂ ಒಂದು ರೀತಿಯಲ್ಲಿ ಚೆನ್ನಾಗಿ ಇದೆ. ನೌಕರರ ಬದುಕಿಗೆ ಅದು ಒಂದು ಭದ್ರತೆಯನ್ನು ಒದಗಿಸುತ್ತದೆ. ನೂತನ ಪಿಂಚಣಿ ಯೋಜನೆ ಬಂದು ನೌಕರರಿಗೆ ಅಭದ್ರತೆಯನ್ನು ಕಾಡುತ್ತಿದೆ. ನೌಕರರಿಗೆ ಯಾವುದೇ ರೀತಿಯಲ್ಲಿಯೂ ದಿಕ್ಕು ತೋರುತ್ತಿಲ್ಲ. ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಆ ಕಾರಣದಿಂದ ಈ ಕೂಡಲೇ ಸರ್ಕಾರ ನೂತನ ಪಿಂಚಣಿ ಯೋಜನೆಯನ್ನು ಹಿಂಪಡೆದುಕೊಂಡು, ಹಳೆಯ ಪಿಂಚಣಿ ಯೋಜನೆಯನ್ನು ತಕ್ಷಣವೇ ಜಾರಿಗೊಳಿಸುತ್ತೇವೆ ಎಂದು ಇವತ್ತಿನ ದಿನವೇ ಸದನದಲ್ಲಿ announce ಮಾಡಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತೇನೆ. ಏಕೆಂದರೆ, ಕೆಲವರೆಲ್ಲಾ WhatsApp ನಲ್ಲಿ ಏನೆಲ್ಲಾ ಸಂದೇಶವನ್ನು ಕಳುಹಿಸುತ್ತಿದ್ದಾರೆ ಎಂದರೆ, ಅದನ್ನು ಈ ಸದನದಲ್ಲಿಯೂ ಹೇಳುವುದಕ್ಕೂ ಆಗುತ್ತಿಲ್ಲ. ತಮಗೂ ಸಹ ನಿನ್ನೆ ದಿವಸ ಕಳುಹಿಸಬೇಕೆಂದು ಇದ್ದೆ. ಆದರೆ, ಕಳುಹಿಸುವುದಕ್ಕಾಗಲಿಲ್ಲ. ಸರ್ಕಾರದ ಹೇಳಿಕೆಗಳು ಪೂರಕವಾಗಿವೆ. ಆದರೆ, ಎಂ.ಎಲ್.ಸಿ. ಗಳು ಯಾರು ಸಹ ಸರಿಯಾಗಿ ಒತ್ತಡ ತರುತ್ತಿಲ್ಲ.

(349) 11-12-2018 ಎಸ್‌ಕೆ-ಬಿಎನ್‌ಎಸ್ 3-40

**(ಸಭಾಪತಿಯವರ ಉಪಸ್ಥಿತಿ )**

**ಶ್ರೀ ಪುಟ್ಟಣ್ಣ (ಮುಂದು):-**ಮಾನ್ಯ ಸಭಾಪತಿಯವರೇ, ಹಾಗಾಗಿ ನಿಮಗೆ ಎಲ್ಲೋ ಅನರ್ಹತೆ ಇದೆ. ನಿಮಗೆ ಯಾರಿಗೂ ಯೋಗ್ಯತೆ ಇಲ್ಲ ಮತ್ತು ಇನ್ನು ಕೆಟ್ಟದಾಗಿ ಮತ್ತು ಆ ರೀತಿಯಾದಂತಹ ಹೇಳಿಕೆಗಳು WhatsApp ನಲ್ಲಿ ಹರಿದಾಡುತ್ತಿದೆ. ಆದರೆ ನಾವು honest ಆಗಿ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಶಿಕ್ಷಣ ಕ್ಷೇತ್ರದಿಂದ elect ಆಗಿರುವ ನಾವೆಲ್ಲರೂ ಕೂಡ ಒಕ್ಕೊರಲಾಗಿ ಹಳೆ ಪಿಂಚಣಿ ಯೋಜನೆಯನ್ನು ಜಾರಿಗೆ ತನ್ನಿ ಎಂದು ಹೇಳಬಯಸುತ್ತೇನೆ. ಇದು ನಿಜವಾಗಿಯೂ ಸರ್ಕಾರಿ ನೌಕರರಿಗೆ ಭದ್ರತೆಯನ್ನು ಒದಗಿಸುತ್ತದೆ. ನಮಗೆಲ್ಲರಿಗೂ ಕೂಡ ಅದು ಬೇಕು. ಇದರ ಆಗತ್ಯತೆ ಇದೆ. ಮೊದಲು ಈ ಕಾಯಿಲೆ ಶೇಕಡಾ 5 ರಷ್ಟು ಇದ್ದರೆ, ಇವತ್ತು ಶೇಕಡಾ 70-80 ರಷ್ಟು ತಲುಪಿದೆ. ಮೊದಲು ಸಕ್ಕರೆ ಕಾಯಿಲೆ, ರಕ್ತದೊತ್ತಡ ಶೇಕಡಾ 5 ರಷ್ಟು ಇದ್ದರೆ ಇವತ್ತು ಶೇಕಡಾ 50-60ರಷ್ಟು ಜನರಿಗೆ ಬಂದಿದೆ. ಇವತ್ತು ಆರೋಗ್ಯ ಯೋಜನೆಯ ಬಗ್ಗೆ ಹೇಳುವುದಾದರೆ, ಇವತ್ತು ಆರೋಗ್ಯ ಯೋಜನೆಯನ್ನು ಎಲ್ಲಿ ಸರಿಯಾಗಿ ಜಾರಿಗೆ ತಂದಿದ್ದೀರಾ ಸ್ವಾಮಿ? ನೀವು ಯಾರಿಗೆ reimbursement ನ್ನು ಕೊಡುತ್ತಿದ್ದೀರಿ? ಮಾನ್ಯ ಸಭಾಪತಿಯವರೇ ತಮಗೆ ಗೊತ್ತಿದೆ. ಇವತ್ತು reimbursement ಗೆ ಹಾಕಿಕೊಂಡಿರುವ ಒಬ್ಬ ನೌಕರನಿಗೆ ಇನ್ನೂ ಐದು ವರ್ಷವಾದರೂ ಮರುಪಾವತಿಯ ಹಣ ಬರುತ್ತಿಲ್ಲ. ನಾವು ಇದಕ್ಕೆ ಒತ್ತಡವನ್ನು ಕೂಡ ತರಬೇಕಾಗುತ್ತದೆ. ಅವರಲ್ಲಿ ಕೆಲವರು patients ಇರುತ್ತಾರೆ. ಇನ್ನು ಕೆಲವರು kidney problems ನಿಂದ ಬಳಲುತ್ತಿರುತ್ತಾರೆ. ಅವರು ಆಸ್ಪತ್ರೆಗೆ ಹಣವನ್ನು ಕಟ್ಟಬೇಕು ಎಂದು ಒತ್ತಡ ತಂದರೆ, ಅವರು ಎಲ್ಲಿಂದ ಹಣವನ್ನು ತರುತ್ತಾರೆ? ಈ ಖಾಯಿಲೆಗೆಂದು ಒಂದೂವರೆ ಎರಡು ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ, ನೀವು ಇಪ್ಪತ್ತೈದು ಸಾವಿರ, ಮೂವತ್ತು ಸಾವಿರ ರೂಪಾಯಿಗಳ ಮರುಪಾವತಿ ಮಾಡುತ್ತಿದ್ದೀರಿ. ಒಂದು ಕಡೆ ಹೊಸ ಪಿಂಚಣಿ ಯೋಜನೆಯನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಾರಿಗೆ ತಂದು, ಅದನ್ನು ಕೂಡ ಮುಚ್ಚಿದ್ದೀರಿ. ಆದರೆ ಆರೋಗ್ಯ ವಿಮಾ ಯೋಜನೆಯನ್ನು ಸರಿಯಾಗಿ ಜಾರಿಗೆ ತಂದಿಲ್ಲ. ಎಲ್ಲಾ ರೀತಿಯಿಂದಲೂ ನೌಕರರಿಗೆ ತುಂಬಾ ತೊಂದರೆಯಾಗಿದೆ. ದಯವಿಟ್ಟು, ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ದಯವಿಟ್ಟು, ಕೂಡಲೇ ಈ ಪದ್ಧತಿಯನ್ನು ಕೈಬಿಟ್ಟು, ಹಳೆ ಪಿಂಚಣಿ ಯೋಜನೆಯನ್ನು ಜಾರಿಗೆ ತರಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಹಳೆ ಪಿಂಚಣಿ ಯೋಜನೆ ಮತ್ತು ಹೊಸ ಪಿಂಚಣಿ ಯೋಜನೆ ಬಗ್ಗೆ ತಮಗೆ ಗೊತ್ತಿಲ್ಲದಿರುವಂತಹ ವಿಚಾರವೇನಿಲ್ಲ. ಈ ಯೋಜನೆಯನ್ನು 2004 ರಲ್ಲಿ ಜಾರಿಗೆ ತರಬೇಕಾದರೆ, ಪಾರ್ಲಿಮೆಂಟ್‌ನಲ್ಲಿ ಈ ಕುರಿತು ಎಷ್ಟರಮಟ್ಟಿಗೆ ಚರ್ಚೆಯಾಗಿದೆ ಎಂಬುದರ ಬಗ್ಗೆ ನಾನು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ತಂದಿರುವ ವಿಚಾರದ ಉದ್ದೇಶ ಎಲ್ಲರಿಗೂ ಗೊತ್ತಿದೆಯೋ ಅಥವಾ ಗೊತ್ತಿಲ್ಲವೋ ನನಗೆ ಗೊತ್ತಿಲ್ಲ. I am very sorry. ಆ ತರಹದ ಒಂದು ಯೋಜನೆಯನ್ನು ತಂದಿದ್ದಾರೆ. ಇದರ ಸಾಧಕ-ಭಾದಕಗಳು ಏನೆಂಬುದರ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಬೇಕಾಗುತ್ತದೆ. ವಿಧಾನ ಸಭೆ ಹಾಗೂ ವಿಧಾನ ಪರಿಷತ್‌ನಲ್ಲಿಯೂ ಕೂಡ ಚರ್ಚೆಯಾಗಬೇಕಾಗುತ್ತದೆ. ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಿರುವ ಬಗ್ಗೆ ನನಗೆ ಇದುವರೆಗೂ ಯಾವುದೇ ತರಹ ವಿಚಾರ ಕೂಡ ಗೊತ್ತಿಲ್ಲ. ಇದ್ದರೆ ತಾವು ಅದನ್ನು ತರಿಸಿಕೊಳ್ಳಬಹುದು. All of a sudden ಒಪ್ಪಿದ್ದಾರೆಂಬುದು ಕಾಣುತ್ತದೆ. ತದನಂತರದಲ್ಲಿ ವಾಪಸ್ಸು ಅಲ್ಲಿಂದ ಬಂದ ಮೇಲೆ respective State Governments ಗೆ ಕಳುಹಿಸಿಕೊಟ್ಟಿದ್ದಾರೆ. ಅದು ಬಂದ ಮೇಲೆ ನಮ್ಮ ರಾಜ್ಯ ಸರ್ಕಾರದಲ್ಲಿಯೂ ಕೂಡ ಇದರ ಬಗ್ಗೆ ಎಲ್ಲಿಯೂ ಚರ್ಚೆಯಾಗಿರುವಂತಹದ್ದರ ಕುರಿತು ಇದುವರೆಗೂ ನನಗೆ ಮಾಹಿತಿ ಸಿಕ್ಕಿಲ್ಲ. ಹಾಗಾಗಿ ಈ ಮಾತನ್ನು ಏಕೆ ಹೇಳುತ್ತೇನೆಂದು ಹೇಳಿದರೆ, ಇಂತಹ ಒಂದು ಯೋಜನೆಯನ್ನು ತರಬೇಕಾದರೆ, ಹಳೆ ಪಿಂಚಣಿ ಯೋಜನೆಗಿಂತ ಈ ಹೊಸ ಪಿಂಚಣಿ ಯೋಜನೆ ಉತ್ತಮವಾದಂತಹ ಯೋಜನೆಯೆಂದು ತಂದಿದ್ದಾರೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಆ ಸಂದರ್ಭದಲ್ಲಿ ಇದನ್ನು ಜಾರಿಗೆ ತರುವಾಗ, ಇದರ ಬಗ್ಗೆ ನಮ್ಮ ನೌಕರರು ಹೋರಾಟ ಮಾಡುವುದಕ್ಕೆ ಹೋಗಲಿಲ್ಲ. ಅದನ್ನು ಪ್ರತಿರೋಧ ಮಾಡುವುದಕ್ಕೆ ಹೋಗಲಿಲ್ಲ ಮತ್ತು ಏಕೆಂದು ಹೇಳಿದರೆ ನೌಕರರಿಗೆ ಈ ವಿಚಾರದ ಬಗ್ಗೆ ಗೊತ್ತಿರಲಿಲ್ಲ. ಈ ವಿಚಾರ ತದನಂತರದಲ್ಲಿ ಗೊತ್ತಾಯಿತು. ಮಾನ್ಯ ಶ್ರೀಕಂಠೇಗೌಡರು ಹೇಳಿದ ಹಾಗೇ, ಈ ಹಣವನ್ನು ಎಲ್ಲಿ ತೊಡಗಿಸುತ್ತಿದ್ದಾರೆಂಬುದು ಗೊತ್ತಿಲ್ಲ ಮತ್ತು ಎಲ್ಲಿ ಕೂಡಿಟ್ಟಿದ್ದಾರೆ ಎಂಬುದು ಗೊತ್ತಿಲ್ಲ. ಮಾನ್ಯ ಪುಟ್ಟಣ್ಣನವರು ಬಹಳ ಗಂಭೀರವಾದ ವಿಚಾರವನ್ನು ಹೇಳಿದರು. ಅನುದಾನಿತ ಶಾಲೆಗಳಲ್ಲಿ ಕೆಲಸ ಮಾಡುವಂತಹ ನೌಕರರಿಗೆ ಮತ್ತು ಮ್ಯಾನೇಜ್‌ಮೆಂಟ್‌ನವರಿಗೆ ಬಹಳಷ್ಟು ವಿರಸ ಇರುವಂತಹದ್ದು ತಮಗೂ ಗೊತ್ತಿದೆ. ಇದು ಎಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಶೇಕಡಾ 10ರಷ್ಟು ಹಣವನ್ನು ತೊಡಗಿಸಬೇಕು ಎಂದು ಹೇಳಿದರೆ, ಆಡಳಿತ ಮಂಡಳಿಯವರು ಎಲ್ಲಿ ತೊಡಗಿಸುತ್ತಿದ್ದಾರೆ. More than 90% of aided Schools ನವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾರೂ ಕೂಡ ಹಣವನ್ನು ತೊಡಗಿಸಿಲ್ಲ ಎಂಬ ವಿಚಾರವನ್ನು ನಾನು ಕರಾರುವಾಕ್ಕಾಗಿ ಹೇಳುತ್ತೇನೆ. ಈ ತರಹ ಪರಿಸ್ಥಿತಿ ಇರಬೇಕಾದರೆ, ಈ ಶೇಕಡ 10 ರಷ್ಟನ್ನು ನೌಕರರು ನಂಬಿಕೊಂಡು, ನಾಳೆ ಬೆಳಿಗ್ಗೆ ನಿವೃತ್ತಿ ಹೊಂದಿದಂತಹ ಸಂದರ್ಭದಲ್ಲಿ ಶೇಕಡ 10 ರಷ್ಟು ಹಣಕ್ಕೆ ಗ್ಯಾರಂಟಿ ಇರುವುದಿಲ್ಲ. ಇವರು ಎಲ್ಲಿ ಹಣವನ್ನು ತೊಡಗಿಸಿದ್ದಾರೆ ಮತ್ತು ಇದೊಂದು ಷೇರು ಮಾರುಕಟ್ಟೆಯಿದ್ದಂತೆ. ಅಕಸ್ಮಾತ್ ಈ ಷೇರು ಮಾರುಕಟ್ಟೆ ಬಿದ್ದು ಹೋಗಬಹುದು ಮತ್ತು ಇದು ಹೆಚ್ಚು ಕಡಿಮೆ ಆಗಬಹುದು. ಆಗ ಯಾರ ಹತ್ತಿರ ಈ ಹಣ ಇರುತ್ತದೆ ಎಂಬುದು ಗೊತ್ತಿಲ್ಲ. ನೌಕರರಿಗೆ ದುಡಿಯುವ ಶಕ್ತಿ ಇಲ್ಲದೇ ಇದ್ದಾಗ, ಅವರಿಗೆ ಆರ್ಥಿಕ ಭದ್ರತೆ ಬೇಕಾಗುತ್ತದೆ. ಅವರು ಇನ್ನೊಬ್ಬರ ಮೇಲೆ ಅವಲಂಬಿತವಾಗುವಂತಹ ಸಂದರ್ಭದಲ್ಲಿ ಅವರಿಗೊಂದು ಆರ್ಥಿಕ ಭದ್ರತೆ ಇದ್ದರೆ, ಅವರು ನಿವೃತ್ತಿ ಹೊಂದಿದ ನಂತರ ನೆಮ್ಮದಿಯಿಂದ ಜೀವನ ಕಳೆಯುವುದಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ ಹೇಳಬೇಕೆಂದರೆ, ನಮ್ಮ ವೇತನ ಪರಿಷ್ಕರಣೆಯಾಗಬೇಕಾದರೆ, ಎಲ್ಲಿಯಾದರೂ ಚರ್ಚೆಯಾಗುತ್ತದೆಯೇ? ಪಾರ್ಲಿಮೆಂಟ್‌ನಲ್ಲಿ ಲೋಕಸಭಾ ಸದಸ್ಯರಿಗೆ ವೇತನ ಪರಿಷ್ಕರಣೆಯಾಗುವಾಗ ಗೌರವ ಧನ ಪರಿಷ್ಕರಣೆ ಮಾಡಬೇಕಾದಾಗ ಚರ್ಚೆಯಾಗುತ್ತದೆಯೇ? ಇವರಿಗೆ ಮಾತ್ರ ವೇತನ ಪರಿಷ್ಕರಣೆ ಆಗುತ್ತಿರುತ್ತದೆ ಎಂದು ಜನರು ಹೇಳುತ್ತಾರೆ. ತಾವು ಮಾನ್ಯ ಹಿರಿಯ ಸದಸ್ಯರು ಇದ್ದೀರಿ. ದಯವಿಟ್ಟು, ಕ್ಷಮಿಸಬೇಕು. ಇದರ ಬಗ್ಗೆ ನಾನು ಹೇಳುತ್ತಿಲ್ಲ, ಹೊರಗಡೆ ಜನ ಹೇಳುತ್ತಾರೆ. ನಿಮಗೆ ವೈದ್ಯಕೀಯ ಭತ್ಯೆ ಇದೆ. ಇದನ್ನು ನಮಗೆ ಏತಕ್ಕೆ ಕೊಡಬಾರದು ಎಂದು ಕೇಳುತ್ತಾರೆ. ನಾನು ಒಂದು ವರ್ಷ ಶಾಸಕನಾಗಿದ್ದರೆ, ನಾನು ನಿವೃತ್ತಿ ಹೊಂದಿದ ನಂತರ ನನಗೆ ಇಂತಿಷ್ಟು ಪಿಂಚಣಿ ಎಂದು ಫಿಕ್ಸ್ ಆಗುತ್ತದೆ. ಸುಮಾರು 40 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದಂತಹ ನಮ್ಮ ನೌಕರರಿಗೆ, ಪಿಂಚಣಿ ಕೊಡುವುದಕ್ಕೆ ಆಗಿಲ್ಲವೆಂದು ಹೇಳಿದರೆ, is it a Constitutional right? ನಮ್ಮ ಸಂವಿಧಾನ ಇದರ ಬಗ್ಗೆ ಏನು ಹೇಳುತ್ತದೆ? N.P.S. (New Pension Scheme), ಏನು ಇದೆ. ಇದು ಇತ್ತೀಚೆಗೆ ಬಂದಂತಹ ಯೋಜನೆಯಾಗಿದೆ. O.P.S. (Old Pension Scheme) ಎನ್ನುವುದು, it is a matter of right. ಇದು ಬಹಳ ಗಂಭೀರವಾದಂತಹ ವಿಚಾರವಾಗಿದೆ. ನಾನು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಅವರಿಗೆ ಸೇವೆ ಮಾಡುವುದಕ್ಕೆ ಸೇವಾ ಭದ್ರತೆ ಬೇಕಾಗುತ್ತದೆ. ಅದೇ ತರಹ ನಿವೃತ್ತಿ ಹೊಂದಿದ ನಂತರ ಅವರಿಗೆ ಭದ್ರತೆ ಬೇಕಾಗುತ್ತದೆ. ಅವರು ನಿವೃತ್ತಿ ಹೊಂದಿದ ನಂತರ, ಏನೇನು ಆಶೋತ್ತರಗಳನ್ನು ಇಟ್ಟುಕೊಂಡಿರುತ್ತಾರೆ. ಮಕ್ಕಳಿಗೆ ಮದುವೆ ಮಾಡುವುದು ಇರುತ್ತದೆ ಮತ್ತು ಮಕ್ಕಳನ್ನು ಓದಿಸುವ ಪರಿಸ್ಥಿತಿ ಇರುತ್ತದೆ ಹಾಗೂ ಬೇರೆ ಬೇರೆ ವಿಚಾರಗಳು ಇರುತ್ತದೆ. ಎಲ್ಲಾ ರೀತಿಯಲ್ಲೂ ಕೂಡ ಆರ್ಥಿಕ ಭದ್ರತೆಯನ್ನು ಒದಗಿಸಿಕೊಡಬೇಕಾದಂತಹ ಅಗತ್ಯ ಇದೆ. ಈ right ನ್ನು ದಯವಿಟ್ಟು, forthwith ಇದನ್ನು ಗಂಭೀರವಾಗಿ ಪರಿಗಣಿಸಿ. ಈಗಾಗಲೇ ಹೇಳಿದ ಹಾಗೆ ದೆಹಲಿ ಸರ್ಕಾರದವರು ಮುಂದೆ ಬಂದಿದ್ದು ಅವರು ಈ ಎನ್.ಪಿ.ಎಸ್ ಪದ್ಧತಿಯನ್ನು ತೆಗೆದು ಹಾಕಿದ್ದಾರೆ. ಇದು ದೇಶಕ್ಕೆ ಮಾದರಿಯಾಗುವಂತಹದ್ದು ಇದೆ. ಕರ್ನಾಟಕ ರಾಜ್ಯ ಸರ್ಕಾರದಿಂದಲೂ ಇದು ಆಗಬೇಕು ಎಂದು ನಾನು ಈ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಖ್ಯಮಂತ್ರಿಗಳಿಗೂ ಈ ವಿಚಾರವನ್ನು ಸದನದ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಜೊತೆಗೆ ಶಿಕ್ಷಣ ಖಾತೆಯೂ ಮಾನ್ಯ ಮುಖ್ಯ ಮಂತ್ರಿಯವರ ಬಳಿಯಿದೆ. ನೌಕರರಿಗೆ ಸೇವಾ ಭದ್ರತೆ ಮತ್ತು ಅವರು ನೆಮ್ಮದಿಯಾಗಿ ಜೀವನ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಹಾಗೂ ಇದು ನಲವತ್ತು ವರ್ಷ ಸುದೀರ್ಘವಾಗಿ ಸೇವೆ ಸಲ್ಲಿಸಿದಂತಹವರಿಗೆ ನಾವು ಕೊಡುವಂತಹ ಕಾಣಿಕೆ. It is a matter of right. ಆ right ಅನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಆಯನೂರು ಮಂಜುನಾಥರವರು.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದನ್ನು ಯಾವ ಸರ್ಕಾರ ಮಾಡಿತ್ತು ಹೇಳಿ, ಯಾರೂ ಯಾರಿಗೂ ಕೈ ತೋರಿಸುವ ವಿಷಯವೇ ಅಲ್ಲ. ಇದಕ್ಕೆ ಎಲ್ಲಾ ಸರ್ಕಾರದವರು ಪಾಲುದಾರರು. ಎನ್.ಡಿ.ಎ. ಸರ್ಕಾರದಲ್ಲಿ ಮಾನ್ಯ ವಾಜಪೇಯಿಯವರು ಇದ್ದಾಗ ಕೊನೆಯ ಹಂತದಲ್ಲಿ, ಒಂದು Monitoring Committee ರಚನೆಯಾಯಿತು. ಆಗ ಆ ಸರ್ಕಾರ ಹೊರಟು ಹೋಯಿತು. ಆದಾದ ನಂತರ, Monitoring Committee ರಚನೆಯಾದ ನಂತರ ಯು.ಪಿ.ಎ. ಸರ್ಕಾರ ಬಂತು. ಮಾನ್ಯ ಚಿದಂಬರಂರವರು ಸಹ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ರಾಜ್ಯದಲ್ಲಿ ಕೂಡ ಇದನ್ನು 2006ರಲ್ಲಿ ಜಾರಿಗೆ ತರಬೇಕಾದರೆ, ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದರು. ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಯಾಗಿದ್ದರು. ಇಲ್ಲಿ ಕೂಡ ಪ್ರಸ್ತಾಪವಾಯಿತು. 2006ರಲ್ಲಿ ಪಾಸ್ ಆಗಲಿಲ್ಲ. ಇದನ್ನು 2010ರಲ್ಲಿ ತೆಗೆದುಕೊಂಡರು. ಆಗ ಅದನ್ನು ಪಾಸ್ ಮಾಡಿ, ನಂತರ 2006 ರಿಂದ retrospective effect ಕೊಟ್ಟಿದ್ದಾರೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಲ್ಲಿ ಹಾಗೆಯೇ ಮಾಡಿದ್ದಾರೆ. ಆದರೆ ವೇತನ ಪರಿಷ್ಕರಣೆ ಮಾಡುವುದು ಇದ್ದರೆ ಅದಕ್ಕೆ retrospective effect ಇಲ್ಲ. ಇದನ್ನು ಮಾತ್ರ retrospective ಆಗಿ ಮಾಡಿದ್ದಾರೆ. ಅದೆಲ್ಲವೂ prospective ಇರುತ್ತದೆ. ಹಾಗಾಗಿ ಇದನ್ನು ಯಾವ ಸರ್ಕಾರ ಮಾಡಿದೆಯೆಂಬ ಪ್ರಶ್ನೆಗಿಂತ ಆಗಾಧವಾಗಿರುವಂತಹ ಪ್ರಶ್ನೆ ಯಾವುದು ಎಂದರೆ, ತನ್ನ ನೌಕರನಿಗೆ ಇಳಿ ವಯಸ್ಸಿನಲ್ಲಿ ಬೇಕಾದಂತಹ ಒಂದು ಭದ್ರತೆ. ಸಾಮಾಜಿಕ ಭದ್ರತೆಯನ್ನು ಕೊಡಬೇಕು ಎನ್ನುವುದನ್ನು ಈ ಸರ್ಕಾರ ಮತ್ತು ಇತರ ಎಲ್ಲಾ ಸರ್ಕಾರಗಳು ಒಪ್ಪುತ್ತವೆ ಎಂದು ನಾನು ಭಾವಿಸಿದ್ದೇನೆ. ಅದು ಯಾವ ಪಕ್ಷವೇ ಇರಲಿ, ಸಾಮಾಜಿಕ ಭದ್ರತೆಯ ಹೆಸರಿನೊಳಗೆ ಸಾಮಾನ್ಯ ಮನುಷ್ಯನಿಗೂ ಕೂಡ ವೃದ್ಧಾಪ್ಯ ವೇತನವನ್ನು ಕೊಡುತ್ತೇವೆ. ವಯಸ್ಸಾದಂತಹ ಅಜ್ಜ-ಅಜ್ಜಿ ಇರಬಹುದು ಹಾಗೂ ಯಾರಿಗೆ ಬೇಕಾದರೂ ನಾವು ಕೊಡುತ್ತೇವೆ. ವೃದ್ಧಾಪ್ಯ ವೇತನ ರೂ.500 ಇದ್ದರೆ, ಅದನ್ನು ರೂ.1,000 ಹೆಚ್ಚಿಗೆ ಮಾಡುತ್ತೇವೆ. ರೂ. 1,000 ಇದ್ದರೆ ಅದನ್ನು ರೂ.2,000 ಮಾಡುತ್ತೇವೆ. ಎಲ್ಲಾ ಪಕ್ಷದವರು Election Manifesto ನಲ್ಲಿ ಇದನ್ನು ತಿಳಿಸುತ್ತಾರೆ. ಒಬ್ಬ ಸಾಮಾನ್ಯ ಮನುಷ್ಯನಿಗೆ ಸಾಮಾಜಿಕ ಭದ್ರತೆಯನ್ನು ಕೊಡುವಂತಹ ಒಂದು concept ನಲ್ಲಿ ನಿವೃತ್ತಿ ವೇತನ ಕೊಡಬಹುದು

" ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎನ್ನುವಂತಾದರೆ, ಸರ್ಕಾರಿ ನೌಕರರಾಗಿ ಇಡೀ ಸರ್ಕಾರದ ಯಂತ್ರವನ್ನು, ಸರ್ಕಾರದ ಆಶೋತ್ತರಗಳನ್ನು ಸಾಮಾನ್ಯ ಜನರಿಗೆ ಮುಟ್ಟಿಸಿದಂತಹ ಆ ಸಮೂಹಕ್ಕೆ ನಾವು ಭದ್ರತೆಯನ್ನು ಕೊಡದೇ ಇರುವುದಕ್ಕೆ ಸಾಧ್ಯವಿಲ್ಲ.

ಎರಡನೇ ಸಂಗತಿ ಏನೆಂದರೆ, ನಾನು ಬಹಳ ವಿವರವಾಗಿ ಹೋಗುವುದಿಲ್ಲ. ಹಳೆ ಪಿಂಚಣಿ ಯೋಜನೆ ಮತ್ತು ಹೊಸ ಪಿಂಚಣಿ ಯೋಜನೆ ಮಾಡಿದ ಮೇಲೆ, ದುಡಿಯವ ನೌಕರರ ವರ್ಗ ಇಬ್ಭಾಗವಾಗಿ ಬಿಟ್ಟಿದೆ. ಹಳೆ ಪಿಂಚಣಿ ಯೋಜನೆಯ ನೌಕರರು ಒಂದು ರೀತಿ ಮತ್ತು ಹೊಸ ಪಿಂಚಣಿ ಯೋಜನೆಯ ನೌಕರರೇ ಒಂದು ರೀತಿಯಾಗಿ ಬಿಟ್ಟಿದೆ. ಹಳೆ ಪಿಂಚಣಿ ಯೋಜನೆಯ ನೌಕರರಿಗೆ ಭದ್ರತೆ ಇದೆ. ಹೊಸ ಪಿಂಚಣಿ ನೌಕರರಿಗೆ ಭದ್ರತೆಯಿಲ್ಲ. ಅನುದಾನಿತ ಶಾಲೆಗಳಿಗೆ ಮತ್ತು ಸಂಸ್ಥೆಗಳಿಗೆ ಪೂರ್ತಿ ಸಂಬಳವನ್ನು ಸರ್ಕಾರವೇ ನೀಡುತ್ತದೆ. ಅನುದಾನಿತ ಶಾಲೆಗಳಿಗೆ wages ಅನ್ನು ಸರ್ಕಾರ ಕೊಡುತ್ತದೆ. ಸಂಬಳದ ಭಾಗವನ್ನು ನಾವೇ ಕೊಡುತ್ತೇವೆ. ಆದರೆ, ಮ್ಯಾನೇಜ್‌ಮೆಂಟ್ ಶೇಕಡಾ 10 ರಷ್ಟನ್ನು ಕಟ್ಟುವುದಿಲ್ಲ. ಶೇಕಡಾ 10 ರಷ್ಟು ಕಟ್ಟಬೇಕಾಗಿತ್ತು. ಇದುವರೆಗೂ ಸರ್ಕಾರ ಸಂಬಳ ಕೊಡುತ್ತದೆ. ಸರ್ಕಾರದ ಇಲಾಖೆಯಲ್ಲಿ ಹೊಸ ಪಿಂಚಣಿ ಯೋಜನೆಯ ಹೆಸರಿನೊಳಗೆ ಶೇಕಡ 10 ರಷ್ಟು ಕಟ್ ಮಾಡುತ್ತೀರಿ ಮತ್ತು ತಾವು ಶೇಕಡಾ 10 ರಷ್ಟು ಹಣವನ್ನು ಕಟ್ಟುತ್ತೀರಿ. ಆದರೆ ಸರ್ಕಾರ ಪೂರ್ತಿ ಪ್ರಮಾಣದಲ್ಲಿ ಸಂಬಳ ಕೊಟ್ಟರೂ ಕೂಡ ಆ ಖಾಸಗಿ ಅನುದಾನಿತ ಸಂಸ್ಥೆಗಳು ಇವರಿಗೆ ಕೊಟ್ಟಿಲ್ಲ. ಈ ತರಹ ಇರುವಾಗ ನನಗೆ ಸಹಜವಾದ ಪ್ರಶ್ನೆ ಮಾಡುತ್ತದೆ. ಈ ಕುರಿತು ಹೊರಗಡೆ ಚರ್ಚೆಯಾಯಿತು. ಎರಡನೆಯ ಬಾರಿ ಬಿಲ್ ಪಾಸ್ ಮಾಡುವ ಸಂದರ್ಭದಲ್ಲಿ ನಾನು ಪಾರ್ಲಿಮೆಂಟ್‌ನಲ್ಲಿ ಇದ್ದೆ. ಬಹುಶಃ ದೇಶದಲ್ಲಿಯ ಯಾವುದೋ ಒಂದು ಬಿಲ್ ಹದಿನೈದು ದಿವಸದೊಳಗೆ ಪಾಸ್ ಆಗಿದ್ದು ಇಲ್ಲ. ಪಾರ್ಲಿಮೆಂಟ್‌ನಲ್ಲಿ ಪಾಸ್ ಆದರೆ, ಒಂದು ವಾರದೊಳಗಾಗಿ ರಾಜ್ಯ ಸಭೆಯಲ್ಲಿ introduce ಆಯಿತು. ಅಲ್ಲಿ ಪಾಸ್ ಆಗಿ, ತಕ್ಷಣವೇ ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ತೆಗೆದುಕೊಂಡು, ರಾಷ್ಟ್ರಪತಿ ಭವನಕ್ಕೆ ಹೋಗಿ ಅದು ಅಂತಿಮವಾಗಿ ಸಹಿ ಆಗಿ ಬರುವಾಗ ಒಟ್ಟಾರೆಯಾಗಿ 16 ದಿವಸಗಳು ಮಾತ್ರ ತೆಗೆದುಕೊಂಡಿದೆ. ಇಡೀ ದೇಶದ ಕೋಟ್ಯಾಂತರ ನೌಕರರಿಗೆ ಅನ್ವಯವಾಗುವಂತಹ ಈ ಒಂದು ಮಸೂದೆ ಲೋಕಸಭೆ, ರಾಜ್ಯ ಸಭೆ, ಕ್ಯಾಬಿನೆಟ್ ಮತ್ತು ರಾಷ್ಟ್ರಪತಿ ಭವನದಿಂದ ಹದಿನಾರು ದಿವಸದೊಳಗೆ ಮಂಜೂರಾತಿ ಪಡೆದು ಒಂದು ಅಧಿಸೂಚನೆ ಆಗಿ ಹೊರಗೆ ಬರುತ್ತದೆ.

(350) 11–12–2018 3–50 ಟಿಸಿಹೆಚ್–ಕೆಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಆಯನೂರು ಮಂಜುನಾಥ್ (ಮುಂದು):–**

ಆ ಸಂದರ್ಭದಲ್ಲಿ ಸರ್ಕಾರಿ ನೌಕರರು ಕೂಡ ತಪ್ಪು ಮಾಡಿದರು. ಅದು introduce ಆಗುವಂತಹ ಹಿನ್ನೆಲೆಯಲ್ಲಿ, ಒಂದು ಜಾಗತೀಕರಣದ phobia. ಈ ಜಾಗತೀಕರಣದ ಪೈಪೋಟಿ ಇತ್ತು. ಆ ಹಿನ್ನೆಯಲ್ಲಿ ಇದು ಕೂಡ ಬಂತು. ನಮ್ಮ ನೌಕರರಿಗೆ ಕನಸುಗಳನ್ನು ಮಾರಿಬಿಟ್ಟರು. ನಿಮ್ಮಿಂದ ಹಣವನ್ನು ಪಡೆದು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತೇವೆ, ನೀವು ನಿವೃತ್ತಿ ಹೊಂದಿದ ನಂತರ ನಿಮಗೆ ಲಕ್ಷ ಲಕ್ಷ ರೂಪಾಯಿಗಳು ಹಾಗೂ ಕೋಟಿ ಕೋಟಿ ರೂಪಾಯಿಗಳು ಸಿಗುತ್ತದೆ, ನಾವು ಸರ್ಕಾರದ ಲಾಟರಿ ಮಾರಬೇಕಾದರೆ ಇದನ್ನು ನೀವು ತೆಗೆದುಕೊಂಡರೆ ಮನೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಖರೀದಿಸಬಹುದು. ಕಾರನ್ನು ತೆಗೆದುಕೊಳ್ಳಬಹುದು ಎಂಬ ಕನಸುಗಳನ್ನು ಬಿತ್ತುತ್ತಾರಲ್ಲ ಆ ಈ ರೀತಿಯ ಕನಸುಗಳನ್ನು ಬಿತ್ತಲಾಯಿತು. ಆ ಕಾರಣಕ್ಕಾಗಿ ಬಹಳಷ್ಟು ನೌಕರರ ಸಮೂಹ ಗುಂಡಿಗೆ ಬಿದ್ದಿದ್ದಾರೆ. ನಿವೃತ್ತಿ ಆದ ಮೇಲೆ ಅವರಿಗೆ ಅರ್ಥವಾಗಿದೆ. ಅವರಿಗೆ ಪ್ರಸ್ತುತ 150/- ರೂ.ಗಳು, 200/- ರೂ.ಗಳು ಮತ್ತು 500/- ರೂ.ಗಳ ಈ ರೀತಿಯ ನಿವೃತ್ತಿ ವೇತನ ಬರುತ್ತಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, 01.04.2006ರ ನಂತರ 2 ಲಕ್ಷ ನೌಕರರು ಕೆಲಸಕ್ಕೆ ಸೇರಿದ್ದಾರೆ. 300 ಜನ ನೌಕರರು ಸತ್ತಿದ್ದಾರೆ. Kotak Mahindra, Reliance and UTI (Unit Trust of India) ಇಂತಹ ಕಡೆಗಳಲ್ಲಿ ಹಣವನ್ನು ಹೂಡಿಕೆ ಮಾಡಲಾಗುತ್ತಿದೆ. ಅವರ್‍ಯಾರಿಗೂ ಹಣವನ್ನು ಕೊಟ್ಟಿಲ್ಲ. ಹಾಗಾಗಿ, ಈ ವಿಚಾರ ನನಗೂ ಕೂಡ ಗೊತ್ತಿದೆ. ಮಾನ್ಯ ಸಚಿವರೇ, ಈ ವಿಷಯ ಬಹಳ ಗಂಭೀರವಾದುದು. ಎನ್.ಪಿ.ಎಸ್. (NPS-New Pension Scheme) ವ್ಯವಸ್ಥೆ ಸರಿ ಇಲ್ಲ ಮತ್ತು ಓ.ಪಿ.ಎಸ್. (OPS- Old Pension Scheme) ಯೋಜನೆ ಕೂಡ ಸರಿ ಇಲ್ಲ. ಮಾನ್ಯ ಸದಸ್ಯರು ಕೇಳುವಂಥದ್ದು ನಿಜ ಇದೆ. ಅದಕ್ಕಾಗಿ ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು.

**ಶ್ರೀ ಐವನ್ ಡಿ'ಸೋಜ:-** ಮಾನ್ಯ ಸಭಾಪತಿಯವರೇ, I will just intervene, ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಈ ವಿಷಯ ತಮಗೂ ಕೂಡ ಗೊತ್ತಿರಬಹುದು. LIC (Life Insurance Corporation) ಯಲ್ಲಿ Unit Linked Plan ಅಡಿ *'Money Back Policy'* ಎಂದು ಜಾರಿಗೆ ತಂದರು. 5000/- ರೂ.ಗಳು ಬಾಂಡ್ ಮಾಡಿಸಿದರೆ, 5 ವರ್ಷದಲ್ಲಿ ನಿಮಗೆ 25 ಲಕ್ಷ ರೂ.ಗಳು ಸಿಗುತ್ತದೆ ಎಂದು ಹೇಳಿದ್ದರು. ನಾನು 25,000/- ರೂ.ಗಳು ಹಣ ಕಟ್ಟಿ ಪಾಲಿಸಿಯನ್ನು ತೆಗೆದುಕೊಂಡಿದ್ದೆನು. 10 ವರ್ಷಗಳ ಆದ ನಂತರ ಕೇಳಲಾಗಿ, ಅದು ಕೇವಲ 18,000/- ರೂಪಾಯಿಗಳು ಆಗಿದೆ. ನಾನು 25,000/- ಹಣ ಕಟ್ಟಿ ಪಾಲಿಸಿ ತೆಗೆದುಕೊಂಡಿದ್ದೆನು. ಒಂದು ಟೈಮ್ ಪಾಲಿಸಿ ತೆಗೆದುಕೊಂಡರೆ, 25 ಲಕ್ಷ ರೂ.ಗಳು ಸಿಗುತ್ತದೆ ಎಂದು ಹೇಳಿದ್ದರು. ಇದರಿಂದ ನನಗೆ ಸುಮಾರು 10-15 ಕೋಟಿ ರೂಪಾಯಿಗಳಷ್ಟು ಬರಬಹುದೆಂದು ಲೆಕ್ಕ ಹಾಕಿದ್ದೆನು. ನಾನು ಸಾಯುವವರೆಗೆ ಆ ಹಣವೇ ಸಾಕು ಅಂದುಕೊಂಡಿದ್ದೆನು. ಇತ್ತೀಚೆಗೆ ಹೋಗಿ LIC ಯವರನ್ನು ವಿಚಾರಿಸಿದೆನು. But, now i.e., after 10 years I am entitled for Rs.18,000 only. ನನಗೆ ಬರಬೇಕಾದಂತಹ ಹಣ ಇನ್ನೂ ಕಡಿತವಾಯಿತು. ಹಾಗಾಗಿ, ಮಾನ್ಯ ಸದಸ್ಯರ ಅಭಿಪ್ರಾಯದಂತೆ ನನ್ನದೂ ಕೂಡ ಅದೇ ಅಭಿಪ್ರಾಯವಾಗಿದೆ.

**ಶ್ರೀ ಆಯನೂರು ಮಂಜುನಾಥ್:-** ಉದಾಹರಣೆಗೆ ಹೇಳುವುದಾದರೆ, ಯಾರಾದರೂ ಒಬ್ಬರು ಸರ್ಕಾರಿ ನೌಕರರಿಗೆ 20,000/- ರೂ.ಗಳು ಸಂಬಳ ಬರುತ್ತದೆ. ಪ್ರತಿ ತಿಂಗಳು ಶೇ.10ರಂತೆ 2,000/- ರೂಗಳನ್ನು ಅವರ ಸಂಬಳದಲ್ಲಿ ಕಡಿತ ಮಾಡುತ್ತಾರೆ. ಸರ್ಕಾರ ಅಷ್ಟೇ ಹಣವನ್ನು ಭರಿಸಲಾಗುತ್ತದೆ. ಆಗ ಅದು 4,000/- ರೂ.ಗಳು ಆಗುತ್ತದೆ. ಒಂದು ವರ್ಷದಲ್ಲಿ ಅವರ ಹಣ ಸರಾಸರಿ 50,000/- ರೂ.ಗಳಷ್ಟು ಹೂಡಿಕೆ ಆಗುತ್ತದೆ. ಅವರ ಹಣ ಎಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೂಡಿಕೆ ಮಾಡಲಾಗಿದೆ ಎಂದು ಯಾವ RTI (Right to Information) ನಲ್ಲಿ ಅರ್ಜಿ ಹಾಕಿದರೆ ಮಾಹಿತಿ ಸಿಗುತ್ತದೆ ಹೇಳಿ. ನನ್ನ ಬಂಡವಾಳವನ್ನು, ನಾನು ಗಳಿಸುವುದನ್ನು ಹಾಗೂ ನನ್ನ sweat and blood ಅದನ್ನು ವಿನಿಯೋಗ ಮಾಡಿದ್ದು ಎಲ್ಲಿದೆ ಎಂದು ಕೇಳಿದರೆ, ಯಾರೂ ಹೇಳುವುದಕ್ಕೆ ತಯಾರಿಲ್ಲ. ನಾಳೆ ದಿವಸ ಆತನಿಗೆ ಹಣವನ್ನು ಯಾರು ಕೊಡುತ್ತಾನೆ ಎಂಬುದು ಗೊತ್ತಿಲ್ಲ. Share market is a sensible market. ಪ್ರಪಂಚದ ಯಾವುದೋ ಒಂದು ಮೂಲೆಯಲ್ಲಿ ಭೂಕಂಪ ಆದಲ್ಲಿ, ನಮ್ಮ ದೇಶದ ಷೇರು ಮಾರುಕಟ್ಟೆ ಬಿದ್ದುಹೋಗುತ್ತದೆ. ಆ ತರಹ ಎಲ್ಲೋ ಆಗುವಂತಹ ಘಟನೆಗೆ ನಮ್ಮ ವ್ಯಕ್ತಿಗತ ಬದುಕು ಗಾಳಿಗೆ ತೂರಿ ಹೋಗುವಂತಹ ವ್ಯವಸ್ಥೆ ಆಗುವುದು ಬೇಡ. ನಾನು ಬಹಳ ಗಂಭೀರವಾದಂತಹ ಪ್ರಶ್ನೆಯನ್ನು ಸದನದ ಮುಂದಿಡುತ್ತಿದ್ದೇನೆ. ಅದಕ್ಕೆ ನಮ್ಮೆಲ್ಲಾ ಶಾಸಕರುಗಳು ಒಪ್ಪುತ್ತಾರೆ ಎಂದು ಕೂಡ ಭಾವಿಸುತ್ತೇನೆ. ನಾನು 1994ರಲ್ಲಿ ವಿಧಾನಸಭಾ ಸದಸ್ಯನಾದೆನು. ಲೋಕಸಭೆ ಮತ್ತು ರಾಜ್ಯಸಭೆ ಮುಗಿಸಿಕೊಂಡು ಮತ್ತೆ 2010ರಲ್ಲಿ ವಿಧಾನಪರಿಷತ್‌ನಲ್ಲಿ ಸದಸ್ಯನಾಗಿದ್ದೆನು. ನಾನು 1994ರಲ್ಲಿ ಕೇವಲ 4 ವರ್ಷ ವಿಧಾನಸಭೆಯ ಸದಸ್ಯನಾಗಿದ್ದೆನು. ಇಲ್ಲಿ ಮುಗಿಸಿಕೊಂಡು ಲೋಕಸಭೆಗೆ ಸದಸ್ಯನಾಗಿ ಹೋದೆನು. ಲೋಕಸಭೆಯಿಂದ ಮುಗಿಸಿಕೊಂಡು ಬಂದನಂತರ, ಸ್ವಲ್ಪ ಗ್ಯಾಪ್ ಆಯಿತು. 4 ವರ್ಷ ವಿಧಾನಸಭಾ ಸದಸ್ಯನಾಗಿದ್ದಕ್ಕೆ ರಾಜ್ಯ ಸರ್ಕಾರ ನನಗೆ 45,000/-ಗಳು ಪಿಂಚಣಿ ಕೊಡುತ್ತಿತ್ತು. ಮಾನ್ಯ ಅಟಲ್‌ಬಿಹಾರಿ ವಾಜಪೇಯಿ ಸರ್ಕಾರದಲ್ಲಿ ಕೇವಲ 13 ತಿಂಗಳ ಕಾಲ ಲೋಕಸಭಾ ಸದಸ್ಯನಾಗಿದ್ದಕ್ಕಾಗಿ 22,000/- ರೂ.ಗಳು ಪೆನ್ಷನ್ ಕೊಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ 4 ವರ್ಷಗಳ ಕಾಲ ಸದಸ್ಯನಾಗಿದ್ದಕ್ಕಾಗಿ 45,000/-ರೂ.ಗಳು ಕೊಟ್ಟಿದ್ದಾರೆ. ಸುಮಾರು 62,000/- ರೂ.ಗಳನ್ನು ತೆಗೆದುಕೊಂಡು ವಾಪಸ್ಸು ರಾಜ್ಯಸಭೆಗೆ ಸದಸ್ಯನಾಗಿ ಹೋದೆನು, ಮತ್ತೆ ಈಗ ವಿಧಾನ ಪರಿಷತ್‌ನಲ್ಲಿ ಸದಸ್ಯನಾಗಿದ್ದೇನೆ. ಇವೆರಡೂ ಅವಧಿಗಳು ಪೂರ್ಣ ಆಗುತ್ತದೆ. ಈ ನಾಲ್ಕು ಸದನದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದು ಒಂದೊಂದು ಮಾತ್ರ. ಲೋಕಸಭೆ ಮತ್ತು ಇಲ್ಲಿನದ್ದು ಒಂದನ್ನು ಮಾತ್ರ ತೆಗೆದುಕೊಳ್ಳಬಹುದು. ನಾನು ಇವೆರಡೂ ಅವಧಿಗಳು ಪೂರ್ಣ ಮಾಡಿದ್ದೇನೆ. ರಾಜ್ಯಸಭೆಯದ್ದು ಪಿಂಚಣಿ ತೆಗೆದುಕೊಂಡಿಲ್ಲ, ಅಷ್ಟರೊಳಗೆ ವಿಧಾನ ಪರಿಷತ್‌ಗೆ ಬಂದಿದ್ದೇನೆ. ಇಲ್ಲಿನ ಸದಸ್ಯತ್ವ ಮುಗಿದ ನಂತರ ನಾನು claim ಮಾಡುತ್ತೇನೆ. ಸುಮ್ಮನೆ ಉದಾಹರಣೆಗೆ ಏನು ಹೇಳುತ್ತಿದ್ದೇನೆಂದರೆ, ಸನ್ಮಾನ್ಯ ಶ್ರೀ ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ 13 ತಿಂಗಳ ಕಾಲ ಲೋಕಸಭಾ ಸದಸ್ಯನಾಗಿದ್ದೆನು. ನಾನು ಆ ಇತಿಹಾಸ ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ 13 ತಿಂಗಳ ಕಾಲ ಸದಸ್ಯನಾಗಿದ್ದಕ್ಕೆ 22,000/- ರೂ.ಗಳು ಪೆನ್ಷನ್ ಸಿಗುತ್ತಿದೆ. ಒಂದು ಅವಧಿ ಮುಗಿದಿದೆ. Here my point is just for 13 months of Service as a member of Lok Sabha, I was entitled for the pension of Rs.22,000. ನಾಲ್ಕು ವರ್ಷಗಳ ಕಾಲ ವಿಧಾನಸಭಾ ಸದಸ್ಯ ಆಗಿದ್ದೆನು. ಆಗ ಸನ್ಮಾನ್ಯ ಶ್ರೀ ದೇವೇಗೌಡರವರು, ಮುಖ್ಯಮಂತ್ರಿ ಆಗಿದ್ದರು ಮತ್ತು ಸನ್ಮಾನ್ಯ ಶ್ರೀ ಜೆ.ಹೆಚ್.ಪಟೇಲ್‌ರವರು ಸಹ ಇದ್ದರು. ಇಲ್ಲಿ ನಾಲ್ಕು ವರ್ಷ ಇದ್ದೆನು. ಇಲ್ಲಿ ರಾಜೀನಾಮೆ ನೀಡಿ ಲೋಕಸಭಾ ಸದಸ್ಯನಾಗಿ ಹೋದೆನು. ಆ ನಾಲ್ಕು ವರ್ಷ ಸದಸ್ಯನಾಗಿದ್ದಕ್ಕೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

45 ಸಾವಿರ ಪಿಂಚಣಿ ಕೊಡುತ್ತಿದ್ದಾರೆ. ಆದರೆ ಇಲ್ಲಿ ಒಬ್ಬರು ನೌಕರರು 40 ವರ್ಷಗಳ ಕಾಲ ಸೇವೆ ಸಲ್ಲಿಸುತ್ತಾರೆ. ಅವರಿಗೆ ಕೇವಲ 600/- ರೂ.ಗಳು, 800/- ರೂ.ಗಳು ಮತ್ತು 1000/- ರೂ.ಗಳು ಪೆನ್ಷನ್ ಸಿಗುತ್ತಿದೆ. ನನ್ನದೊಂದು ಸಹಜ ಪ್ರಶ್ನೆಯನ್ನು ಸದನದ ಮುಂದೆ ಹಾಗೂ ಮಾನ್ಯ ಸಭಾಪತಿಯವರ ಮುಂದಿಡುತ್ತಿದ್ದೇನೆ. ಈ ವ್ಯವಸ್ಥೆಯಲ್ಲಿ ನಾವೂ ಕೂಡ ಸರ್ಕಾರಿ ನೌಕರರೆ. ಆ ಕಾರಣಕ್ಕಾಗಿ ಸರ್ಕಾರಿ ನೌಕರನ ಮೇಲೆ ಭ್ರಷ್ಟಾಚಾರದ ಆಪಾದನೆಯನ್ನು ಮಾಡಿದರೆ, ಎಸಿಬಿ ಮತ್ತು ಲೋಕಾಯುಕ್ತದವರು ದಾಳಿ ಮಾಡಬಹುದು. ಅದೇ ರೀತಿ ಮಾನ್ಯ ಶಾಸಕರುಗಳು ಹಾಗೂ ಸಂಸದರುಗಳ ಮೇಲೆ ಕೂಡ ದಾಳಿ ಮಾಡಲು ಅವಕಾಶವಿದೆ. Even Legislators are also 'Public Servants'. ನಮಗೆ ಸಂಬಳ ಬರುತ್ತಿದೆ. ನೌಕರರ ರೀತಿ ನಮಗೂ ಕೂಡ T.A (Travelling Allowance) ಮತ್ತು D.A. (Dearness Allowance) ಇದೆ. HRA (House Rent Allowance) ಗಳು ಹಾಗೂ ಇನ್ನಿತರೆ ಎಲ್ಲಾ ಭತ್ಯೆಗಳು ಇವೆ. ಆದರೆ, ನಾನು 1994ರಲ್ಲಿ ಶಾಸಕ ಆಗಿದ್ದೆನು. ಹಾಗಾಗಿ, ನನಗೆ ಓ.ಪಿ.ಎಸ್ ಅನ್ವಯ ಆಗುತ್ತಿದೆ. ಇತ್ತೀಚೆಗೆ ನಮ್ಮ ಜೊತೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ ರವರು ಬಂದಿದ್ದಾರೆ. ಅವರಿಗೆ ಏನಾದರೂ ಎನ್.ಪಿ.ಎಸ್ ಅನ್ವಯ ಆಗುತ್ತದೆಯೆ? ನಮಗೆಲ್ಲಾ ಓ.ಪಿ.ಎಸ್. ಇದೆ. 2006ನೇ ಇಸವಿ ನಂತರ ಈ ಸದನದ ಸದಸ್ಯರು ಆಗಿದ್ದರೆ, ನಮಗೆ ಎನ್‌ಪಿಎಸ್ ಅನ್ವಯ ಆಗುವುದಿಲ್ಲ. ನಮಗೆ ಓ.ಪಿ.ಎಸ್. ಇದೆ. ಮಾನ್ಯ ಸದಸ್ಯರುಗಳು ಎಷ್ಟನೇ ಇಸವಿಯಲ್ಲಿ ಆಯ್ಕೆಯಾದರೂ ಕೂಡ ಓ.ಪಿ.ಎಸ್. ವ್ಯವಸ್ಥೆ ಇದೆ. ಈ ತಾರತಮ್ಯ ಏಕೆ? ಸರ್ಕಾರಿ ನೌಕರರು ಮತ್ತು ನಾವು ಎಂದಮೇಲೆ ಸರ್ಕಾರದ ವ್ಯವಸ್ಥೆಯಲ್ಲಿ ಲಾಭ ಪಡೆದುಕೊಳ್ಳಬೇಕಾದರೆ, ಅವರಿಗೆ ಏಕೆ ಓ.ಪಿ.ಎಸ್. ವ್ಯವಸ್ಥೆ ಕೊಡುತ್ತಿಲ್ಲ. ಒಬ್ಬ ಶಾಸಕನಾದ ನನಗೆ ಭದ್ರತೆ ಬೇಕು. ನಾನು ಕಾಲವಾದ ನಂತರ ನನ್ನ ಹೆಂಡತಿ-ಮಕ್ಕಳಿಗೂ ಕೂಡ ಪೆನ್ಷನ್ ಸಿಗಬೇಕು. ಆದರೆ, ಸರ್ಕಾರಿ ನೌಕರರಿಗೆ ಏಕೆ ಓ.ಪಿ.ಎಸ್. ವ್ಯವಸ್ಥೆ ಸಿಗಬಾರದು? ಅವರ ಪತ್ನಿಯರಿಗೂ ಪೆನ್ಷನ್ ಸಿಗಬೇಕಲ್ಲವೇ? ನಮ್ಮ ಪತ್ನಿಯರು ಮಾತ್ರ ಪತ್ನಿ ಆಗಿದ್ದಾರಾ? ಈ ರೀತಿಯ ತಾರತಮ್ಯದ, social injustice ಏಕೆ?

**ಶ್ರೀ ಕೆ.ಜೆ.ಜಾರ್ಜ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಕ್ಕರೆ ಹಾಗೂ ಐ.ಟಿ ಮತ್ತು ಬಿ.ಟಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಎಂದರೆ, ಅವರ ವಿಚಾರವನ್ನು ಹೇಳುತ್ತಿದ್ದಾರೆ. ಒಬ್ಬರು ಸದಸ್ಯರು ಜೀವಮಾನದಲ್ಲಿ ಬರೀ ಒಂದು ವರ್ಷ ಇರುತ್ತಾರೆ. ಆಗ ಅವರಿಗೆ ಪಿಂಚಣಿ ಸಿಕ್ಕಿದ್ದು ಬರೀ 22,000/- ರೂ.ಗಳು ಮಾತ್ರ. ಮಾನ್ಯ ಸದಸ್ಯರು ಇಲ್ಲಿಗೆ ಸದಸ್ಯರಾಗಿ ಬಂದಿದ್ದಾರೆ. ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರಾಗಿ ಇರತಕ್ಕಂಥವರು ಎಷ್ಟು ಜನ ಇದ್ದಾರೆ, ಅದರ ಸಮೇತ ತಾವು ಮಾತನಾಡಬೇಕಾಗುತ್ತದೆ.

**ಶ್ರೀ ಆಯನೂರು ಮಂಜುನಾಥ್:-** ನಾನು ಹೇಳುವುದಕ್ಕೆ ಹೊರಟಿರುವುದು ನನ್ನ ವ್ಯಕ್ತಿಗತ ಅಲ್ಲ. ವಿಷಯಕ್ಕೆ ತರುವಾಗ, ಇದನ್ನು generalize ಮಾಡುವುದಕ್ಕಿಂತ ನನಗೆ ಅನ್ವಯ ಮಾಡಿಕೊಂಡು ಹೇಳಿದರೆ, ಬಾಕಿ ಸದಸ್ಯರುಗಳು ನನಗೆ ಸಹಕಾರ ನೀಡುತ್ತಾರೆ ಎನ್ನತಕ್ಕಂಥ ಹಿನ್ನೆಲೆಯಲ್ಲಿ ಇದ್ದೇನೆ. ಏಕೆಂದರೆ, ನನ್ನ ಸಲಹೆ ಏನೆಂದರೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಾವು ಸರ್ಕಾರಿ ನೌಕರರು ಹೌದು ಎನ್ನುವುದಾದರೆ, ಸರ್ಕಾರಿ ನೌಕರರು public servant ವ್ಯಾಪ್ತಿಯಲ್ಲಿ ಬರುತ್ತೇವೆ ಎನ್ನುವುದಾದರೆ, ಎನ್.ಪಿ.ಎಸ್. ಯೋಜನೆ ತುಂಬಾ ಚೆನ್ನಾಗಿದೆ ಎನ್ನುವುದಾದರೆ ಮಾನ್ಯ ಶಾಸಕರುಗಳಿಗೂ ಕೂಡ ಏಕೆ ಅನ್ವಯ ಮಾಡಬಾರದು? ಅವರಿಗೆ ಲಾಭ ಸಿಗುತ್ತದೆ ಎನ್ನುವುದಾದರೆ, ನಮಗೂ ಲಾಭ ಕೊಡಿ. ಮಾನ್ಯ ಶಾಸಕರುಗಳಿಗೆ ಏಕೆ ವಂಚನೆ ಮಾಡುತ್ತಿದ್ದಾರೆ. ಹಾಗಾದರೆ, ಮಾನ್ಯ ಶಾಸಕರುಗಳಿಗೂ ಕೂಡ ಎನ್.ಪಿ.ಎಸ್ ಯೋಜನೆಯನ್ನು ಕೊಟ್ಟುಬಿಡಿ. ಒಂದು ವೇಳೆ, ಇದು ಸರಿಯಿಲ್ಲ ಎನ್ನುವುದಾದರೆ, ನಮಗೆ ಕೊಟ್ಟಂತೆಯೇ ಆ ನೌಕರರಿಗೂ ಓಪಿಎಸ್ ಯೋಜನೆಗೆ ಒಳಪಡಿಸಬೇಕು. Social Justice ನ್ನು ಕಾಪಾಡಬೇಕು. ಪ್ರತಿಯೊಂದು ಸರ್ಕಾರಕ್ಕೂ ಅದೊಂದು concept ಇದೆ. ಆ ಹಿನ್ನೆಲೆಯಲ್ಲಿ, ಬಹಳ ದೀರ್ಘವಾಗಿ ಮಾತನಾಡುವುದಕ್ಕೆ ಹೋಗದೆ, ದಯಮಾಡಿ ಎನ್‌ಪಿಎಸ್ ಯೋಜನೆಯನ್ನು ರದ್ದುಪಡಿಸಿ ಓ.ಪಿ.ಎಸ್. ಯೋಜನೆಯನ್ನು ಜಾರಿಗೊಳಿಸಿ. ಸನ್ಮಾನ್ಯ ಮುಖ್ಯಮಂತ್ರಿಯವರು ಕೂಡ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ್ದಾರೆ. ನಮ್ಮ ಮಾನ್ಯ ಶಾಸಕರುಗಳು ವ್ಯಕ್ತಿಗತವಾಗಿ ಭೇಟಿ ಮಾಡಿದಂತಹ ಸಂದರ್ಭದಲ್ಲಿ ಮಾಡುತ್ತೇವೆ ಎನ್ನತಕ್ಕಂಥ inclination ನ್ನು ಕೂಡ ವ್ಯಕ್ತಪಡಿಸಿದ್ದಾರೆ. ಇಲ್ಲಿ ನಾನು ಉದಾಹರಣೆಯನ್ನು ಕೊಟ್ಟೆನು ಅಷ್ಟೆ. ಒಬ್ಬೊಬ್ಬರ ಸದಸ್ಯರದ್ದು ಹಣ ಎಷ್ಟು ಸಂಗ್ರಹ ಆಗುತ್ತದೆ ಆ ಹಣವನ್ನು ಸರ್ಕಾರವೇ ಇಟ್ಟುಕೊಳ್ಳಲಿ. ಆದ್ದರಿಂದ ಸರ್ಕಾರದ ಖಜಾನೆಗೆ ಹಣದ ಹೊರೆ ಬೀಳದಂತೆ ಹೇಗೆ ಮಾಡಬಹುದೆಂದು ಆಲೋಚನೆ ಮಾಡಿ, ದಯಮಾಡಿ ಎನ್‌ಪಿಎಸ್ ಯೋಜನೆಯನ್ನು ರದ್ದುಪಡಿಸಬೇಕು. ಅದನ್ನು ರದ್ದುಪಡಿಸುವವರೆಗೆ ತುರ್ತಾಗಿ ಸರ್ಕಾರವು ಆ ಖಾಸಗಿ ಅನುದಾನಿತ ಸಂಸ್ಥೆಯಲ್ಲಿನ ನೌಕರರಿಗೆ ಯಾರ್‍ಯಾರು ವಂಚನೆ ಮಾಡುತ್ತಿದ್ದಾರೆ. ಅವರು ಶೇ.10ರಷ್ಟು ಹಣವನ್ನು ಕೊಡಲೇ ಇಲ್ಲ, ಹಾಗೂ ಅವರ ವೇತನದಲ್ಲಿ ಶೇ.10ರಷ್ಟು ಹಣವನ್ನು ಕಡಿತಗೊಳಿಸಲಿಲ್ಲ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಿಂದೆ ಅವರು ಕೊಡುತ್ತಿರಲಿಲ್ಲ. ಸರ್ಕಾರವೇ ಕೊಡುತ್ತಿತ್ತು.

(ಗೊಂದಲ)

**ಸಭಾಪತಿಯವರು:-** ಶ್ರೀ ಕೆ.ಟಿ.ಶ್ರೀಕಂಠೇಗೌಡರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ನಾನು ಏನು ಹೇಳುತ್ತಿದ್ದೇನೆಂದರೆ, ಸರ್ಕಾರವೇ ಖಾಸಗಿ, ಅನುದಾನಿತ ಶಾಲೆಗಳಿಗೆ ಸಂಬಳವನ್ನು ಕೊಡುತ್ತಿದೆ. ಶೇ.100 ರಷ್ಟು ವೇಜಸ್‌ನ್ನು ಸರ್ಕಾರವೇ ಕೊಡುತ್ತಿದೆ. ಹಾಗಾಗಿ, ಅವರಿಗೆ ಎಚ್ಚರಿಕೆ ಕೊಟ್ಟು. . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, ದಿನಾಂಕ:01.04.2006ರ ನಂತರ ಕೆಲಸಕ್ಕೆ ಸೇರಿದವರ ಬಗ್ಗೆ ಮಾತ್ರ ಹೇಳಿ. ಈಗ ಆ ವಿಷಯದ ಬಗ್ಗೆ ಚರ್ಚೆ ಮಾಡುವುದು ಬೇಡ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಈ ಎನ್.ಪಿ.ಎಸ್. ಯೋಜನೆಯನ್ನು ರದ್ದುಪಡಿಸಿ, ಖಾಸಗಿ ಅನುದಾನಿತದಲ್ಲಿ ಇರುವವರಿಗೆ ಆಗಲೀ, ಸರ್ಕಾರಿ ನೌಕರರಿಗಾಗಲೀ ಓಪಿಎಸ್ ಯೋಜನೆಯನ್ನು ಜಾರಿಗೆ ತರಬೇಕು. ಇದು ಜಾರಿ ಆಗದಿದ್ದಲ್ಲಿ ನನ್ನ ಬಲವಂತದ ಆಗ್ರಹ ತಮ್ಮ ಮುಂದಿದೆ. ನಮ್ಮ ರಾಜ್ಯದ ಎಲ್ಲಾ ಮಾನ್ಯ ಶಾಸಕರನ್ನೂ ಕೂಡ ದಯಮಾಡಿ ಎನ್‌ಪಿಎಸ್ ಯೋಜನೆಗೆ ಒಳಪಡಿಸಬೇಕು.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಇಲ್ಲಿಯವರೆಗೆ ಮಾನ್ಯ ಹಿರಿಯ ಸದಸ್ಯರುಗಳು ಮಾತನಾಡಿದಂತೆ, ನಾನು ಕೂಡ ಎನ್.ಪಿ.ಎಸ್.ನ್ನು ರದ್ದುಪಡಿಸಿ ಓ.ಪಿ.ಎಸ್. ಯೋಜನೆಯನ್ನು ಜಾರಿಗೊಳಿಸಬೇಕೆಂದು ಸರ್ಕಾರವನ್ನು ನಾನು ಆಗ್ರಹಿಸುತ್ತೇನೆ.

<u>**(351)11–12–2018(4–00)ಎಂ.ಎಂ–ಕೆ.ಎಸ್**</u>

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ. ಸಂಕನೂರ (ಮುಂದು):–**

ದೆಹಲಿ ಸರ್ಕಾರವು ಈಗಾಗಲೇ ಎನ್.ಪಿ.ಎಸ್ (NPS-New Pension Scheme) ರದ್ದು ಮಾಡಿ;

**ಸಭಾಪತಿಯವರು:–** ಪಶ್ಚಿಮ ಬಂಗಾಳ, ತ್ರಿಪುರಾ ಇನ್ನಿತರ ರಾಜ್ಯಗಳಲ್ಲಿ ಓ.ಪಿ.ಎಸ್ (OPS-Old Pension Scheme) ಜಾರಿಯಲ್ಲಿದೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಓ.ಪಿ.ಎಸ್ ಅನ್ನು ಜಾರಿಗೊಳಿಸಿದ್ದಾರೆ. ಅಲ್ಲಿನ ವಿಧಾನಸಭೆಯಲ್ಲಿ ಎನ್.ಪಿ.ಎಸ್ ಅನ್ನು ರದ್ದು ಮಾಡಿ ಓ.ಪಿ.ಎಸ್ ಅನ್ನು ಏಕೆ ಜಾರಿಗೆ ತರುತ್ತಿದ್ದೇವೆ ಎನ್ನುವ ಬಗ್ಗೆ ನಿಖರವಾಗಿ ಕೆಳಕಂಡಂತೆ ಹೇಳಿದ್ದಾರೆ;

- *NPS does not provide for family pension or social security.*
- *It does not provide for loan facility when in dire need.*
- *It does not provide for annual increments and hike in DA*
- *It does not allow the employees to withdraw enough money from their won pension fund to meet the medical emergencies.*

ಎನ್.ಪಿ.ಎಸ್ ನಲ್ಲಿರುವ ನೌಕರರಿಗೆ ಬಹಳಷ್ಟು ಅನ್ಯಾಯವಾಗಿದೆ, ಇದನ್ನು ಮನಗಂಡು ದೆಹಲಿ ಸರ್ಕಾರ ಈ ಯೋಜನೆಯನ್ನು ರದ್ದು ಮಾಡಿದೆ. ಅದೇ ರೀತಿ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಓ.ಪಿ.ಎಸ್ ಅನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ ಅವರು ಹೇಳಿರುವ ಮಾತಿನಂತೆ ನಡೆದುಕೊಳ್ಳಬೇಕು. ಇದೇ ಸದನದೊಳಗೆ ಎನ್.ಪಿ.ಎಸ್ ಅನ್ನು ರದ್ದು ಮಾಡಿ ಓ.ಪಿ.ಎಸ್ ಅನ್ನು ಜಾರಿಗೆತರುತ್ತಿದ್ದೇವೆಂದು ಘೋಷಣೆ ಮಾಡಬೇಕು. ಇದರ ಜೊತೆಗೆ ತಮ್ಮ ಗಮನಕ್ಕೆ ತರುವುದೇನೆಂದರೆ, ಈಗಾಗಲೇ ಕೇರಳ ಸರ್ಕಾರ ಮತ್ತು ತಮಿಳುನಾಡು ಸರ್ಕಾರವು ಎನ್.ಪಿ.ಎಸ್ ಅನ್ನು ರದ್ದು ಮಾಡಿ ಓ.ಪಿ.ಎಸ್ ಅನ್ನು ಜಾರಿಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತರಬೇಕೆಂದು ಅಲ್ಲಿ Sub-Committee ಅನ್ನು ಮಾಡಿ ಕಾರ್ಯವನ್ನು ಪ್ರಾರಂಭ ಮಾಡಿದ್ದಾರೆ. ಆ ದಿಸೆಯೊಳಗೆ ಕರ್ನಾಟಕ ಸರ್ಕಾರವನ್ನು ಎನ್.ಪಿ.ಎಸ್ ಅನ್ನು ರದ್ದು ಮಾಡಿ ಓ.ಪಿ.ಎಸ್ ಅನ್ನು ಜಾರಿಗೆ ತರಬೇಕೆಂದು ಆಗ್ರಹಿಸುತ್ತೇನೆ.

**ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದ ವಿಚಾರವಾದ ಎನ್.ಪಿ.ಎಸ್ ಅನ್ನು ರದ್ದು ಮಾಡಿ ಓ.ಪಿ.ಎಸ್ ಅನ್ನು ಜಾರಿಗೆ ತರಬೇಕೆನ್ನುವ ವಿಚಾರದಲ್ಲಿ ನಾನು ಕೂಡ ಎಲ್ಲಾ ಸದಸ್ಯರ ಅಭಿಪ್ರಾಯಗಳಿಗೆ ಸಹಮತವನ್ನು ವ್ಯಕ್ತಪಡಿಸುತ್ತಾ ನನ್ನ ಕ್ಷೇತ್ರದ ಶಿಕ್ಷಕರೊಬ್ಬರ ವಿಚಾರವನ್ನು ಹೇಳಬಯಸುತ್ತೇನೆ. ಚಿತ್ರದುರ್ಗದ ಸರ್ಕಾರಿ ಶಾಲೆಯೊಂದರಲ್ಲಿ ಶ್ರೀ ತಿಪ್ಪೇಸ್ವಾಮಿ ಎಂಬ ಶಿಕ್ಷರಿದ್ದಾರೆ. ಅವರು 1997ನೇ ಇಸವಿಯಲ್ಲಿ ಕೆಲಸಕ್ಕೆ ಸೇರಿದ್ದರು. ಅವರಿಗೆ 2012ರಲ್ಲಿ ಖಾಯಂ ಆಯಿತು. 2017ರಲ್ಲಿ ಅವರು ನಿವೃತ್ತಿಯಾದಾಗ 38,000 ರೂಪಾಯಿಗಳು ಸಂಬಳ ಬರುತ್ತಿತ್ತು. ಓ.ಪಿ.ಎಸ್ ಇದ್ದಿದ್ದರೆ ಅವರಿಗೆ 16,000 ರೂಪಾಯಿ ಪಿಂಚಣಿ ಬರುತ್ತಿತ್ತು. ಆದರೆ ಅವರು ನಿವೃತ್ತರಾದಾಗ ಕೇವಲ 665 ರೂಪಾಯಿಗಳ ಪಿಂಚಣಿ ಬಂದಿದೆ. ಹಳೆಯ ಪಿಂಚಣಿ ವ್ಯವಸ್ಥೆಯಲ್ಲಿ ನಿವೃತ್ತರಾದ ನೌಕರರಿಗೆ, 50% of the salary ಪಿಂಚಣಿ ಬರುತ್ತಿತ್ತು. ಆ ನೌಕರ ತೀರಿಹೋದ ನಂತರ ಅವರ ಮನೆಯವರು ಬದುಕಿರುವವರೆಗೆ ಅದರಲ್ಲಿ ಶೇ.25ರಷ್ಟು ಪೆನ್ಷನ್ ಬರುತ್ತಿತ್ತು. ಆಗಿಂದಾಗ್ಗೆ ವೇತನ ಪರಿಷ್ಕಣೆಯಾದಾಗ, ಅದಕ್ಕೆ ತಕ್ಕಂತೆ ಪಿಂಚಣಿ ಕೂಡ ಜಾಸ್ತಿಯಾಗುತ್ತಿತ್ತು. ನೂತನ ಪಿಂಚಣಿ ವ್ಯವಸ್ಥೆಯಲ್ಲಿ ಇದ್ಯಾವುದೂ ಇಲ್ಲ. ಮಾನ್ಯ ಶ್ರೀಕಂಠೇಗೌಡರು ಮತ್ತು ಮಾನ್ಯ ಆಯನೂರು ಮಂಜುನಾಥರವರು ಬಹಳ ಚೆನ್ನಾಗಿ ಹೇಳಿದರು. ಇದನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಿ ಜೂಜಾಟಕ್ಕಿಂತ ಕೆಟ್ಟದಾದ ವ್ಯವಸ್ಥೆಗೆ ತೊಡಗಿಸಿ ಸರ್ಕಾರಿ ನೌಕರರು, ಅನುದಾನಿತ ನೌಕರರು ಮತ್ತು ನಿವೃತ್ತ ನೌಕರರ ಜೊತೆ ಚೆಲ್ಲಾಟವಾಡುತ್ತಿದ್ದಾರೆ ಎನ್ನುವ ಮಾತನ್ನು ಬಹಳ ಸ್ವಾರಸ್ಯವಾಗಿ ಹೇಳಿದ್ದಾರೆ. ಮಾನ್ಯ ಶ್ರೀಕಂಠೇಗೌಡರು ಮಾತನಾಡುವಾಗ ಒಂದು ಸಣ್ಣ ವಿಚಾರವನ್ನು ಹೇಳಿದರು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ ಎಂದು ಹೇಳಿದರು. ಶ್ರೀ ಭೋಜೇಗೌಡರ ಕೈಯಲ್ಲಿ ಈ ಕೆಲಸ ಆಗುತ್ತದೆ ಎಂದು ಅಂದುಕೊಂಡಿದ್ದೆವು. ಸರ್ಕಾರ ಬಂದ ತಕ್ಷಣ, ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾದ ತಕ್ಷಣ ಎನ್.ಪಿ.ಎಸ್ ಅನ್ನು ರದ್ದು ಮಾಡಿ ಓ.ಪಿ.ಎಸ್ ಅನ್ನು ಜಾರಿಗೆ ತರುತ್ತಾರೆ ಅಂದುಕೊಂಡರೆ ಅವರು.....

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ಮಾನ್ಯ ಭೋಜೇಗೌಡರು ಮನಸ್ಸು ಮಾಡಿದರೆ ಈಗಲೂ ಅದಾಗುತ್ತದೆ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆದರೆ ಅವರು ಸುಪ್ರೀಂಕೋರ್ಟ್‌ಗೆ ಹೋಗಿಬಿಟ್ಟರು. ಅಲ್ಲಿ ruling ಎಲ್ಲಾ quote ಮಾಡಿದರು. ಆ ruling ಅಲ್ಲಿಯೇ ಇರಲಿ, ನಿಮ್ಮ ruling ಅನ್ನು ಹೇಳಿ. ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗುವ ಮೊದಲೇ ಜೆ.ಡಿ.ಎಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿಯೇ ಹೇಳಿದ್ದಾರೆ. ನಾನು ಕಾಂಗ್ರೆಸ್ ಪಕ್ಷದ ಬಗ್ಗೆ ಹೇಳುತ್ತಿಲ್ಲ. ಅವರು ಪ್ರಣಾಳಿಕೆಯಲ್ಲಿ;

(ಗೊಂದಲ)



"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು divide ಮಾಡಲಿಲ್ಲ. ಆದರೆ ಮುಖ್ಯಮಂತ್ರಿಯವರಾದ ಶ್ರೀ ಕುಮಾರಸ್ವಾಮಿಯವರ ಜನತಾದಳದ ಪ್ರಣಾಳಿಕೆಯಲ್ಲಿ ಇದನ್ನು ಬಹಳ highlight ಮಾಡಿ ಎಲ್ಲಾ ನೌಕರರ ಬಳಿಗೆ ಹೋಗಿ ಎನ್.ಪಿ.ಎಸ್ ಅನ್ನು ರದ್ದು ಮಾಡಿ ಓ.ಪಿ.ಎಸ್ ಅನ್ನು ಜಾರಿಗೆ ತರುತ್ತೇವೆ ಎಂದು ಹೇಳಿರುವುದು ತಮ್ಮ ಗಮನಕ್ಕೂ ಬಂದಿದೆ ಅಂದುಕೊಂಡಿದ್ದೇವೆ. ಆ ಸಂದರ್ಭದಲ್ಲಿ ನುಣುಚಿಕೊಳ್ಳುವ, ತಪ್ಪಿಸಿಕೊಳ್ಳುವ ಉತ್ತರಗಳು ದಯವಿಟ್ಟು ನಿಮ್ಮ ಕಡೆಯಿಂದ ಬರಬಾರದು. ಇವತ್ತು ತಾಪತ್ರಯ ಬಂದಿರುವುದು ಯಾರಿಗೆ ಎಂದರೆ....

**ಶ್ರೀ ಸಿ.ಎಸ್. ಪುಟ್ಟರಾಜು (ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ನಿಮ್ಮಿಂದ ಸರ್ಟಿಫಿಕೇಟ್ ತೆಗೆದುಕೊಳ್ಳುವ ಅಗತ್ಯ ಇಲ್ಲ. ಎಲ್ಲಾ ಸದಸ್ಯರೂ ಒಟ್ಟಾರೆ ಅಭಿಪ್ರಾಯವನ್ನು ಮಂಡಿಸುತ್ತಿದ್ದಾರೆ, ಅದರ ಬಗ್ಗೆ ಮಾತನಾಡಿ. ಏಕೆ ಬೆರಳು ತೋರಿಸಿ ಹೇಳುತ್ತೀರಿ? ಬೆರಳು ತೋರಿಸಿ ಮಂಗಳಾರತಿ ಮಾಡಿಸಿಕೊಳ್ಳುತ್ತಿರುವುದು ಸಾಕು.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಮಂಗಳಾರತಿಯನ್ನು ಮಾಡುತ್ತಾರೆ, ನಾವು ಮಾಡಬೇಕಾಗಿಲ್ಲ. ಈಗ ತಾಪತ್ರಯ ಬಂದಿರುವುದು ಯಾರಿಗೆಂದರೆ, ಮಾನ್ಯ ಕೃಷ್ಣ ಭೈರೇಗೌಡರಿಗೆ ಬಂದಿದೆ. ಮುಖ್ಯಮಂತ್ರಿಯವರ ಪರವಾಗಿ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಹೇಳಿದ್ದಾರೆ. ಅಂದರೆ, ಈ ಉತ್ತರಕ್ಕೆ ಮುಖ್ಯಮಂತ್ರಿಯವರೇ ಸಹಿ ಮಾಡಿದ್ದಾರೆ. ಈ ಸದನದ ಮುಖಾಂತರ ಮುಖ್ಯಮಂತ್ರಿಯವರಿಗೆ ವಿನಂತಿ ಮಾಡುವುದೇನೆಂದರೆ, ದಯವಿಟ್ಟು ಈ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಿಜವಾಗಲೂ ಸರ್ಕಾರಿ ನೌಕರರ ಪರ ನಿಮ್ಮ ಪ್ರಣಾಳಿಕೆಯಲ್ಲಿ ಹೇಳಿರುವಂತೆ ನಡೆದುಕೊಳ್ಳಲು ಏನಾದರೂ ಸ್ವಲ್ಪ ಆತ್ಮಸಾಕ್ಷಿ ಇದ್ದರೆ ಈ ಉತ್ತರವನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು, ಮುಖ್ಯಮಂತ್ರಿಯವರೇ ಬಂದು ಈ ಸದನದಲ್ಲಿ ಉತ್ತರವನ್ನು ಕೊಡಬೇಕು. ಆದರೆ ಮುಖ್ಯಮಂತ್ರಿಗಳು ಮಾನ್ಯ ಕೃಷ್ಣಭೈರೇಗೌಡರ ಮುಖಾಂತರ ಈ ಉತ್ತರ ಕೊಡಿಸುವ ಪ್ರಯತ್ನ ಮಾಡಿದ್ದಾರೆ. ಮುಖ್ಯಮಂತ್ರಿಯವರಿಗೆ ಬೇರೆ ಕೆಲಸ ಇರಬಹುದು. ಆದರೆ ಅವರೇ ಬಂದು ಈ ಸದನದಲ್ಲಿ ನಮ್ಮೆಲ್ಲರ ಅಹವಾಲನ್ನು ಕೇಳಿ ಸಮಂಜಸವಾದ ಉತ್ತರವನ್ನು ಕೊಟ್ಟು ಎನ್.ಪಿ.ಎಸ್ ಅನ್ನು ರದ್ದು ಮಾಡಿ ಓ.ಪಿ.ಎಸ್ ಅನ್ನು ಜಾರಿಗೆ ತರುತ್ತೇವೆ ಎಂದು ಉತ್ತರ ಕೊಡುವ ತನಕ ಈ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಆಗ್ರಹಪೂರ್ವಕವಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಎರಡು ಕಾರಣಗಳಿವೆ. ಸರ್ಕಾರಿ ನೌಕರರಲ್ಲಿ ಎನ್.ಪಿ.ಎಸ್ ಎಂಬ ಸಂಘಟನೆ ರಚನೆಯಾಗಿದೆ. ಎನ್.ಪಿ.ಎಸ್ ನೌಕರರ ಹೋರಾಟಕ್ಕೆ ಸಂಘಟನೆಯೊಂದು ಉದಯವಾಗಿದೆ. ಇವರ ಸಮ್ಮೇಳನ/ಸಭೆಗೆ ಒಮ್ಮೆ ಹೋಗಿದ್ದೆ. ಆ ಸಭೆಯಲ್ಲಿ ಎನ್.ಪಿ.ಎಸ್ ಅನ್ನು ರದ್ದುಪಡಿಸಬೇಕು, ಓ.ಪಿ.ಎಸ್ ಅನ್ನು ಜಾರಿಗೆ ತರಬೇಕೆನ್ನುವ ಬಗ್ಗೆ ಹೋರಾಟ ಆಗಿತ್ತು. ಅಲ್ಲಿ ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥರವರೂ ಇದ್ದರು. ಎನ್.ಪಿ.ಎಸ್ ಎಂಬ pension scheme ಅನ್ನು ರದ್ದು ಮಾಡಬೇಕೆಂದು ಹೋರಾಟ ಮಾಡುವುದಕ್ಕೆ, you have taken

12 years, 12 ವರ್ಷವನ್ನೇಕೆ ತೆಗೆದುಕೊಂಡಿರಿ ಎಂದು ಕೇಳಿದೆ. ಆಗ ಅವರು ನಮಗೆ ಎನ್.ಪಿ.ಎಸ್ ಸ್ಕೀಂ ಇಷ್ಟು ಡೋಂಗಿ ಸ್ಕೀಂ ಎಂದು ತಿಳಿದುಕೊಳ್ಳುವುದಕ್ಕೆ 12 ವರ್ಷವಾಯಿತು ಎಂದು ಉತ್ತರಿಸಿದರು. ಈ ನೌಕರರಿಗೆ 12 ವರ್ಷ ಹೋದರೆ ಸಾಮಾನ್ಯ ಜನರ ಪರಿಸ್ಥಿತಿ ಏನು? ಇದರ ಬಗ್ಗೆ ಚರ್ಚೆ ಮಾಡಬೇಕೆಂದೆನಿಸಿ ಈ ವಿಚಾರವನ್ನು ತಮ್ಮ ಗಮನಕ್ಕೆ ತಂದು ಇವತ್ತು ಚರ್ಚೆ ನಡೆಯುತ್ತಿದೆ. ಸರ್ಕಾರವು 2006ರಲ್ಲಿ ಈ ಯೋಜನೆಯನ್ನು ಜಾರಿಗೆ ತರುವಾಗ ಒಳ್ಳೆಯ ಉದ್ದೇಶದಿಂದ ತಂದಿರಬಹುದು. ಏಕೆಂದರೆ, ನನಗೆ LIC ಯವರು Unit Linked Policy ಕೊಟ್ಟ ಹಾಗೆ ಇದು ಒಳ್ಳೆಯದು, ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹಾಕಿದರೆ ಬಹಳ ದುಡ್ಡು ಬರುತ್ತದೆ ಎಂಬ ಆಲೋಚನೆಯಲ್ಲಿ ನೌಕರರು ಸುಮ್ಮನೇ ಕುಳಿತು ಬಿಟ್ಟರು. ಈಗ ಬರಬರುತ್ತಾ ಅವರಿಗೆ ಎಲ್ಲೇ ಭೂಕಂಪವಾದರೂ ಷೇರು ಮಾರುಕಟ್ಟೆಯಲ್ಲಿ ಹೆಚ್ಚು ಕಡಿಮೆಯಾಗಿ ಇವರ ರೇಟ್ ಕಡಿಮೆಯಾಗುತ್ತದೆ ಎಂದು ಗೊತ್ತಾಯಿತು. ಇದರಿಂದ ಅವರಿಗೆ ಹಳೆಯ ಪಿಂಚಣಿ ವ್ಯವಸ್ಥೆಯಲ್ಲಿ ಎಷ್ಟು ಪಿಂಚಣಿ ಬರುತ್ತಿತ್ತು ಅಷ್ಟು ಪಿಂಚಣಿ ಎನ್.ಪಿ.ಎಸ್ ನಿಂದ ಬರುವುದಿಲ್ಲ ಎಂದು ಸ್ಪಷ್ಟವಾಗಿದೆ. ಈಗ ಕರ್ನಾಟಕ ರಾಜ್ಯದ ಇಡೀ ನೌಕರರು ಒಟ್ಟು ಸೇರಿ ನಮಗೆ ಎನ್.ಪಿ.ಎಸ್ ಬೇಡ, ಓ.ಪಿ.ಎಸ್ ಅನ್ನು ಜಾರಿಗೆ ತನ್ನಿ ಎಂದು ಹೇಳಿದ್ದಾರೆ. ಅವರು ಹೇಳುವುದರಲ್ಲಿ ಅರ್ಥವಿದೆ. ನಾನು retire ಆದಮೇಲೆ ನನ್ನ ಜೀವನಕ್ಕೆ ಒಂದು road map ಬೇಕು. ನನಗೆ ಎಷ್ಟು ಪಿಂಚಣಿ ಸಿಗುತ್ತದೆ? ನನ್ನ ಕುಟುಂಬವನ್ನು ನಡೆಸಲು ಎಷ್ಟು ಪಿಂಚಣಿ ಸಾಧ್ಯವಾಗುತ್ತದೆ ನಾನು ಅಧಿಕಾರದಲ್ಲಿರುವಾಗ ಎಷ್ಟು ಹಣವನ್ನು ಸಂಪಾದನೆ ಮಾಡಿಕೊಳ್ಳಬೇಕೆಂದು. ಎಲ್ಲರಿಗೂ ಎನ್.ಪಿ.ಎಸ್ ಬೇಕೆಂದು ಅನಿಸುವುದಿಲ್ಲ ಅಥವಾ ಓ.ಪಿ.ಎಸ್ ಬೇಕು ಎಂದು ಅನಿಸುವುದಿಲ್ಲ. ಕೆಲವು ಅಧಿಕಾರಿಗಳಿಗಾದರೂ ಬೇಕಲ್ಲವೇ. ಎಲ್ಲಾ ಅಧಿಕಾರಿಗಳಿಗೆ ಬೇಕಾಗುವಂತಹ ಓ.ಪಿ.ಎಸ್. ಅನ್ನು ಜಾರಿಗೆ ತರುವುದಕ್ಕೆ ಕರ್ನಾಟಕ ರಾಜ್ಯದಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ಕೆಲವು ಕಡೆ ಸಮಿತಿ ಮಾಡಿದ್ದೇವೆ, ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಾರೆ. ಪರಿಶೀಲನೆಗಳಿಂದ ಇದು ಆಗುವುದಿಲ್ಲ. ಪರಿಶೀಲನೆ ಎನ್ನುವ ಪದವು ಬಹಳ vague ಆಗಿದೆ. ಅದು ಎಷ್ಟು ವರ್ಷ ಹೋಗುವುದಕ್ಕೆ ಸಾಧ್ಯವಿದೆ ಎಂದರೆ ನೌಕರರಿಗೆ ತಿಳಿಯುವುದಕ್ಕೆ 12 ವರ್ಷ ಆಯಿತು, ಸರ್ಕಾರಕ್ಕೆ ಪರಿಶೀಲನೆ ಮಾಡುವುದಕ್ಕೆ ಮತ್ತೂ 10 ವರ್ಷ ಹೋಗುವ ಸಾಧ್ಯತೆ ಇದೆ. ಒಟ್ಟು 22 ವರ್ಷ ಆಗುವಾಗ ಇಲ್ಲಿರುವ ನಾವ್ಯಾರೂ ಇರುವುದಿಲ್ಲ. ಎಲ್ಲಿಯೋ ಒಂದು ಕಡೆ deadline ಹಾಕಬೇಕು. ಈಗಾಗಲೇ ದೆಹಲಿಯಲ್ಲಿ deadline ಹಾಕಿದೆ. ಬೇರೆ ಬೇರೆ ಕಡೆಗಳಲ್ಲಿ ಇದನ್ನು ತೆಗೆದು ಹಾಕುವ ಆಲೋಚನೆ ಇದೆ. ಕರ್ನಾಟಕ ರಾಜ್ಯದಲ್ಲಿ ಈ ಯೋಜನೆಯನ್ನು ತೆಗೆದು ಹಾಕುವುದಕ್ಕೆ ಸರ್ಕಾರವು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಈ ಮೂಲಕ ಆಗ್ರಹ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(352) 11–12–2018/04–10/ಕೆಹೆಚ್–ಜಿಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈಗಾಗಲೇ ನನ್ನ ಮಿತ್ರರೆಲ್ಲರೂ ಎನ್.ಪಿ.ಎಸ್., ಯೋಜನೆಯ ಬಗ್ಗೆ ಮಾತನಾಡಿದ್ದಾರೆ. ದಿನಾಂಕ 01–04–2006ರ ನಂತರ ನೇಮಕಾತಿ ಹೊಂದಿರುವಂತಹ ನೌಕರರಿಗೆ ಎನ್.ಪಿ.ಎಸ್., ಎನ್ನುವಂತಹ ಒಂದು ಕಾಯ್ದೆಯನ್ನು ತಂದಿರುವುದರಿಂದ, ಆ ನೌಕರರಿಗೆ ತುಂಬಾ ಹೊರೆಯನ್ನು ಉಂಟು ಮಾಡಿದೆ. ಓ.ಪಿ.ಎಸ್., ಆಗಬೇಕೆಂಬುದು ಎಲ್ಲರ ಕೂಗಾಗಿದೆ. ಒಂದು ಪಾಲಿಸಿ ಎಂದು ಬಂದಾಗ ಆ ಪಾಲಿಸಿಯ ವಿಷಯದಲ್ಲಿ usually judicial system interfere ಆಗುವುದಿಲ್ಲ. But, policies contrary to public interest are violative of constitutional principles ಎನ್ನುವಂತಹ ವಿಚಾರ ಬರುತ್ತದೆ. ಈ ಒಂದು ಪಾಲಿಸಿ contrary to the constitutional principles and public interest ಎನ್ನುವಂತಹ ಎರಡು ವಿಚಾರಗಳು ಈ ವಿಷಯದಲ್ಲಿ ಬರುತ್ತದೆ. ಹಾಗಾಗಿ ಈ ಒಂದು ಪಾಲಿಸಿ ವಿಚಾರ ಏನಿದೆ, ಅದು constitutional violation ಆಗುತ್ತದೆ ಎಂಬ view ನ್ನು ನಾನು ತಮಗೆ ಸಲಹೆ ರೂಪದಲ್ಲಿ ಕೊಡುವುದಕ್ಕೆ ಬಯಸುತ್ತೇನೆ.

ಈಗಾಗಲೇ ಮಾನ್ಯ ಭೋಜೇಗೌಡರವರು, ಅಣ್ಣರಾದ ಆಯನೂರು ಮಂಜುನಾಥ್‌ರವರು ಮತ್ತು ಮಾನ್ಯ ಐವನ್ ಡಿ'ಸೋಜಾರವರು ಕೂಡ ಇದರ ಬಗ್ಗೆ ವಿವರವಾಗಿ ಹೇಳಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಿಲ್ಲಿ, ವೆಸ್ಟ್ ಬೆಂಗಾಲ್ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಎನ್.ಪಿ.ಎಸ್., ಕಾಯ್ದೆಗೆ ಕೆಲವು ಮಾರ್ಪಾಡುಗಳನ್ನು ಮಾಡಿ, ಓ.ಪಿ.ಎಸ್., ಕಾಯ್ದೆಯನ್ನು ಜಾರಿಗೆ ತಂದಿದ್ದಾರೆ ಎನ್ನುವಂತಹ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಕೆಲವು ಸಂದರ್ಭಗಳಲ್ಲಿ Freedom Park ಬಳಿ ಹೋದಾಗ ಈ ವಿಚಾರ ತಮ್ಮ ಗಮನಕ್ಕೂ ತಂದಿರುವಂತಹದ್ದು ಸಹ ತಮ್ಮ ಅರಿವಿಗೆ ಇದೆ ಎಂದು ನಾನು ಭಾವಿಸುತ್ತೇನೆ. ಅದಕ್ಕೋಸ್ಕರ ಸರ್ಕಾರದವರು ಶೇಕಡಾ 10 ರಷ್ಟು ಮೊತ್ತವನ್ನು ಷೇರು ಮಾಡಿ, ಇದರ ಜೊತೆಗೆ ಶೇಕಡಾ 10 ರಷ್ಟು ಮೊತ್ತವನ್ನು ಸರ್ಕಾರಿ ನೌಕರರಿಂದ ಕಟಾವು ಮಾಡಿ, ಒಟ್ಟಾರೆಯಾಗಿ ಶೇಕಡಾ 20 ರಷ್ಟು ಮೊತ್ತವನ್ನು ಷೇರು ಮಾರುಕಟ್ಟೆಯಲ್ಲಿ ಬಂಡವಾಳ ಹೂಡುವ ಬದಲು, ಶೇಕಡಾ 20 ರಷ್ಟು ಮೊತ್ತವನ್ನು ಸರ್ಕಾರವು ತನ್ನ ಹತ್ತಿರ ಇಟ್ಟುಕೊಂಡು, ಇನ್ನು ಶೇಕಡಾ 10 ರಷ್ಟು ಮೊತ್ತವನ್ನು ಸರ್ಕಾರಿ ನೌಕರರಿಂದ ಹೆಚ್ಚಿಗೆ ತೆಗೆದುಕೊಂಡರೂ ಪರವಾಗಿಲ್ಲ. ಅದನ್ನು 40 ವರ್ಷಗಳ ಸೇವೆಯನ್ನು ಸಲ್ಲಿಸಿ, ನಿವೃತ್ತಿಯಾದ ನೌಕರನಿಗೆ ಓ.ಪಿ.ಎಸ್. (ಹಳೆಯ ಪಿಂಚಣಿ ಯೋಜನೆ)ಯನ್ನು ಮುಂದುವರೆಸಬೇಕೆಂದು ಈ ಸಂದರ್ಭದಲ್ಲಿ ಆಗ್ರಹಪಡಿಸಿ ಮಾನ್ಯ ಸಚಿವರಿಗೆ ಸಲಹೆಯನ್ನು ಕೊಡುತ್ತೇನೆ. It amounts to violation of constitutional principles. Therefore, a re-look is necessary in this matter. ಆದ್ದರಿಂದ ಈ ಬಗ್ಗೆ ಮನವಿ ಮಾಡುವುದಕ್ಕೆ ಬಯಸುತ್ತೇನೆ. ಇನ್ನೊಂದು ವಿಚಾರವೇನೆಂದರೆ, ಈಗಾಗಲೇ ನೂತನ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಿಂಚಣಿ ಯೋಜನೆಯನ್ನು ದಿನಾಂಕ 01–04–2004ರಲ್ಲಿ ಜಾರಿಗೊಳಿಸಲಾಗಿದೆ. ನೂತನ ಪಿಂಚಣಿ ಯೋಜನೆಯು ಸರ್ಕಾರದ ನೀತಿ–ನಿಯಮಗಳಿಗೆ ಸಂಬಂಧಿಸಿರುವುದರಿಂದ, ನೀತಿ–ನಿಯಮಗಳೇ ಸಂವಿಧಾನದ principles ಗೆ violative ಆಗಿರುವಾಗ relook ಮಾಡಬಹುದು ಎನ್ನುವಂತಹ ಸಲಹೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ನಾನು ಕೂಡ ಓ.ಪಿ.ಎಸ್. ಅನ್ನು ಜಾರಿಗೆ ತರಬೇಕೆಂಬ ಬಗ್ಗೆ ಆಗ್ರಹಪಡಿಸುತ್ತೇನೆ. ಇದರ ಜೊತೆಗೆ ಈಗಾಗಲೇ ಮಾನ್ಯ ಆಯನೂರು ಮಂಜುನಾಥ್‌ರವರು ಶೇಕಡಾ 10 ರಷ್ಟು ಮೊತ್ತವನ್ನು ನೌಕರರ ಸಂಬಳದಲ್ಲಿ ಕಟಾವು ಮಾಡಲಾಗುತ್ತಿದೆ ಎಂದು ಹೇಳಿದರು. ಸರ್ಕಾರದವರು ಅನುದಾನಿತ ಶಾಲಾ/ಕಾಲೇಜುಗಳಲ್ಲಿ ಕೆಲಸ ಮಾಡುವವರಿಗೆ ಶೇಕಡಾ 10 ರಷ್ಟು ಮೊತ್ತವನ್ನು ಸರ್ಕಾರಿ ನೌಕರನ ಸಂಬಳದಲ್ಲಿ ಕಟಾವು ಮಾಡುತ್ತದೆ. ಆದರೆ ಯಾವುದೇ ಮ್ಯಾನೇಜ್‌ಮೆಂಟ್ ಶೇಕಡಾ 10 ರಷ್ಟು ಮೊತ್ತವನ್ನು ಹಾಕುವುದಿಲ್ಲ ಮತ್ತು ಶೇಕಡಾ 10 ರಷ್ಟು ಮೊತ್ತವನ್ನು ಹಾಕುವುದಕ್ಕೂ ಮ್ಯಾನೇಜ್‌ಮೆಂಟ್‌ನವರು ಸಿದ್ಧರಿರುವುದಿಲ್ಲ. ಅವರಿಗೂ ಕೂಡ ಓ.ಪಿ.ಎಸ್., ಪದ್ಧತಿಯನ್ನು ಜಾರಿಗೊಳಿಸಿದರೆ ಒಳ್ಳೆಯದು ಎನ್ನುವಂತಹ ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಾನೂನು, ನ್ಯಾಯ ಮತ್ತು ಮಾನವ ಹಕ್ಕು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಸಾಕಷ್ಟು ಜನ ಮಾನ್ಯ ಸದಸ್ಯರು ಈ ನೂತನ ಪಿಂಚಣಿ ಯೋಜನೆ ಮತ್ತು ಹಳೆಯ ಪಿಂಚಣಿ ಯೋಜನೆಯ ಬಗ್ಗೆ ನಾಲ್ಕಾರು ವಿಚಾರಗಳನ್ನು ಹೇಳಿ, ಆ ಬಗ್ಗೆ ತಮ್ಮ ಬಹಳಷ್ಟು ಆತಂಕಗಳನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸಭಾಪತಿಯವರೇ ತಾವು ಕೂಡ ಪೀಠದಲ್ಲಿ ಕುಳಿತು ಇದರ ಬಗ್ಗೆ ಮಾತನಾಡಬೇಕೆಂಬ ಆಸಕ್ತಿ ಇದ್ದರೂ ಕೂಡ ಪೀಠಕ್ಕೆ ಗೌರವ ಕೊಟ್ಟು ತಾವು ಸಹ ಮಧ್ಯದಲ್ಲಿ ಒಂದೆರಡು ಮಾತುಗಳ ಮುಖಾಂತರ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಆದ್ದರಿಂದ ಎಲ್ಲ ಮಾನ್ಯ ಸದಸ್ಯರು ನಾನು ಹೇಳುವುದನ್ನು ಸ್ವಲ್ಪ ತಾಳ್ಮೆಯಿಂದ ಕೇಳಬೇಕು.

ಮಾನ್ಯ ಶ್ರೀಕಂಠೇಗೌಡರೇ, ತಮ್ಮ ಮೇಲೆ ಬಹಳ ಒತ್ತಡ ಇರುವುದು ನಮಗೂ ಸಹ ಗೊತ್ತಿದೆ. ಹಾಗಾಗಿ ಸಿಡುಕಬೇಡಿ. ಸ್ವಲ್ಪ ತಾಳ್ಮೆಯಿಂದ ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿಸಿಕೊಳ್ಳಿ. ಮಾನ್ಯ ಶ್ರೀಕಂಠೇಗೌಡರವರಿಗೆ ನಾನು ಏನು ಬೇಕಾದರೂ ಹೇಳುವ ಸ್ವಾತಂತ್ರ್ಯ ನನಗೆ ಇದೆ. ಆದ್ದರಿಂದ ಅವರ ಮುಖಾಂತರ ಎಲ್ಲರಿಗೂ ಹೇಳುತ್ತಿದ್ದೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ಎನ್.ಪಿ.ಎಸ್., ಯೋಜನೆಯನ್ನು ರದ್ದು ಮಾಡಿ ಓ.ಪಿ.ಎಸ್., ಯೋಜನೆಯನ್ನು ಜಾರಿಗೆ ತರುತ್ತೇವೆಂದು ಸರ್ಕಾರದ ಪರವಾಗಿ ಮಾನ್ಯ ಸಚಿವರು ತಿಳಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಹೇಳುವ ಉತ್ತರವನ್ನು ಪೂರ್ತಿಯಾಗಿ ಕೇಳಿ. ಮಾನ್ಯ ಸದಸ್ಯರೆಲ್ಲರೂ ಮಧ್ಯ–ಮಧ್ಯದಲ್ಲಿ ಉದ್ರೇಕಕ್ಕೆ ಒಳಗಾಗುವುದು ಬೇಡ. ಇದರ ಬಗ್ಗೆ ಭಾವನಾತ್ಮಕವಾಗಿ ತಮಗೆಲ್ಲರಿಗೂ ಕಾಳಜಿ ಇದೆ. ಆದರೆ ಉತ್ತರ ಕೊಡುವುದಕ್ಕಿಂತ ಮೊದಲು ನನಗೆ ನೇರವಾಗಿ ಸಂಬಂಧವಿಲ್ಲದೆ ಇದ್ದರೂ ಕೂಡ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದ ಪರವಾಗಿ ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ನಾನು ಸಹ ತಾಳ್ಮೆಯಿಂದ ಮಾನ್ಯ ಸದಸ್ಯರು ಹೇಳಿರುವ ವಿಚಾರವನ್ನು ಕೇಳಿದ್ದೇನೆ. ಅದೇ ರೀತಿ ತಾವು ಸಹ ನಾನು ಹೇಳುವುದನ್ನು ತಾಳ್ಮೆಯಿಂದ ಕೇಳಿ ಎಂದು ಹೇಳುತ್ತಿದ್ದೇನೆ. ಈಗ ಅನೇಕ ಮಾನ್ಯ ಸದಸ್ಯರು ಅವರ ಆತಂಕಗಳನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸಭಾಪತಿಯವರೇ, ತಾವು ಮಧ್ಯದಲ್ಲಿ ಮಾತನಾಡಬೇಕಾದರೆ ಇದುವರೆಗೆ ಸುಮಾರು 300 ನೌಕರರು ನಿಧನರಾಗಿದ್ದಾರೆ ಎಂಬ ಮಾತನ್ನು ಹೇಳಿದ್ದೀರಿ. ಅವರ ಕುಟುಂಬದವರಿಗೆ ಇನ್ನೂ ಎನ್.ಪಿ.ಎಸ್., ಮೊತ್ತ ಪಾವತಿಯಾಗದೇ ಇರುವಂತಹದ್ದು. ಇದು ಒಂದು ನಿರ್ದಿಷ್ಟವಾದ ಪ್ರಕರಣವಾಗಿದೆ. ಇದರ ಬಗ್ಗೆ ತಾವು ನಿರ್ದಿಷ್ಟವಾಗಿ ಉದಾಹರಣೆಯನ್ನು ಕೊಟ್ಟು ಹೇಳಿದ್ದೀರಿ. ಇನ್ನುಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಹುತೇಕ ಆತಂಕ ಮತ್ತು ಕಾಳಜಿ ಇದೆ. ಈಗ ತಾವು ಹೇಳಿರುವಂತಹ ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರವು ದಿನಾಂಕ: 23–06–2018ರಲ್ಲಿ ಒಂದು ಸರ್ಕಾರಿ ಆದೇಶವನ್ನು ಹೊರಡಿಸಿ, ಮೃತ ನೌಕರರು ಅಥವಾ ಅವರ ನಾಮ ನಿರ್ದೇಶಿತರು ಯಾರಿದ್ದಾರೆ, ಅವರಿಗೆ ಮರಣ ಉಪದಾನವನ್ನು ಕೊಡುವುದಕ್ಕೆ ಆದೇಶವನ್ನು ಮಾಡಿದ್ದು, ಅದು ಇನ್ನು ಸಂಪೂರ್ಣವಾಗಿ ಅನುಷ್ಠಾನಗೊಂಡಿಲ್ಲ ಎನ್ನುವ ಬಗ್ಗೆ ಒಪ್ಪುತ್ತೇನೆ. ಏಕೆಂದರೆ procedure issue ನಲ್ಲಿ ಇಷ್ಟು ದಿನ ಓ.ಪಿ.ಎಸ್.,ನಲ್ಲಿ ಏನಾಗುತ್ತಿತ್ತೆಂದರೆ, Auditor General ರವರು ಆದೇಶವನ್ನು ಹೊರಡಿಸುತ್ತಿದ್ದರು. ಈಗ ಎನ್.ಪಿ.ಎಸ್., ನನ್ನ ವ್ಯಾಪ್ತಿಗೆ ಬರುವುದಿಲ್ಲ. ಹಾಗಾಗಿ ನಾನು ಆದೇಶವನ್ನು ಹೊರಡಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಇದು ಒಂದು procedural issue ನಲ್ಲಿ ಬಾಕಿ ಇದೆ. ಅದನ್ನು ನಿವಾರಣೆ ಮಾಡುವ ಜವಬ್ದಾರಿ ನಮ್ಮ ಸರ್ಕಾರದ್ದಾಗಿದೆ. ಅದನ್ನು ನಾವು ನಿವಾರಣೆ ಮಾಡಿಕೊಡುತ್ತೇವೆ. ಇದನ್ನು ಕೊಡುವುದಿಲ್ಲವೆಂಬ ಮಾತು ಇಲ್ಲ, ಅದನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಎನ್.ಪಿ.ಎಸ್., ಹೊಸ ಪದ್ಧತಿಯಾಗಿರುವುದರಿಂದ ಕೆಲವೊಂದು ನಿಯಮಾವಳಿಗಳಲ್ಲಿ ಸ್ಪಷ್ಟತೆಯಿಲ್ಲದೆ ಇರುವುದರಿಂದ, ಸ್ವಲ್ಪ ವಿಳಂಬವಾಗಿದೆ. ಅದಕ್ಕೆ ವಿಷಾದವನ್ನು ಸಹ ವ್ಯಕ್ತಪಡಿಸಿ, ಅದನ್ನು ಸರಿಪಡಿಸುತ್ತೇವೆ. ಯಾರು 300 ಜನ ನೌಕರರು ನಿಧನರಾಗಿದ್ದಾರೆ, ಅವರ ಕುಟುಂಬದವರಿಗೆ ಸಿಗಬೇಕಾದ ಮೊತ್ತವನ್ನು ಕೊಡಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಒಂದು ನಿರ್ದಿಷ್ಟವಾದ ಪ್ರಕರಣಕ್ಕೆ ನಾನು ಉತ್ತರವನ್ನು ಹೇಳಿದ್ದೇನೆ. ಇನ್ನು ಉಳಿದ ಹಾಗೆ ಸಾಕಷ್ಟು ಆತಂಕಗಳು ತಮ್ಮೆಲ್ಲರ ಕಡೆಯಿಂದಲೂ ಬಂದಿದೆ. ಆದರೆ ಇಲ್ಲಿಯವರೆಗೂ ಸಹ ಯಾವುದೇ ನಿರ್ದಿಷ್ಟ ಪ್ರಕರಣಗಳು ಇಲ್ಲವೆನ್ನುವ ಬಗ್ಗೆ ಅರ್ಥ ಮಾಡಿಕೊಳ್ಳಬೇಕು. ಆತಂಕಗಳು ಇರುತ್ತವೆ. ಆದರೆ ಇದರಿಂದ ತೊಂದರೆಯಾಗಿರುವ ಉದಾಹರಣೆಗಳು ನನ್ನ ಗಮನದಲ್ಲಿಲ್ಲ. ಏನಾದರೂ ಇದ್ದರೆ ನಂತರ ಕೊಡಿ. ಒಂದು ಪ್ರಕರಣ ನನ್ನ ಗಮನಕ್ಕೆ ಬಂದಿದೆ, ಅದನ್ನು ಬಗೆಹರಿಸುತ್ತಿದ್ದೇನೆ. ಅದನ್ನು ಬಿಟ್ಟರೆ ಆತಂಕಗಳು ನೂರಾರು ಇವೆ. ಆದರೆ ಆತಂಕ ನಿಜ ಅಥವಾ ಇಲ್ಲ ಎನ್ನುವ ಬಗ್ಗೆ ಯಾವುದೇ ಪ್ರಕರಣ ಇಲ್ಲ.

ಸರ್ಕಾರ ಏನೇ ಒಂದು ಬದಲಾವಣೆಯನ್ನು ಮಾಡಿದಾಗ ನಮ್ಮ ಮನಸ್ಸಿನಲ್ಲಿ ನೂರಾರು ಆತಂಕಗಳು ಇರುತ್ತವೆ. ಈ ದೇಶದಲ್ಲಿ ಕಂಪ್ಯೂಟರ್‌ನ್ನು ಪರಿಚಯ ಮಾಡಿಕೊಡುವುದಕ್ಕೆ ಹೊರಟಾಗ, ಮಾನ್ಯ ರಾಜೀವ್ ಗಾಂಧಿಯವರ ಮೇಲೆ ಇಡೀ ದೇಶ ತಿರುಗಿ ಬಿದ್ದಿತ್ತು. ಇದರ ಬಗ್ಗೆ ಸಂಸತ್ತಿನಲ್ಲಿ ಯಾರ್‍ಯಾರು ಏನೇನು ಮಾತನಾಡಿದ್ದಾರೆ ಎನ್ನುವ ಬಗ್ಗೆ ನಾನು

ಹೇಳುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ರಾಜಕಾರಣ ಮಾಡುವುದಕ್ಕೆ ಹೋಗುವುದಿಲ್ಲ. ಕಂಪ್ಯೂಟರ್‌ನ್ನು ಪರಿಚಯ ಮಾಡಿಕೊಡುವುದಕ್ಕೆ ಹೊರಟಾಗ ಇಡೀ ರಾಷ್ಟ್ರೀಕೃತ ಬ್ಯಾಂಕುಗಳನ್ನು ಎಷ್ಟು ದಿನ ಬಂದ್ ಮಾಡಲಾಗಿತ್ತು ಎನ್ನುವ ಬಗ್ಗೆ ಸದನದಲ್ಲಿ ಹಿರಿಯರು ಯಾರಿದ್ದಾರೆ, ಅವರು ಜ್ಞಾಪಕ ಮಾಡಿಕೊಳ್ಳಬೇಕು. ಆ ಕಂಪ್ಯೂಟರೀಕರಣ ಆಗದೇ ಹೋಗಿದ್ದರೆ, ದೇಶ ಎಲ್ಲಿ ಇರುತ್ತಿತ್ತು ಎಂಬುದನ್ನು ನಾವು ಈ ಸಂದರ್ಭದಲ್ಲಿ ಜ್ಞಾಪಕ ಮಾಡಿಕೊಳ್ಳಬೇಕು. ಏನಾದರೂ ಬದಲಾವಣೆ ಮಾಡುವುದಕ್ಕೆ ಹೋದಾಗ ನಮಗೆ ನಾನಾ ಆತಂಕಗಳು ಬರುತ್ತವೆ. ಆದರೆ ವಾಸ್ತವದಲ್ಲಿ ಸಮಸ್ಯೆ ಇದ್ದರೆ, ಎಲ್ಲ ಸಮಸ್ಯೆಗಳಿಗೂ ಪರಿಹಾರವನ್ನು ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಬಹುದು. ಅಷ್ಟಕ್ಕೂ ಮೀರಿ ಸರ್ಕಾರಿ ನೌಕರರಿಗೆ ನಿಜವಾಗಿಯೂ ಸಮಸ್ಯೆಯಾದಾಗ, ಆ ಸಮಸ್ಯೆಗಳನ್ನು ಪರಿಹಾರ ಮಾಡದೇ ಇರುವಂತಹ ಸರ್ಕಾರ ಯಾವುದು ಇದೆ ಎಂಬುದನ್ನು ತೋರಿಸಿ. ಆರು ಕೋಟಿ ಮೂವತ್ತು ಲಕ್ಷ ಜನರ ಪರವಾಗಿ ನಾವು ಈ ಸದನದಲ್ಲಿ ಕುಳಿತಿದ್ದೇವೆ ಎಂದು ನಾವೆಲ್ಲಾ ಹೇಳುತ್ತೇವೆ. ಆದರೆ ನಾವು ಸರ್ಕಾರಿ ನೌಕರರಿಗೆ ಮೊದಲ ಆದ್ಯತೆಯನ್ನು ಕೊಡುತ್ತೇವೆ. ಸರ್ಕಾರಿ ನೌಕಕರು ಅವರೇ ಭಾಷಣ ಮಾಡುತ್ತಾರೆ. ಸರ್ಕಾರಿ ನೌಕರರಿಗೆ ತಿಂಗಳಿಗೆ ಸಂಬಳ, T.A., D.A., Increment, retirement benefits, H.R.A., ಮತ್ತು ಇನ್ನೂ ಅನೇಕ ಸೌಲಭ್ಯಗಳಿವೆ. ರೈತರಿಗೆ ಏನು ಸೌಲಭ್ಯವಿದೆ ಎಂದು ತಾವೇ ಕೇಳುತ್ತೀರಿ. ರೈತರಿಗೆ ಪಿಂಚಣಿ ಇದೆಯೇ, ಇಷ್ಟು ದುಡ್ಡು ಬರುತ್ತದೆಯೇ ಎಂದು ತಾವೇ ಹೊರಗಡೆ ಭಾಷಣ ಮಾಡುತ್ತೀರಿ. ಆ ರೈತರ ಹೆಸರಿನಲ್ಲಿ ನಾವು ಇಲ್ಲಿ ಕುಳಿತಿದ್ದೇವೆ. ಜೀವನವನ್ನು ನಡೆಸಲು ರೈತರಿಗೆ ಯಾವುದೇ ಭದ್ರತೆ ಇಲ್ಲ. ನಿಜ ಜೀವನದಲ್ಲಿ ರೈತರು ಬಹಳಷ್ಟು ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ ಮತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರೈತರ ಹೆಸರಿನಲ್ಲಿ ಪ್ರಮಾಣ ಮಾಡಿ ನಾವು ಈ ಜಾಗದಲ್ಲಿ ಕುಳಿತುಕೊಳ್ಳುತ್ತೇವೆ.

**(353) 11-12-2018 (04-20) ಎಸ್‌ಪಿಆರ್-ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೃಷ್ಣಭೈರೇಗೌಡ(ಮುಂದು):-**

ರೈತರಿಗೆ ಹಾಗೂ ಸರ್ಕಾರಿ ನೌಕರರಿಗೆ ಎಷ್ಟು ಆದ್ಯತೆಯನ್ನು ನೀಡುತ್ತಿದ್ದೇವೆ ಎಂಬುದರ ಬಗ್ಗೆ ನಾನು ಹೇಳುತ್ತೇನೆ. ನಾನು ಯಾರ ವಿರುದ್ಧವೂ ಇಲ್ಲ. ಮಾನ್ಯ ಸದಸ್ಯರುಗಳು ತೀಕ್ಷ್ಣವಾಗಿ ಮಾತನಾಡಿದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ನನಗೆ ನೀಡಿರುವ ಮಾಹಿತಿಯನ್ನು ಮೀರಿ ವಿಧಾನ ಮಂಡಲದ ಸದಸ್ಯನಾಗಿ ನಾನು ಈಗ ಮಾತನಾಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ 6.30 ಕೋಟಿ ಜನಸಂಖ್ಯೆ ಇದ್ದು, ನಮ್ಮ ಆಯವ್ಯಯದ ಗಾತ್ರ 2,18,000 ಕೋಟಿ ರೂಪಾಯಿಗಳು. ನಿಖರವಾದ ಮಾಹಿತಿ ನನ್ನ ಬಳಿ ಇಲ್ಲ. 6.30 ಕೋಟಿ ಜನಸಂಖ್ಯೆಗೆ ಅಷ್ಟು ಮೊತ್ತದ ಪೈಕಿ ಶೇಕಡಾ 60 ರಷ್ಟು ಹಣವನ್ನು ಹಾಗೂ ಶೇಕಡಾ 40 ರಷ್ಟು ಹಣವನ್ನು ಕೇವಲ 5.5 ಲಕ್ಷ ಸರ್ಕಾರಿ ನೌಕರರ ಮೇಲೆ ವ್ಯಯ ಮಾಡಲಾಗುತ್ತಿದೆ. ಆರನೇ ವೇತನ ಆಯೋಗವನ್ನು ರಚನೆ ಮಾಡಬೇಕೆಂದು ತಾವು ಎಲ್ಲಾ ಸದಸ್ಯರುಗಳು ಒತ್ತಾಯ ಮಾಡಿದ್ದೀರಿ. ಅದರಂತೆ ನಮ್ಮ ಸರ್ಕಾರವು ಆರನೇ ವೇತನ ಆಯೋಗವನ್ನು ರಚನೆ ಮಾಡಿತು. ಸರ್ಕಾರಿ ನೌಕರರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲೆ ಕಾಳಜಿ ಇದ್ದರೆ, ಅತ್ಯಂತ ಕಡಿಮೆ ಅವಧಿಯಲ್ಲಿ ವೇತನ ಆಯೋಗದ ವರದಿಯನ್ನು ತರಿಸಿಕೊಳ್ಳುತ್ತೀರಿ, ಆಗ ಸರ್ಕಾರಕ್ಕೆ ಬದ್ಧತೆ ಇದೆ ಎಂದು ಒಪ್ಪಿಕೊಳ್ಳುತ್ತೇವೆ ಎಂಬುದಾಗಿ ವಿರೋಧ ಪಕ್ಷದ ಸದಸ್ಯರು ಹೇಳಿದ್ದರು. ಅದೇ ರೀತಿಯಾಗಿ ಆರನೇ ವೇತನ ಆಯೋಗವು ಅತ್ಯಂತ ಕಡಿಮೆ ಅವಧಿಯಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಆರನೇ ವೇತನ ಆಯೋಗದ ಸಮಿತಿಯನ್ನು ರಚನೆ ಮಾಡಿ, ಅದರ ವರದಿಯ ಅನುಷ್ಠಾನವನ್ನು ಮುಂಬರುವ ಸರ್ಕಾರದ ಮೇಲೆ ಹೊರಿಸಲಾಗುವುದು ಎಂಬರ್ಥದಲ್ಲಿ ಮಾತನಾಡಿದ್ದರು. ಸರ್ಕಾರಕ್ಕೆ ಬದ್ಧತೆ ಇದ್ದರೆ ಚುನಾವಣೆಯ ಪೂರ್ವದಲ್ಲಿ ಸದರಿ ವರದಿಯನ್ನು ಜಾರಿಗೊಳಿಸಿ ಎಂಬುದಾಗಿ ಹೇಳಿದ್ದರು. ಅದರಂತೆಯೇ ಚುನಾವಣೆ ಮುನ್ನವೇ ವರದಿಯನ್ನು ತರಿಸಿಕೊಳ್ಳಲಾಯಿತು. ಸದರಿ ವರದಿಯನ್ನು ಈಗ ಅನುಷ್ಠಾನ ಮಾಡಲಾಗುತ್ತದೆಯೇ ಹಾಗೂ ಹಿಂದಿನ ದಿನಾಂಕದಿಂದ ಅನ್ವಯವಾಗುತ್ತದೆಯೇ ಎಂಬಿತ್ಯಾದಿ ಪ್ರಶ್ನೆಗಳನ್ನೂ ಸಹ ಮಾಡಲಾಯಿತು. ಸದರಿ ವರದಿಯನ್ನು ಬಹುಶಃ 2017 ನೇ ಸಾಲಿನ ಅಕ್ಟೋಬರ್ ಮಾಹೆಯಿಂದ ಪೂರ್ವಾನ್ವಯವಾಗುವಂತೆ ಅನುಷ್ಠಾನ ಮಾಡಲಾಗುತ್ತಿದೆ. ಇದನ್ನು ನಾನು ನನ್ನ ಮೌಖಿಕ ಮಾಹಿತಿಯ ಮೇರೆಗೆ ಹೇಳುತ್ತಿದ್ದೇನೆ ಹೊರತು ನನ್ನ ಬಳಿ ಯಾವುದೇ ಲಿಖಿತ ಮಾಹಿತಿ ಇಲ್ಲ. ಆರನೇ ವೇತನ ಆಯೋಗದ ವರದಿಯ ಅನುಷ್ಠಾನದಿಂದ ಪ್ರಸಕ್ತ ಹಣಕಾಸಿನ ಸಾಲಿನಲ್ಲಿ ಸರ್ಕಾರಕ್ಕೆ 11 ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಹೊರೆಯಾಗಿದೆ. ಇತ್ತೀಚೆಗೆ ನಾಲ್ಕು ನೂರು ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಹಣವನ್ನೂ ಸಹ ಬಿಡುಗಡೆ ಮಾಡಲಾಗಿದೆ. ಸದರಿ ಹೆಚ್ಚುವರಿ ಮೊತ್ತ ಎಲ್ಲಿಂದ ಬರುತ್ತದೆ? ವಿರೋಧ ಪಕ್ಷದವರು ಈ ಹಿಂದೆ ಆಡಳಿತದಲ್ಲಿದ್ದಾಗ, ಅವರ ಬಳಿ ಯಾವುದೇ ನೋಟು ಮುದ್ರಣ ಮಾಡುವ ಯಂತ್ರವಿಲ್ಲ ಎಂಬುದಾಗಿ ಹೇಳಿದ್ದರು. ಈ ವಿಚಾರದಲ್ಲಿ ನಾನು ರಾಜಕೀಯ ಬೆರೆಸುವುದಕ್ಕೆ ಹೋಗುವುದಿಲ್ಲ. ರಾಜ್ಯದ 6.30 ಕೋಟಿ ಜನರು ನೀಡುವ ತೆರಿಗೆ ಹಣದಿಂದ ಸರ್ಕಾರಿ ನೌಕರರಿಗಾಗಿ ಒಂದು ವರ್ಷಕ್ಕೆ ಸದರಿ 11 ಸಾವಿರ ಕೋಟಿ ರೂಪಾಯಿಗಳ ಹೆಚ್ಚುವರಿ ಹೊರೆಯನ್ನು ವಹಿಸಿಕೊಳ್ಳಲಾಗಿದೆ. ಒಟ್ಟಾರೆ ಆಯವ್ಯಯದಲ್ಲಿ ಕೇವಲ ಸರ್ಕಾರಿ ನೌಕರರಿಗಾಗಿ ಸರ್ಕಾರ ಮಾಡುವ ವೆಚ್ಚವು ಶೇಕಡಾ 40 ರಷ್ಟಕ್ಕೆ ಹೆಚ್ಚಿದೆ. ಆದರೆ ಈಗ ದಿನಾಂಕ 01/04/2006 ರ ನಂತರ ಸರ್ಕಾರಿ ಕೆಲಸಕ್ಕೆ ನೇಮಕಾತಿ ಹೊಂದಿರುವ ಸರ್ಕಾರಿ ನೌಕರರುಗಳಿಗೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿ ಹಾಗೂ ಇದರಿಂದ ಯಾವುದೇ ತೊಂದರೆಯಾಗುವುದಿಲ್ಲ ಎಂಬುದಾಗಿ ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ. ಈ ವಿಚಾರದ ಬಗ್ಗೆ ನಾನು ಬಹಳ ಆಳವಾಗಿ ವಿಷಯವನ್ನು ಅಧ್ಯಯನ ಮಾಡಿಲ್ಲ ಆದರೂ ಸಹ ಅಂದಾಜಿನ ಮೇಲೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿದರೆ, ಸರ್ಕಾರದ ಮೇಲೆ ಶೇಕಡಾ 7–8 ರಷ್ಟು ಹೆಚ್ಚುವರಿ ಹೊರೆಯಾಗುತ್ತದೆ ಎಂಬುದಾಗಿ ನಾನು ಹೇಳುತ್ತಿದ್ದೇನೆ. ರಾಜ್ಯದ 6.30 ಕೋಟಿ ಕನ್ನಡಿಗರಿಗೆ ಆಯವ್ಯಯದಲ್ಲಿ ಎಷ್ಟು ಖರ್ಚು ಮಾಡಲಾಗುತ್ತಿದೆಯೋ ಅದರ ಅರ್ಧದಷ್ಟು ಹಣವನ್ನು ಕೇವಲ 5.50 ಲಕ್ಷ ಸರ್ಕಾರಿ ನೌಕರರ ಮೇಲೆ ಖರ್ಚು ಮಾಡಿ ಎಂಬುದಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದು ನ್ಯಾಯವೇ? ಸರಿಯಾದ ನೀತಿಯೇ? ಈ ವಿಚಾರವನ್ನು ನಾನು ಜಾಸ್ತಿ ಬೆಳೆಸುವುದಕ್ಕೆ ಹೋಗುವುದಿಲ್ಲ. ಕೇವಲ ಈ ವಿಚಾರದಲ್ಲಿನ ಕೆಲವು ಅಂಶಗಳನ್ನು ಮಾನ್ಯ ಸದಸ್ಯರ ಮುಂದಿಟ್ಟಿದ್ದೇನೆ. ಮಾನ್ಯ ಐವನ್ ಡಿ'ಸೋಜಾ ರವರು ನನ್ನ ಸ್ನೇಹಿತರಾಗಿರುವುದರಿಂದ ಅವರ ಮೇಲೆ ನಾನು ಜೋರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿದ್ದೇನೆ. ಯಾವುದೇ ಯೋಜನೆಯನ್ನು ಜಾರಿಗೊಳಿಸಬಹುದು ಇಲ್ಲವೆಂದಲ್ಲ. ಆದರೆ, ತಕ್ಕಡಿ ಒಂದು ಭಾಗದಿಂದ ಮತ್ತೊಂದಕ್ಕೆ ಹಾಗೂ ಮತ್ತೊಂದು ಭಾಗದಿಂದ ಇನ್ನೊಂದಕ್ಕೆ ಹಾಕಬೇಕಷ್ಟೇ. ತಕ್ಕಡಿಯ ಮೇಲೆ ಬಾಹ್ಯವಾಗಿ ಯಾವುದೇ ಹೊರೆಯನ್ನು ಹಾಕುವುದಕ್ಕಾಗುವುದಿಲ್ಲ. ತಕ್ಕಡಿಯ ಒಂದು ಭಾಗವು ಹೆಚ್ಚಾಗಬೇಕಾದರೆ, ಮತ್ತೊಂದು ಭಾಗವನ್ನು ಇಲ್ಲಿಗೆ ವರ್ಗಾವಣೆ ಮಾಡಬೇಕಷ್ಟೇ. ಹೀಗೆ ಮಾಡುವುದಾದರೆ ಜನಪರ, ನೀರಾವರಿ, ಕುಡಿಯುವ ನೀರು, ರಸ್ತೆ ಇತ್ಯಾದಿ ಯೋಜನೆಗಳನ್ನು ಕಡಿತ ಮಾಡಬೇಕಾಗುತ್ತದೆ. ಹೀಗೆ ಯೋಜನೆಗಳನ್ನು ಕಡಿತಗೊಳಿಸದೇ ಸರ್ಕಾರವು ಇನ್ನಾವುದೋ ಮೂಲದಿಂದ ಹಣವನ್ನು ತೆಗೆದುಕೊಂಡು ಇಂತಹ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವುದು ಸಾಧ್ಯವಿಲ್ಲ ಎನ್ನುವ ವಿಚಾರವು ಪ್ರಾಯಶಃ ಎಲ್ಲರಿಗೂ ಸಹ ತಿಳಿದಿದೆ. ಹಳೆಯ ಪಿಂಚಣಿ ಯೋಜನೆಯನ್ನು ಪುನಃ ಜಾರಿಗೊಳಿಸುವ ಹಿನ್ನೆಲೆಯಲ್ಲಿ ನಾನು ಈ ವಿಚಾರವನ್ನು ಹೇಳಿದ್ದೇನೆ. ನಿನ್ನೆಯ ದಿವಸ ನಾವುಗಳೆಲ್ಲರೂ ದಿವಂಗತ ವಾಜಪೇಯಿರವರನ್ನು ಹೊಗಳಿದ್ದೇವೆ. ಅವರು ಯಾವುದೇ ಪೂರ್ವಾಪರ ಪರಾಮರ್ಶೆ, ವಿಚಾರ ಮಾಡದೇ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿಲ್ಲ. ಯಾವುದೋ ಬಲವಾದ ಕಾರಣದಿಂದ ಅಂತಹ ವ್ಯವಸ್ಥೆಯನ್ನು ಜಾರಿಗೊಳಿಸಿದರು. ಇದಕ್ಕೆ ಸಂಬಂಧಪಟ್ಟಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಗರ್ವನರ್‌ರವರ ನೇತೃತ್ವದಲ್ಲಿ ತಜ್ಞರ ಸಮಿತಿಯೊಂದನ್ನು ನೇಮಕ ಮಾಡಿದರು. ಸದರಿ ಸಮಿತಿಯು ನೀಡಿದ ವರದಿಯ ಆಧಾರದ ಮೇಲೆ ಯಾವುದೋ ಒಂದು ಕಾರಣದಿಂದ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿದರು. ಈ ಸಂಬಂಧವಾಗಿ ಮತ್ತೊಂದು ವಿಚಾರವನ್ನು ಹೇಳಬಯಸುತ್ತೇನೆ. ಅದೇನೆಂದರೆ, ಪ್ರಪಂಚದ ಕೆಲವು ದೇಶಗಳು ಅಂದರೆ ಗ್ರೀಸ್ ದೇಶವನ್ನೊಳಗೊಂಡಂತೆ ಇನ್ನಿತರೆ ಅನೇಕ ದೇಶಗಳ ಸರ್ಕಾರಗಳು ಇವತ್ತಿನ ದಿವಸ ದಿವಾಳಿತನವನ್ನು ಘೋಷಿಸಿವೆ. ಸರ್ಕಾರಿ ನೌಕರರು ಹಾಗೂ ಸರ್ಕಾರಿ ಎಸ್ಟಾಬ್ಲಿಷ್‌ಮೆಂಟ್ ಮೇಲೆ ಅಲ್ಲಿನ ಸರ್ಕಾರಗಳು ಶೇಕಡಾ 50 ಕ್ಕಿಂತ ಹೆಚ್ಚು ಖರ್ಚು ಮಾಡಿರುವುದೇ ದಿವಾಳಿತನಕ್ಕೆ ಒಂದು ಪ್ರಮುಖ ಕಾರಣವಾಗಿದೆ. ಈ ಸಂಗತಿಯನ್ನು ನಾನು ಪೂರಕವಾಗಿ ಹೇಳಿದ್ದೇನೆ. Every action has a reaction. ಯಾವುದೇ ಯೋಜನೆಯ ತತ್ಪರಿಣಾಮಗಳನ್ನು ಎದುರಿಸಲಿಕ್ಕೆ ಸರ್ಕಾರವು ಸಿದ್ಧವಾಗಿರಬೇಕು. ಇದು ಇವತ್ತಿನ ಆಲೋಚನೆ ಅಲ್ಲ. ಕರ್ನಾಟಕ ರಾಜ್ಯದ ಭವಿಷ್ಯದ ಬಗ್ಗೆಯೂ ಸಹ ಸರ್ಕಾರವು ಆಲೋಚನೆ ಮಾಡಬೇಕಾಗುತ್ತದೆ. ನಮಗೆ ಅನಿಯಮಿತ ಸಂಪನ್ಮೂಲಗಳಿಲ್ಲ. ಇರುವ ನಿಯಮಿತ ಸಂಪನ್ಮೂಲಗಳಲ್ಲಿ ಎಷ್ಟು ಜವಾಬ್ದಾರಿಯುತವಾಗಿ ನಾವು ನಿರ್ವಹಣೆಯನ್ನು ಮಾಡುತ್ತೇವೆ ಅದರ ಆಧಾರದ ಮೇಲೆ ನಮ್ಮ ರಾಜ್ಯದ ಭವಿಷ್ಯವು ಅವಲಂಬಿಸಿದೆ. ತೀಕ್ಷ್ಣವಾಗಿ ಮಾತನಾಡಿ ಯಾರಿಗೂ ಸಹ ನೋವುಂಟು ಮಾಡುವ ಉದ್ದೇಶ ನನಗೆ ಇಲ್ಲ. ನಾನು ಇಲ್ಲಿ productive expenditure and unproductive expenditure ಎಂದು ಹೇಳಿ ಬೇರೆ ಅರ್ಥವನ್ನು ಹೇಳುವುದು ನನಗೆ ಇಷ್ಟವಿಲ್ಲ. ರಾಜ್ಯದ ಇವತ್ತಿನ ಹಾಗೂ ಮುಂದಿನ ಪರಿಸ್ಥಿತಿಗಳನ್ನು ನಿಭಾಯಿಸುವ ಹಾಗೂ ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸುವ ಜವಾಬ್ದಾರಿ ನಮ್ಮ ಮೇಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತವಾಗಿ ಆಗಬೇಕಾದ ಸಾಕಷ್ಟು ಕೆಲಸಗಳು ಇನ್ನೂ ಸಹ ಆಗಿಲ್ಲ. ಅದೇ ರೀತಿಯಲ್ಲಿ ನಗರ ಪ್ರದೇಶಗಳ ಅಭಿವೃದ್ಧಿಗೆ ನ್ಯೂನತೆಗಳಿವೆ. ಇಷ್ಟೆಲ್ಲಾ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸಗಳಿಗೆ ಸರ್ಕಾರವು ಬಂಡವಾಳ ಹೂಡಬೇಕು. ಹೀಗಾಗಿ ಹಾಲಿ ಇರುವ ಹಣಕಾಸಿನ ವ್ಯವಸ್ಥೆಯಲ್ಲಿಯೇ ನಾವು ನಿಭಾಯಿಸಬೇಕು. ನಾನು ಆಗಲೇ ತಿಳಿಸಿದ ಹಾಗೆ, ಯಾವುದೇ ಹೊಸ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರಕ್ಕೆ ಬಹಳಷ್ಟು ಆಂತಕಗಳಿವೆ. ಯಾವುದೇ ಸಮಸ್ಯೆಗಳು ಎದುರಾದರೆ, ಅವುಗಳನ್ನು ನಿಭಾಯಿಸುವುದಕ್ಕೆ ಅಧಿಕಾರದಲ್ಲಿರುವ ಯಾವುದೇ ಸರ್ಕಾರವು ಬದ್ಧವಾಗಿದೆ. ನಿಜವಾಗಿಯೂ ಸಹ ಸರ್ಕಾರಿ ನೌಕರರ ಸಮಸ್ಯೆಗಳಿಗೆ ಸ್ಪಂದಿಸಿಲ್ಲ ಎಂದರೆ ಸರ್ಕಾರ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ಮತ್ತೊಂದು ಅಭಿಪ್ರಾಯವಿಲ್ಲ. ಸರ್ಕಾರಿ ನೌಕರರಿಗೆ ಎದುರಾಗುವ ಸಮಸ್ಯೆಗಳನ್ನು ನಿವಾರಣೆ ಮಾಡುವಲ್ಲಿ ಸರ್ಕಾರವು ಬದ್ಧವಾಗಿದೆ. When a problem arises, we are ready to solve it. ಸರ್ಕಾರಿ ನೌಕರರು ಕೆಲಸ ನಿರ್ವಹಿಸುತ್ತಿರುವಾಗಲೇ ಆಗಲಿ ಅಥವಾ ನಿವೃತ್ತಿಯ ನಂತರವಾಗಲೇ ಆಗಲಿ ಅವರ ಜೀವನಕ್ಕೆ ಭದ್ರತೆ ಇಲ್ಲ ಎನ್ನುವುದಕ್ಕೆ ಸರ್ಕಾರ ಯಾವುದೇ ರೀತಿಯಾದ ಅವಕಾಶವನ್ನು ನೀಡುವುದಿಲ್ಲ. ಜೀವನ ಭದ್ರತೆಯ ಸಮಸ್ಯೆಗಳು ಎದುರಾದಾಗ ನೌಕರರ ನೆರವಿಗೆ ಸರ್ಕಾರ ನಿಲ್ಲುತ್ತದೆ. ಅಂತಹ ಪರಿಸ್ಥಿತಿ ಎದುರಾದಾಗ ಅವಶ್ಯವಿದ್ದಲ್ಲಿ ಸರ್ಕಾರವು ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಪುನರ್ ಪರಾಮರ್ಶೆ ಮಾಡಬಹುದು ಅಥವಾ ಅದಕ್ಕೆ ಬದಲೀ ವ್ಯವಸ್ಥೆಯನ್ನು ಮಾಡಬಹುದು ಅಥವಾ ಇದರಿಂದಾಗಿ ಯಾವುದೇ ರೀತಿಯಾದ ತೊಂದರೆಯಾದರೆ, ಎಲ್ಲ ವ್ಯವಸ್ಥೆಯನ್ನು ಬದಿಗಿಟ್ಟು, ಸರ್ಕಾರಿ ನೌಕರರ ನೆರವಿಗೆ ನಿಲ್ಲುವುದಕ್ಕೆ ಸರ್ಕಾರ ಹಿಂದೆ ಸರಿಯುವುದಿಲ್ಲ.

(354) 11-12-2018 4-30 ಎಲ್ಎಂ/ಎಂಡಿ

**ಶ್ರೀ ಕೃಷ್ಣಭೈರೇಗೌಡ(ಮುಂದು):-** ನಾನು ಮತ್ತೆ ಹೇಳುತ್ತೇನೆ, ನಿಜವಾಗಿಯು ಇದರಿಂದ ಸಮಸ್ಯೆ ಬಂದಂತಹ ಸಂದರ್ಭದಲ್ಲಿ ಎನ್‌ಪಿಎಸ್ ಮುಖಾಂತರವಾದರೂ ಸರಿ ಮಾಡೋಣ, ಎನ್‌ಪಿಎಸ್ ಮುಖಾಂತರ ಸರಿ ಹೋಗದಿದ್ದರೆ ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಸಹ ತರಬಹುದು. ಪರ್ಯಾಯ ವ್ಯವಸ್ಥೆಯಿಂದಲೂ ಸರಿ ಹೋಗುವುದಿಲ್ಲ ಎಂದರೆ, ಇವೆರಡನ್ನು ಹೊರತುಪಡಿಸಿ ಅವರ ಸಹಾಯಕ್ಕೆ ನಿಲ್ಲವುದರಿಂದ ಸರ್ಕಾರ ಹಿಂದಕ್ಕೆ ಸರಿಯುವುದಿಲ್ಲ. ಏನು ಆಗುತ್ತದೆಯೋ, ಹೇಗೆ ಆಗುತ್ತದೆಯೋ ಎನ್ನುವ ಆತಂಕ ನೌಕರರ ಮನಸ್ಸಿನಲ್ಲಿಯು ಇದೆ. ಇವತ್ತು Stock Market ಬಗ್ಗೆ ಏನೇನು ಮಾತನಾಡಿದ್ದಾರೆ ಅದರ ಬಗ್ಗೆ ನಾನು ವಿಶ್ಲೇಷಣೆ ಮಾಡಲು ಹೋಗುವುದಿಲ್ಲ. ಅದು ಪ್ರಪಂಚದಲ್ಲಿಯೇ ಒಂದು well-established institution. ಮಾನ್ಯ ಸದಸ್ಯರು ಅದರ ಬಗ್ಗೆ ಏನೇನೋ ವ್ಯಾಖ್ಯಾನ ಮಾಡಿದ್ದಾರೆ ಅದು ಇರಲಿ. ಅದರಿಂದ ಏನಾದರೂ ನಷ್ಟವಾಗಿ ನೌಕರರಿಗೆ ಪಿಂಚಣಿ ಸಿಗುತ್ತಿಲ್ಲ ಎನ್ನುವುದಾದರೆ ಅವತ್ತಿನ ದಿನ ಯಾವುದೆ ಸರ್ಕಾರವಾಗಲಿ ಕಣ್ಣು ಮುಚ್ಚಿಕೊಂಡು ಕೂಡಲು ಆಗುವುದಿಲ್ಲ. ಎಲ್ಲ ನಿಯಮಗಳನ್ನು ಬದಿಗಿಟ್ಟು ನಾವು ಮಧ್ಯಪ್ರವೇಶ ಮಾಡಬೇಕಾಗುತ್ತದೆ. ಯಾರೇ ಇದ್ದರೂ ಆ ಕೆಲಸವನ್ನು ಮಾಡೇ ಮಾಡುತ್ತಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನುದಾನಿತ ಶಿಕ್ಷಣ ಸಂಸ್ಥೆಗಳ ಸಮಸ್ಯೆ ಇದೆ ನಿಜ. ಸರ್ಕಾರದಿಂದ ಸರ್ಕಾರದ ಶೇಕಡಾ 10 ರಷ್ಟು ಪಾಲನ್ನು ಕೊಡಲು ಸರ್ಕಾರ ತಯಾರಿದೆ. ತಮಗೆ ನನಗಿಂತ ಬಹಳ ಚೆನ್ನಾಗಿ ಈ ವಿಚಾರದ ಬಗ್ಗೆ ಗೊತ್ತಿದೆ. ಆದರೆ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯವರು ತಮ್ಮ ಪಾಲಿನ ಶೇಕಡಾ 10 ರಷ್ಟನ್ನು ಕೊಡಲು ತಯಾರಿರುವುದಿಲ್ಲ. ಇದು ಈಗ ಬಂದಿರುವ ಸಮಸ್ಯೆ. ನಮ್ಮ ಷೇರ್ ಕೊಡಿಸೋಣ ಅದರ ಬಗ್ಗೆ ಏನಾದರೂ ಹೇಳುವುದು ಇದ್ದರೆ ಹೇಳಿ.

**ಶ್ರೀ ಅರುಣ ಶಹಾಪೂರ:-** ಮಾನ್ಯ ಸಭಾಪತಿಗಳೆ, ಶೇಕಡಾ 10 ರಷ್ಟನ್ನು ಅಲ್ಲಿ ಕೆಲಸ ಮಾಡುವ ನೌಕರರು ಕೊಡುತ್ತಾರೆ. ಇನ್ನು ಶೇಕಡಾ 10 ರಷ್ಟನ್ನು ಆಡಳಿತ ಮಂಡಳಿಯವರು ಕೊಡಲಿ ಎಂದು ಸರ್ಕಾರ ಹೇಳುತ್ತದೆ. ಹಳೆಯ ಪಿಂಚಣಿ ಪದ್ದತಿಯಲ್ಲಿ ನೌಕರರ ಸಂಪೂರ್ಣ ಭಾರವನ್ನು ಸರ್ಕಾರವೇ ತೆಗೆದುಕೊಂಡಿದೆ. ಹೊಸ ಪಿಂಚಣಿಯಲ್ಲಿ ಆ ಶೇಕಡಾ 10 ರಷ್ಟನ್ನು ನಾವು ಕೊಡುವುದಿಲ್ಲ ನೀವೆ resources mobilize ಮಾಡಿಕೊಂಡು ಮಾಡಿ ಎಂದು ಹೇಳಲಾಗುತ್ತಿದೆ. ಇದು ಸರಿಯಲ್ಲ.

ಶ್ರೀ **ಕೃಷ್ಣಭೈರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಈ ವಿಚಾರವು ಕಳೆದ ವಾರ ಕ್ಯಾಬಿನೆಟ್‌ನಲ್ಲಿ ಚರ್ಚೆಗೆ ಬಂದಿತ್ತು. ಏಕೆಂದರೆ 6ನೇ ಹಣಕಾಸು ಆಯೋಗದವರು ಇದರ ಬಗ್ಗೆ ಒಂದು ಶಿಫಾರಸ್ ಮಾಡಿದ್ದಾರೆ. ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿದೆ. ಇದೊಂದು ಸಮಸ್ಯೆ ಇದೆ. ಇದು ಸರ್ಕಾರದ ಗಮನದಲ್ಲಿದೆ. ಈ ಸಮಸ್ಯೆಯನ್ನು ಯಾವ ರೀತಿ ಪರಿಹರಿಸಬಹುದು ಎನ್ನುವ ಬಗ್ಗೆ ಸರ್ಕಾರ ಗಮನ ಕೊಡುತ್ತದೆ. ಸಮಸ್ಯೆ ಪರಿಹಾರವಾಗಬೇಕು. ಆದರೆ ಅದಕ್ಕೆ ನಿರ್ಧಿಷ್ಟವಾಗಿ ಉತ್ತರ ಹೇಳುವ ಪರಿಸ್ಥಿತಿಯಲ್ಲಿ ನಾನು ಇಲ್ಲ. ಮಾನ್ಯ ಪುಟ್ಟಣನವರು ಅದರ ಬಗ್ಗೆ ಬಹಳ ಒತ್ತು ಕೊಟ್ಟು ಹೇಳಿದ್ದಾರೆ. ಅದರ ಬಗ್ಗೆ ನಾವು ಚರ್ಚೆ ಮಾಡುತ್ತೇವೆ. ನಿನ್ನೆ ಒಂದು ಮಾಹಿತಿ ಬಂದಿದೆ. ಆದರೆ ಅದರ ಬಗ್ಗೆ ನನಗೆ ಲಿಖಿತವಾಗಿ ಯಾವುದೇ ಮಾಹಿತಿ ಇಲ್ಲ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೆ, ಹಿಂದೆ ಕೆಲವು ಶಿಕ್ಷಣ ಸಂಸ್ಥೆಗಳು ಆರ್ಥಿಕವಾಗಿ ಬಲವಾಗಿದ್ದವು ಅಂತಹ ಶಿಕ್ಷಣ ಸಂಸ್ಥೆಯವರು ಆರ್ಥಿಕ ಭಾರವನ್ನು ಹೊರಲು ಶಕ್ತವಾಗಿದ್ದವು. ಆದರೆ ಇವತ್ತು ಆರ್ಥಿಕ ಭಾರವನ್ನು ಹೊರುವಷ್ಟು ಬಲಾಡ್ಯವಾಗಿ ಇಂದಿನ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಇಲ್ಲ. ಆದ್ದರಿಂದ ಅವರು ಶೇಕಡಾ 10 ರಷ್ಟು ಕೊಡಲು ಸಾಧ್ಯವೆ ಇಲ್ಲ.

**ಸಭಾಪತಿಯವರು:-** ಆ ಶಿಕ್ಷಣ ಸಂಸ್ಥೆಗಳು ಮಾತೃಭಾಷೆ ಕನ್ನಡ ಮಾಧ್ಯಮ ಶಾಲೆಗಳಾಗಿರುವುದರಿಂದ ಆರ್ಥಿಕ ಭಾರವನ್ನು ಅವು ಹೊರಲು ಸಾಧ್ಯವಿಲ್ಲ.

**ಶ್ರೀ ಪುಟ್ಟಣ್ಣ:-** ಕನ್ನಡ ಮಾಧ್ಯಮದ ಶಾಲೆಗಳಾಗಿರುವುದರಿಂದ ಅವರು ಆರ್ಥಿಕ ಭಾರವನ್ನು ಹೊರಸಲು ಸಾಧ್ಯವಿಲ್ಲ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಗಳೆ, ಇದು ನಿರ್ಧಿಷ್ಟವಾದ ಸಮಸ್ಯೆಯಾಗಿದೆ. ಅದನ್ನು ಸರ್ಕಾರದ ಹಂತದಲ್ಲಿ ಚರ್ಚೆ ಮಾಡುತ್ತೇವೆ. ಹೋದವಾರ ಕ್ಯಾಬಿನೆಟ್‌ನಲ್ಲಿ ಚರ್ಚೆಗೆ ಬಂದಿತು.ಇದರ ಬಗ್ಗೆ ಪರಿಹಾರವನ್ನು ಹುಡುಕಬೇಕಾಗಿದೆ. ಇದರ ಬಗ್ಗೆ ಶಿಕ್ಷಣ ಇಲಾಖೆ ಮತ್ತು ಆರ್ಥಿಕ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ನಾನು ಮಾತನಾಡುತ್ತೇನೆ. ಈ ಯೋಜನೆಯನ್ನು ರೂಪಿಸಿರುವುದು ಕೇಂದ್ರ ಸರ್ಕಾರ. ಅವರು ಹೇಳಿದ ಹಾಗೆ ಎರಡು-ಮೂರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯಗಳವರು ತಮ್ಮದೆ ಆದ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆದರೆ ಉಳಿದ 26/27 ರಾಜ್ಯಗಳು ಇವತ್ತಿಗೂ NPS (New Pension Scheme) ನಲ್ಲಿಯೇ ಇವೆ. ಸರ್ಕಾರಕ್ಕೆ ಅವಕಾಶ ಸಿಕ್ಕಾಗ ತಮ್ಮ ಆತಂಕವನ್ನು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುತ್ತೇವೆ. ನಮ್ಮ ಮುಖ್ಯ ಕಾರ್ಯದರ್ಶಿಯವರು ಇಲ್ಲೇ ಇದ್ದಾರೆ, ಮಾನ್ಯ ಸದಸ್ಯರು ಹೇಳಿರುವುದೆಲ್ಲವನ್ನು ಡಿಓಪಿಟಿ ಯವರ ಗಮನಕ್ಕೆ ತರುತ್ತೇವೆ. ಆ ರೀತಿ ಏನಾದರೂ ನ್ಯೂನತೆಗಳು ಇದ್ದರೆ ಯೋಜನೆಗಳಲ್ಲಿಯೇ ಸರಿಪಡಿಸಬೇಕು ಎನ್ನುವ ನಿಯಮವನ್ನು ತರುತ್ತೇವೆ. ಯೋಜನೆ ಮಾಡಿರುವುದು ಕೇಂದ್ರ ಸರ್ಕಾರ. ಬದಲಾವಣೆ ಆಗಬೇಕು. ಆದರೆ ಕಡ್ಡಾಯವಿಲ್ಲ, 27 ರಾಜ್ಯಗಳಲ್ಲಿ ಇಲ್ಲ. 3 ರಾಜ್ಯಗಳು ಹೊರಗಡೆ ಹೋಗಿವೆ ಎನ್ನುವ ಅರ್ಥವೇನು? ನಾವೇ ಪರಿಶೀಲನೆ ಮಾಡುತ್ತೇವೆ ಎನ್ನುವುದರ ಬದಲಾಗಿ ಈ ರೀತಿಯ ಆತಂಕಗಳು ಇವೆ ಎನ್ನುವುದನ್ನು ಕೇಂದ್ರ ಸರ್ಕಾರದ ಗಮನಕ್ಕೂ ತರುತ್ತೇವೆ. ಅವರು ಸಹ ಪರಿಶೀಲನೆ ಮಾಡಲಿ. ಆ ಪಕ್ಷ ಈ ಪಕ್ಷ ಎಂದು ಏನೂ ಇಲ್ಲ. ಮಾನ್ಯ ಮಂಜುನಾಥ್‌ರವರು ಹೇಳಿದ ಹಾಗೆ Scheme guidelines ನ್ನು ಎಲ್ಲಾ ಪಕ್ಷದವರು ಸೇರಿಯೇ ಮಾಡಿದ್ದಾರೆ. ಹೀಗಾಗಿ ಇದರಲ್ಲಿ ಅದು-ಇದು ಎನ್ನುವ ವಿಚಾರವಿಲ್ಲ. ನಮ್ಮ ಹಂತದಲ್ಲಿ ನಾವು ಪರಿಶೀಲನೆ ಮಾಡುತ್ತೇವೆ. ಕೇಂದ್ರ ಸರ್ಕಾರದವರು ಪರಿಶೀಲನೆ ಮಾಡುವುದರಲ್ಲಿ ತಪ್ಪೇನಿದೆ? ಕೇಂದ್ರದ ಮೇಲೆ ಒತ್ತಾಯವನ್ನು ನಾವು ಹಾಕುತ್ತಿಲ್ಲ. ಅಧಿಕಾರಿಗಳು ನನಗೆ ಮೌಖಿಕವಾಗಿ ಹೇಳಿದ್ದಾರೆ, ಮಾನ್ಯ ಸದಸ್ಯರು ಪೇಪರ್‌ನಲ್ಲಿ ನೋಡಿರಬಹುದು, ಸರ್ಕಾರದ ಪಾಲನ್ನು ಹೆಚ್ಚಿಗೆ ಮಾಡಲು ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತಿದೆ ಅಥವಾ ತೆಗೆದುಕೊಂಡಿದೆ ಎನ್ನುವ ಸುದ್ದಿ ಇದೆ. ನೌಕರರ ಪಾಲು ಶೇಕಡಾ 10 ರಷ್ಟು ಇರುತ್ತದೆ. ಬಹುಶ: ಇದು ನಮಗೂ binding ಆಗಬಹುದು ಇದರ ಬಗ್ಗೆ ನನಗೆ ಗೊತ್ತಿಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಪರಿಹಾರದ ಕ್ರಮಗಳು ನಮ್ಮ ಮುಂದೆ ಇವೆ. ಅಂತಹ ಸಂದರ್ಭದಲ್ಲಿ ಬೇಕಾದ ಪರಿಹಾರ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಇದರಲ್ಲಿ ಆತಂಕಪಡುವುದು ಬೇಡ. ಇಷ್ಟು ಸ್ಪಷ್ಟ ಸಂದೇಶವನ್ನು ನಾನು ಕರ್ನಾಟಕ ನೌಕರರಿಗೆ ಕಳುಹಿಸಲು ಬಯಸುತ್ತೇನೆ. ಏನೇ ತೊಂದರೆಯಾದರು ನೌಕರರ ಪರವಾಗಿ ಸರ್ಕಾರ ನಿಲ್ಲುತ್ತದೆ. ಆ ತೊಂದರೆಯನ್ನು ಪರಿಹಾರ ಮಾಡುತ್ತೇವೆ. ಒಂದೇ ವರ್ಷದಲ್ಲಿ ನಮ್ಮ ಸರ್ಕಾರ ಸುಮಾರು 11ಕೋಟಿ ರೂ.ಗಳ ಹೆಚ್ಚಿಗೆ ಸಂಬಳ ಮತ್ತು ಭತ್ಯೆಗಳನ್ನು ಕೊಡಲು ಒಪ್ಪಿಕೊಂಡಿದೆ ಎನ್ನುವುದನ್ನು ಗಮನಿಸಿದರೆ ಸರ್ಕಾರ ಈ ರಾಜ್ಯದ ನೌಕರರ ಪರವಾಗಿದೆ ಎಂದು ಅರ್ಥ. ನಮ್ಮ ಸರ್ಕಾರ ಬರಿ ಬಾಯಿ ಮಾತಿನಿಂದ ಹೇಳುವುದಿಲ್ಲ. ಕ್ರಿಯೆ ಮುಖಾಂತರ ಮಾಡಿ ತೋರಿಸಿದ್ದೇವೆ. ಇದರ ಯಾರು ಅನುಮಾನ-ಆತಂಕ ಇಟ್ಟುಕ್ಕೊಳ್ಳುವುದು ಬೇಡ, ನಿರ್ಭಯರಾಗಿ ನೌಕರರು ಅವರ ಜವಾಬ್ದಾರಿಯನ್ನು ನಿಭಾಯಿಸಲಿ. ಜನರಿಗೆ ಅವರ ಸೇವೆಯನ್ನು ಸಲ್ಲಿಸಲಿ. ಅವರ ಹಿತವನ್ನು ಕಾಪಾಡುವುದು ಸರ್ಕಾರದ ಜವಾಬ್ದಾರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

**ಶ್ರೀ ಅರುಣ ಶಹಾಪೂರ:-** ಮಾನ್ಯ ಸಭಾಪತಿಗಳೆ, ಮಂತ್ರಿಗಳ ಉತ್ತರದಿಂದ ತಪ್ಪು ಸಂದೇಶ ಹೋಗುವುದು ಬೇಡ.

**ಸಭಾಪತಿಯವರು:-** ಚರ್ಚೆ ಪ್ರಾರಂಭ ಮಾಡಿ ಒಂದುವರೆ ಗಂಟೆಯಾಗಿದೆ ಸಾಕು, ಇಲ್ಲಿಗೆ ಮುಕ್ತಾಯ ಮಾಡಿ.

**ಶ್ರೀ ಅರುಣ ಶಹಾಪೂರ:-** ಮಾನ್ಯ ಸಭಾಪತಿಗಳೆ, ಇದು ನೌಕರರ ಜ್ವಲಂತ ಸಮಸ್ಯೆಯಾಗಿದೆ. ಇದು ಇಡೀ ರಾಜ್ಯದ ಸರ್ಕಾರಿ ಯಂತ್ರದ ಪ್ರಶ್ನೆಯಾಗಿದೆ. ಮಾನ್ಯ ಮಂತ್ರಿಗಳು ತುಂಬಾ ಚೆನ್ನಾಗಿ ಮಾತಿನ ಧಾಟಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಅವರ ಉತ್ತರವನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ಆದರೆ ನಮಗೆ ಫಲಿತಾಂಶ ಬೇಕು.

**ಶ್ರೀ ನಿರಾಣಿ ಹನಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೆ, ಸಚಿವರು ಒಳ್ಳೆಯ ಮಾತುಗಾರರಾಗಿ ಎಲ್ಲವನ್ನು ಹೇಳಿದ್ದಾರೆ.

**ಶ್ರೀ ಕೃಷ್ಣಭೈರೇಗೌಡ:-** ನಿರಾಣಿಯವರು ಅವರು ಏನೋ ಹೇಳಿದರೆ, ತಾವು ಈ ರೀತಿ ಹೇಳುವುದು ಸರಿಯಲ್ಲ. ಅರ್ಥ ಏನು ಅದರ ಪ್ರಭಾವ ಏನು ಎನ್ನುವುದನ್ನು ಅರ್ಥ ಮಾಡಿಕೊಂಡು ಮಾತನಾಡಿದರೆ ನಾನು ಒಪ್ಪುತ್ತೇನೆ. ಆದರೆ ಗೊತ್ತಿದ್ದೋ, ಗೋತ್ತಿಲ್ಲದೆಯೋ ಮಾತನಾಡಿದರೆ ಅದನ್ನು ನಾನೇನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಅಷ್ಟೊಂದು ಮಾತನಾಡಿದ್ದೇನೆ. ಮಾತುಗಳನ್ನು ಬಳಸುವುದಾದರೆ ನಾನು ಇನ್ನೂ ಬಳಸಬಹುದಾಗಿತ್ತು. ಎಷ್ಟು ಹೇಳಬೇಕು ಅಷ್ಟು ಸೂಕ್ಷ್ಮವಾಗಿ ಹೇಳಿದ್ದೇನೆ.

ಶ್ರೀ ಅರುಣ ಶಹಾಪೂರ:- ಮಾನ್ಯ ಸಭಾಪತಿಗಳೆ, ಮಾನ್ಯ ಮಂತ್ರಿಗಳು ಆ ರೀತಿ ಎಲ್ಲಾ ಮಾತನಾಡುವವರಲ್ಲ. ಮಾನ್ಯ ಮಂತ್ರಿಗಳು ಎರಡು-ಮೂರು ಸಂಗತಿಗಳನ್ನು ಹೇಳಿದ್ದಾರೆ. ಆದರೆ ಇನ್ನೊಂದು ವಿಚಾರವನ್ನು ಸರ್ಕಾರ ಯೋಚನೆ ಮಾಡಬೇಕು ಎನ್ನುವುದಕ್ಕಾಗಿ ಹೇಳುತ್ತಿದ್ದೇನೆ. ಶೇ. 40 ಸಂಪನ್ಮೂಲವನ್ನು ಐದುವರೆ ಲಕ್ಷ ಜನರಿಗೆ ಕೊಡುತ್ತಿದ್ದೇವೆ ಎನ್ನುವ ರೀತಿಯಲ್ಲಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಶಿಕ್ಷಣ ಇಲಾಖೆಯಲ್ಲಿರುವ ಶಿಕ್ಷಕರಿಗೆ ಸಂಬಳ ಕೊಡುತ್ತಿರುವುದು ಶಿಕ್ಷಕರಿಗೆ ಅಲ್ಲ, ಅಲ್ಲಿ ಓದುತ್ತಿರುವ ಒಂದು ಕೋಟಿಯಷ್ಟು ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ. ಪೊಲೀಸ್ ಇಲಾಖೆಯಲ್ಲಿ ಪೊಲೀಸ್‌ರಿಗೆ ಕೊಡುವ ಸಂಬಳ ಪೊಲೀಸ್‌ರಿಗಾಗಿ ಅಲ್ಲ, ಈ ರಾಜ್ಯದ 6 ಕೋಟಿ ಜನರಿಗೆ ಕೊಡಬೇಕಾಗಿರುವ ರಕ್ಷಣೆಗಾಗಿ,

**ಶ್ರೀ ಎಚ್.ಎಂ.ರೇವಣ್ಣ:-** ಸರ್ಕಾರಿ ನೌಕರರು ಇರುವುದೇ ಜನರ ಕೆಲಸ ಮಾಡುವುದಕ್ಕೆ, ಒಟ್ಟು ಸರ್ಕಾರಿ ನೌಕರರಿಗೆ ಆಯವ್ಯಯದ ಶೇ.40 ರಷ್ಟು ಹಣ ಖರ್ಚಾಗುತ್ತದೆ ಎಂದು ಮಂತ್ರಿಗಳು ಹೇಳಿದ್ದಾರೆ.

**ಶ್ರೀ ಅರುಣ ಶಹಾಪೂರ:-** ಮಾನ್ಯ ಸಭಾಪತಿಯವರೆ, ಮಾನ್ಯ ರೇವಣ್ಣನವರು ಈಗ interpretation ಮಾಡುವುದು ಬೇಡ. ನಾನು ಮಾನ್ಯ ರೇವಣ್ಣನವರಿಗೆ yield ಆಗಿಲ್ಲ. ನಾನು ಹೇಗೆ ಶಾಂತವಾಗಿ ಕೇಳಿದ್ದೇನೆಯೋ ಅದೇ ರೀತಿ ಅವರು ಸಹ ಶಾಂತವಾಗಿ ಕೇಳಲಿ. ಮಂತ್ರಿಗಳ interpretation ಗೆ ನಾವು ಅರ್ಥೈಸಿಕೊಂಡಿರುವುದನ್ನು ಹೇಳುತ್ತಿದ್ದೇವೆ. ಅರ್ಥೈಸಿಕೊಳ್ಳುವಲ್ಲಿ ವ್ಯತ್ಯಾಸವಿದೆ. ಸರ್ಕಾರದಿಂದ ಹೇಗೆ ಅರ್ಥೈಸಲಾಗಿದೆ, ಜನ ಪ್ರತಿನಿಧಿಯಾಗಿ ನಾನು ಏನು ಅರ್ಥೈಸಿಕೊಳ್ಳಬೇಕು ಅದನ್ನು ಅರ್ಥ ಮಾಡಿಕೊಂಡಿದ್ದೇನೆ. ಆದರೆ ಜನ ಸಾಮಾನ್ಯರಿಗೆ ತಪ್ಪು ಸಂದೇಶ ಹೋಗಬಾರದು. ಅವರು ನಮಗೆ ಸಿಗುವುದಕ್ಕಿಂತ ಹೆಚ್ಚಾಗಿ ಸರ್ಕಾರಿ ನೌಕರರಿಗೆ ಸಿಗುತ್ತಿದೆ ಎಂದು ತಪ್ಪು ಭಾವಿಸಿಕೊಳ್ಳುವಂತೆ ಆಗಬಾರದು ಎನ್ನುವುದಕ್ಕೆ ಇದನ್ನು ಹೇಳುತ್ತಿದ್ದೇನೆ. ಅನ್ಯಥಾ ಬೇರೆ ಏನು ಇಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(355)11-12-2018(04-40)ಬಿಎಸ್‌ಡಿ-ಎಂಡಿ
ಶ್ರೀ ಅರುಣ ಶಹಾಪುರ (ಮುಂದು)

ಎರಡನೆಯದಾಗಿ ಈ ವರ್ಷ ರೂ.11,000 ಕೋಟಿಗಳನ್ನು ಕೊಟ್ಟಿರುವ ಬಗ್ಗೆ ತಿಳಿಸಿದ್ದು, ಈ ಯೋಜನೆ 2006ರಲ್ಲಿ ಜಾರಿಗೆ ಬಂದಿದ್ದು, ಪರಿಣಾಮಗಳು ಈಗ ಗೋಚರಿಸುತ್ತಿವೆ. ಅವರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶ ಯಾವ ಸರ್ಕಾರಿ ನೌಕರರಿಗೂ ಇಲ್ಲ ಮತ್ತು ಪ್ರತಿನಿಧಿಗಳಿಗೂ ಇಲ್ಲ. ಅವರಿಗೆ exchequer ಬಗ್ಗೆ ಇರುವ ಕಳಕಳಿಗಿಂತ ಹೆಚ್ಚು ಕಳಕಳಿ ನಮಗೂ ಇದೆ. ಆದರೆ ಎಲ್ಲೋ ಒಂದು ಕಡೆ ಕೆಲಸ ಆರಂಭವಾಗಬೇಕಲ್ಲವೇ? ನನಗೆ ಒಂದು ಸಂಶಯ ಬರುತ್ತಿದೆ. ಅವರು ತಪ್ಪು ತಿಳಿಯುವುದಿಲ್ಲ ಮತ್ತು ರಾಜಕಾರಣ ಎಂದು ಭಾವಿಸುವುದಿಲ್ಲವಾದರೆ ಹೇಳುತ್ತೇನೆ. ಎಲ್ಲೋ ಒಂದು ಕಡೆ ಈ ಸರ್ಕಾರದಲ್ಲಿ Common Minimum Programme ಎಂದು ಆಗದೇ ಇರುವುದು ತೊಂದರೆ ಎಂದು ನನಗನಿಸುತ್ತಿದೆ. ಜೆಡಿ(ಎಸ್) ಪ್ರಣಾಳಿಕೆಯಲ್ಲಿ Old Pension Scheme ಜಾರಿಗೆ ತರುವ ಬಗ್ಗೆ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ ಎಂದು ಮಾನ್ಯ ಭೋಜೇಗೌಡರು, ಶ್ರೀ ಶ್ರೀಕಂಠೇಗೌಡರು ಹೇಳಿದ್ದಾರೆ. ಈಗಲೂ ಮಾನ್ಯ ಶ್ರೀಕಂಠೇಗೌಡರು ಗೊಂದಲ ಮಾಡಿಕೊಳ್ಳುವುದು ಬೇಡ, ಮಾನ್ಯ ಮುಖ್ಯಮಂತ್ರಿಗಳು ಇದನ್ನು ಜಾರಿಗೆ ತರುವ ಬಗ್ಗೆ ತುಂಬಾ positive ಆಗಿ ಇದ್ದಾರೆ. ಆದ್ದರಿಂದ ನಾವು ಒಂದು ಲೆವೆಲ್‌ಗೆ ಒತ್ತಡ ಹಾಕೋಣ ಎಂದು ಅವರು ಹೇಳುತ್ತಿದ್ದಾರೆ. ಅಂದರೆ ಏನಾದರೂ ಮಾಡಬೇಕೆನ್ನುವ ನಿಲುವಿನ ಕಳಕಳಿ ಮಾನ್ಯ ಮುಖ್ಯಮಂತ್ರಿಯವರಿಗೆ ಇದೆ. ಜೆಡಿ(ಎಸ್) ಸದಸ್ಯರುಗಳಿಗೂ ಕೊಡಬೇಕೆಂದು ಇದೆ. ಆದರೆ ಇವರು ರೂ.11,000 ಕೋಟಿಗಳನ್ನು ಕೊಟ್ಟಿದ್ದು, ಕಾಲ ಬರಲಿ ಎಂದು ಕಾಯುತ್ತಿದ್ದಾರೆ. ಆದ್ದರಿಂದ ಇದು Common Minimum Programme problem ಎಂದು ಅನಿಸುತ್ತಿದೆ. ಈ ಹಿನ್ನೆಲೆಯಲ್ಲಿ ಒಂದು ನಿಲುವಿಗೆ ಬರಬೇಕು. ಕೊಡಬೇಕೆಂಬ ಆಸೆ ಇರುವ ಮಾನ್ಯ ಮುಖ್ಯಮಂತ್ರಿಗಳು ಬರಲಿ. ಆಡಳಿತ ಪಕ್ಷಕ್ಕೂ ಕೊಡಬೇಕೆಂದು ಇದೆ. ಇದನ್ನು ಕೊಡಲು ಈಗ ಕಾಲ ಪಕ್ವವಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಅನಿಸಿದರೆ ಒಳ್ಳೆಯದಾಗುತ್ತದೆ. ನನ್ನ ವಿನಂತಿ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಬರಲಿ, ಅವರ ಪ್ರಣಾಳಿಕೆಯಲ್ಲಿ OPS (Old Pension Scheme) ಜಾರಿ ಮಾಡುವ ಬಗ್ಗೆ ಇದ್ದು, ಇದನ್ನು ಜಾರಿಗೆ ತರುತ್ತಾರೆ ಎಂಬ ನಿರೀಕ್ಷೆ ನಮಗೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಎದೆ ತಟ್ಟಿ OPS ಅನ್ನು ಜಾರಿಗೆ ತರುತ್ತೇವೆ ಎಂದು ಹೇಳುತ್ತಾರೆ. ಈ ಅಪೇಕ್ಷೆ ಇಟ್ಟುಕೊಂಡು ನಾವು ಹೋರಾಟ ಮಾಡುತ್ತೇವೆ. ಆದ್ದರಿಂದ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸಬೇಕು. ಅವರು ಉತ್ತರವನ್ನು ಕೊಡಲಿ. ಎರಡು ಪಕ್ಷಗಳಲ್ಲಿ ವ್ಯತ್ಯಾಸ ಇರುವುದರಿಂದ ಅದರ reflection ಇಲ್ಲಿ ಕಾಣುತ್ತಿದೆ. ದಯವಿಟ್ಟು ಈ ಕೆಲಸವನ್ನು ಮಾಡಿಸಬೇಕು.

**ಡಾ॥ ತೇಜಸ್ವಿನಿಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರ ಸಮಸ್ಯೆಯಿಂದ ಓಡಿಹೋಗುವ ಪ್ರಯತ್ನ ಮಾಡುತ್ತಿರುವುದು ಕಾಣಿಸುತ್ತಿದೆ. ಸರ್ಕಾರಿ ನೌಕರರನ್ನು ಮತ್ತು ಸಾರ್ವಜನಿಕರನ್ನು ಎತ್ತಿ ಕಟ್ಟುವ ಮನೋಭಾವ ಶಾಸಕಾಂಗದ ಪ್ರತಿನಿಧಿಗಳಾಗಿ ಸದನದಲ್ಲಿ ಮಾಡುತ್ತಿರುವುದು ಬಹಳ ನೋವಿನ ವಿಚಾರವಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಪನ್ಮೂಲಗಳ ಸಮರ್ಥ ಕ್ರೋಢೀಕರಣ, ಸೋರಿಕೆಯ ತಡೆಗಟ್ಟುವಿಕೆ, ಯೋಜನೆಗಳನ್ನು ಸಕಾಲದಲ್ಲಿ ಜಾರಿಗೊಳಿಸುವುದರಿಂದ ಸಂಪನ್ಮೂಲಗಳನ್ನು ಸಮರ್ಥವಾಗಿ ಸದ್ಬಳಕೆ ಮಾಡಬಹುದು ಹಾಗೂ ಬಜೆಟ್ ಅನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬಹುದು. ಯಾವುದೇ ಸರ್ಕಾರ ಇದ್ದರೂ ಶಾಸಕಾಂಗದ ಭಾಗವಾಗಿ ಕಾರ್ಯಾಂಗವು ಕೆಲಸ ಮಾಡುತ್ತದೆ. ಅತ್ಯುತ್ತಮ ಸರ್ಕಾರವಾಗಿ ನಡೆಯಲು ಸರ್ಕಾರಿ ನೌಕರರ ಕೊಡುಗೆಯನ್ನು ಪ್ರಶಂಸೆ ಮಾಡುವುದು ಬೇಡ, ಆದರೆ ಅವರಿಗೆ ಅಪಮಾನ ಆಗುವ ರೀತಿ ಆಗಬಾರದು. ನಾನು ಮೊನ್ನೆ ಒಂದು ಪ್ರಶ್ನೆಯನ್ನು ಕೇಳಿದ್ದು, ಅದು ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಮುಂದಿನ ದಿನಗಳಲ್ಲಿ ಬರಬಹುದು. ಸರ್ಕಾರಿ ನೌಕರರು ನಿಗದಿತ ಅವಧಿಗಿಂತ ಹೆಚ್ಚುವರಿಯಾಗಿ ಕೆಲಸ ಮಾಡುತ್ತಾರೆ. ಅದು ಚುನಾವಣೆ ಕೆಲಸ ಇರಬಹುದು, ಆರೋಗ್ಯ ಯೋಜನೆಗಳ ಜಾರಿಯಲ್ಲಿ ಇರಬಹುದು ಅಥವಾ ಸದನ ನಡೆಯುವಾಗ ಇರಬಹುದು. ಈ ರೀತಿಯ ಹೆಚ್ಚುವರಿ ಕೆಲಸಕ್ಕೆ ಏನನ್ನೂ ಕೊಡುವುದಿಲ್ಲ. ಯಾರೂ ಸಮಯ ನೋಡಿ ಕೆಲಸ ಮಾಡುವುದಿಲ್ಲ ಅಥವಾ ಏನಾದರೂ ಒಂದು ಸಿಗುತ್ತದೆ ಎಂದೂ ಅಲ್ಲ. ಅದೊಂದು ಗೌರವ ಹಾಗೂ ಬದ್ಧತೆಯನ್ನು ಇಟ್ಟುಕೊಂಡು ಕೆಲಸ ಮಾಡುವುದು. ಆ ನಿಟ್ಟಿನಲ್ಲಿ ಅವರ ಜೀವನವನ್ನು ಉತ್ತಮ ರೀತಿಯಲ್ಲಿ ನಡೆಯುವುದಕ್ಕೆ ಉತ್ತಮವಾದ ಮಾರ್ಗಗಳನ್ನು ಹುಡುಕಬೇಕು. ಆರೂವರೆ ಕೋಟಿ ಜನತೆಯ ಹಿತಕ್ಕಾಗಿ ಉತ್ತಮ ಸರ್ಕಾರವನ್ನು ನಡೆಸಿ, ಉತ್ತಮ ಆಡಳಿತವನ್ನು ಕೊಡಬೇಕೆಂದು ಆದರೆ ಮಾತ್ರ ಸರಿಯಾದ ರೀತಿಯ ಆಲೋಚನೆಯಾಗುತ್ತದೆ ಎಂದು ನನ್ನ ಭಾವನೆಯನ್ನು ವ್ಯಕ್ತ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಒಂದೂವರೆ ತಾಸು ಆಯಿತು, ಸಾಕು. ಮಾನ್ಯ ಕವಟಗಿಮಠ ರವರು ಮಾತನಾಡಿ.

(ಗೊಂದಲ)

**ಶ್ರೀ ಅರುಣ ಶಹಾಪುರ:–** ಉತ್ತರ ಹೇಳಿಲ್ಲ.

**ಸಭಾಪತಿಯವರು:–** ಸರ್ಕಾರ, ಮುಖ್ಯಮಂತ್ರಿ ಎಂದರೆ ಎಲ್ಲರೂ ಒಂದೇ ಆಗಿರುತ್ತಾರೆ.

**ಶ್ರೀ ಅರುಣ ಶಹಾಪುರ:–** ಈ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಬೇಕು.

**(ಈ ಹಂತದಲ್ಲಿ ಸರ್ಕಾರ ನೀಡಿರುವ ಉತ್ತರವನ್ನು ಪ್ರತಿಭಟಿಸಿ, ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ಆಯನೂರು ಮಂಜುನಾಥ್ ರವರನ್ನು ಹೊರತುಪಡಿಸಿ, ಬಿ.ಜೆ.ಪಿ ಯ ಸದಸ್ಯರುಗಳು ಧರಣಿ ನಿರತರಾಗಲು ಬಾವಿಗೆ ಆಗಮಿಸಿದರು)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ದೃಷ್ಟಿಯಿಂದ ಒಂದೆರಡು ಅಂಶಗಳನ್ನು ಕ್ಲಿಯರ್ ಮಾಡಬೇಕಾಗಿದೆ.

**ಸಭಾಪತಿಯವರು:–** ಎಲ್ಲರೂ ಒಂದೇ ಆಗಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಎಂದರೆ ಮುಖ್ಯಮಂತ್ರಿಗಳು ಹೇಳಿದಂತೆ ಅಲ್ಲವೇ?

(ಗೊಂದಲ)

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರ ಭಾವನೆಗಳನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುತ್ತೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಈ ಉತ್ತರವು ನಮಗೆ ಸಮಾಧಾನಕರವಾಗಿಲ್ಲ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಂತ್ರಿಗಳಿಂದ ಉತ್ತರದ ರೂಪದಲ್ಲಿ ಸಂದೇಶ ಹೋಗಿದೆ. ಉತ್ತರಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸಹಿ ಹಾಕಿದ್ದಾರೆ. ಆರೂವರೆ ಕೋಟಿ ಜನರಿಗೆ ಎಷ್ಟು ಖರ್ಚು ಮಾಡುತ್ತಿದ್ದೇವೆ ಮತ್ತು ಇವರಿಗೆ ಎಷ್ಟು ಖರ್ಚು ಮಾಡುತ್ತಿದ್ದೇವೆ ಎಂಬ ವಿಚಾರ ಬಂತು. ಇದು ನಾಳೆ ಮಾಧ್ಯಮಗಳಲ್ಲಿ ವರದಿಯಾದಾಗ ಜನರನ್ನು ಸರ್ಕಾರಿ ನೌಕರರ ವಿರುದ್ಧ ಎತ್ತಿ ಕಟ್ಟುವ ತಂತ್ರದ ಉತ್ತರವಾಗುತ್ತದೆ ಎಂದು ನನ್ನ ಭಾವನೆ. ಆದರೆ ಪ್ರಶ್ನೆ ಏನೆಂದರೆ, ಅತೀ ಹೆಚ್ಚು ಸರ್ಕಾರಿ ನೌಕರರು Education Department, Health and Family Welfare Department ಗಳಲ್ಲಿ ಇದ್ದಾರೆ. ಅಲ್ಲಿ more than 50 percent employees ಕೆಲಸ ಮಾಡುತ್ತಿದ್ದಾರೆ. ಸಮಾಜದ ದೃಷ್ಟಿಯಿಂದ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಕೊಟ್ಟಿರುವ ವ್ಯವಸ್ಥೆಯಾಗಿದೆ. ಅದನ್ನು ಎಲ್ಲಿಗೋ ಹೋಲಿಸಿದಾಗ ಆ ವ್ಯವಸ್ಥೆಯನ್ನು ರದ್ದು ಮಾಡುವುದಕ್ಕೆ ಆಗುತ್ತದೆಯೇ? ಇಲ್ಲಿ 300 ಜನ ಶಾಸಕರಿದ್ದು, ಶಾಸಕರಿಗೆ ಎಷ್ಟು ಖರ್ಚು ಮಾಡುತ್ತಿದ್ದೇವೆ ಎಂದು ಇನ್ನೊಬ್ಬರಿಗೆ ಹೋಲಿಸುವುದಕ್ಕೆ ಆಗುತ್ತದೆಯೇ? ನ್ಯಾಯ-ಅನ್ಯಾಯದ ಸಾಮಾಜಿಕ ಕಲ್ಪನೆಯಲ್ಲಿ ನಾವು ಮಾತನಾಡುತ್ತಿದ್ದೇವೆ. ಆ ವ್ಯವಸ್ಥೆಯನ್ನು ರದ್ದುಪಡಿಸುವ ಮನಸ್ಸು ಮಾನ್ಯ ಮುಖ್ಯಮಂತ್ರಿಗಳಿಗೆ ಇದೆ. ಅವರು ಎಲ್ಲೋ ಕುಳಿತು ಗೊತ್ತಾಗದೇ ಸಹಿ ಹಾಕಿದ್ದಾರೆ. ಅವರೇ ಸದನಕ್ಕೆ ಉತ್ತರ ಕೊಡಲು ಬಂದರೆ ಒಳ್ಳೆಯದು. ಸರ್ಕಾರವು ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಪ್ರತಿಭಟಿಸುತ್ತೇನೆ.

**(ಈ ಹಂತದಲ್ಲಿ ಶ್ರೀ ಆಯನೂರು ಮಂಜುನಾಥ್‌ರವರು ಧರಣಿ ಮಾಡಲು ಬಾವಿಗೆ ಆಗಮಿಸಿದರು)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಚುನಾವಣಾ ಪೂರ್ವದಲ್ಲಿಯೂ OPS ತರುವ ಬಗ್ಗೆ ಹೇಳಿದ್ದಾರೆ. ಎಲ್ಲಾ ಸಂದರ್ಭಗಳಲ್ಲಿಯೂ ಅವರು NPS (New Pension Scheme) ಸರಿಯಿಲ್ಲ, OPS (Old Pension Scheme) ಜಾರಿಗೆ ತರಲು ಒಂದು ಕಮಿಟಿ ಮಾಡುತ್ತೇವೆ ಎಂದು ಹೇಳಿಕೆಗಳನ್ನು ಕೊಟ್ಟು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಇದೆಲ್ಲವೂ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಹೇಳಿಕೆಯನ್ನು ಸರ್ಕಾರವು withdraw ಮಾಡಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಯವರು ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಬೇಕೆಂದು ನಾನೂ ಕೂಡ ಧ್ವನಿಗೂಡಿಸಿ ಧರಣಿ ಮಾಡುತ್ತೇನೆ.

**(ಈ ಹಂತದಲ್ಲಿ ಶ್ರೀ ಪುಟ್ಟಣ್ಣನವರು ಧರಣಿ ಮಾಡಲು ಬಾವಿಗೆ ಆಗಮಿಸಿದರು)**

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪುರ ಹಾಗೂ ತಂಡ ಉಲ್ಲೇಖ ಮಾಡಿದಂತಹ ಚರ್ಚೆಗೆ ಮಾನ್ಯ ಮಂತ್ರಿಯವರು ನೀಡಿದ ಉತ್ತರವನ್ನು ನಾನು ಗಮನಿಸಿದ್ದೇನೆ. ಮಾನ್ಯ ಮಂತ್ರಿಗಳು ಬಹಳ ಕರಾರುವಾಕ್ಕಾದ ಉತ್ತರವನ್ನು ನೀಡಿದ್ದು, ಅದರಲ್ಲಿ ಗೊಂದಲವೇನೂ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲ್ಲ. ಆದರೆ ನಾನು ಅವರ ಚಳುವಳಿಯನ್ನು ನೋಡಿದಂತಹ ಅನುಭವ ಇದೆ. ಆ ನೌಕರರು ಪ್ರತಿಭಟನೆ ಮಾಡಿದ ರೀತಿಯನ್ನು ನಾನು ಹೇಳಲೇಬೇಕು. ಪ್ರತಿಭಟನೆ ಎಂದಾಗ ಸಾಮಾನ್ಯವಾಗಿ ಬಸ್ಸಿಗೆ, ಕಲ್ಲು ಹೊಡೆಯುವುದು, ಬಂದ್ ಮಾಡುವುದು, ಗಲಾಟೆ ಮಾಡುವುದು ನಡೆಯುತ್ತಿರುತ್ತದೆ. ಆದರೆ NPS ರದ್ದು ಮಾಡಿ OPS ಅನ್ನು ಜಾರಿಗೆ ತರಬೇಕೆಂದು ಸರ್ಕಾರಿ ನೌಕರರು ' ರಕ್ತ ಕೊಟ್ಟೆವು' ಎಂದು ಪ್ರತಿ ಜಿಲ್ಲೆಯಲ್ಲಿ ರಕ್ತದಾನ ಶಿಬಿರಗಳನ್ನು ಏರ್ಪಡಿಸಿದ್ದರು. ಅವರ ಕಡೆಯಿಂದ ' ರಕ್ತವನ್ನಾದರೂ ಕೊಟ್ಟೆವು, ಪಿಂಚಣಿ ಬಿಡೆವು' ಎಂಬ ಘೋಷಣೆಯನ್ನು ಮಾಡಿದ್ದರು. ಪ್ರತಿಭಟನೆಯನ್ನು ಬಹಳ ಅರ್ಥಪೂರ್ಣವಾಗಿ ಮಾಡಿದ್ದಾರೆ. ಅವರು ಅನೇಕ ಕಾರಣಗಳನ್ನು ಕೊಟ್ಟಿದ್ದಾರೆ. ಅವರ ನಿವೃತ್ತಿ ನಂತರ ಅವರ ಬದುಕಿಗೆ ಹಿಂದಿನ ನೌಕರರಿಗೆ ಇದ್ದಂತಹ ಪಿಂಚಣಿ ಭದ್ರತೆ ಇಲ್ಲ, ಅದಕ್ಕಾಗಿ ಹಿಂದಿನ OPS ಆಗಬೇಕೆಂಬ ಬೇಡಿಕೆ ಇದೆ. ಅವರಿಗೆ ಬಲ ಹೇಗೆ ಬಂತೆಂದರೆ, ಅವರೆಲ್ಲರೂ ಒಂದು ಸಾರಿ ಬೆಂಗಳೂರು ಚಲೋ ಚಳುವಳಿಯನ್ನು ಆಯೋಜಿಸಿದ್ದರು. ಆಗ ಹಿಂದಿನ ಪ್ರಧಾನಿಗಳಾಗಿದ್ದ ಮಾನ್ಯ ದೇವೇಗೌಡರು ಉದ್ಘಾಟನೆ ಮಾಡಿ ಅವರ ಬೇಡಿಕೆ ಸರಿಯಿದೆ, ಇದನ್ನು ಈಡೇರಿಸಲು ಸರ್ಕಾರದ ಮೇಲೆ ಒತ್ತಡ ಹಾಕುತ್ತೇನೆ ಎಂಬ ಭರವಸೆಯನ್ನು ಕೊಟ್ಟರು. ಕಾಲಕಾಲಕ್ಕೆ ಎಲ್ಲಾ ರಾಜಕಾರಣಿಗಳು, ಉಸ್ತುವಾರಿ ಮಂತ್ರಿಗಳು, ಲೋಕಸಭಾ ಸದಸ್ಯರು ಸೇರಿದಂತೆ ಬಹುತೇಕ ಎಲ್ಲರೂ ' ರಕ್ತ ಕೊಟ್ಟೆವು, ಪಿಂಚಣಿ ಬಿಡೆವು' ಯೋಜನೆಗೆ ಚಾಲನೆ ಕೊಟ್ಟು ಜೊತೆಯಲ್ಲಿ ನಾವಿದ್ದೇವೆ ಎಂದು ಹೇಳುತ್ತಾ ಬಂದರು. ಹಾಗಾಗಿ ಅವರೆಲ್ಲರೂ ಗಟ್ಟಿಯಾದ ನಿರ್ಧಾರದಲ್ಲಿ ಇದ್ದಾರೆ. ನಾನು ಆಗ್ರಹ ಮಾಡುವುದೇನೆಂದರೆ ಈಗ ಮಾನ್ಯ ಮಂತ್ರಿಗಳು ನೀಡಿರುವ ಉತ್ತರಕ್ಕಿಂತ ಬುದ್ಧಿವಂತಿಕೆ ಉತ್ತರವನ್ನು ಕೊಡಲು ಈ ಕರ್ನಾಟಕ ರಾಜ್ಯದಲ್ಲಿ ಯಾರಿಗೂ ಸಾಧ್ಯವಿಲ್ಲ. ಅವರಿಗೆ ಅನುಮಾನ ಬೇಡ, ಬಹಳ ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಎಲ್ಲಾ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಂಡು, ಮಾನ್ಯ ಮುಖ್ಯಮಂತ್ರಿಗಳು ಉತ್ತರಕ್ಕೆ ಸಹಿ ಹಾಕಿರುವುದರಿಂದ ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರು ಖುದ್ದು ಹೇಳಿಕೆಯನ್ನು ಕೊಡಬೇಕೆಂದು ನಮ್ಮ ಆಗ್ರಹ ಇದೆ.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಕೇಳಿದ್ದಕ್ಕೂ ನಾನು ಉತ್ತರ ಹೇಳುತ್ತೇನೆ. ಇದು ನನ್ನ ಬುದ್ಧಿವಂತಿಕೆ ಮಾತಲ್ಲ. ತಾವು ನನಗೆ ಸ್ವಾತಂತ್ರ್ಯ ಕೊಟ್ಟಿದ್ದರೆ ನಾನೂ ಇನ್ನೂ ಮಾತನಾಡುತ್ತಿದ್ದೆನು. ನಾನು ಜವಾಬ್ದಾರಿ ಸ್ಥಾನದಲ್ಲಿ ಕುಳಿತು ನನ್ನ ಇತಿಮಿತಿಯಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ನಾನು ಇರುವುದನ್ನು ವಾಸ್ತವವಾಗಿ ಹೇಳಿದ್ದೇನೆಯೇ ಹೊರತು ವಾಸ್ತವತೆಯನ್ನು ಬಿಟ್ಟು ಯಾವುದನ್ನೂ ಮಾತನಾಡಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(356)11–12–2018(4–50)ಹೆಚ್‌ವಿ–ಎಕೆ

(ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಮಾನ್ಯ ಆಯನೂರು ಮಂಜುನಾಥ್‌ರವರು ತಮ್ಮ ಸ್ಥಾನಕ್ಕೆ ಮರಳಿದರು)**

**ಶ್ರೀ ಆಯನೂರು ಮಂಜುನಾಥಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬುದ್ಧಿವಂತಿಕೆಯ ಮಾತುಗಳನ್ನಾಡುತ್ತಾರೆ ಎನ್ನುವುದನ್ನು ನಾನು ಪುನಃ ಹೇಳಿದರೆ, endorse ಮಾಡಿದಂತಾಗುತ್ತದೆ. 'ನಾನು ನನ್ನ ಇತಿಮಿತಿಯೊಳಗೆ ಮಾತನಾಡುತ್ತಿದ್ದೇನೆ' ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ, ಶಾಸಕರಾಗಿ ನಾವು ಸಹ ನಮ್ಮ ಇತಿಮಿತಿಯೊಳಗೆ ಈ ಸದನದೊಳಗೆ ವಿಚಾರವನ್ನು ಮಂಡನೆ ಮಾಡಿದ್ದೇವೆ. ಅವರಿಗೆ ಉತ್ತರ ಕೊಡುವುದಕ್ಕೆ ಗೊತ್ತಿದ್ದರೆ ಕೊಡಲಿ, ಅದಕ್ಕೆ ಅವರು ಸ್ವತಂತ್ರರಾಗಿದ್ದಾರೆ. ಅವರ ಉತ್ತರಕ್ಕೆ ವಾಪಸ್ಸು ಪ್ರಶ್ನೆ ಹಾಕುವುದಕ್ಕೂ ನಮಗೆ ಗೊತ್ತಿದೆ. ಈ ರೀತಿಯ ಥಂಡನೆಯ ಬೆದರಿಕೆಯ ಮಾತುಗಳು ಬೇಡ.

**ಸಭಾಪತಿಯವರುಃ–** ಬೆದರಿಕೆ ಅಲ್ಲ.

**ಶ್ರೀ ಕೃಷ್ಣಭೈರೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಅವರು ಏನು ಹೇಳುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅವರ ಬಗ್ಗೆ ನಾನು ಎಲ್ಲಿಯೂ ಮಾತನಾಡಿಲ್ಲ.

**ಶ್ರೀ ಆಯನೂರು ಮಂಜುನಾಥಃ–** ಸನ್ಮಾನ್ಯ ಸಭಾಪತಿಯವರೇ, ನಾವು ನಮ್ಮ ಇತಿಮಿತಿಯೊಳಗೆ ಮಾತನಾಡಿದ್ದೇವೆ.

**ಶ್ರೀ ಕೃಷ್ಣಭೈರೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಅವರು ತಮ್ಮ ಇತಿಮಿತಿಯೊಳಗೆ ಮಾತನಾಡಿಲ್ಲವೆಂದು ನಾನು ಹೇಳುತ್ತಿಲ್ಲ.

**ಶ್ರೀ ಆಯನೂರು ಮಂಜುನಾಥಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರ್ಕಾರದ ಪರವಾಗಿ ಹೀಗೆ sarcastic answer ನೀಡುವುದು ಬೇಡ. ಇದು ಸರಿಯಲ್ಲ.

**ಸಭಾಪತಿಯವರುಃ–** ಮಾನ್ಯ ಸಚಿವರು ಅವರ ಕೆಲಸವನ್ನು ಮಾಡುತ್ತಿದ್ದಾರೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೃಷ್ಣಭೈರೇಗೌಡಃ–** ಸನ್ಮಾನ್ಯ ಸಭಾಪತಿಯವರೇ, sarcasm is an essential part of any parliamentary proceedings. ಈ ರೀತಿ ಹೇಳಿದರೆ ನಾವು ಮಾತನಾಡಬೇಕಾಗುತ್ತದೆ.

**ಶ್ರೀ ಆಯನೂರು ಮಂಜುನಾಥಃ–** ಸನ್ಮಾನ್ಯ ಸಭಾಪತಿಯವರೇ, ನಾವು ಮಂಡನೆ ಮಾಡಿರುವ ವಿಚಾರದ ಬಗ್ಗೆ ಸರ್ಕಾರ ಹಠದ ಮತ್ತು ಸವಾಲಿನ ಮಾತುಗಳನ್ನು ಆಡುವುದಾದರೆ, ಅದನ್ನು ಸ್ವಾಗತ ಮಾಡುವುದಕ್ಕೆ ಬೇರೆಯವರು ತಯಾರು ಇರುತ್ತಾರೆ ಎನ್ನುವ ಎಚ್ಚರ ಅವರಿಗೆ ಇರಬೇಕಾಗುತ್ತದೆ.

**ಶ್ರೀ ಕೆ.ವಿ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 'ಶಾಸಕರು ತಮ್ಮ ಇತಿಮಿತಿಯೊಳಗೆ ಮಾತನಾಡಲಿಲ್ಲ' ಎಂದು ಹೇಳಲಿಲ್ಲ. ಸುಮ್ಮನೆ ಅವರು ಸರ್ಕಾರಕ್ಕೆ ಸವಾಲು ಹಾಕುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ನಾವು ಈ ವಿಚಾರದಲ್ಲಿ ರಾಜಕೀಯ ಮಾಡುವುದಿಲ್ಲ. ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿಯೇ ಈ ವಿಚಾರವನ್ನು ಹೇಳಿದ್ದೇವೆ. ವಿಷಯದಿಂದ ಪಲಾಯನ ಮಾಡುವುದಿಲ್ಲ.

**ಸಭಾಪತಿಯವರುಃ–** ಮಾನ್ಯ ಭೋಜೇಗೌಡರೇ, ಕುಳಿತುಕೊಳ್ಳಿ. ಮಾನ್ಯ ಸಚಿವರೇ, ತಾವು ತಮ್ಮ ಮಾತುಗಳನ್ನು ಮುಂದುವರಿಸಿ.

**ಶ್ರೀ ಕೃಷ್ಣಭೈರೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ನಾನು ಸಚಿವ ಸ್ಥಾನದಲ್ಲಿ ಕುಳಿತಿರುವಾಗ ಆ ಸ್ಥಾನಕ್ಕೆ ಕೆಲವು ಇತಿಮಿತಿಗಳು ಇರುತ್ತವೆ. ನನ್ನ ಇತಿಮಿತಿಯೊಳಗೆ ಮಾತನಾಡಿದ್ದೇನೆಂದು ಹೇಳಿದ್ದೇನೆಯೇ ವಿನಃ ಬೇರೆಯವರ ಬಗ್ಗೆ ನಾನು ಮಾತನಾಡಿಲ್ಲ. ಉಳಿದ ಸದಸ್ಯರು ಅನ್ಯಥಾ ಭಾವಿಸಬಾರದು. ಇದು ಮುಖ್ಯ ವಿಚಾರವಲ್ಲ, ಆದ್ದರಿಂದ ಇದನ್ನು ಇಲ್ಲಿಗೆ ಬಿಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನನಗೆ ಕೊಟ್ಟಿರುವ ಇತಿಮಿತಿಯೊಳಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಮುಖ್ಯಮಂತ್ರಿಗಳೇ ಇದಕ್ಕೆ ಉತ್ತರವನ್ನು ನೀಡಬೇಕೆಂದು ಹೇಳಿದ್ದಾರೆ. ಆದ್ದರಿಂದ ನಾನು ನಾಳೆ ಅಥವಾ ನಾಡಿದ್ದರೊಳಗೆ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಹೇಳಿಕೆಯನ್ನು ಮಾಡಿಸುತ್ತೇನೆ.

**ಶ್ರೀ ಆಯನೂರು ಮಂಜುನಾಥಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗ ಕೊಟ್ಟಿರುವಂತಹ ಉತ್ತರವನ್ನು ವಾಪಸ್ಸು ಪಡೆದುಕೊಳ್ಳಬೇಕೆನ್ನುವುದು ನಮ್ಮ ಒತ್ತಾಯವಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೃಷ್ಣಭೈರೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಈಗ ಕೊಟ್ಟಿರುವ ಉತ್ತರವನ್ನು ವಾಪಸ್ಸು ಪಡೆಯುವುದಿಲ್ಲ. ಆದರೆ, ಬದಲಾವಣೆಗೆ ಅವಕಾಶವಿದೆ.

**ಸಭಾಪತಿಯವರುಃ–** ಮಾನ್ಯ ಮುಖ್ಯಮಂತ್ರಿಗಳಿಗೆ ಶಾಸಕರ ಕಳಕಳಿಯನ್ನು ತಿಳಿಸುವುದಾಗಿ ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇದಕ್ಕಿಂತ ಹೆಚ್ಚಿಗೆ ಯಾವ ಮಂತ್ರಿಗಳು ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ತಮ್ಮ ವಿಚಾರವನ್ನು ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸುತ್ತಾರೆ. ಅವರು ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ನೋಡೋಣ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಕೃಷ್ಣಭೈರೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದ ಎಲ್ಲ ಶಾಸಕರು ತಮ್ಮ ತಮ್ಮ ಸ್ಥಾನಗಳಿಗೆ ಮರಳಬೇಕೆಂದು ಮನವಿ ಮಾಡುತ್ತೇನೆ.

**(ಈ ಹಂತದಲ್ಲಿ ಸದನದ ಬಾವಿಯೊಳಗೆ ಧರಣಿ ನಿರತ ಭಾರತೀಯ ಜನತಾ ಪಕ್ಷದ ಸದಸ್ಯರು ತಮ್ಮತಮ್ಮ ಸ್ಥಾನಗಳಿಗೆ ಮರಳಿದರು.)**

**ಇ) ವಿಷಯಃ– ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ 4 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡುವುದಕ್ಕೆ ಸಂಬಂಧಪಟ್ಟಂತೆ ಶಾಶ್ವತ ಒಡಂಬಡಿಕೆ ಮಾಡಿಕೊಳ್ಳುವ ಕುರಿತು.**

– – –

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಃ–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ 4 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡುವುದಕ್ಕೆ ಸಂಬಂಧಪಟ್ಟಂತೆ ಶಾಶ್ವತ ಒಡಂಬಡಿಕೆ ಮಾಡಿಕೊಳ್ಳುವ ಕುರಿತು ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಕೃಷ್ಣಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು, ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)ಃ–** ಸನ್ಮಾನ್ಯ ಸಭಾಪತಿಯವರೇ,

**(ಮಾನ್ಯ ಸಚಿವರ ಲಿಖಿತ ಹೇಳಿಕೆಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಜೀವ ನದಿಯಾಗಿರುವ ಕೃಷ್ಣಾ ನದಿ ಬೆಳಗಾವಿ, ಬಾಗಲಕೋಟೆ ಮತ್ತು ಬಿಜಾಪುರ ಈ ಮೂರು ಜಿಲ್ಲೆಗಳಲ್ಲಿ ಹರಿದು ಮುಂದೆ ಆಂಧ್ರಪ್ರದೇಶದ ಪಾಲಾಗುತ್ತದೆ. ಅನೇಕ ವರ್ಷಗಳ ಕಾಲ ಈ ನದಿ ನೀರು ಮಾರ್ಚ್, ಏಪ್ರಿಲ್, ಮೇ ಇಡೀ ತಿಂಗಳುಗಳಲ್ಲಿ ಮತ್ತು ಜೂನ್ ತಿಂಗಳ ಮಧ್ಯ ಭಾಗದವರೆಗೆ ಸಂಪೂರ್ಣವಾಗಿ ಬತ್ತಿ ಹೋಗಿದ್ದ ಕಾರಣ ಕರ್ನಾಟಕ ರಾಜ್ಯದ ಬೆಳಗಾವಿ, ಬಾಗಲಕೋಟೆ ಮತ್ತು ಬಿಜಾಪುರ ಭಾಗದ ರೈತರು ಅತ್ಯಂತ ತೊಂದರೆಯನ್ನು ಅನುಭವಿಸಿರುವುದನ್ನು ನಾವೆಲ್ಲರೂ ಕಣ್ಣಾರೆ ಕಂಡಿದ್ದೇವೆ. ಈ ವಿಚಾರವಾಗಿ ಕಳೆದ 3-4 ವರ್ಷಗಳಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳನ್ನು ಭೇಟಿ ಆಗುವಂತಹ ಸಂದರ್ಭ ನಮಗೆ ಒದಗಿ ಬಂತು. ಇಂದಿನ ನಮ್ಮ ರಾಜ್ಯಾಧ್ಯಕ್ಷರಾಗಿರುವ ಸನ್ಮಾನ್ಯ ಪ್ರಹ್ಲಾದ ಜೋಷಿಯವರು ಮತ್ತು ನಮ್ಮ ನಾಯಕರಾಗಿರುವ ಮಾನ್ಯ ಪ್ರಭಾಕರ ಕೋರೆಯವರ ನೇತೃತ್ವದಲ್ಲಿ ಮಾನ್ಯ ಲಕ್ಷ್ಮಣ ಸವದಿಯಾದಿಯಾಗಿ ಪಕ್ಷಾತೀತವಾಗಿ ಎಲ್ಲ ಸದಸ್ಯರ ನಿಯೋಗ ಸುಮಾರು ನಾಲ್ಕು ಬಾರಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾಗಿದ್ದ ಶ್ರೀ ದೇವೇಂದ್ರ ಫಡ್ನಾವೀಸ್ ಅವರನ್ನು ಮತ್ತು ಆ ರಾಜ್ಯದ ಜಲಸಂಪನ್ಮೂಲ ಸಚಿವರನ್ನು ಭೇಟಿ ಮಾಡಿದ್ದೆವು. ಬೆಳಗಾವಿ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಕಳೆದ 3-4 ವರ್ಷಗಳಲ್ಲಿ ಸತತವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಿದ ಸಂದರ್ಭದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ಜಲಸಂಪನ್ಮೂಲ ಸಚಿವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ, 'ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳು ಅಣ್ಣ-ತಮ್ಮಂದಿರ ರೀತಿಯಲ್ಲಿದ್ದೇವೆ' ಎಂದು ಹೇಳಿ ಕರ್ನಾಟಕ ರಾಜ್ಯದ ಜನತೆಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಸುಮಾರು ಮೂರು ಬಾರಿ 2 ಟಿಎಂಸಿ ಪ್ರಮಾಣದಲ್ಲಿ ನೀರನ್ನು ನಮ್ಮ ರಾಜ್ಯಕ್ಕೆ ಹರಿಸಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಅದಕ್ಕಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ಜಲಸಂಪನ್ಮೂಲ ಸಚಿವರಿಗೆ ಈ ಭಾಗದ ರೈತರ ಪರವಾಗಿ ಧನ್ಯವಾದಗಳನ್ನು ಅರ್ಪಿಸಲು ನಾವು ಮುಂಬೈಗೆ ತೆರಳಿದ್ದೆವು.

(357)11.12.2018(5-00)ಪಿಕೆ-ಎಕೆ

(ಸಭಾಪತಿಗಳ ಉಪಸ್ಥಿತಿ)

ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಮುಂದುವರೆದಿದೆ

ಆ ಸಂದರ್ಭದಲ್ಲಿ, ಪ್ರತಿ ಬಾರಿ ನೀರನ್ನು ಕೇಳುವುದಕ್ಕಿಂತಲೂ ಶಾಶ್ವತವಾಗಿರುವ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕೆಂಬ ವಿಚಾರವನ್ನು ಅಲ್ಲಿನ ಜಲಸಂಪನ್ಮೂಲ ಸಚಿವರು ಮತ್ತು ಇಲಾಖೆಯ ಅಧಿಕಾರಿಗಳು ಮುಖ್ಯಮಂತ್ರಿಗಳ ಗಮನಕ್ಕೆ ತಂದರು. ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಜತ್ ಮತ್ತು ಅಕ್ಕಲಕೋಟೆ ಭಾಗಗಳಿಗೆ ತಾವು ನೀರನ್ನು ಕೊಡಬೇಕು ಮತ್ತು ಕರ್ನಾಟಕದ ಬೆಳಗಾವಿ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಿಗೆ ಪ್ರತಿವರ್ಷ ಅವಶ್ಯಕತೆಯ ಸಂದರ್ಭದಲ್ಲಿ ಕೊಯ್ನಾ ಜಲಾಶಯದಿಂದ ನೀರನ್ನು ಹರಿಸುವುದಕ್ಕೆ ಸಿದ್ಧರಿದ್ದೇವೆ ಎಂದು ಅಲ್ಲಿನ ಮುಖ್ಯಮಂತ್ರಿಗಳು ಮತ್ತು ಜಲಸಂಪನ್ಮೂಲ ಸಚಿವರು ನಮ್ಮ ನಿಯೋಗಕ್ಕೆ ಹೇಳಿದರು ಎನ್ನುವ ಮಾತನ್ನು ಮಾನ್ಯ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಚಿವರ ಗಮನಕ್ಕೆ ತರಬಯಸುತ್ತೇನೆ. ಒಂದು ಆಶ್ಚರ್ಯದ ಸಂಗತಿಯನ್ನು ನಮ್ಮ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ನಾವು ಭೇಟಿಯಾದ ಸಂದರ್ಭದಲ್ಲಿ ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಮುಖ್ಯಮಂತ್ರಿಗಳಿಗೆ, ನಮ್ಮ ರೈತರಿಗೆ ಟ್ಯಾಂಕರ್ ಮೂಲಕ ನೀರನ್ನು ಕೊಡುತ್ತಿದ್ದೇವೆ, ರೇಲ್ವೆ ವ್ಯಾಗನ್ ಮುಖಾಂತರ ನಾಗಪುರಕ್ಕೆ ನೀರನ್ನು ಕೊಡುತ್ತಿದ್ದೇವೆ, ಇಂತಹ ಸಂದರ್ಭದಲ್ಲಿ ಕರ್ನಾಟಕಕ್ಕೆ ನೀರನ್ನು ಬಿಡುವುದು ಸಮಂಜಸ ಅಲ್ಲ ಎಂಬ ಮಾತನ್ನು ಹೇಳಿದರೂ ಮುಖ್ಯಮಂತ್ರಿಗಳು, ಮಾನವೀಯತೆಯ ಆಧಾರದ ಮೇಲೆ ಕರ್ನಾಟಕಕ್ಕೆ ನೀರು ಬಿಡಬೇಕು ಎಂದು ಹೇಳಿದರು. ನಮ್ಮ ರಾಜ್ಯಕ್ಕೆ 2-3 ಸಲ ನೀರನ್ನು ಬಿಟ್ಟರು ಎನ್ನುವ ಮಾತನ್ನು ಈ ಸದನದ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಪ್ರತಿ ಸಲ ಇಂತಹ ಸಂದರ್ಭದಲ್ಲಿ ಮಹಾರಾಷ್ಟ್ರಕ್ಕೆ ಹೋಗಿ, ವಿನಂತಿ ಮಾಡಿ, ನಮಗೆ ಅವಶ್ಯಕತೆ ಇರುವ ನೀರಿನ ಬಗ್ಗೆ ಬೇಡಿಕೊಳ್ಳುವುದು ಮತ್ತು ಅವರು ಆ ನೀರನ್ನು ಬಿಡುವುದಕ್ಕೆ ವಿಳಂಬವಾದರೆ, ಸಾವಿರಾರು ಎಕರೆಯಲ್ಲಿ ಹಾಕಿರಬಹುದಾದ, ಕಬ್ಬು, ಸೋಯಾಬಿನ್, ಗೊಂಜಲ್ ಇತರ standing crop ಗಳು ಹಾಳಾಗುತ್ತವೆ. ಬೆಳಗಾವಿ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ರೈತರಿಗೆ ಕೃಷ್ಣಾ ನದಿ ಜೀವ ನದಿಯಾಗಿದೆ. ಆದರೆ ಎಲ್ಲಾ ಕಾಲದಲ್ಲೂ ಅಲ್ಲಿ ನೀರು ಇರದೇ ಇರುವುದನ್ನು ನಾವು ನೋಡಿದ್ದೇವೆ. ಅಂತಹ ಸಂದರ್ಭದಲ್ಲಿ ರೈತರು ರಸ್ತೆಗೆ ಬಂದು, ಆದಷ್ಟು ಬೇಗ ಮಹಾರಾಷ್ಟ್ರದಿಂದ ನೀರು ಬಿಡಿಸಿ ಎಂದು ವಿನಂತಿ ಮಾಡಿಕೊಂಡ ಹಿನ್ನೆಲೆಯಲ್ಲಿ, ಪಕ್ಷಾತೀತವಾಗಿ ಮಹಾರಾಷ್ಟ್ರಕ್ಕೆ ನಿಯೋಗ ಹೋಗಿ ನೀರು ಬಿಡಿಸಿದ್ದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ತಾವು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಮತ್ತು ನೀರಾವರಿ ಸಚಿವರ ಜೊತೆ ಶಾಶ್ವತವಾದ ಒಡಂಬಡಿಕೆ ಮಾಡಿಕೊಳ್ಳಬೇಕು. ಇದರಿಂದ ಬೆಳಗಾವಿ, ಬಾಗಲಕೋಟೆ ಮತ್ತು ಬಿಜಾಪುರ ರೈತರ ಸಮಸ್ಯೆಗೆ ಸರ್ಕಾರ ಸ್ಪಂದಿಸಿದ ಹಾಗೆ ಆಗುತ್ತದೆ ಎನ್ನುವ ವಿನಂತಿಯನ್ನು ಮಾಡಬಯಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಗಳೆ, ಮಾನ್ಯ ಕವಟಗಿಮಠರವರು ತಂದಿರುವ ವಿಷಯ ಬಹಳ ಮಹತ್ವವಾಗಿರುವಂಥದ್ದಾಗಿದೆ. ಮಳೆಗಾಲದಲ್ಲಿ ಡ್ಯಾಮ್‌ಗಳಲ್ಲಿ ಸಾಕಷ್ಟು ನೀರು ತುಂಬಿದರೂ, ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಯ ಸುಮಾರು 10 ತಾಲ್ಲೂಕುಗಳಿಗೆ ಕೃಷ್ಣಾ ನದಿಯ ನೀರು ಕುಡಿಯುವುದಕ್ಕೂ ಸಿಗದೆ ಪರದಾಡುವಂತಹ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಇದಕ್ಕೆ ಶಾಶ್ವತವಾದ ಪರಿಹಾರ ಕಂಡುಕೊಳ್ಳಲು ಮಹಾರಾಷ್ಟ್ರ ಸರ್ಕಾರದ ಜೊತೆಗೆ ಒಪ್ಪಂದ ಮಾಡಿಕೊಳ್ಳಬೇಕು. ಕೊಯ್ನಾ ಡ್ಯಾಮ್‌ನಿಂದ 3-4 ಟಿಎಂಸಿ ನೀರನ್ನು ಪ್ರತಿವರ್ಷ ಬಿಡಬೇಕು ಎನ್ನುವ ಒಡಂಬಡಿಕೆ ಮಾಡಿಕೊಳ್ಳುವುದರಿಂದ ಈ ಭಾಗದ ಜನರಿಗೆ ಶಾಶ್ವತವಾದ ಕುಡಿಯುವ ನೀರು ಮತ್ತು ನೀರಾವರಿಗೆ ನೀರನ್ನು ಕಲ್ಪಿಸಿಕೊಟ್ಟಂತೆ ಆಗುತ್ತದೆ. ಅದೇರೀತಿ, ಆಲಮಟ್ಟಿ ಜಲಾಶಯದಿಂದ ನಾರಾಯಣಪುರ ಡ್ಯಾಮ್‌ನ ಮುಖಾಂತರ ಮಹಾರಾಷ್ಟ್ರದ ಸೋಲಾಪುರ್ ಮತ್ತು ಅಕ್ಕಲಕೋಟೆ ಪಟ್ಟಣಗಳಿಗೆ ಅವಶ್ಯಕತೆ ಇರುವ ಕುಡಿಯುವ ನೀರನ್ನು ಕೆನಾಲ್ ಮುಖಾಂತರ ಕೊಡುವ ಸಾಧ್ಯತೆಗಳಿವೆ. ಕಳೆದ ವರ್ಷ ನೀರನ್ನು ಕೊಟ್ಟಿರುವ ಉದಾಹರಣೆ ಇದೆ. ಪ್ರತಿ ವರ್ಷ ಮಹಾರಾಷ್ಟ್ರಕ್ಕೆ ಹೋಗಿ, ಇಲ್ಲಿನ ಮತ್ತು ಅಲ್ಲಿನ ಜಲಸಂಪನ್ಮೂಲ ಸಚಿವರು ಹಾಗೂ ಇಲ್ಲಿನ ಮತ್ತು ಅಲ್ಲಿನ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳ ಜೊತೆ ಸಭೆಯನ್ನು ನಿಗದಿ ಮಾಡಿ ಮಾತನಾಡುವ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊತ್ತಿಗೆ ಎರಡು ತಿಂಗಳು ಕಳೆದ ಹೋಗುತ್ತದೆ. ಆ ಎರಡು ತಿಂಗಳು ಬೇಸಿಗೆಯಲ್ಲೇ ಕಳೆದು ಹೋದಂತಾಗುತ್ತದೆ. ಹಾಗೆ ಆಗಬಾರದು. ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಶಾಶ್ವತವಾಗಿ ಪ್ರತಿ ವರ್ಷ ನೀರು ಕೊಡುವ ವ್ಯವಸ್ಥೆಯಾದರೆ ಆ ಭಾಗದ ಜನರಿಗೆ ಹೆಚ್ಚು ಅನುಕೂಲವಾಗುತ್ತದೆ ಎಂದು ನಾನು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಳಗಾವಿ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಅಂದಾಜು 65 multi-village scheme ಗಳಿವೆ. ಶಾಶ್ವತ ಕುಡಿಯುವ ನೀರಿನ ಯೋಜನೆಗಳು, ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಲ್ಲಿ ಸುಮಾರು 200 ಗ್ರಾಮಗಳು ಬರುತ್ತವೆ. ಈ ಗ್ರಾಮಗಳಿಗೆ ಕುಡಿಯುವ ನೀರಿನ್ನು ಟ್ಯಾಂಕರ್‌ಗಳ ಮುಖಾಂತರ ನೀರನ್ನು ಒದಗಿಸುತ್ತಿರುವುದರಿಂದ ಜನ-ಜಾನುವಾರುಗಳಿಗೆ ಸಾಕಷ್ಟು ತೊಂದರೆ ಆಗುತ್ತದೆ. ಆದುದರಿಂದ ಒಂದು ಒಡಂಬಡಿಕೆ ಮಾಡಿಕೊಂಡರೆ ಶಾಶ್ವತವಾದ ಪರಿಹಾರ ಕಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಪ್ರತಿ ವರ್ಷ ಈ ಸಮಸ್ಯೆ ಬರುವುದಿಲ್ಲ ಎನ್ನುವ ಮಾತನ್ನು ಸರ್ಕಾರ ತನ್ನ ಉತ್ತರದಲ್ಲಿ ಹೇಳಿದೆ. ಆದರೆ, ನಾನು ಇದೇ ಭಾಗದವನಾಗಿರುವುದರಿಂದ, ಪ್ರತಿ ವರ್ಷ ಇಂತಹ ಸಮಸ್ಯೆ ಬರುತ್ತಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾರ್ಚ್, ಏಪ್ರಿಲ್ ತಿಂಗಳಿನಲ್ಲಿ ನೀರು ಇರುವುದಿಲ್ಲ. ಪ್ರತಿ ವರ್ಷ ಈ ರೀತಿ ಆಗುತ್ತಿರುವುದರಿಂದ ಒಡಂಬಡಿಕೆಯ ಮುಖಾಂತರ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ನಮ್ಮ ಡ್ಯಾಮ್‌ಗಳ ನಿರ್ವಹಣೆಯಲ್ಲಿರುವ ಅವ್ಯವಸ್ಥೆಯ ಕಾರಣದಿಂದ ಸಾಕಷ್ಟು ನೀರು ನಾರಾಯಣಪುರ ಕೆನಾಲ್ ಮುಖಾಂತರ ಹೋಗಿಬಿಡುತ್ತದೆ. ಆ 3-4 ಟಿಎಂಸಿ ನೀರನ್ನು ಸಂಗ್ರಹಣೆ ಮಾಡಿಕೊಂಡು, ಸೋಲಾಪುರ್ ಭಾಗಕ್ಕೆ ನೀರನ್ನು ಕೊಟ್ಟು ನಮಗೆ ಅವಶ್ಯಕತೆ ಇರುವ ನೀರನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಮತ್ತು ಮಾನ್ಯ ಕವಟಗಿಮಠ ಅವರಿಗೆ ಎಲ್ಲಾ ವಿಷಯಗಳು ಗೊತ್ತಿದೆ. ಅವರಿಗೆ ಗೊತ್ತಿಲ್ಲದೇ ಇರುವುದು ಯಾವುದೂ ಇಲ್ಲ. ಮಹಾರಾಷ್ಟ್ರದವರು ನಮಗೆ 1 ಟಿಎಂಸಿ ನೀರು ಕೊಡುತ್ತಾರೆ. ನಮ್ಮದು ಅವರದು ಹೆಚ್ಚು-ಕಡಿಮೆ ಅಂತರರಾಜ್ಯ ಗಡಿಯ ಹತ್ತಿರವೇ ನೀರು ಕೊಡುವುದರಿಂದ ಪೂರ್ತಿ ನೀರು ಸಿಕ್ಕಿಬಿಡುತ್ತದೆ. ಆದರೆ ನಾವು ಅವರಿಗೆ ಅದೇ ಪ್ರಮಾಣದಲ್ಲಿ ಕೊಡಬೇಕಾದರೆ 4 ಪಟ್ಟು ಹೆಚ್ಚು ನೀರು ಬಿಡಬೇಕಾಗುತ್ತದೆ. 4 ಟಿಎಂಸಿ ನೀರನ್ನು ನಾವು ಬಿಡುಗಡೆ ಮಾಡಿದಾಗ ಅವರಿಗೆ ತಲುಪುವಾಗ ಅವರ measuring station ನಲ್ಲಿ 1.2 ಟಿಎಂಸಿಯಷ್ಟು ನೀರು ತಲುಪಿರುತ್ತದೆ. ಇದು ಸಮಸ್ಯೆಯಾಗುತ್ತದೆ. ಈ ಕುರಿತು ನಮ್ಮ ಅಧಿಕಾರಿಗಳು ಏನು ಹೇಳುತ್ತಿದ್ದಾರೋ ಆ ವಿಚಾರವನ್ನು ನಮ್ಮ ಸಚಿವರ ಗಮನಕ್ಕೆ ತರುತ್ತೇನೆ. ಮಳೆಗಾಲದ ಅವಧಿಯಲ್ಲಿ ನೀರನ್ನು ಬಿಡುಗಡೆ ಮಾಡುವುದಕ್ಕೆ ನಮಗೆ ಸಮಸ್ಯೆ ಇಲ್ಲ. ಆದರೆ ವರ್ಷದ ಕೊನೆಯ ಭಾಗದಲ್ಲಿ, ಮಾರ್ಚ್‌ನಲ್ಲಿ ಬಿಡುಗಡೆ ಮಾಡಬೇಕಾದರೆ ಸಮಸ್ಯೆ ಬರುತ್ತದೆ. ಅಷ್ಟೊತ್ತಿಗೆ ನಾಲೆಗಳು ಖಾಲಿ ಆಗಿರುತ್ತವೆ. ಇದರ ಸಂಬಂಧ ನಾವು ನೀರು ಬಿಟ್ಟಾಗ ನಾಲೆಗಳು ಭರ್ತಿಯಾಗಿ ನಂತರ ನೀರು ಅಲ್ಲಿಂದ ಮುಂದೆ ಹೋಗಬೇಕಾಗುತ್ತದೆ. ನಾಲೆಗಳು ಭರ್ತಿಯಾದರೆ ಆ ನಾಲೆಗಳಿಂದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀರು ಎತ್ತುವವರು ಇರುತ್ತಾರೆ ಎನ್ನುವುದು ನಿಮಗೆ ಗೊತ್ತಿದೆ. ನಮ್ಮ ರಾಜ್ಯದಲ್ಲಿ ಮತ್ತು ಅವರ ರಾಜ್ಯದಲ್ಲಿ ನಾಲೆಗಳಿಂದ ನೀರು ಎತ್ತಿ ಕೊನೆಗೆ ಅವರಿಗೆ ತಲುಪುವುದು 1.2 ಟಿಎಂಸಿ ನೀರು ಮಾತ್ರ. ಆದುದರಿಂದ ನಮ್ಮ ಅಧಿಕಾರಿಗಳು, ಮಳೆಗಾಲದಲ್ಲಿ ಅವರಿಗೆ ನೀರು ಕೊಡುವುದಕ್ಕೆ ಅಡ್ಡಿ ಇಲ್ಲ ಎಂದು ಹೇಳುತ್ತಾರೆ. ನಾವು ಆಗ ಹರಿಸುವ ನೀರನ್ನು ಅವರು ಶೇಖರಣೆ ಮಾಡಿ ಇಟ್ಟುಕೊಳ್ಳಬೇಕಾಗುತ್ತದೆ. ಇದರ ಆಧಾರದ ಮೇಲೆ ಒಂದು ಚರ್ಚೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಈ ವಿಷಯವನ್ನು ನಾನು ಮನ್ಯ ಸಚಿವರ ಗಮನಕ್ಕೆ ತರುತ್ತೇನೆ. ಈ ನಿಟ್ಟಿನಲ್ಲಿ ಒಂದು ಪ್ರಯತ್ನ ಮಾಡಬಹುದು. ಈ ಪ್ರಯತ್ನಕ್ಕೆ ಸ್ಪಂದನೆ ಸಿಕ್ಕಿದರೆ ನಮಗೆ ಶಾಶ್ವತ ಪರಿಹಾರ ಸಿಕ್ಕಿದಂತಾಗುತ್ತದೆ.

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:– ಒಂದು ನಿಯೋಗ ಮಾಡಿ, ಅದರಲ್ಲಿ ತಾವು ಮತ್ತು ತಮ್ಮ ನೀರಾವರಿ ಸಚಿವರು, ನಮ್ಮ ಅಧಿಕಾರಿಗಳು ಹಾಗೂ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಯ ಜನಪ್ರತಿನಿಧಿಗಳು, ಮಹಾರಾಷ್ಟ್ರದ ಮುಖ್ಯಮಂತ್ರಿಗಳು, ನೀರಾವರಿ ಸಚಿವರು ಮತ್ತು ಅಲ್ಲಿನ ಅಧಿಕಾರಿಗಳ ಜೊತೆ ಒಂದು ಸಭೆಯನ್ನು ಮಾಡಬೇಕು. ಮಳೆಗಾಲದಲ್ಲಿ ನೀರನ್ನು ಕೊಡುವ ವಿಚಾರ ಹೇಳಿದಿರಿ. ಅನೇಕ ಲಕ್ಷ ಕ್ಯೂಸೆಕ್ಸ್ ನೀರು ಮಳೆಗಾಲದಲ್ಲಿ ಹರಿದು ಹೋಗುತ್ತದೆ. ಆದರೆ ಮಳೆಗಾಲದಲ್ಲಿ ನೀರು ಕೇಳುವ ಸಂದರ್ಭ ಅವರಿಗೆ ಇರುವುದಿಲ್ಲ. Technically we can discuss this issue with the Maharashtra Government. ಮೊದಲು ಈ ಕುರಿತು ಸಭೆ ಮಾಡಬೇಕಿದೆ. ಕೇವಲ ಸಭೆ ಮಾಡುತ್ತೇವೆ ಎಂದು ಹೇಳಿದರೆ ಸಾಲದು, ಕಾಲಮಿತಿಯಲ್ಲಿ ಸಭೆ ನಡೆಸಬೇಕು ಎನ್ನುವುದು ನಮ್ಮ ಒತ್ತಾಯ. ಬೇಸಿಗೆ ಬಂದಾಗ ಮಹಾರಾಷ್ಟ್ರದ ಮುಂದೆ ಹೋಗಿ ನಿಲ್ಲುವಂತಹ ಪರಿಸ್ಥಿತಿ ಬರಬಾರದು. ಇದಕ್ಕೆ ಶಾಶ್ವತವಾದ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಾನ್ಯ ಸಚಿವರು ತಮ್ಮ ಇಚ್ಛಾಶಕ್ತಿಯನ್ನು ತೋರಬೇಕು ಎನ್ನುವ ಒತ್ತಾಯ ಮಾಡಬಯಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಗಳೆ, ಪರಿಹಾರ ಕಂಡುಕೊಳ್ಳುವ ದೃಷ್ಟಿಯಿಂದ ಸಭೆ ಮಾಡಬೇಕು ಎನ್ನುವ ಒಳ್ಳೆಯ ಸಲಹೆಯನ್ನು ಮಾನ್ಯ ಸದಸ್ಯರು ಕೊಟ್ಟರು. ಆದರೆ ಇಲ್ಲೇ ನಾವು ಚರ್ಚೆ ಮಾಡಿಕೊಂಡು, ಇಲ್ಲೇ ಪರಿಹಾರ ಹುಡುಕುವುದಕ್ಕೆ ಆಗುವುದಿಲ್ಲ. ಬಾಗಲಕೋಟೆ, ಬಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳ ಪ್ರತಿನಿಧಿಗಳ ಸಭೆಯನ್ನು ಕರೆಯುವಂತೆ ನಾನು ಮಾನ್ಯ ನೀರಾವರಿ ಸಚಿವರಿಗೆ ಮನವರಿಕೆ ಮಾಡಿಕೊಡುತ್ತೇನೆ. ನಮ್ಮ ಅಧಿಕಾರಿಗಳ ಮತ್ತು ನಮ್ಮ ಜನಪ್ರತಿನಿಧಿಗಳ ಜೊತೆ ಮೊದಲು ಚರ್ಚೆ ಆಗಲಿ. ಅವರ ಸಲಹೆಗಳನ್ನು ತೆಗೆದುಕೊಂಡು ಮುಂದಿನ ತೀರ್ಮಾನ ತೆಗೆದುಕೊಳ್ಳಬಹುದು. ಮೊದಲು ಸಭೆಯನ್ನು ಮಾಡಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(358)11–12–2018(5.10)ಡಿಎಸ್–ಆರ್‌ಎನ್

# 10. ನಿಯಮ 330 ರ ಅಡಿಯಲ್ಲಿ ಚರ್ಚೆ

ಆ) ವಿಷಯ: ರಾಜ್ಯ ಸರ್ಕಾರಿ ನೌಕರರು ಕರ್ನಾಟಕ ಸರ್ಕಾರ ವಿಮಾ ಇಲಾಖೆಗೆ ಕಟ್ಟುತ್ತಿರುವ ವಂತಿಗೆಯ ಮಾಹಿತಿಯು ಗಣಕೀಕೃತಗೊಂಡಿಲ್ಲದ ಕಾರಣ ಸರಿಯಾದ ಸಮಯಕ್ಕೆ ವಿಮಾ ಬಾಂಡ್ ಪಡೆಯುವಲ್ಲಿ 5 ರಿಂದ 6 ತಿಂಗಳ ಕಾಲ ವಿಳಂಬವಾಗುತ್ತಿರುವ ಕುರಿತು.

-----

**ಡಾ:ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ ವಿಧಾನಸೌಧದ ಪಕ್ಕದಲ್ಲಿಯೇ ಇದ್ದರೂ ಸಹ, ಸರ್ಕಾರಿ ನೌಕರರು ಈ ಇಲಾಖೆಯ ಜೊತೆಗೆ ನೂರಾರು ಕೋಟಿ ರೂಪಾಯಿಗಳ ವ್ಯವಹಾರವನ್ನು ಮಾಡುತ್ತಿದ್ದರೂ ಸಹ ಇಲ್ಲಿಯವರೆವಿಗೂ ಗಣಕೀಕರಣವಾಗಿರುವುದಿಲ್ಲ. ನೌಕರರು ಸರ್ಕಾರಿ ವಿಮೆಯಲ್ಲಿ ತೊಡಗಿಸಿದ ಹಣವನ್ನು ಸಾಲದ ರೂಪದಲ್ಲಿ ಪಡೆಯಬೇಕಾದರೆ, ಅರ್ಜಿಯನ್ನು ಸಲ್ಲಿಸಿ ಸುಮಾರು ಹತ್ತಾರು ತಿಂಗಳುಗಳ ಕಾಲ ಕಾಯಬೇಕಾದ ವ್ಯವಸ್ಥೆಯನ್ನು ನಾವು ಇವತ್ತಿನ ದಿವಸ ನೋಡುತ್ತಿದ್ದೇವೆ. ಬೆಂಗಳೂರು 'ಸಿಲಿಕಾನ್ ಸಿಟಿ' ಎಂದು ಖ್ಯಾತಿಯನ್ನು ಹೊಂದಿದೆ. ಸುಮಾರು 75,000 ದಿಂದ 80,000 ಕೋಟಿ ರೂ. ಬೆಲೆ ಬಾಳುವ ಐಟಿ ಯನ್ನು ರಫ್ತು ಮಾಡುತ್ತಿದ್ದೇವೆ. ಆದರೆ ಎಲ್ಲಾ ಇಲಾಖೆಗಳಲ್ಲಿ ವಿಶೇಷವಾಗಿ ಇವತ್ತು ಗ್ರಾಮ ಪಂಚಾಯ್ತಿಗಳಲ್ಲೂ ಸಹ, ಕೃಷ್ಣಬೈರೇಗೌಡರ ಇಲಾಖೆಯಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿಯೂ ಸಹ ಗಣಕೀಕರಣ ಮಾಡಬೇಕೆನ್ನುವ ವ್ಯವಸ್ಥೆ ಇರಬೇಕಾದರೆ, ವಿಧಾನ ಸೌಧದ ಕೂಗಳತೆಯ ದೂರದಲ್ಲಿರುವ ಕೆಜಿಐಡಿ ಇಲಾಖೆಯನ್ನು ಇದುವರೆವಿಗೂ ಏಕೆ ಗಣಕೀಕರಣ ಮಾಡಿಲ್ಲ ಎನ್ನುವುದು ನನ್ನ ಒಂದು ಪ್ರಶ್ನೆ, ಇದಕ್ಕೆ ಸರ್ಕಾರ ಉತ್ತರವನ್ನು ಕೊಡಬೇಕೆಂದು ಕೇಳಬಯಸುತ್ತೇನೆ.

**ಶ್ರೀ ಕೃಷ್ಣಬೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೆ,

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಮಾನ್ಯ ಸಭಾಪತಿಯವರೆ, ಕೆಜಿಐಡಿ ಇಲಾಖೆಯನ್ನು ಗಣಕೀಕರಣ ಮಾಡದೇ ಇರುವುದು ನಿಜ ಹಾಗೂ ಗಣಕೀಕರಣದ ಪ್ರಸ್ತಾವನೆ ಚರ್ಚೆಗಳಲ್ಲಿದೆ. ಗಣಕೀಕರಣ ನಿಧಾನ ಆಗಲಿಕ್ಕೆ ಒಂದು ಕಾರಣವೇನೆಂದರೆ, ಅದು ತಮಗೂ ಸಹ ಗೊತ್ತಿರಬಹುದು. ಸರ್ಕಾರ ಇಡೀ ತನ್ನ ಐಟಿ ಸಿಸ್ಟಂ, ವಿಶೇಷವಾಗಿ ಹಣಕಾಸಿನ ಐಟಿ ಸಿಸ್ಟಂ ಅನ್ನು ಖಜಾನೆ–2 (ಕೆ–2) ಗೆ ಇತ್ತೀಚೆಗೆ ಶಿಫ್ಟ್ ಮಾಡಿದೆ. ಈ ರೀತಿ ಇರುವುದರಿಂದ ಕೆಜಿಐಡಿ ಇಲಾಖೆಯನ್ನು ಸಹ ಗಣಕೀಕರಣ ಮಾಡಬೇಕೆಂದರೆ, ಅದು ಕೆ–2 ಜೊತೆಗೆ compatible ಆಗಬೇಕು ಮತ್ತು ಹೆಚ್‌ಆರ್‌ಎಂಎಸ್ ಜೊತೆಗೆ ಮೂರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ synchronize ಆಗಬೇಕು. ಕೆಜಿಐಡಿ, ಹೆಚ್‌ಆರ್‌ಎಂಎಸ್ ಮತ್ತು ಕೆ–2 ಮೂರು synchronize ಆಗಬೇಕು. ಈ ಇಲಾಖೆಯನ್ನು ಗಣಕೀಕರಣ ಮಾಡುವುದಿಲ್ಲ ಎಂದಲ್ಲ, ನಿಧಾನವಾಗುವುದಕ್ಕೆ ಏನು ಕಾರಣ ಎನ್ನುವುದನ್ನು ಹೇಳುತ್ತಿದ್ದೇನೆ. ಈ ಇಲಾಖೆ digitization ಆಗಲೇಬೇಕು. ಆದಷ್ಟು ತ್ವರಿತವಾಗಿ ಇದನ್ನು digitize ಮಾಡುವುದಕ್ಕೆ ಆಗಿರುವ ವಿಳಂಬವನ್ನು ಮತ್ತೆ ವಿಳಂಬವಾಗದ ಹಾಗೆ ಕೆ–2 ಮತ್ತು ಹೆಚ್‌ಆರ್‌ಎಂಎಸ್ ಅನ್ನು integrated ಆಗಿ ಮಾಡುತ್ತೇವೆ. ತಾವು digitize ಆಗದೇ ಇರುವುದರಿಂದ ನೌಕರರಿಗೆ ತೊಂದರೆಯಾಗುತ್ತಿದೆ ಎಂದು ಹೇಳಿದಿರಿ, ನಿಜ. ಉತ್ತರದಲ್ಲಿ ಈಗಾಗಲೇ ನಾವು ಹೇಳಿದ್ದೇವೆ. ನಾವು 6ನೇ ವೇತನ ಆಯೋಗದ ವರದಿಯನ್ನು ಒಪ್ಪಿಕೊಂಡ ನಂತರ ಇದರ ಅಡಿಯಲ್ಲಿ ನಮಗೆ insurance claims ಏನಾಗಿದೆ ಎಂದರೆ, ತಾವೇ ನೋಡಿದ ಹಾಗೆ twenty times rise ಆಗಿದೆ. ಅದರ ಬಗ್ಗೆ ನಾವು ಹೋಲಿಕೆಯನ್ನು ಸಹ ವಿವರಗಳಲ್ಲಿ ಕೊಟ್ಟಿದ್ದೇವೆ. ಕಳೆದ ವರ್ಷದ 2017ರ ಸೆಪ್ಟೆಂಬರ್ ತಿಂಗಳಿನಲ್ಲಿ 2,670 ಅರ್ಜಿಗಳು ಬಂದಿದ್ದವು. ಈ ವರ್ಷ ಆಗಸ್ಟ್ ತಿಂಗಳಿನಲ್ಲಿ 47,991 ಅರ್ಜಿಗಳು ಬಂದಿವೆ. ಸುಮಾರು 25 ಪಟ್ಟು ಹೆಚ್ಚಿನ ಅರ್ಜಿಗಳು ಬಂದಿರುವುದರಿಂದ ಇವುಗಳನ್ನು ವಿಲೇ ಮಾಡುವುದಕ್ಕೆ ತಡವಾಗುತ್ತಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ digitize ಮಾಡಿದರೆ ಅರ್ಜಿಗಳನ್ನು ಬೇಗ ವಿಲೇ ಮಾಡಬಹುದು, ಇದರಲ್ಲಿ ಅನುಮಾನವೇ ಇಲ್ಲ. ಆದರೆ ಈ pendancy ಇರುವುದಕ್ಕೆ ಕಾರಣ adoption of 6th Pay Commission. ಹಾಗೆಂದು ಇದನ್ನು digitize ಮಾಡಬಾರದೆಂದು ಅಲ್ಲ. ವಿಳಂಬ ಆಗಿರುವುದು ನಿಜ. ಆದಷ್ಟು ತ್ವರಿತವಾಗಿ ನಾವು digitize ಮಾಡುತ್ತೇವೆ.

**ಡಾ: ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, 6ನೇ ವೇತನ ಆಯೋಗದ ವರದಿ ಅನುಷ್ಠಾನವಾದ ನಂತರ ಕ್ಲೇಮುಗಳು ಹೆಚ್ಚಾಗಿವೆ, ಇದನ್ನು ಅನುಷ್ಠಾನ ಮಾಡುವುದಕ್ಕೆ ನಾವು ಸ್ವಲ್ಪ ಸಮಯವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ನನಗೆ ಇದುವರೆವಿಗೂ ಒಂದು ವಿಚಾರ ಅರ್ಥವಾಗಲಿಲ್ಲ. ಹೆಚ್‌ಆರ್‌ಎಂಎಸ್ ಬಂದು ಎಷ್ಟೋ ವರ್ಷಗಳಾಗಿವೆ ಹಾಗೂ ಕೆ–2 ಇತ್ತೀಚೆಗೆ ಬಂದಿದೆ. ಹೆಚ್‌ಆರ್‌ಎಂಎಸ್ ಬಂದು ಬಹಳ ವರ್ಷಗಳಾದರೂ ಸಹ ಇದೊಂದೇ ಇಲಾಖೆ ಗಣಕೀಕರಣಗೊಂಡಿಲ್ಲ. ಇಡೀ ಆರ್ಥಿಕ ಇಲಾಖೆ ಗಣಕೀಕರಣಗೊಂಡಿದೆ. ಇದೊಂದೆ ಇಲಾಖೆ ಏಕೆ ಬಾಕಿ ಉಳಿದಿದೆ? ಇದು ವಿನಾಕಾರಣ ನೌಕರರಿಗೆ ಭ್ರಷ್ಟಾಚಾರ ಮಾಡುವುದಕ್ಕೆ ಮತ್ತೊಂದು ವೇದಿಕೆಯಾಗಿ ಮಾರ್ಪಟ್ಟಿದೆ. ಅದಕೋಸ್ಕರ ನಮಗೆ ಆತಂಕವಾಗುತ್ತಿದೆ. ಖಜಾನೆ–2 ಬಹಳ ಗೊಂದಲವಾಗಿರುವುದು ನಮಗೆಲ್ಲಾ ಗೊತ್ತಿದೆ. ಮೊನ್ನೆ ಖಜಾನೆ–2 ಅಕೌಂಟ್‌ನಲ್ಲಿ RMSA (Rashtriya Madyamik Shiksha Abhiyan) & SSA (Sarva Shiksha Abhiyan) Teachers ಸಂಬಳ ಮಾಡಬೇಕಾದರೆ ಡೌನ್‌ಲೋಡ್ ಆಗಲಿಲ್ಲ. ಎಂಎಲ್‌ಸಿ ಅನುದಾನ ಬಿಡುಗಡೆ ಮಾಡಬೇಕಾದರೂ 7 ಜನರಿಗೆ ಖಜಾನೆ–2 ಅಕೌಂಟ್‌ನಲ್ಲಿ ಒಂದೂವರೆ ತಿಂಗಳು ತೆಗೆದುಕೊಂಡಿದ್ದಾರೆ. ಆದ್ದರಿಂದ ನನ್ನ ಮನವಿ ಏನೆಂದರೆ, ಒಂದು ಕಾಲಮಿತಿಯೊಳಗೆ ಇಷ್ಟು ತಿಂಗಳೊಳಗಾಗಿ ಈ ಕೆಜಿಐಡಿ ಯನ್ನು ಗಣಕೀಕರಣಗೊಳಿಸುತ್ತೇವೆನ್ನುವ ಆಶ್ವಾಸನೆಯನ್ನಾದರೂ ಕೊಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೃಷ್ಣಬೈರೇಗೌಡ:–** ಮಾನ್ಯ ಸಭಾಪತಿಯವರೆ, ಕೆ–2 ನಲ್ಲಿ ಸಮಸ್ಯೆ ಬಂದಿರುವುದು ನಿಜ. ನಾನಾ ಹಂತಗಳಲ್ಲಿ ಸಮಸ್ಯೆಗಳಿತ್ತು. ಅದನ್ನು ಪರಿಹಾರ ಮಾಡಿದ್ದೇವೆ. ಹೊಸದೊಂದು ಪದ್ಧತಿಯನ್ನು ತಂದಾಗ ಸಮಸ್ಯೆ ಉದ್ಭವಿಸುವುದು ಸಹಜ. ಈಗ ಅದನ್ನು ಬಗೆಹರಿಸುತ್ತಿದ್ದೇವೆ. ಕೆಜಿಐಡಿ ಇಲಾಖೆಯಲ್ಲಿ ನ್ಯೂನತೆ ಇದೆ ಎಂದು ಮಾನ್ಯ ಸದಸ್ಯರು ಏನು ತಮ್ಮ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ, ಅದನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ. ಇಡೀ ಹಣಕಾಸು ಇಲಾಖೆ ಗಣಕೀಕರಣಗೊಂಡಿದೆ. ಇದೊಂದು ಇಲಾಖೆ ಮಾತ್ರ ಗಣಕೀಕರಣವಾಗದೇ ಉಳಿದಿದೆ. It is a glaring lacuna ನಮ್ಮ ಎಸಿಎಸ್ ರವರು ಇಲ್ಲಿಯೇ ಇದ್ದಾರೆ. ಮಾನ್ಯ ಸದಸ್ಯರು ಹೇಳಿದ್ದನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ಏನು lacuna ಇದೆ ಅದನ್ನು ತಕ್ಷಣವೇ ಸರಿಪಡಿಸುತ್ತೇವೆ. ಇದರ ಬಗ್ಗೆ ಮುಂದೆ ಯಾವುದೇ ಅಸಡ್ಡೆ ಆಗದ ಹಾಗೆ, ವಿಳಂಬವಾಗದ ಹಾಗೆ ಇದನ್ನು ಅನುಷ್ಠಾನ ಮಾಡುತ್ತೇವೆ. ಮಾನ್ಯ ಸದಸ್ಯರು ಒತ್ತಾಯ ಮಾಡಿದ್ದಕ್ಕೆ ಇನ್ನೊಂದಷ್ಟು ಜವಾಬ್ದಾರಿಯನ್ನು ತೆಗೆದುಕೊಂಡು ಆದಷ್ಟು ತ್ವರಿತವಾಗಿ ಮಾಡುತ್ತೇವೆ.

ಇ) ವಿಷಯ: ಬೆಂಗಳೂರು ನಗರದ ಮಾರತ್‌ಹಳ್ಳಿ, ಚಕ್ಕಸಂದ್ರ, ಸರ್ಜಾಪುರ, ಬೆಳಂದೂರು, ದೇವರಬೀಸನ ಹಳ್ಳಿ, ಕಾಡುಬೀಸನ ಹಳ್ಳಿ ಮುಂತಾದ ಕಡೆಗಳಲ್ಲಿ ಅಕ್ರಮಗಾಗಿ ಪ್ರವೇಶಿಸಿ ಬಾಂಗ್ಲಾದೇಶಿಯರ ಕ್ಯಾಂಪ್‌ಗಳಲ್ಲಿ ನೆಲೆಸಿರುವ ರೋಹಿಂಗ್ಯರು ಹಲ್ಲೆ, ದರೋಡೆ, ಕಳ್ಳತನ ಮುಂತಾದ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಆತಂಕಕ್ಕೀಡಾಗಿರುವ ಬಗ್ಗೆ.

-----

**ಶ್ರೀ ಎನ್.ರವಿಕುಮಾರ್ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದಲ್ಲಿ ಅಕ್ರಮ ವಲಸಿಗರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಗೃಹ ಮಂತ್ರಿಗಳು ಸದನದಲ್ಲಿದ್ದಾರೆ. ಈ ವಿಷಯ ಅವರ ಗಮನದಲ್ಲಿದೆ ಎಂದು ಭಾವಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಬೆಂಗಳೂರು, ದಕ್ಷಿಣ ಕನ್ನಡ, ಉಡುಪಿ, ಕೊಡಗು ಮತ್ತು ಇನ್ನೂ ಅನೇಕ ಕಡೆಗಳಲ್ಲಿ ಈ ಸಂಖ್ಯೆ ವಿಪರೀತವಾಗಿ ಹೆಚ್ಚಾಗುತ್ತಿದೆ. ಇದರಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ಕನ್ನಡಿಗರಿಗೆ ಸಿಗತಕ್ಕಂಥ ಉದ್ಯೋಗದ ಅವಕಾಶಗಳು ಕಡಿಮೆಯಾಗುತ್ತಿದೆ ಮತ್ತು ಒಂದು ರೀತಿಯ ಅಸುರಕ್ಷತೆಯ ವಾತಾವರಣ ಬೆಂಗಳೂರಿನಲ್ಲಿ ಮತ್ತು ಬೇರೆ ಬೇರೆ ಕಡೆಗಳಲ್ಲಿ ನಿರ್ಮಾಣವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಾನು ರಾಮನಗರದಲ್ಲಿ ಅಸುರಕ್ಷತೆಗೆ ಕಾರಣವಾಗಿರತಕ್ಕಂಥ, ಸುರಕ್ಷತೆಗೆ ಸವಾಲಾಗಿರತಕ್ಕಂಥ ವ್ಯಕ್ತಿಯನ್ನು ಬಂಧಿಸಿರುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಆಗಸ್ಟ್ ತಿಂಗಳಿನಲ್ಲಿ ರಾಮನಗರದಲ್ಲಿ ಜಹೀದ್ ಉಲ್ ಇಸ್ಲಾಂ ಅಲಿಯಾಸ್ ಮುನೀರ್ ಶೇಖ್ ಎಂಬುವವರು ಬಾಂಗ್ಲಾ ದೇಶದವರು ಎನ್ನುವುದು ಗೊತ್ತಾಗಿ ಅವರನ್ನು ಬಂಧಿಸಲಾಗಿದೆ. ಅದೇ ರೀತಿ ಆಗಸ್ಟ್ 7ನೇ ತಾರೀಖಿನಂದು ಆದಿಲ್ ಎಂಬುವವರನ್ನು ಬೆಂಗಳೂರಿನಲ್ಲಿ ಪೊಲೀಸರು ಬಂಧಿಸಿದ್ದಾರೆ. ಇವರು ರೊಹಿಂಗ್ಯರು ಎನ್ನುವುದು ಪತ್ರಿಕೆಗಳ ಮೂಲಕ ನಮ್ಮ ಗಮನಕ್ಕೆ ಬಂದಿದೆ. ಈ ರೀತಿ ಅಕ್ರಮವಾಗಿ ಬರತಕ್ಕಂಥವರ ಸಂಖ್ಯೆಯಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಳ್ಳೆಯವರು ಮತ್ತು ಕೆಟ್ಟವರು ಸಹ ಬರಬಹುದು. ಆದರೆ ಇವರನ್ನು ಡೀಲ್ ಮಾಡತಕ್ಕಂಥಾದ್ದು, ಇವರ ಜೊತೆಯಲ್ಲಿ ವ್ಯವಹರಿಸತಕ್ಕಂಥಾದ್ದು ಬಹಳ ಅಪಾಯಕಾರಿ ಸಂಗತಿಯಾಗಿ ಪರಿಣಮಿಸಿದೆ. ಬೆಂಗಳೂರಿನಲ್ಲಿ ಅನೇಕ ಕಡೆಗಳಲ್ಲಿ ಕಟ್ಟಡ ಕಾಮಗಾರಿ ಮತ್ತು ಬೇರೆ ಬೇರೆ ಕಡೆಗಳಲ್ಲಿ ಉದ್ಯೋಗಗಳನ್ನು ಮಾಡುತ್ತಿದಾರೆ. ಇವರುಗಳು ಡ್ರೈವರ್, ಸೇಲ್ಸ್‌ಮೆನ್, ಗಾರ್ಡ್ ಆಗಿ ಒಳ್ಳೊಳ್ಳೆಯ ಕೇಂದ್ರಗಳಲ್ಲಿ ಉದ್ಯೋಗವನ್ನು ಮಾಡುತ್ತಿದ್ದಾರೆ. ಸ್ವಲ್ಪ ಆ ಸ್ಥಳದ ಪರಿಚಯವಾದ ನಂತರ, ಮನೆಯ ಮಾಲೀಕರ ಪರಿಚಯವಾದ ನಂತರ ಏನೇನು ಅಪಾಯ ಸಂಭವಿಸಬಹುದು ಎನ್ನುವುದರ ಬಗ್ಗೆಯೂ ಸಹ ನಾವು ಬಹಳ ಗಂಭೀರವಾಗಿ ಆಲೋಚನೆಯನ್ನು ಮಾಡಬೇಕಾಗಿದೆ. ಅದೇ ತರಹದಲ್ಲಿ ರಾಜಧಾನಿಯನ್ನು ನಾವು ಬಹಳ ಗಂಭೀರವಾಗಿ ತೆಗೆದುಕೊಂಡು ಸುರಕ್ಷತೆಯ ಹಿನ್ನಲೆಯಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಅಲ್ಲಿ ಅತ್ಯಾಚಾರ ನಡೆಯುತ್ತಿರತಕ್ಕಂಥದ್ದು, ಹೆಣ್ಣುಮಕ್ಕಳನ್ನು ಚುಡಾಯಿಸುವುದು, ಅಪಹರಣ ಮಾಡುವಂಥದ್ದು, ಮೋಸ, ಕೊಲೆ, ದರೋಡೆ, ವೇಶ್ಯಾವಾಟಿಕೆ, ವ್ಯಭಿಚಾರ, ಕಳ್ಳ ನೋಟಿನ ದಂಧೆ, ಈ ತರಹ ಅನೇಕ ಅಕ್ರಮಗಳಲ್ಲಿ ಭಾಗಿಯಾಗಿರುವಂಥದ್ದು, ಪೊಲೀಸ್ ಸ್ಟೇಷನ್‌ಗಳಲ್ಲಿ ಎಫ್.ಐ.ಆರ್.ಗಳು ಆಗಿರುವಂಥದ್ದು ನಮ್ಮ ಗಮನಕ್ಕೆ ಬಂದಿದೆ.

(359)11–12–2018(5–20)ಬಿಕೆಪಿ–ಆರ್‌ಎನ್

**ಶ್ರೀ ಎನ್.ರವಿ. ಕುಮಾರ್(ಮುಂದು. )**

ಈ ಹಿನ್ನೆಲೆಯಲ್ಲಿ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಈಗಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಹೆಚ್.ಡಿ. ಕುಮಾರಸ್ವಾಮಿಯವರು ಅಂದಿನ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಗಳಿಗೆ 2015 ರಲ್ಲಿ ಒಂದು ಪತ್ರವನ್ನು ಬರೆದಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆನ್ನುವ ವಿಚಾರವನ್ನು ನಾನು ಈ ಸದನದ ಗಮನಕ್ಕೆ ತರಬಯಸುತ್ತೇನೆ. *the government is deliberately mute about number of illegal Bangladeshi immigrants in and around Bangalore claiming there were about forty thousand to fifty thousand of them, now efforts have begun to issue them with identity cards as valid citizens of the land. I dont think the government realized the potential danger...*

ಇವರಿಂದ ಬೆಂಗಳೂರು ನಗರದಲ್ಲಿ ಮತ್ತು ರಾಜ್ಯದಲ್ಲಿ ಏನಾಗುತ್ತದೆ ಎಂದು ಹೇಳಿ ಅಂದು ತಮ್ಮ ಆತಂಕವನ್ನು ವ್ಯಕ್ತ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 40–50 ಸಾವಿರ ಜನರು ಇದ್ದಾರೆ. ಅವರಿಗೆ ಕಾನೂನುಬಾಹಿರವಾಗಿ ಗುರುತಿನ ಚೀಟಿಯನ್ನು ನೀಡತಕ್ಕಂತಹ ಹಂತದಲ್ಲಿ ಅಂದಿನ ಸರ್ಕಾರ ಇತ್ತು ಎಂದು ಹೇಳಿ ಅವರು ಆರೋಪವನ್ನು ಮಾಡಿದ್ದಾರೆ. ಇನ್ನು ಮುಂದೆ ಹೋಗಿ ಅವರು ಏನು ಹೇಳಿದ್ದಾರೆಂದರೆ; *After the attacks in Assam the Bangla immigrants have chosen Bangalore as safe hideout.* ಬಹಳ ಒಳ್ಳೆಯ ಸೆಂಟರ್ ಎಂದು ಬಾಂಗ್ಲಾ ದೇಶಿಯವರು ಆಯ್ಕೆ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

As a result areas like; ಮಾರತ್‌ಹಳ್ಳಿ, ಜಕ್ಕಸಂದ್ರ, ಸರ್ಜಾಪುರ, ಬೆಳ್ಳಂದೂರು, ಇಬ್ಬಲೂರು, ದೇವರ ಬೀಸನಹಳ್ಳಿ, ಕಾಡು ಬೀಸನಹಳ್ಳಿ, ಈ ರೀತಿಯ ಪ್ರದೇಶಗಳಲ್ಲಿ ಟೆಂಟ್‌ಗಳಲ್ಲಿ ಇದ್ದಾರೆಂದು ಅವರು ಹೇಳಿದ್ದಾರೆ. ಇನ್ನು ಮುಂದೆ ಹೋಗಿ *the process has begun to distribute identity cards to all of them, it will be no surprise even if the government provides them with ward reservation of BBMP Polls in future if they even turnout to be deciding factors in several wards.* ಇವತ್ತು ಶ್ರೀಮಾನ್ ಕುಮಾರಸ್ವಾಮಿಯವರೇ ಮುಖ್ಯಮಂತ್ರಿಗಳಾಗಿದ್ದಾರೆ. ಇವತ್ತು ಇವರೇ ಕ್ರಮವನ್ನು ತೆಗೆದುಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವೂ ಸಹ ಒಂದು ಪತ್ರವನ್ನು ರಾಜ್ಯ ಸರ್ಕಾರಕ್ಕೆ ಬರೆದಿದ್ದು, ಆ ಪತ್ರದಲ್ಲಿ ಆ ಪತ್ರದಲ್ಲಿ illegal immigrants ಏನಿದ್ದಾರೆ, ಅವರನ್ನು ಹೊರ ಹಾಕುವುದಕ್ಕೋಸ್ಕರವಾಗಿ ಏತಕ್ಕೆ ನೀವು ಒಂದು ಸೆಂಟರ್ ಅನ್ನು ಓಪನ್ ಮಾಡಬಾರದು ಎಂದು ಹೇಳಿದ್ದಾರೆ. ಆದರೆ, ಇವತ್ತಿನವರೆವಿಗೂ ಕೂಡ ಅಂದಿನ ಮುಖ್ಯಮಂತ್ರಿಗಳು, ಇಂದಿನ ಮುಖ್ಯಮಂತ್ರಿಗಳು ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಹೀಗಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಏನು ಅಕ್ರಮವಾಗಿ ನಮ್ಮ ರಾಜ್ಯಕ್ಕೆ ಬಂದಿರತಕ್ಕಂತಹ ರೊಹಿಂಗ್ಯರು ಇದ್ದಾರೆ ಮತ್ತು ಬಾಂಗ್ಲಾದೇಶಿಯರು ಇದ್ದಾರೆ, ಇವರುಗಳನ್ನು ಹೊರ ಹಾಕುವುದರ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ? ಮತ್ತೆ, ಬೆಂಗಳೂರನ್ನು, ರಾಜ್ಯವನ್ನು ಸುರಕ್ಷಿತವಾಗಿ ಇಡುವುದಕ್ಕೋಸ್ಕರವಾಗಿ ಮತ್ತು ಇಲ್ಲಿ ಏನು ಅಕ್ರಮವಾಗಿ ನಡೆಯುತ್ತಿರುವ ಚಟುವಟಿಕೆಗಳನ್ನು ನಿಯಂತ್ರಿಸುವುದಕ್ಕೋಸ್ಕರವಾಗಿ ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳುತ್ತದೆ ಎನ್ನುವುದರ ಬಗ್ಗೆ ಸರ್ಕಾರ ಉತ್ತರ ನೀಡಬೇಕೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

**ಡಾ|| ಜಿ.ಪರಮೇಶ್ವರ್(ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಯುತ ರವಿಕುಮಾರ್‌ರವರು ಬಹಳ ಒಂದು ಉತ್ತಮವಾದ, ಆತಂಕಕಾರಿಯಾದ ಪ್ರಶ್ನೆಯನ್ನು ಇವತ್ತು ಕೇಳಿದ್ದಾರೆ. ಇದು ಇವತ್ತಿನ ಸಮಸ್ಯೆ ಅಲ್ಲ. ಇದು ತಮಗೆ ಗೊತ್ತಿರುವಂತೆ ಬಹಳ ದಿವಸಗಳಿಂದ ಬಾಂಗ್ಲಾದೇಶಿಗರು, ನಮ್ಮ ದೇಶಕ್ಕೆ ಬರುವಂತಹ ಪ್ರಯತ್ನವನ್ನು ಮಾಡುತ್ತಿರುವುದು, ಇಲ್ಲಿ ಉದ್ಯೋಗಕ್ಕೆ ಬಂದು ಸೇರಿಕೊಳ್ಳುವುದು ಮತ್ತು ಕಾನೂನುಬಾಹಿರವಾದಂತಹ ಅನೇಕ ಕೆಲಸಗಳನ್ನು ಮಾಡತಕ್ಕಂತಹದ್ದು ಅದು ಪಶ್ಚಿಮ ಬಂಗಾಳದಲ್ಲಿರಬಹುದು, ದೆಹಲಿಯಲ್ಲಿರಬಹುದು, ಇನ್ನಿತರ ಬೇರೆ ಬೇರೆ ರಾಜ್ಯಗಳಲಿಯೂ ಸಹಾ ಬಹಳ ದಿವಸಗಳಿಂದ ಈ ರೀತಿಯ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಕೂಡ ಇತ್ತೀಚೆಗೆ ಅಂದರೆ ಕಳೆದ 5-6 ವರ್ಷಗಳಿಂದ ಅತಿ ಹೆಚ್ಚಾಗಿ ಅವರುಗಳು ಬರುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದಂತಹ ಮಾಹಿತಿ ಸತ್ಯ ಇದೆ. ಇದರಲ್ಲಿ ಯಾವುದೂ ಸಹ ಅಸತ್ಯದ ಮಾಹಿತಿ ಇಲ್ಲ.

ಮಾನ್ಯ ಸಭಾಪತಿಯವರೇ, ಬಾಂಗ್ಲಾ ದೇಶದವರು ಕಾನೂನುಬಾಹಿರವಾಗಿ ನಮ್ಮ ರಾಷ್ಟ್ರಕ್ಕೆ ಬರುತ್ತಿರುವ ಬಗ್ಗೆ 2009ನೇ ಸಾಲಿನಲ್ಲಿಯೇ ಕೇಂದ್ರ ಸರ್ಕಾರ ಎಲ್ಲಾ ರಾಜ್ಯ ಸರ್ಕಾರಗಳಿಗೂ ಒಂದು ಪತ್ರ ಬರೆದು, ಅವರುಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗುರುತಿಸಿ, ಅದರ ಬಗ್ಗೆ ಕ್ರಮ ಕೈಗೊಳ್ಳಿ ಎಂದು ತಿಳಿಸಿರುತ್ತಾರೆ. ಆ ಪತ್ರದ ಆಧಾರದ ಮೇಲೆ ನಮ್ಮ ರಾಜ್ಯ ಸರ್ಕಾರ ಅವರನ್ನು ಗುರುತಿಸಿ ಅವರನ್ನು ವಾಪಸ್ಸು ಕಳುಹಿಸುವುದಕ್ಕೆ ಅಥವಾ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ internal security division ಅನ್ನು ಪೊಲೀಸ್ ಇಲಾಖೆಯಿಂದ ಓಪನ್ ಮಾಡಿದೆ. ಅದರ ಜೊತೆಗೆ ಎಲ್ಲಾ ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿಯನ್ನು ಕೊಟ್ಟು, ಈ ಬಗ್ಗೆ ಮಾನಿಟರ್ ಮಾಡಿ ಎಂದು ಹೇಳಿ ಒಂದು special task force ಅನ್ನು ಕೂಡ ಅದಕ್ಕಾಗಿಯೇ ಮಾಡಿರುವಂತಹದ್ದಾಗಿದೆ. ಜೊತೆಗೆ ಅವರಿಗೆ ಒಂದು look-out circular ಎಂದು ಹೇಳಿ, ಅವರು ಸಿಕ್ಕಿದ ತಕ್ಷಣ ಅವರನ್ನು ಹಿಡಿದುಕೊಂಡು ಬಂದು ಅವರನ್ನು ವಾಪಸ್ಸು ಕಳುಹಿಸುವಂತಹ ಕೆಲಸ ಮಾಡುವುದಕ್ಕೆ ಕ್ರಮವನ್ನು ಈಗಾಗಲೇ 2009ನೇ ಇಸವಿಯಿಂದಲೇ ಕ್ರಮವನ್ನು ತೆಗೆದುಕೊಂಡಿದೆ. ಇವರುಗಳು ಯಾರು ಸಿಕ್ಕುತ್ತಾರೆ, ಅವರುಗಳನ್ನು ಗಡಿ ಪಾರು ಮಾಡುವಂತಹದ್ದು, ಅವರನ್ನು ಅವರ ದೇಶಕ್ಕೆ ವಾಪಸ್ಸು ಕಳುಹಿಸುವಂತಹ ಕೆಲಸವನ್ನು ಮಾಡಿಕೊಂಡು ಬಂದಿದ್ದೇವೆ. ಈ ಬಗ್ಗೆ ತಮಗೆ ಈಗಾಗಲೇ ಮಾಹಿತಿಯನ್ನು ಕೊಟ್ಟಿದ್ದೇನೆ. ಬೆಂಗಳೂರಿನಲ್ಲಿ 2017ನೇ ಸಾಲಿನಲ್ಲಿ 13 ಜನ ಆರೋಪಿಗಳನ್ನು ಬಂಧಿಸಿದ್ದಾರೆ. ಅದೇ ರೀತಿಯಲ್ಲಿ 2012ನೇ ಸಾಲಿನಲ್ಲಿ ವರ್ತೂರಿನಲ್ಲಿ 2 ಜನ ಆರೋಪಿಗಳನ್ನು ಬಂಧಿಸಿದ್ದಾರೆ. ಹೆಚ್.ಎ.ಎಲ್.ನಲ್ಲಿ 2014ನೇ ಸಾಲಿನಲ್ಲಿ 75 ಜನ ಆರೋಪಿಗಳನ್ನು ಬಂಧಿಸಿದ್ದಾರೆ. ಕಾಡುಗೋಡಿಯಲ್ಲಿ 2018ನೇ ಸಾಲಿನಲ್ಲಿ ಒಬ್ಬ ಆರೋಪಿಯನ್ನು ಬಂಧಿಸಲಾಗಿದೆ. ಮಹದೇವಪುರದಲ್ಲಿ 4 ಆರೋಪಿಗಳನ್ನು ಬಂಧಿಸಲಾಗಿದೆ. ಇವೆಲ್ಲವೂ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಕಳೆದ 6 ತಿಂಗಳುಗಳಲ್ಲಿ 18 ಜನ ಅಕ್ರಮ ಬಾಂಗ್ಲಾದೇಶಿಗರನ್ನು ಬಂಧಿಸಿದ್ದಾರೆ. ಈ ವಿಚಾರವಾಗಿ ತಾವು ಮಾತನಾಡುತ್ತಾ, ರಾಮನಗರದಲ್ಲಿ, ಬೆಂಗಳೂರಿನಲ್ಲಿ, ಜೈದುಲ್ಲಾ ಇಸ್ಲಾಂ, ಆದಿಲ್ ಅಸದುಲ್ಲಾ ಇವರಿಬ್ಬರು ಬೋದ್‌ಗಯಾದ ಬುದ್ಧಮಂದಿರದಲ್ಲಿ explosives ಇಟ್ಟು ಸ್ಫೋಟಕ ಮಾಡಿದ್ದರು, ಆ ಪ್ರಕರಣದಲ್ಲಿ ಭಾಗಿಯಾಗಿದ್ದರು ಎಂದು ಹೇಳಿ NIA (National Investigating Agency) ರವರು ಬಂದು ಅವರನ್ನು ರಾಮನಗರದಲ್ಲಿ, ಬೆಂಗಳೂರಿನಲ್ಲಿ ಬಂಧಿಸಿದ್ದರು. ಮಾನ್ಯ ಸಭಾಪತಿಯವರೇ, ಇದು ನಮಗೆ ಬಹಳ ಆತಂಕಕಾರಿಯಾದ ವಿಚಾರ. ಏಕೆಂದರೆ, ಇವತ್ತು ಅದು ಸಣ್ಣ ಪ್ರಮಾಣದಲ್ಲಿ ಆಗಬಹುದು, ನಾಳೆ ಬೇರೆ ಬೇರೆ ರೀತಿಯಲ್ಲಿ ಕೂಡ ಆಗಬಹುದು. ಬೆಂಗಳೂರನ್ನು sleeper cell ರೀತಿಯಲ್ಲಿ ಉಪಯೋಗ ಮಾಡಬಹುದು ಎಂದು ಹೇಳಿ, ನಾವು ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ತಾವು ಹೇಳಿದ ಹಾಗೆ ಈಗಾಗಲೇ ಅವರು ರೇಷನ್ ಕಾರ್ಡ್ ಮಾಡಿಸಿಕೊಳ್ಳುವುದು, ಮತ್ತೆ ಇತರೆ ಬೇರೆ ಬೇರೆ ಕಾರ್ಡ್‌ಗಳನ್ನು ಮಾಡಿಸಿಕೊಳ್ಳುವುದನ್ನು ಮಾಡುತ್ತಾರೆ. ಅದಕ್ಕಾಗಿ ನಾವು ಆ ಭಾಗದ ತಹಶೀಲ್ದಾರ್‌ಗಳಿಗೆ ಈ ವಿಚಾರವಾಗಿ ತಿಳಿಸಿದ್ದೇವೆ. ಅವರನ್ನು ಮಾನಿಟರ್ ಮಾಡಬೇಕೆಂದು ಹೇಳಿ ಪೊಲೀಸ್‌ರವರಿಗೂ ತಿಳಿಸಿದ್ದೇವೆ. ಇಲ್ಲಿಯವರೆಗೆ FRRO (Foreigner Regional Registration Offices) 177 ಜನ ರೊಹಿಂಗ್ಯಗಳನ್ನು ಬೆಂಗಳೂರಿನಲ್ಲಿ ಗುರುತಿಸಿದ್ದಾರೆ. ಪೊಲೀಸ್‌ನವರು ಅದರಲ್ಲಿ 147 ಜನರನ್ನು ಪತ್ತೆ ಮಾಡಿದ್ದಾರೆ. ಇನ್ನುಳಿದ 30 ಜನರು ಹೊರ ರಾಜ್ಯಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಿದ್ದಾರೆಂದು ಮಾಹಿತಿ ಇದೆ. ಅದಾದ ಮೇಲೆ ಅವರಿಗೆ ಬಯೋಮೆಟ್ರಿಕ್ ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕೆಂದು ಸೂಚನೆಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರ 108 ಜನ ರೊಹಿಂಗ್ಯಗಳಿಗೆ ಬಯೋಮೆಟ್ರಿಕ್ ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಅಪ್‌ಲೋಡ್ ಮಾಡಿದ್ದಾರೆ. ಅದರ ಜೊತೆಗೆ 70 ಜನ ರೊಹಿಂಗ್ಯಗಳನ್ನು ಗುರುತಿಸಿ ಅವರುಗಳನ್ನು ಮಾನಿಟರ್ ಮಾಡುತ್ತಿದ್ದಾರೆ. ಉದ್ದೇಶ ಏನೆಂದರೆ, ಅದನ್ನು ಈಗಾಗಲೇ ಬಂಗ್ಲಾದೇಶದ embassyಗೆ ತಿಳಿಸಿ, ಅವರನ್ನು ವಾಪಸ್ಸು ಕಳುಹಿಸಬೇಕೆಂದು ಹೇಳಿ, ಅದೊಂದು ಪ್ರಕ್ರಿಯೆ ನಡೆಯುತ್ತಿದೆ.

(360) 11–12–2018 5–30 ಎಸ್‌ವಿ–ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಡಾ:ಜಿ.ಪರಮೇಶ್ವರ (ಮುಂದು):–** ಒಟ್ಟಾರೆ ಪೊಲೀಸ್ ಇಲಾಖೆಯು ಅವರನ್ನು monitor ಮಾಡುತ್ತಿದೆ. ಅವರನ್ನು ವಾಪಸ್ ಕಳುಹಿಸುವವರೆವಿಗೂ ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ಅಹಿತಕರವಾದಂತಹ ಘಟನೆ ಅವರಿಂದ ಆಗಬಾರದು ಎಂದು regular monitoring ಮಾಡಲಾಗುತ್ತಿದೆ. ರಾಜ್ಯ ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ. ಮಾನ್ಯ ಮುಖ್ಯಮಂತ್ರಿಗಳು ಅಂದು ಹೇಳಿರುವ ಸಂಖ್ಯೆ ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. 40,000 ಎಂದು ಹೇಳಿ ಅಂದು ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ನಮಗೆ ಇಲ್ಲಿರತಕ್ಕಂತಹ ಮಾಹಿತಿಯ ಪ್ರಕಾರ 177 ಜನರನ್ನು ಗುರುತಿಸಿದ್ದೇವೆ. ಅದರಲ್ಲಿ 108 ಜನರನ್ನು ಈಗಾಗಲೇ ಭಾರತ ಸರ್ಕಾರಕ್ಕೆ ತಿಳಿಸಿ, ವಾಪಸ್ ಕಳುಹಿಸುವುದಕ್ಕೆ ಕ್ರಮವನ್ನು ಕೈಗೊಳ್ಳಲಾಗಿದೆ. ಯಾವುದೇ ಕಾರಣಕ್ಕೂ ಅವರು ಕಾನೂನು ಬಾಹಿರ ಚಟುವಟಿಕೆಯನ್ನು ಮಾಡುವುದಕ್ಕೆ ಬಿಡುವುದಿಲ್ಲ. ಬೇರೆ ಯಾರಾದರೂ ಬಾಂಗ್ಲಾ ದೇಶಿಗರು ಹೊಸದಾಗಿ ಅನಧಿಕೃತವಾಗಿ ಬಂದರೆ ಅವರ ಬಳಿ ಯಾವುದೇ ಅಧಿಕೃತ ದಾಖಲೆಗಳು ಇಲ್ಲದಿದ್ದಲ್ಲಿ ಅವರನ್ನು ಸಹ ಅರೆಸ್ಟ್ ಮಾಡಲಾಗುವುದು.

**ಶ್ರೀ ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಬೆಂಗಳೂರಿನಲ್ಲಿ ಕೆಲವು ಕ್ಯಾಂಪ್‌ಗಳನ್ನು ಮಾಡಿಕೊಂಡಿದ್ದಾರೆ. ಅಲ್ಲಿ ಅವರಿಗೆ ಅನಧಿಕೃತವಾಗಿ ವಿದ್ಯುಚ್ಛಕ್ತಿ, ಕುಡಿಯುವ ನೀರು, ಪಡಿತರ ಚೀಟಿ ಲಭ್ಯವಾಗುತ್ತಿದ್ದು, ಅವರ ಮಕ್ಕಳೆಲ್ಲಾ ಶಾಲೆಗೆ ಹೋಗುತ್ತಿದ್ದಾರೆ. ಅವರು ಕರ್ನಾಟಕದ ನಿವಾಸಿಗಳಾಗಿರುವ ರೀತಿಯಲ್ಲಿ ಕ್ಯಾಂಪ್‌ಗಳಲ್ಲಿ ವಾಸವಾಗಿದ್ದಾರೆ. ಶ್ರೀ ಸುಧೀರ್ ಶೆಟ್ಟಿ ಎನ್ನುವವರು ಬಹಳಷ್ಟು ಅಧ್ಯಯನ ಮಾಡಿ ಒಂದು ಬುಕ್‌ಲೆಟ್ ಅನ್ನು ಮಾಡಿದ್ದಾರೆ. ಅದನ್ನು ಮಾನ್ಯ ಮುಖ್ಯಮಂತ್ರಿಯವರು ವೀಕ್ಷಿಸಿದ್ದು, ಇದಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸಲಿಚ್ಛಿಸುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಇದರ ಬಗ್ಗೆ ಸಾಕಷ್ಟು ಕಾಳಜಿ ಇದ್ದು, ಇದರ ಬಗ್ಗೆ ನಾನು ಸಂಶಯವನ್ನು ವ್ಯಕ್ತಪಡಿಸುತ್ತಿಲ್ಲ. ಆದರೆ ಗಂಭೀರವಾದ ಆತಂಕ ಕರ್ನಾಟಕ ರಾಜ್ಯದಲ್ಲಿ ಇದೆ. ಏಕೆಂದರೆ ಬಾಂಗ್ಲಾ ವಲಸಿಗರು ಮತ್ತು ರೋಹಿಂಗ್ಯಾಗಳು ಎಂದರೆ, ನಮ್ಮ ದೇಶದಲ್ಲಿ ಸಾಕಷ್ಟು ಕಡೆ ಬಾಂಬ್ ಸ್ಫೋಟದಲ್ಲಿ ಭಾಗಿಯಾದಂತಹ ಉಗ್ರವಾದಿಗಳು ಇದ್ದಾರೆ. ಅವರು ಉದ್ಯೋಗವನ್ನು ಅರಸಿಕೊಂಡು ಬರುತ್ತಾರೆ. ಒಂದು ರೀತಿ establish ಆದ ಮೇಲೆ ಅವರೇನು ಮಾಡಬೇಕೋ ಅದನ್ನು ಮಾಡುತ್ತಾರೆ. ಈಗ ಸುಪ್ರೀಂ ಕೋರ್ಟಿನ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಣ್ಗಾವಲಿನಲ್ಲಿಯೇ ಅವರನ್ನು ದೇಶದಿಂದ ಹೊರಹಾಕಬೇಕು ಎಂದು ಸುಪ್ರೀಂ ಕೋರ್ಟ್‌ನಿಂದ ಆದೇಶ ಬಂದಿದೆ. ಆದರೆ ಬಾಂಗ್ಲಾ ದೇಶಿಗರನ್ನು ಅಥವಾ ರೋಹಿಂಗ್ಯಾಗಳನ್ನು ಕರ್ನಾಟಕದಿಂದ ಅಥವಾ ಭಾರತದಿಂದ ಹೊರಹಾಕಬೇಕೆನ್ನುವ ಪ್ರಕ್ರಿಯೆಯು ಅತ್ಯಂತ ಗಂಭೀರವಾಗಿ ನಡೆಯುತ್ತಿಲ್ಲ ಎಂಬುದು ನೂರಕ್ಕೆ ನೂರರಷ್ಟು ಬಲವಾದ ಭಾವನೆಯಾಗಿದೆ. ಹೀಗಾಗಿ ಮಾನ್ಯ ಉಪ ಮುಖ್ಯಮಂತ್ರಿಯವರು ಕರ್ನಾಟಕ ರಾಜ್ಯದಲ್ಲಿ ಬಹಳ ಬಲಿಷ್ಠವಾಗಿ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಡಾ:ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಬಾಂಗ್ಲಾ ದೇಶಿಗರ ಅಕ್ರಮ ವಲಸೆಯ ಬಗ್ಗೆ ಸುಮಾರು 10–15 ವರ್ಷಗಳಿಂದಲೂ ಪಕ್ಷಾತೀತವಾಗಿ ಚರ್ಚೆಯಾಗುತ್ತಿದೆ. ಯಾವುದೇ ಸರ್ಕಾರ ಬಂದರೂ ಸಹ ಅಕ್ರಮ ವಲಸಿಗರ ಬಗ್ಗೆ ಗಂಭೀರವಾದ ಕ್ರಮವನ್ನು ತೆಗೆದುಕೊಂಡಿಲ್ಲ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ. ರೋಹಿಂಗ್ಯಾಗಳ ಬಗ್ಗೆ ಮಾನ್ಯ ರವಿಕುಮಾರ್ ಅವರು ಬಹಳ ಚೆನ್ನಾಗಿ ಹೇಳಿದರು. ಯಾವಾಗ ಪ್ರಶ್ನೆಯನ್ನು ಕೇಳಿದರೂ ಒಂದು ಸಂಖ್ಯೆಯನ್ನು ನೀಡಿ ಮುಂದೆ ಹೋಗಲಾಗುತ್ತದೆ. ಬೆಂಗಳೂರಿನಲ್ಲಿ ಅಸ್ಸಾಂ ಮತ್ತು ಪಶ್ಚಿಮ ಬಂಗಾಳದ ಮುಖಾಂತರ ಸುಮಾರು ಜನ ಬಾಂಗ್ಲಾ ದೇಶಿಗರು ಬಂದು ಅಕ್ರಮವಾಗಿ ನೆಲೆಸಿರುತ್ತಾರೆ. ಅವರನ್ನು ಗುರುತಿಸಲು ನಮ್ಮಿಂದ ಆಗುತ್ತಿಲ್ಲ. ಅವರು ಬಾಂಗ್ಲಾ ದೇಶಿಗರೋ, ಅಸ್ಸಾಂನವರೋ ಅಥವಾ ಪಶ್ಚಿಮ ಬಂಗಾಳದವರೋ ಎಂದು ಕಂಡುಹಿಡಿಯಲು ಆಗುತ್ತಿಲ್ಲ. ಬೆಂಗಳೂರಿನಲ್ಲಿರುವ ಏಜೆನ್ಸಿಗಳು ಹಣವನ್ನು ಪಡೆದು ಅವರು ಬಂದ ತಕ್ಷಣ ಅವರಿಗೆ ಪಡಿತರ ಚೀಟಿ ಮುಂತಾದವನ್ನು ಮಾಡಿಸಿಕೊಡುತ್ತದೆ. ಇದರಿಂದ ಮುಂದಿನ ಜನಾಂಗಕ್ಕೆ ತೊಂದರೆಯಾಗುವ ರೀತಿಯಲ್ಲಿ ಕಾರ್ಯಕಲಾಪಗಳು ನಡೆಯುತ್ತಿದೆ ಎನ್ನುವುದರ ಬಗ್ಗೆ ಸಂಶಯ ಮತ್ತು ಆತಂಕ ನಮ್ಮನ್ನು ಕಾಡುತ್ತಿದೆ.

ಮಾನ್ಯ ಉಪ ಮುಖ್ಯಮಂತ್ರಿಯವರು ಅಧಿಕಾರಿಗಳು ಕೊಟ್ಟಂತಹ ಉತ್ತರವನ್ನು ಹೇಳುತ್ತಾರೆ. ಆತ್ಮಸಾಕ್ಷಿಯಾಗಿ ಸರ್ಕಾರಕ್ಕೆ ನನ್ನ ಮನವಿ ಏನೆಂದರೆ, ಒಂದು drive ಮಾಡಬೇಕು. ಬೆಂಗಳೂರಿನ ಪ್ರತಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಒಂದು ವಾರ drive ಮಾಡಿ, ಸಂಶಯಾತ್ಮಕವಾಗಿ ಯಾರು ನೆಲೆಸಿದ್ದಾರೆ ಎಂಬುದನ್ನು ಪತ್ತೆ ಹಚ್ಚಬೇಕು. ಇವರು ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಮತದಾನವನ್ನೂ ಸಹ ಮಾಡಿದ್ದಾರೆ ಎನ್ನುವ ಬಗ್ಗೆ ನಮಗೆ ಸಾಕಷ್ಟು ದೂರುಗಳು ಬಂದಿವೆ. ಮಾನ್ಯ ಉಪ ಮುಖ್ಯಮಂತ್ರಿಯವರ integrity and honesty ಬಗ್ಗೆ ನಾವು ಪ್ರಶ್ನೆ ಮಾಡುವ ಹಾಗಿಲ್ಲ. ಯಾವ ರೀತಿ ಸಂಚಾರಿ ಪೊಲೀಸ್ ಅವರು ಸುರಕ್ಷತಾ ಸಪ್ತಾಹ ಮಾಡುತ್ತಾರೆಯೋ, ಮಾಲಿನ್ಯ ನಿಯಂತ್ರಣ ಸಪ್ತಾಹ ಮಾಡುತ್ತಾರೆಯೋ ಅದೇ ರೀತಿ ಬಾಂಗ್ಲಾದೇಶಿಗರನ್ನು ಗುರುತಿಸಲು ಒಂದು ಮಾಸಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. Station House Officer ಅನ್ನು ಜವಾಬ್ದಾರರನ್ನಾಗಿ ಮಾಡಿ, ಮನೆ–ಮನೆ ಸರ್ವೆ ಮಾಡಿಸಿ ಒಂದು ಪಟ್ಟಿಯನ್ನು ಮಾಡುವುದಕ್ಕೆ ಸರ್ಕಾರ ದಯವಿಟ್ಟು ಒಂದು ಆದೇಶವನ್ನು ಮಾಡಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಂದಿನ ಸದನದೊಳಗೆ ಸ್ಟೇಷನ್‌ವಾರು, ಡಿ.ಸಿ.ಪಿ. ವಲಯವಾರು ವಿವರವಾದ ಮಾಹಿತಿಯನ್ನು ಸದನಕ್ಕೆ ನೀಡಬೇಕೆಂದು ತಮ್ಮ ಮೂಲಕ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ:ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮುಖ್ಯವಾಗಿ ಇಂತಹ ಅಂತರರಾಷ್ಟ್ರೀಯ ಮಟ್ಟದ ವಲಸಿಗರ ಬಗ್ಗೆ ತನಿಖೆ ಮಾಡಲು ಪೊಲೀಸ್ ಇಲಾಖೆಯಲ್ಲಿ ದಕ್ಷ ಹಾಗೂ ವಿದ್ಯಾವಂತ ಅಧಿಕಾರಿಗಳಿದ್ದಾರೆ. ವಿಶೇಷವಾಗಿ ಅವರಿಗೆ ನಿರ್ದಿಷ್ಟ ತರಬೇತಿಯನ್ನು ನೀಡಿದರೆ ಯಾವ ರೀತಿಯಾಗಿ screening ಮಾಡಬೇಕೆಂಬುದಕ್ಕೆ ಅನುಕೂಲವಾಗುತ್ತದೆ. ಪಡಿತರ ಚೀಟಿ ಇರಬಹುದು, ಏನೇ ಇರಬಹುದು; ಸರ್ಕಾರದ ಎಲ್ಲಾ ಯೋಜನೆಗಳನ್ನು ಜಾರಿ ಮಾಡಲಿಕ್ಕೆ ಪಂಚಾಯಿತಿ ವ್ಯವಸ್ಥೆಯು ಪ್ರಜಾಪ್ರಭುತ್ವದ ಕಟ್ಟಕಡೆಯ ವ್ಯವಸ್ಥೆಯಾಗಿರುವುದರಿಂದ ಉತ್ತರದಾಯಿತ್ವವನ್ನು ನಿಗದಿಪಡಿಸಬಹುದು. ವಿಶೇಷವಾಗಿ ಮಲೆನಾಡು ಭಾಗಗಳಲ್ಲಿ ಪ್ಲಾಂಟೇಷನ್ ಇರುವ ಕಡೆ ಕಾರ್ಮಿಕರ ಸಮಸ್ಯೆ ತಲೆದೋರಿರುವ ಹಿನ್ನೆಲೆಯಲ್ಲಿ ಅಸ್ಸಾಂ ಮುಂತಾದ ಕಡೆಗಳಿಂದ ಉದ್ಯೋಗವನ್ನರಸಿಕೊಂಡು ಜನ ಬರುತ್ತಿದ್ದಾರೆ. ಇಂದಿನ ಸಂದರ್ಭದಲ್ಲಿ ಗ್ರಾಮ ಮಟ್ಟದಲ್ಲಿ screening ಹಾಗೂ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಕಡ್ಡಾಯವಾಗಿ ನೋಂದಣಿ ಆಗಬೇಕು. ಇತ್ತೀಚೆಗೆ ರೈಲಿನ ಮೂಲಕ ಪುಟ್ಟ ಪುಟ್ಟ ಮಕ್ಕಳನ್ನು ಕರೆದುಕೊಂಡು ಬಂದದ್ದನ್ನು ನಾವು ಗಂಭೀರವಾಗಿ ಪರಿಗಣಿಸಲಿಲ್ಲ ಎಂಬುದು ಬಹಳ ನೋವಿನ ವಿಚಾರ. ಇದರಲ್ಲಿ ನಾವು ಯಾವುದೇ ರೀತಿಯ ರಾಜಕಾರಣವನ್ನು ಬೆರೆಸಬಾರದು. ರಾಷ್ಟ್ರೀಯ ಭದ್ರತೆ ಎನ್ನುವುದು ದೇಶದ ವಿಚಾರವಾಗಿದ್ದು, ಪೊಲೀಸ್ ಇಲಾಖೆಯಲ್ಲಿನ ನುರಿತ ಸಿಬ್ಬಂದಿಯನ್ನು ಗುರುತಿಸಿ ಅವರಿಗೆ ವಿಶೇಷ ತರಬೇತಿಯನ್ನು ನೀಡಿದರೆ ಇದರಲ್ಲಿ ಸ್ವಲ್ಪಮಟ್ಟಿಗಿನ ಸಾಧನೆಯನ್ನು ಮಾಡಬಹುದು.

**ಡಾ:ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ನಾನು ಹೇಳಿದ ಹಾಗೆ ಇದು ಇಂದಿನ ಸಮಸ್ಯೆಯಲ್ಲ. ನಮ್ಮ ದೇಶದ ಗಡಿ ಪ್ರದೇಶಗಳಿಂದ ಒಳನುಸುಳುವಿಕೆಯನ್ನು ಮೊದಲು ನಿಲ್ಲಿಸಬೇಕು. ಅಲ್ಲಿ ನಮ್ಮ ಭದ್ರತೆ ಇನ್ನೂ ಹೆಚ್ಚಿನ ಮಟ್ಟಿಗೆ ಆಗಬೇಕು. ಅಲ್ಲಿ ಒಳಗೆ ಬಂದರೆ ಅವರು ಯಾವ ರಾಜ್ಯಕ್ಕೆ ಬೇಕಾದರೂ ಹೋಗಬಹುದು. ಅಲ್ಲಿ ಒಳಬರುವುದನ್ನು ತಡೆದಾಗ ಮಾತ್ರ ಸಮಸ್ಯೆಯು ಪೂರ್ಣವಾಗಿ ಬಗೆಹರಿಯುತ್ತದೆ. ಆದರೆ ಅಲ್ಲಿ ಹೇಗೋ ಒಳಗೆ ಬರುತ್ತಿದ್ದಾರೆ. ಬಂದವರು ಯಾವ ರಾಜ್ಯಕ್ಕೆ ಬೇಕಾದರೂ ಹೋಗಬಹುದು. ಬೆಂಗಳೂರು ವಾತಾವರಣ ಚೆನ್ನಾಗಿದೆಯೆಂದು ಹೇಳಿ ಇಲ್ಲಿಗೆ ಬರುತ್ತಾರೆ. ಪೊಲೀಸ್ ಇಲಾಖೆ ಕಣ್ಣುಮುಚ್ಚಿ ಕುಳಿತಿದೆ ಎಂದು ದಯಮಾಡಿ ಯಾರೂ ತಿಳಿದುಕೊಳ್ಳಬಾರದು. Internal Security Division ನವರು ಇವರನ್ನು monitor ಮಾಡುತ್ತಿದ್ದಾರೆ.

(361) 11-12-2018 ಕೆಜಿ-ವಿಕೆ 5-40 (ಸಭಾಪತಿಯವರ ಉಪಸ್ಥಿತಿ)

**ಡಾ|| ಜಿ..ಪರಮೇಶ್ವರ್ (ಮುಂದು,,,,)-**

ಅಮೃತಹಳ್ಳಿ ಪೊಲೀಸ್ ಠಾಣೆಯ ಸರಹದ್ದಿನ ದಾಸರಹಳ್ಳಿ ಕ್ಯಾಂಪ್ ಇದೆ, ಅಮೃತಹಳ್ಳಿ ಕ್ಯಾಂಪ್ ಇದೆ, ಸಂಪಿಗೆಹಳ್ಳಿ ಕ್ಯಾಂಪ್ ಇದೆ, ಇವೆಲ್ಲಾ identify ಮಾಡಿದ್ದಾರೆ. ಅವರುಗಳನ್ನು monitor ಮಾಡುತ್ತಿದ್ದಾರೆ. ಅವರ ಗುರುತಿನ



ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರ್ಡ್‌ಗಳನ್ನು ಗುರುತಿಸಿದ್ದಾರೆ. ಅವರು ಎಲ್ಲಿಂದ ಬಂದಿದ್ದಾರೆ, ಅವರು ಯಾವ ರೀತಿಯಲ್ಲಿ ಕಾರ್ಡ್‌ಗಳನ್ನು ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ everything has been verified. ನಾವು ಅದಕ್ಕಾಗಿಯೇ we are able to crack down some 177 Rohingyas. ನಾವು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಬೆಂಗಳೂರು ನಗರಕ್ಕೆ ಏನಾದರೂ ಅನಾಹುತ ಆಯಿತು ಎಂದರೆ, ನಮಗೆ ಅದು ಬಹಳ ದೊಡ್ಡ ಪ್ರಮಾಣದಲ್ಲಿ ಆತಂಕವಾಗುತ್ತದೆ. ನಾವು ಅದಕ್ಕಾಗಿ ಪೊಲೀಸ್ ಇಲಾಖೆಯಲ್ಲಿ ಎನ್ನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ, ಅವುಗಳನ್ನೆಲ್ಲಾ ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಮುಂದೆಯೂ ಸಹ ತಮ್ಮ ಸಲಹೆಗಳ ಮೇರೆಗೆ ಕ್ರಮ ತೆಗೆದುಕೊಳ್ಳುತ್ತೇವೆ. ಈಗ ಬಾಂಗ್ಲಾ ದೇಶದವರು ಚಿಕ್ಕಮಗಳೂರಿನ ಕಾಫಿ ಎಸ್ಟೇಟ್‌ನಲ್ಲಿ, ಮಡಿಕೇರಿ ಮತ್ತು ಹಾಸನ ಜಿಲ್ಲೆಯಲ್ಲಿ ಇದ್ದಾರೆ ಎಂಬ ಮಾಹಿತಿಯು ಸಹ ಇದೆ. ಅದಕ್ಕೆ ನಾವು ಪ್ರತಿಯೊಂದು ಜಿಲ್ಲೆಯ Superintendent of Police ಗೆ sensitize ಮಾಡಿದ್ದೇವೆ. ' ಒಂದು Task Force ಮಾಡಿಕೊಂಡು monitor ಮಾಡಬೇಕೆಂದು ತಿಳಿಸಿದ್ದೇವೆ. ನಮಗೆ ಆ ಮಾಹಿತಿಯು ಸಹ ಬರುತ್ತದೆ. ಜೊತೆಗೆ ನಿಜವಾಗಿ Rohingyas, ಬಾಂಗ್ಲಾ ದೇಶದವರು ಎಂದು ಗೊತ್ತಾದ ತಕ್ಷಣವೇ, ನಾವು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇವೆ. ನಂತರ ಕೇಂದ್ರ ಸರ್ಕಾರದವರು ಬಾಂಗ್ಲಾ ದೇಶದ Embassy ಗೆ ತಿಳಿಸುತ್ತಾರೆ. ಆ ರೀತಿ ತಿಳಿಸಿದ ನಂತರ ಅವರನ್ನು deport ಮಾಡುವಂತಹ ಕೆಲಸ ಮಾಡುತ್ತೇವೆ. ಆ ಕೆಲಸ ನಿರಂತರವಾಗಿ ಆಗುತ್ತಿದೆ. ಈ ವಿಷಯದಲ್ಲಿ ತಮಗೆ ಯಾವುದೇ ಸಂದೇಹ ಬೇಡ. ನಾವು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಮಾಡುತ್ತಿದ್ದೇವೆ. Continuous monitoring ನಡೆಯುತ್ತಿದೆ. ನಾವು ಒಂದು ದಿವಸ ಇದನ್ನು ಸಪ್ತಾಹ ಮಾಡಿ ಮುಗಿಸಿಬಿಟ್ಟರೆ ಅಥವಾ ಒಂದು ವಾರ ಸಪ್ತಾಹ ಮಾಡಿ ಬಿಟ್ಟರೆ ಅದು ಮುಗಿಯುವುದಿಲ್ಲ. It’s a continuous process, we will monitor them. ಕೇವಲ ಬಾಂಗ್ಲಾ ದೇಶದವರು ಅಲ್ಲ, ಬೇರೆ ಬೇರೆ ದೇಶದವರು ಸಹ ಇಲ್ಲಿ ಇದ್ದಾರೆ. ನಾನು ಹಿಂದೆ ಸಹ ಇದಕ್ಕೆ ಉತ್ತರ ಕೊಟ್ಟಿದ್ದೇನೆ. ಆಫ್ರಿಕಾದ ವಿದ್ಯಾರ್ಥಿಗಳು ಬರುತ್ತಾರೆ, ಅವರು ಇಲ್ಲೇ ಉಳಿದುಕೊಳ್ಳುತ್ತಾರೆ. ನಾನು ಹಿಂದೆ ಗೃಹ ಸಚಿವನಾಗಿದ್ದಂತಹ ಸಂದರ್ಭದಲ್ಲಿ 1553 ಜನ ವೀಸಾ ಇಲ್ಲದೆ ಸುಮಾರು 2 ರಿಂದ 3 ವರ್ಷಗಳ ಕಾಲ ಇಲ್ಲಿಯೇ ಉಳಿದುಕೊಂಡಿದ್ದರು. ಅವರ ದಾಂದಲೆ ಹೆಚ್ಚು ಆಗಿದೆ. ಆದ್ದರಿಂದ, ಅವರನ್ನು ಹಿಡಿದು ವಾಪಸ್ ಮಾಡಿದೆ. ಅವರಲ್ಲಿ ಇನ್ನೂ ಕೆಲವರನ್ನು ನಮ್ಮ ಜೈಲಿನಲ್ಲಿ ಇಟ್ಟುಕೊಂಡಿದ್ದೇವೆ. ಏಕೆಂದರೆ, ಅವರ ಹತ್ತಿರ ದಾಖಲೆಗಳು ಇಲ್ಲ. ಅವರು ವಾಪಸ್ಸು ಹೋಗುವುದಕ್ಕೂ Embassy ಗಳು Councilಗಳು ಒಪ್ಪುತ್ತಿಲ್ಲ. ಆದ್ದರಿಂದ, ಅವರು ಇಲ್ಲೇ ಇದ್ದಾರೆ. It’s a continuous process, we will not stop it.

**ಶ್ರೀ ಎನ್.ರವಿಕುಮಾರ್ (ವಿಧಾಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಜಾವಾಣಿ ದಿನಪತ್ರಿಕೆಯಲ್ಲಿ ಯಾವ ಯಾವ ದೇಶದ ಜನರು ಬೆಂಗಳೂರಿನಲ್ಲಿದ್ದಾರೆಂದು ಬಂದಿದೆ. ಅಲ್ಲದೇ, ಒಬ್ಬರನ್ನು ವಾಪಸ್ಸು ಕಳುಹಿಸುವುದಕ್ಕೆ 50

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾವಿರ ರೂಪಾಯಿ ಖರ್ಚು ಬರುತ್ತದೆ. ಇದಕ್ಕೆ ಹಣ ಕೊಡುವವರು ಯಾರು ಎಂಬ ಅನೇಕ ವಿಷಯಗಳು ಇವೆ. ನಾನು ಒಂದು ಲೈನ್‌ನಲ್ಲಿ ಹೇಳಿ ಮುಗಿಸುತ್ತೇನೆ. ಉದಾಹರಣೆಗೆ ಡ್ರಗ್ಸ್ ಮತು ಕಳ್ಳ ನೋಟಿನ ವ್ಯವಹಾರದಲ್ಲಿ ಇವರು ಬಹಳ ಸಿದ್ದಹಸ್ತರು. ನನ್ನ ಪ್ರಕಾರ, ಈಗ ಸಿಕ್ಕಿರುವವರಲ್ಲಿ 90% ಅವರೇ ಇದ್ದಾರೆ. ಉದಾಹರಣೆಗೆ ಮಂಗಳೂರಿನಲ್ಲಿ, ಉಡುಪಿ ಮತ್ತು ಬೆಂಗಳೂರಿನಲ್ಲಿ ಇಂತಹದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದರ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಹಿಂದೆ ಬೆಂಗಳೂರು ನಗರದಲ್ಲಿ ಯಾರು ಸ್ವಲ್ಪ social network ನಲ್ಲಿ ಇದ್ದಂತಹವರಿಗೆ Police Beat Card ಎಂದು ಹೇಳಿ ನಾಗರಿಕರಿಗೆ ಪೊಲೀಸ್ ಇಲಾಖೆಯಿಂದ ಕೊಡುತ್ತಿದ್ದರು. ಇದನ್ನು ಒಂದು ವಾರ್ಡ್‌ನಲ್ಲಿ ಸುಮಾರು ಎರಡು ಜನರಿಗೆ ಕೊಡುತ್ತಿದ್ದರು. ಆಗ ಮುನ್ಸಿಪಲ್ ಇತ್ತು. ಈಗ ಮಾನ್ಯ ಗೃಹ ಸಚಿವರು ಕೆಲವರು ಬೇರೆ ಬೇರೆ ಕಡೆಯಿಂದ ಬಂದು ಅವರ ವೀಸಾ ಅವಧಿ ಮುಗಿದ ನಂತರವು ಸಹ ಇಲ್ಲೇ ಇರುತ್ತಾರೆ ಎಂದು ಹೇಳಿದ್ದಾರೆ. ಜೊತೆಗೆ ಬೆಂಗಳೂರು ನಗರದಲ್ಲಿ ಸಾಕಷ್ಟು ಕಡೆಗಳಲ್ಲಿ ಸಂಜೆ ವೇಳೆಯಲ್ಲಿ ಕಾಫಿ ಶಾಪ್‌ಗಳಲ್ಲಿ ಡ್ರಗ್ಸ್ ಚಟುವಟಿಕೆಗಳು ನಡೆಯುತ್ತಿವೆ. ಅವರಲ್ಲಿ ಕೆಲವರು ಏಜೆಂಟರುಗಳು ಇದನ್ನು ಮಾಡುತ್ತಿದ್ದಾರೆ. ಆ ಏಜೆಂಟರು ಪ್ರಮುಖವಾಗಿ ಶಾಲಾ ಮಕ್ಕಳನ್ನು ಮತ್ತು ಕಾಲೇಜು ವಿದ್ಯಾರ್ಥಿಗಳನ್ನು ಇದಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಪೊಲೀಸ್ ಅಧಿಕಾರಿಗಳಿಗೆ ಸಾಕಷ್ಟು ಮಾಹಿತಿ ಇದೆ. ಅವರು ಸಹ ಕೆಲವು ಕಡೆಗಳಲ್ಲಿ ಅವರುಗಳನ್ನು ಬಂಧಿಸಲಿಕ್ಕೆ ಹೋದಾಗ ಪೊಲೀಸ್ ಅಧಿಕಾರಗಳ ಮೇಲೆ ಅವರು ಹಲ್ಲೆ ಮಾಡಿರುವಂತಹ ಘಟನೆಗಳು ಸಹ ಇವೆ. ಅವರನ್ನು ಏನಾದರೂ ಕಾನೂನು ರೀತಿಯಲ್ಲಿ ಬಂಧಿಸಿ ಲಾಕಪ್‌ಗಳಿಗೆ ಹಾಕಿದರೆ ಅವರುಗಳು ಠಾಣೆಗಳಿಗೆ ಬಂದು ಧರಣಿ ಮಾಡಿರುವಂಥದ್ದು ಮತ್ತು ಗಲಾಟೆ ಮಾಡಿರುವಂತಹ ಘಟನೆಗಳು ಇವೆ ಎಂದು ಪೊಲೀಸ್ ಅಧಿಕಾರಿಗಳು ಹೇಳುತ್ತಾರೆ. ಅವರ ಮೇಲೆ ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಅವರು ಸಹ ಭಯ ಪಡುತ್ತಾರೆ. ಏಕೆಂದರೆ, Embassy ಯಿಂದ ನೇರವಾಗಿ ಅವರು ನಮಗೆ ಪ್ರಶ್ನೆ ಮಾಡುತ್ತಾರೆ. ಆದ್ದರಿಂದ, ನಾವು ಅಲ್ಲಿಗೆ ಹೋಗಿ ದಿನಗಟ್ಟಲೆ ನಿಂತುಕೊಂಡು ಅವರ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಪೊಲೀಸ್ ಅಧಿಕಾರಿಗಳು ಸಹ ಹೊಡೆತ ತಿಂದಂತಹ ಪ್ರಕರಣಗಳು ಇವೆ. Visa period ಮುಗಿದಿರುತ್ತದೆ, ಕಾನೂನು ರೀತಿಯಲ್ಲಿ ಅವರಿಗೆ ಯಾವ ರೀತಿ ಭದ್ರತೆ ಇದೆ, Embassy ಯವರು ಅವರಿಗೆ ಅಷ್ಟೊಂದು ಸಹಾಯ ಮಾಡುತ್ತಾರೆ. ಅವರೇ ಬೆಂಗಳೂರು ನಗರದಲ್ಲಿ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದಾರೆ. ಸನ್ಮಾನ್ಯ ಗೃಹ ಮಂತ್ರಿಗಳು ಪೊಲೀಸ್ ಅಧಿಕಾರಿಗಳಿಗೆ ಶಕ್ತಿ ತುಂಬುವಂತಹ ಕೆಲಸ ಮಾಡಬೇಕಾಗುತ್ತದೆ. ಏಕೆಂದರೆ, ಪೊಲೀಸ್ ಅಧಿಕಾರಿಗಳು ಭಯವನ್ನು ವ್ಯಕ್ತ ಪಡಿಸಿ ಅವರ ಮೇಲೆ ಕ್ರಮ ಜರುಗಿಸುವುದಕ್ಕೆ ಹಿಂಜರಿಯುತ್ತಿದ್ದಾರೆ. ಪೊಲೀಸ್ ಅಧಿಕಾರಿಗಳು ಹೊಡೆದಿರುವಂತಹ ನಿದರ್ಶನಗಳು ಪ್ರಜಾವಾಣಿ ಮತ್ತು ಕನ್ನಡ ಪ್ರಭ ದಿನಪತ್ರಿಕೆಗಳಲ್ಲಿ ಬಂದಿದೆ. ಇದು ತಮಗೂ ಸಹ ಗೊತ್ತಿದೆ. ಬಾಣಸವಾಡಿ ಪೊಲೀಸ್‌ಠಾಣಾ ವ್ಯಾಪ್ತಿಯಲ್ಲಿ ಒಬ್ಬ ಸಂಚಾರಿ ಪೊಲೀಸ್

ಅಧಿಕಾರಿಯೊಬ್ಬರು ಅವರನ್ನು drink and drive ಕೇಸಿನಲ್ಲಿ ಹಿಡಿಯಲು ಹೋದಾಗ, ಅದು ಕೇಸ್ ಆಗಲೇ ಇಲ್ಲ. ಏಕೆಂದರೆ, ಈ ಹಿಂದೆ ಒಬ್ಬ ಪೊಲೀಸ್ ಅಧಿಕಾರಿ ಬಾಣಸವಾಡಿ ಠಾಣೆಯಲ್ಲಿ ಅವರ ವಿರುದ್ಧ ಕ್ರಮ ತೆಗೆದುಕೊಂಡಿದ್ದಂತಹ ಸಂದರ್ಭದಲ್ಲಿ Embassy ಯವರು ನೇರವಾಗಿ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದಕ್ಕೆ ಎಂದು ಪಶ್ನೆ ಮಾಡಿದ್ದರು. ಅದು ಮಾನ್ಯ ಗೃಹ ಮಂತ್ರಿಗಳಿಗೂ ಸಹ ಗೊತ್ತಿದೆ. ಈ ಹಿಂದೆ ಅವರು ಗೃಹ ಸಚಿವರಾಗಿದಂತಹ ಸಂದರ್ಭದಲ್ಲಿ ನಡೆದಂತಹ ಪ್ರಕರಣ ಇದು. ಬೆಂಗಳೂರು ನಗರದಲ್ಲಿ ಇದು ಇತಿಮಿತಿ ಮೀರಿ ನಡೆಯುತ್ತಿದೆ. ಇದಕ್ಕೆ ಸರಿಯಾದಂತಹ ರೀತಿಯಲ್ಲಿ ಭೀಗಿಗೊಳಿಸಿದರೆ ಮಾತ್ರ ಇದು ಸರಿ ಹೋಗುತ್ತದೆ. ಇಲ್ಲವೆಂದರೆ, ಇದು ಸರಿ ಹೋಗುವುದಿಲ್ಲ.

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಹೆಚ್.ಎಂ.ರಮೇಶ್‌ಗೌಡ ರವರು ಬಹಳ ಆತಂಕಕಾರಿಯಾದಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಈಗಾಗಲೇ ಹೇಳಿದಂತೆ, ಕಳೆದ ಬಾರಿ ಗೃಹ ಸಚಿವನಾಗಿದ್ದಂತಹ ಸಂದರ್ಭದಲ್ಲಿ ಇದಕ್ಕೆ ಒಂದು ದೊಡ್ಡ ಕ್ರಮ ತೆಗೆದುಕೊಳ್ಳಲಾಗಿದೆ. ಮಾನ್ಯ ಸದಸ್ಯರಾದಂತಹ ಲಹರ್ ಸಿಂಗ್ ಸಿರೋಯಾ ರವರು ಎರಡು ಬಾರಿ ಪ್ರಶ್ನೆಯನ್ನು ಬಹಳ ಗಂಭೀರವಾಗಿ ಕೇಳಿದ್ದರು. ಆಗ ಗಂಟೆಗಟ್ಟಲೇ ಡ್ರಗ್ಸ್ ಬಗ್ಗೆ ಬಹಳ ದೊಡ್ಡ ಚರ್ಚೆ ಆಗಿತ್ತು. ನಮ್ಮ ಕರ್ನಾಟಕ Udta Punjab ಆಗುವುದು ಬೇಡವೆಂದು ಹೇಳಿ ಮಾನ್ಯ ಸದಸ್ಯರಾದಂತಹ ಲಹರ್ ಸಿಂಗ್ ಸಿರೋಯಾರವರು ಪ್ರಸ್ತಾಪ ಮಾಡಿದ್ದರು. ನಾವು ಅದಕ್ಕಾಗಿಯೇ ತಿಂಗಳುಗಟ್ಟಲೆ ಪೊಲೀಸ್‌ನವರಿಗೆ sensitise ಮಾಡಿ ಅದಕ್ಕೆ ಪ್ರತ್ಯೇಕವಾದ ಸ್ಕೀಮ್‌ಗಳನ್ನು ಮಾಡಿ ಯಾರು ಹೊರಗಡೆಯಿಂದ ಬಂದಿದ್ದಾರೆ ಅವರು ಆಫ್ರಿಕಾದವರು ಇರಬಹುದು, ಬಾಂಗ್ಲಾ ದೇಶದವರು ಇರಬಹುದು ಅಥವಾ ಬೇರೆ ಬೇರೆ ದೇಶಗಳಿಂದ ಬಂದಿರಬಹುದು ಅವರು ಯಾರು ಇಂತಹ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರು ಅವರಲ್ಲಿ ಬಹಳಷ್ಟು ಜನರನ್ನು ದಸ್ತಗಿರಿ ಮಾಡಿದ್ದೆವು. ಅವರಿಂದ ಆ ಸಂದರ್ಭದಲ್ಲಿ ಸಾವಿರಗಟ್ಟಲೆ ಕೆಜಿ ಗಾಂಜಾವನ್ನು ವಶಪಡಿಸಿಕೊಂಡಿದ್ದರು. ಅವರ ಮೇಲೆ ಕೇಸ್‌ಗಳನ್ನು ಹಾಕಿದ್ದೆವು. Embassy ಗಳಿಗೆ ಮಾಹಿತಿ ಕೊಟ್ಟೆವು. ಸುಮಾರು 200 ಜನರನ್ನು deport ಮಾಡಿದೆವು. ಇದೆಲ್ಲಾ ನಿರಂತರವಾಗಿ ನಡೆಯುತ್ತಿದೆ. ತಾವು ಹೇಳುವುದು ನಿಜ. ಪೊಲೀಸ್‌ನವರು ಕೆಲವು ಸಂದರ್ಭಗಳಲ್ಲಿ ಹೆದರಿಕೊಳ್ಳುತ್ತಾರೆ ಎನ್ನುವುದು ನಿಜ. ಆದರೆ, ಈಗ ಅವರು ಹೆದರಿಕೊಳ್ಳುವುದಿಲ್ಲ. ಈಗ ಪೊಲೀಸರು ಕಾಲಿಗೆ ಗುಂಡು ಹಾಕಿ ಬಿಡುತ್ತಾರೆ. ತಾವು ಇದನ್ನು ದಿನಪತ್ರಿಕೆಯಲ್ಲಿ ನೋಡಿರಬಹುದು. ಅವರು ನೇರವಾಗಿ ಸಾಯಿಸುವುದಿಲ್ಲ. ಈಗ ಕಾಲಿಗೆ ಗುಂಡು ಹಾಕಿ ಅವರನ್ನು ಹಿಡಿದುಕೊಳ್ಳುವಂತಹ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಪೊಲೀಸ್‌ನವರು ಅಷ್ಟು ಸುಲಭವಾಗಿ ಬಿಡುವುದಿಲ್ಲ. ನಮ್ಮ Internal Security Division ಸಹ ಬಹಳ strong ಆಗಿ ಇದೆ. ಈಗ ಪೊಲೀಸ್‌ನವರಿಗೆ ಮಾಹಿತಿ ಬಂದ ತಕ್ಷಣವೇ ಅವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ, ಆತಂಕ ಪಡುವಂತಹ ಮಟ್ಟಿಗೆ ಏನಿಲ್ಲ. ಆದರೆ, ನಾನು ಒಂದು ಭರವಸೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ನಾವು ಅವರನ್ನು ಅಷ್ಟು ಸುಲಭವಾಗಿ ಬಿಡುವುದಿಲ್ಲ. ಈ ಬಗ್ಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಠಿಣವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಯಾವುದೇ ಕಾರಣಕ್ಕೂ ಬೆಂಗಳೂರು ನಗರದಲ್ಲಿ ಅವಿರತವಾಗಿ ಡ್ರಗ್ಸ್ ದಂಧೆ ನಡೆಯುವುದಕ್ಕೆ ಬಿಡುವುದಿಲ್ಲ ಎಂಬ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

**ಡಾ||ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಡ್ರಗ್ಸ್ ಬಹಳ ವ್ಯಾಪಕವಾಗಿ ಇದೆ. ಮಾನ್ಯ ಸಚಿವರು ಹೇಳಿದಷ್ಟು ಸುಲಭವಲ್ಲ ಇದು.

(362)11–12–2018(5–50)MV-BNS

**(ಸಭಾಪತಿಯವರ ಉಪಸ್ಥಿತಿ)**

**11. <u>ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ</u>**

**ವಿಷಯ:–** ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ.

****

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಬರಗಾಲ ನಿರಂತರವಾಗಿ ಹೆಚ್ಚಾಗುತ್ತಿದೆ. ಅದರಲ್ಲೂ ವಿಶೇಷವಾಗಿ ಮೂರ್ನಾಲ್ಕು ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಬರಗಾಲ ಇದೆ. ಈ ವರ್ಷವೂ ಕೂಡ ಬರಗಾಲ ಇನ್ನೂ ಹೆಚ್ಚಾಗಿದೆ. ನೂರು ತಾಲ್ಲೂಕುಗಳು ಬರಪೀಡಿತ ತಾಲ್ಲೂಕುಗಳೆಂದು ಸರ್ಕಾರ ಘೋಷಣೆ ಮಾಡಿದೆ. ಅದರಲ್ಲಿ ಬೀದರ್, ಬಾಗಲಕೋಟೆ, ದಾವಣಗೆರೆ, ಚಿತ್ರದುರ್ಗ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಶೇಕಡಾ 75ರಷ್ಟು ಕೆರೆಕಟ್ಟೆಗಳು ಒಣಗಿ ಹೋಗಿವೆ. ವಿಜಯಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲೂ ಶೇಕಡಾ 60ರಷ್ಟು ಜಲಮೂಲಗಳು ಬರಿದಾಗಿವೆ ಎಂಬುದಾಗಿ ವರದಿ ಇದೆ. ಅದೇ ರೀತಿಯಾಗಿ ಕಾವೇರಿ, ಕೃಷ್ಣೆ ಮತ್ತು ತುಂಗಭದ್ರಾ ನದಿಗಳು ಉಕ್ಕಿ ಹರಿದಿವೆ. ಆದರೆ, ಕೆರೆಗಳನ್ನು ತುಂಬಿಸುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ಸೋತಿದೆ ಎನ್ನುವಂತಹ ವರದಿ ಇದೆ. ಕೊಪ್ಪಳ ಜಿಲ್ಲೆಯಲ್ಲಿ 1.79 ಲಕ್ಷ ಹೆಕ್ಟೇರ್ ಬೆಳೆ ನಾಶ ಮತ್ತು ಮೇವು ಕೊರತೆಯ ಭೀತಿ. ಸುಮಾರು 283 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಅದೇರೀತಿ ವಿಜಯಪುರ ಜಿಲ್ಲೆಯ ನಾಲ್ಕು ಗ್ರಾಮಗಳಲ್ಲಿ ನೀರಿನ ಸಮಸ್ಯೆಯಿಂದಾಗಿ ಟ್ಯಾಂಕರ್‌ನಲ್ಲಿ ಕುಡಿಯುವ ನೀರನ್ನು ಪೂರೈಕೆ ಮಾಡುವಂತಹ ಪರಿಸ್ಥಿತಿ ಈ ವರ್ಷ ಸಂಭವಿಸಿದೆ. ಸುಮಾರು 1.87 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಾಶವಾಗಿದೆ ಮತ್ತು ರೂ.212.54 ಕೋಟಿ ಬೆಳೆ ಹಾನಿಯಾಗಿದೆ ಎಂದು ಅಲ್ಲಿನ ಜಿಲ್ಲಾ ವರದಿ ಹೇಳುತ್ತದೆ. ಅದೇ ರೀತಿಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ 1.12 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಬಿತ್ತನೆಯಾಗಿ, ಅದು ಒಣಗಿ ಹೋಗಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಗದಗ ಜಿಲ್ಲೆಯಲ್ಲಿ ಶೇಂಗಾ, ಗೋವಿನಜೋಳ, ಬಿ.ಟಿ.ಹತ್ತಿ, ಉಳ್ಳಾಗಡ್ಡಿ ಈ ಬೆಳೆಗಳು ನೀರಿನ ಕೊರತೆಯಿಂದ ಒಣಗಿ ಹೋಗಿದೆ.

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೆ, ಒಂದು ನಿಮಿಷ. ಮಾನ್ಯ ವಿರೋಧಪಕ್ಷದ ನಾಯಕರೆ, ಕನಿಷ್ಠ ಪಕ್ಷ ಸಹಿ ಮಾಡಿ ಕೊಟ್ಟಿರುವವರು ಸದನದಲ್ಲಿ ಇರಲಿ ಎಂದು ಹೇಳಿದ್ದೇನೆ. ಆದರೆ, ಸದನದಲ್ಲಿ ನೀವು ಆರು ಜನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತ್ರ ಇದ್ದೀರಿ. ಇಷ್ಟು ಮಹತ್ವವಾದ ವಿಷಯ, ಬೆಳಿಗ್ಗೆ ಒಂದು ಗಂಟೆಯ ಸಮಯ ಮಾತನಾಡಿದ್ದೀರಿ. ನಿಮ್ಮ ಪಕ್ಷದವರೆ ಇಲ್ಲವೆಂದರೆ ಹೇಗೆ? ಹದಿನೆಂಟು ಜನರಲ್ಲಿ ಆರು ಜನ ಇದ್ದೀರಿ, ಸಹಿ ಮಾಡಿರುವವರೂ ಸಹ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ, ಈಗ ಸಮಯ ಆರು ಗಂಟೆಯಾಗಿದೆ.

**ಸಭಾಪತಿಯವರು:-** ಅದು ಆಗಲಿ. ನಿನ್ನೆ ದಿವಸ ನೀವು ಏನು ಹೇಳಿದ್ದೀರಿ. ಸಮಯ ಆರು ಗಂಟೆಯಾದರು ಎಲ್ಲಾ ಅಜೆಂಡವನ್ನು ಮುಗಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಇದನ್ನು ಈಗ ಪ್ರಾರಂಭ ಮಾಡಿದ್ದೀರಿ.

**ಸಭಾಪತಿಯವರು:-** ಇದು ಇಷ್ಟು ಮಹತ್ವವಾದ ವಿಷಯ. ನೀವು ಅವರನ್ನು ಸದನಕ್ಕೆ ಕರೆಯಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರುಗಳಿಗೆ ಹೇಳಿದ್ದೇನೆ. ಅವರು ಕಾಫಿ ಕುಡಿಯುವುದಕ್ಕೆ ಹೋಗಿದ್ದಾರೆ, ಎಲ್ಲರೂ ಬರುತ್ತಾರೆ. ತಾವು ನಿಯಮ 68ನ್ನು ತೆಗೆದುಕೊಂಡಿರುವುದರಿಂದ ಎಲ್ಲರೂ ಸಹ ಮಾತನಾಡುತ್ತಾರೆ.

**ಸಭಾಪತಿಯವರು:-** ಎಲ್ಲರೂ ಮಾತನಾಡುವುದಕ್ಕಿಂತ ನೀವು ಮಾತನಾಡುವುದು ಮುಖ್ಯವಾದುದು. ಇಲ್ಲಿ ನೀವು ಯಾರ ಹೆಸರನ್ನು ಕೊಟ್ಟಿದ್ದೀರಿ ಅವರನ್ನು ಕರೆಯಿಸಿ ಎಂದು ಹೇಳುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಐವತ್ತು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿರ್ಮಾಣವಾಗಿದೆ. ಅದೇ ತರಹ ರಾಯಚೂರು ಜಿಲ್ಲೆಯಲ್ಲಿ ಮಳೆ ಕೈಕೊಟ್ಟು ರೈತರು ಸಂಪೂರ್ಣವಾಗಿ ಸಂಕಷ್ಟದಲ್ಲಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಎರಡು ಲಕ್ಷಕ್ಕೂ ಅಧಿಕ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ, ಮೂವತ್ತಕ್ಕೂ ಹೆಚ್ಚು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಜಾನುವಾರುಗಳಿಗೆ ನೀರಿನ ಸಮಸ್ಯೆ ಉಂಟಾಗಿದೆ. ಸುಮಾರು 104 ತಾಲ್ಲೂಕುಗಳಲ್ಲಿ ಭೀಕರ ಬರಗಾಲ ಎದುರಾಗಿದೆ ಎಂದು ವರದಿ ಇದೆ. ಅದರಲ್ಲೂ 44 ತಾಲ್ಲೂಕುಗಳಲ್ಲಿ ಶೇಕಡಾ 75ಕ್ಕಿಂತ ಕಡಿಮೆ ಬಿತ್ತನೆಯಾಗಿದೆ. ಕಳೆದ ಬಾರಿಯ ವರದಿಗೆ ಹೋಲಿಕೆ ಮಾಡಿದರೆ, ಈ ಬಾರಿ 44 ತಾಲ್ಲೂಕುಗಳಲ್ಲಿ ಶೇಕಡಾ 75ರಷ್ಟು ಬಿತ್ತನೆ ಆಗಿಲ್ಲವೆಂದು ವರದಿಯಲ್ಲಿ ಇದೆ. ಸಮಾರು 119 ತಾಲ್ಲೂಕುಗಳಲ್ಲಿ ಸಾಧಾರಣಾ ಮಳೆಗಿಂತ ಬಹಳಷ್ಟು ಕಡಿಮೆ ಮಳೆ ಆಗಿರುವಂಥದ್ದು ಇದೆ. ಆದರೆ, ಈಗ ಕರ್ನಾಟಕ ರಾಜ್ಯ ಸರ್ಕಾರ ನೂರು ತಾಲ್ಲೂಕುಗಳಿಗೆ ಐವತ್ತು ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡಬೇಕೆಂದು ಆದೇಶ ಹೊರಡಿಸಿದೆ. ಆದರೆ, ಪ್ರತಿ ತಾಲ್ಲೂಕಿಗೆ 25 ಲಕ್ಷ ರೂಪಾಯಿ ಹಣ ಬಂದಿದೆ. ಈ ಭೀಕರ ಬರಗಾಲ ಇರುವಂತಹ ಪರಿಸ್ಥಿತಿಯಲ್ಲಿ ಈ 25 ಲಕ್ಷ ರೂಪಾಯಿ ಹಣ ಸಾಕಾಗುವುದಿಲ್ಲವೆಂದು ನನಗೆ ಅನಿಸುತ್ತದೆ. ಇದಕ್ಕೆ ಸರ್ಕಾರ ಕೋಟಿಗಳಲ್ಲಿ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಆಗ್ರಹಪಡಿಸುತ್ತೇನೆ. ನಾವು ಬಿ.ಜೆ.ಪಿ. ಪಕ್ಷದ ವತಿಯಿಂದ ಐದು ತಂಡಗಳಲ್ಲಿ ರಾಯಚೂರು ಜಿಲ್ಲೆಯ ಒಂದು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಳ್ಳಿಗೆ ಸರ್ವೆಕ್ಷಣೆಗೆ ಹೋಗಿದ್ದೆವು. ಒಬ್ಬ ರೈತ ತನ್ನ ಹನ್ನೆರಡು ಎಕರೆ ಭೂಮಿಗೆ ನಾಲ್ಕು ಬಾರಿ ಬಿತ್ತನೆ ಮಾಡಿದ್ದಾನೆ. ಒಂದು ಬಾರಿ ಹೆಸರು ಕಾಳನ್ನು ಬಿತ್ತನೆ ಮಾಡಿದ್ದಾನೆ, ಹತ್ತಿ ಬಿತ್ತನೆ ಮಾಡಿದ್ದಾನೆ ಆಮೇಲೆ ಜೋಳವನ್ನು ಎರಡು ಬಾರಿ ಬಿತ್ತನೆ ಮಾಡಿದ್ದಾನೆ. ಅವನು ನಾಲ್ಕು ಬಾರಿ ಬಿತ್ತನೆ ಮಾಡಿದರೂ ಸಹ ಅವನ ಕೈಗೆ ಏನೂ ಬಂದಿಲ್ಲ. ಎರಡು ತಿಂಗಳ ಜೋಳ ಆಳೆತ್ತರಕ್ಕೆ ಇರಬೇಕಾಗಿತ್ತು. ಆದರೆ, ಅದು ಬಹಳ ತಳಮಟ್ಟದಲ್ಲಿ ಇದೆ ಮತ್ತು ಅದು ಒಣಗಿ ಹೋಗಿದೆ. ಆ ಜೋಳವನ್ನು ಕಿತ್ತು ಹಾಕುವುದಕ್ಕೂ ಕೂಡ ಕೈಯಿಂದ ಹಣವನ್ನು ಹಾಕಬೇಕು. ಆದರೆ, ಅವನ ಬಳಿ ಹಣವಿಲ್ಲ. ಆ ರೈತ ಹೇಳುತ್ತಾನೆ ಅವನು ತನ್ನ ಒಂದು ಜೊತೆ ಎತ್ತುಗಳನ್ನು ಎಂಭತ್ತು ಸಾವಿರ ರೂಪಾಯಿಗೆ ಖರೀದಿ ಮಾಡಿದ್ದನಂತೆ. ಆದರೆ, ಇವತ್ತು ಅದನ್ನು 30 ರಿಂದ 35 ಸಾವಿರ ರೂಪಾಯಿಗೆ ಕೇಳುತ್ತಿದ್ದಾರೆ, ನಾನು ಅವುಗಳನ್ನು ಮಾರಾಟ ಮಾಡಬೇಕಾಗಿದೆ, ಆ ಎತ್ತುಗಳನ್ನು ಸಾಕುವುದಕ್ಕೆ ಆಗುತ್ತಿಲ್ಲವೆಂದು ಹೇಳುತ್ತಾನೆ. ಹೀಗೆ ಬರಗಾಲದ ಭೀಕರತೆಗೆ ರೈತ ತುತ್ತಾಗಿದ್ದಾನೆ. ಸರ್ಕಾರ ಸಾಲಮನ್ನಾ ಮಾಡುತ್ತೇನೆಂದು ಪ್ರತಿದಿನ ಒಂದು ಹೇಳಿಕೆಯನ್ನು ಮಾಡುತ್ತಿದ್ದೆಯೆ ವಿನಾಃ, ಸದನ ನಡೆಯುವುದಕ್ಕೆ ಎರಡು ದಿವಸ ಮುಂಚೆ ದೊಡ್ಡಬಳ್ಳಾಪುರ ಮತ್ತು ಗುಲ್ಬರ್ಗಾ ಜಿಲ್ಲೆಯ ಸೇಡಂನಲ್ಲಿ ಒಂದಿಷ್ಟು ಜನರಿಗೆ ಸ್ಯಾಂಪಲ್ ಆಗಿ ಋಣಮುಕ್ತ ಪತ್ರವನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಸದನದಲ್ಲಿ ಬಹಳ ಗಲಾಟೆ ಆಗುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯ ಕಣ್ಣೊರೆಸುವ ತಂತ್ರವನ್ನು ಮಾಡಿ, ಈ ಸದನವನ್ನು ನಡೆಸುತ್ತಿದ್ದಾರೆ. ರೈತರೂ ಕೃಷಿಯನ್ನು ಅವಲಂಬಿಸಿದ್ದಾರೆ ಮಾನ್ಯ ಧರ್ಮೇಗೌಡರೆ ನಾನು ಮಾತನಾಡಿ ಮುಗಿಸುತ್ತೇನೆ ನೀವು ಆಮೇಲೆ ಮಾತನಾಡಿ.

**ಶ್ರೀ ಎಸ್.ಎಲ್.ಧರ್ಮೇಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸದಸ್ಯರೆ ತಾವು ಮಾತನಾಡಿ. ಆದರೆ, ಕಣ್ಣೊರೆಸುವ ಎನ್ನುವಂತಹ ಮಾತನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡಬೇಕಾದರೆ, ಬೇರೆ ಸದಸ್ಯರು ಅಡ್ಡ ಹಾಕಬಾರದು.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆರೋಪ ಮಾಡುವುದಕ್ಕೆ ಸ್ವಲ್ಪ ಇತಿಮಿತಿ ಇರಬೇಕು. ಆರೋಪ ಮಾಡಬೇಕಾದರೆ ಅದರಲ್ಲಿ ಸತ್ಯಾಂಶ ಇರಬೇಕು.

**(ಗೊಂದಲ)**

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮಗೆ ನಾಟಕ ಮಾಡುವ ಅಗತ್ಯವಿಲ್ಲ.

**(ಗೊಂದಲ)**

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪದ ಬಳಕೆಯನ್ನು ಸರಿಯಾಗಿ ಮಾಡಬೇಕು. ಅವರು ಏನನ್ನು ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು unparliamentary word ಉಪಯೋಗಿಸಿಲ್ಲ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ. ನಾನು ಎದ್ದು ನಿಂತಾಗ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು. ನಾನು ಏನನ್ನು ಹೇಳುತ್ತೇನೆಂದು ಕೇಳಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ನಾಟಕವೆಂದು ಉಪಯೋಗಿಸಿಲ್ಲ. ಕಣ್ಣೊರೆಸುವ ತಂತ್ರವೆಂದು ಹೇಳಿದ್ದೇನೆ.

**ಸಭಾಪತಿಯವರು:–** ಒಂದು ನಿಮಿಷ ಕುಳಿತುಕೊಳ್ಳಿ. ಅವರು ಏನು ಪದ ಬಳಸಿದ್ದಾರೆಂದು ಯಾರಾದರು ಹೇಳಿ. ಅವರು ಯಾವ ರೀತಿ ಪದ ಬಳಸಿದ್ದಾರೆ ಎಂದು ನೋಡುತ್ತೇನೆ. ಅದು ಸರಿ ಇಲ್ಲದಿದ್ದರೆ ಕಡತದಿಂದ ತೆಗೆಸುತ್ತೇನೆ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, point of order.

**ಸಭಾಪತಿಯವರು:–** ಮಾನ್ಯ ರಮೇಶ್‌ರವರೆ ಒಂದು ನಿಮಿಷ, Point of order ಇದೆ.

**ಶ್ರೀ ಎಸ್.ಎಲ್.ಧರ್ಮೇಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಮಾತನಾಡುವುದಕ್ಕೆ ನಮ್ಮ ವಿರೋಧವಿಲ್ಲ.

**ಸಭಾಪತಿಯವರು:–** ಮಾನ್ಯ ರಮೇಶ್‌ರವರೆ, ಆ point of order ಏನು ಹೇಳಿ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ತಾವು ಹೇಳಿದ ರೀತಿಯಲ್ಲಿ ಈ ಚರ್ಚೆಗೆ ಅವಕಾಶ ನೀಡಿರುವುದು ನಿಯಮ 68ರ ಅಡಿಯಲ್ಲಿ. ಅವರು ತೆಗೆದುಕೊಳ್ಳುವಂತಹ ವಿಷಯ ಗಂಭೀರವಾದರೂ ಸಹ ನಿಯಮ 68ರ ಅಡಿಯಲ್ಲಿ ತಾವು 'Notice of raising discussion' ಗೆ ತೆಗೆದುಕೊಳ್ಳುವಂಥದ್ದು ಇದೆ. ಆದರೆ, Chairman to decide admissibility and allotment of time, after consultation of the concerned Minister and then the Leader of the House.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(363)11–12–2018(06–00)ಎಲ್‌ಎಲ್–ಬಿಎನ್‌ಎಸ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಆರ್. ರಮೇಶ್(ಮುಂದುವರೆದಿದ್ದು...):–**

ಆದಾದ ಮೇಲೆ ದಿನಾಂಕ ನಿಗದಿ ಮಾಡಬೇಕು. ಅವರು ಏನು ಕೊಟ್ಟಿದ್ದಾರೆಂದು ನಮಗೆ ಗೊತ್ತಿಲ್ಲ. ಇವೊತ್ತಿನ ದಿವಸದ ಅಜೆಂಡಾದಲ್ಲಿ ಈ ವಿಷಯ ಇರುವುದಿಲ್ಲ. ತಾವು ವಿರೋಧ ಪಕ್ಷದವರು ಕೊಟ್ಟಿರತಕ್ಕಂತಹ ನೋಟೀಸ್ ಮೇಲೆ ಅವರಿಗೆ ಕಂಪ್ಲೀಟ್ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ, I think that it is not correct as per the Rules.

**ಸಭಾಪತಿಯವರು:–** ತಾವು ಮುಂಜಾನೆ ಈ ಸದನದಲ್ಲಿ ಹಾಜರಿದ್ದರೋ ಅಥವಾ ಇಲ್ಲವೋ ಅದು ನನಗೆ ಗೊತ್ತಿಲ್ಲ. ಅವರು ನಿಲುವಳಿ ಸೂಚನೆಗೆ ನೋಟೀಸ್ ಕೊಟ್ಟಿದ್ದರು. ಆ ನಿಲುವಳಿ ಸೂಚನೆ ಬಗ್ಗೆ preamble ಆಗಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದರು. ನಂತರ ನಾನು ಅದನ್ನು ನಿಯಮ 68 ಕ್ಕೆ convert ಮಾಡಿದ್ದೇನೆ. ಆ ಹಿನ್ನೆಲೆಯಲ್ಲಿ ಮಾತನಾಡುವಾಗ ಮಾನ್ಯ ವಿರೋಧ ಪಕ್ಷದ ನಾಯಕರು, ನಾನು ಮಾತನಾಡುವುದಿಲ್ಲ ಬದಲಾಗಿ ಶ್ರೀ ರವಿಕುಮಾರ್‌ರವರು ಮತ್ತು ಉಳಿದ ಸದಸ್ಯರುಗಳು ಮಾತನಾಡುತ್ತಾರೆಂದು ಒಂದು ಪಟ್ಟಿ ಕೊಟ್ಟಿದ್ದಾರೆ. ಅದರ ಪ್ರಕಾರ ನಾನು ಶ್ರೀ ರವಿಕುಮಾರ್‌ರವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅದರಲ್ಲಿ ಏನು ತಪ್ಪಿದೆ? ಈ ವಿಷಯ ಅಜೆಂಡಾದಲ್ಲಿಯೂ ಸಹ ಇದೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಇದನ್ನು ತಪ್ಪು ಎಂದು ನಾನು ಹೇಳುತ್ತಿಲ್ಲ. ಆದರೆ, ಇದರಲ್ಲಿ procedural lapse ಇದೆ. ಆದರೆ, ಅವರು ಕೇಳಿರತಕ್ಕಂತಹ ಪ್ರಶ್ನೆ ಅಥವಾ ಚರ್ಚೆಗೆ ಕೊಟ್ಟಿರತಕ್ಕಂತಹ ನೋಟೀಸ್ admissible ಆಗಬೇಕು. It should be admitted in the House ನಂತರ ಅದು ನಮಗೆ circulate ಆಗಬೇಕು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರತಕ್ಕಂತಹ ನೋಟೀಸ್ admit ಆಗಿದೆ. ವಿರೋಧ ಪಕ್ಷದವರೆಲ್ಲರೂ ಸಹಿ ಮಾಡಿ ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೆ. ನಂತರ preamble ಆಗಿ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ನಿಲುವಳಿ ಸೂಚನೆ ಮಾಡುವ ಬದಲಾಗಿ ನಿಯಮ 68 ಕ್ಕೆ convert ಮಾಡುತ್ತೇನೆಂದು ನಾನು ಆದೇಶ ಮಾಡಿದ್ದೇನೆ. ಇವೊತ್ತಿನ ದಿವಸ ಮಧ್ಯಾಹ್ನದ ನಂತರ ಚರ್ಚೆಗೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಅಜೆಂಡಾದಲ್ಲಿ ಇದ್ದಂತಹ ಎಲ್ಲಾ ವಿಷಯಗಳನ್ನು ಮುಗಿಸಿದ ನಂತರ ನಾನು ಅವರಿಗೆ ಮಾತನಾಡುವುದಕ್ಕೆ ಅನುಮತಿ ಕೊಟ್ಟಿದ್ದೇನೆ. ಆದರೆ, ಶಬ್ಧದ ಬಗ್ಗೆ ಅವರು ಮಾತನಾಡಲಿ. ನಾನು ಅದನ್ನು ನೋಡಿಕೊಳ್ಳುತ್ತೇನೆ.

**ಡಾ: ಜಿ. ಪರಮೇಶ್ವರ್(ಉಪ ಮುಖ್ಯಮಂತ್ರಿ ಹಾಗೂ ಒಳಾಡಳಿತ, ಬೆಂಗಳೂರು ಅಭಿವೃದ್ಧಿ ನಗರ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ):–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಇವೊತ್ತಿನ ದಿವಸ ಭೀಕರವಾದಂತಹ ಬರಗಾಲವಿದೆ. ಈಗಾಗಲೇ ಸರ್ಕಾರದಿಂದ 100 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿದ್ದೇವೆ. ಇನ್ನು ಬರತಕ್ಕಂತಹ ದಿವಸಗಳಲ್ಲಿ ಏನು ಕೇಂದ್ರ ಸರ್ಕಾರದ ನಿಯಮದ ಆಧಾರದ ಮೇರೆಗೆ ಕೆಲವು ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಬೇಕಾಗುತ್ತದೆ. ಬಹಳ ಗಂಭೀರವಾದಂತಹ ವಿಷಯದ ಬಗ್ಗೆ ಕೆಳಗಿನ ಮನೆಯಲ್ಲಿಯೂ ಕೂಡ ನಿಲುವಳಿ ಸೂಚನೆಯನ್ನು convert ಮಾಡಿದ್ದಾರೆ. ಅದರ ಮೇರೆಗೆ ಚರ್ಚೆ ನಡೆಯುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಮಾತನಾಡಿದ್ದಾರೆ. ಈ ಸದನದಲ್ಲಿಯೂ ಸಹ ಅವರು ಮಾತನಾಡುವುದಕ್ಕೆ ಸಮಯ ಕೊಟ್ಟಿದ್ದೀರಿ. ಅದರಂತೆ ಅವರು ಮಾತನಾಡಲಿ. ಆದರೆ, ಮಾತನಾಡುವಂತಹ ಭರದಲ್ಲಿ ಏನು ಶಬ್ಧ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪಯೋಗಿಸಬೇಕು. ಯಾವ ರೀತಿ ಅವರ presentation ಇರಬೇಕು ಎನ್ನುವ ಬಗ್ಗೆ ಮಾತ್ರ ನಮ್ಮ ಆಕ್ಷೇಪಣೆ ಇದೆ. ಆ ವಿಷಯದ ಬಗ್ಗೆ ಮಾತನಾಡುವುದಕ್ಕೆ ನಮ್ಮ ತಕರಾರು ಇರುವುದಿಲ್ಲ. ಸರ್ಕಾರ, we are competent enough to reply. ನಾವು ಏನು ಮಾಡಿದ್ದೇವೆಂದು ಹೇಳಿದ್ದಾರೆ. 25 ಲಕ್ಷ ರೂಪಾಯಿ ಖರ್ಚಾದ ತಕ್ಷಣ ಇನ್ನೂ 25 ಲಕ್ಷ ರೂಪಾಯಿ ಕೊಡುತ್ತೇವೆ. ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಪಿ.ಡಿ. ಅಕೌಂಟಿನಲ್ಲಿ we have kept minimum of Rupees Five Crores. ಕೆಲವು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಹತ್ತಿರ ತುರ್ತು ಪರಿಸ್ಥಿತಿ ಬಂದಾಗ ಆ ಹಣವನ್ನು ಬಳಸಿಕೊಳ್ಳಿ ಎಂದು 8 ಕೋಟಿಯಿಂದ 9 ಕೋಟಿ ರೂಪಾಯಿ ಹಣವನ್ನು ಇಟ್ಟಿದ್ದೇವೆ. ಆ ಎಲ್ಲಾ ವಿಷಯಗಳನ್ನು ಸರ್ಕಾರದಿಂದ ಉತ್ತರ ನೀಡುವಾಗ ಹೇಳುತ್ತೇವೆ. ಆದುದರಿಂದ, ದಯಮಾಡಿ ಶಬ್ಧಗಳನ್ನು ಉಪಯೋಗ ಮಾಡುವಾಗ ಸ್ವಲ್ಪ ಗಮನ ಹರಿಸಲಿ.

**(ಗೊಂದಲ)**

**ಸಭಾಪತಿಯವರು:–** ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರೇ ಒಂದು ನಿಮಿಷ, ನಾನು ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಬಂಡೆಪ್ಪ ಖಾಶೆಂಪೂರ(ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ ನಾವು ಎಲ್ಲಾ ವಿಷಯಗಳನ್ನು ಕೇಳುತ್ತಿದ್ದೇವೆ. ರೈತರ ವಿಷಯ ಬಂದಾಗ ಬಹಳ ಹಗುರವಾಗಿ ಮಾತನಾಡಬಾರದು. ಏಕೆಂದರೆ, ಸಾಲ ಮನ್ನಾ ವಿಷಯದಲ್ಲಿ ನಾನು ಸಹಕಾರ ಸಚಿವನಿದ್ದೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಿಂದಿನ 3 ಸಾವಿರ ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳುತ್ತಾರೆ. ಆದರೆ, ನವೆಂಬರ್ ತಿಂಗಳವರೆಗೆ 1300 ಕೋಟಿ ರೂಪಾಯಿ ಬಿಲ್‌ನಲ್ಲಿ 800 ಕೋಟಿ ರೂಪಾಯಿ ಹಣವನ್ನು F.D. (Finance Department) ನಿಂದ ಸಹಕಾರ ಇಲಾಖೆಗೆ ಬಿಡುಗಡೆ ಆಗಿ ನಾವು ಈಗಾಗಲೇ ಅಪೆಕ್ಸ್ ಬ್ಯಾಂಕುಗಳಿಗೆ ಕಳುಹಿಸಿದ್ದೇವೆ. ಪ್ರಾಯೋಗಿಕವಾಗಿ ಇವೊತ್ತಿನ ದಿವಸ ಅದಕ್ಕೆ ಚಾಲನೆ ಕೊಟ್ಟಿದ್ದೇವೆ. ಇವತ್ತು 1350 ಜನರಿಗೆ ಹಣ ವರ್ಗಾವಣೆಯಾಗಿದೆ. ಹಾಗಾಗಿ, ರೈತರ ವಿಷಯ ಬಂದಾಗ ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರೆಲ್ಲರೂ ಸೇರಿ ಕೆಲಸ ಮಾಡಬೇಕು. ಬಜೆಟ್‌ನಲ್ಲಿ ಈಗಾಗಲೇ ರಾಷ್ಟ್ರೀಕೃತ ಬ್ಯಾಂಕುಗಳಿಗೆ 6500 ಕೋಟಿ ರೂಪಾಯಿಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಅಲ್ಲದೇ, ಇದು ನಿರಂತರವಾಗಿ ಮುಂದಿನ ಜುಲೈ ತಿಂಗಳವರೆಗೆ ನಡೆಯುತ್ತದೆ. ಹಾಗಾಗಿ, ಈ ವಿಷಯದ ಬಗ್ಗೆ ಮಾತನಾಡಲು ಯಾವುದೇ ರೀತಿಯಿಂದಲೂ ನಮ್ಮ ಆಕ್ಷೇಪ ಇರುವುದಿಲ್ಲ. ಆದರೆ, ಮಾನ್ಯ ಉಪ ಮಂತ್ರಿಗಳು ಹೇಳಿದ ರೀತಿ ಪದಗಳ ಬಗ್ಗೆ ಗಾಂಭೀರ್ಯತೆ ಇರಲಿ ಎಂದು ನಾನು ಹೇಳುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಅಪ್ಪಾಜಿಗೌಡರು ಆಗಲೇ ಮಾತನಾಡುವುದಕ್ಕೆ ಮೊದಲು ಎದ್ದು ನಿಂತಿದ್ದರು. ಮೊದಲು ಅವರು ಮಾತನಾಡಲಿ. ಮಾನ್ಯ ಅಪ್ಪಾಜಿಗೌಡರೇ, ಯಾವಾಗಲಾದರೂ ಸಭಾಪತಿಗಳು ಎದ್ದು ನಿಂತಾಗ ತಾವು ಕುಳಿತುಕೊಳ್ಳಬೇಕು. ಈಗ ತಾವು ಏನು ಹೇಳಬೇಕೋ ಅದನ್ನು ಹೇಳಿ.

**ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸದನ ಪ್ರಾರಂಭವಾಗುವ ಎರಡು ದಿನ ಮೊದಲು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಮತ್ತು ಗುಲ್ಬರ್ಗಾ ಜಿಲ್ಲೆಯ ಸೇಡಂನಲ್ಲಿ ಒಂದು ಭಯದಿಂದ ಋಣಮುಕ್ತ ಪತ್ರವನ್ನು ವಿತರಣೆ ಮಾಡಿದರೆಂಬ ಪದವನ್ನು ಬಳಸಿದ್ದಾರೆ. ಇದು ಬಹಳ ಗಂಭೀರವಾದಂತಹ ವಿಷಯ. ಸದನದಲ್ಲಿ ವಿರೋಧ ಪಕ್ಷದವರು ಯಾವ ಪ್ರಶ್ನೆ ಕೇಳುತ್ತಾರೆ, ಅದಕ್ಕೆ ಉತ್ತರ ಹೇಳುವುದಕ್ಕೆ ಸರ್ಕಾರ ಸಮರ್ಥವಾಗಿದೆ. ಸರ್ಕಾರ ರೈತರಿಗೋಸ್ಕರ ಸಾಲ ಮನ್ನಾ ಮಾಡಿ, ಅದನ್ನು ಬಗೆಹರಿಸುವ ನಿಟ್ಟಿನಲ್ಲಿ ಒಂದು ದೊಡ್ಡ ಸಾಧನೆ ಮಾಡಿದೆ. ಆದರೆ, ಸದನ ಇನ್ನು ಎರಡು ದಿನ ಇರುವಾಗ ನಾಟಕವಾಡಿದ್ದಾರೆ, ಭಯ ಪಟ್ಟಿದ್ದಾರೆ ಎನ್ನುವಂತಹ ಪದ ನಿಜವಾಗಲೂ ಬಹಳ ಗಂಭೀರವಾದಂತಹ ವಿಷಯ. ಸರ್ಕಾರಕ್ಕೆ ವಿರೋಧ ಪಕ್ಷದವರು ಪ್ರಶ್ನೆಗಳನ್ನು ಕೇಳುತ್ತಾರೆ ಅದನ್ನು ಎದುರಿಸುವ ಶಕ್ತಿ ಸರ್ಕಾರಕ್ಕೆ ಇದೆ ನಾನು ಹೇಳುತ್ತೇನೆ.

**ಸಭಾಪತಿಯವರು:–** ಈಗ ಶ್ರೀ ಹೆಚ್.ಎಂ. ರಮೇಶ್‌ಗೌಡರವರು ಮಾತನಾಡಲಿ.

**ಶ್ರೀ ಹೆಚ್.ಎಂ. ರಮೇಶ್‌ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಅಗಲಿದ ಗಣ್ಯರಿಗೆ ಸಂತಾಪ ಸೂಚಿಸಿದ ನಂತರ ಮಾನ್ಯ ವಿರೋಧ ಪಕ್ಷದ ನಾಯಕರ ಒತ್ತಾಯದ ಮೇರೆಗೆ ಸದನವನ್ನು ತಾವು ಮುಂದೂಡಿದ್ದೀರಿ. ನಾನು ಕೂಡ ಈ ಸದನದಲ್ಲಿ ಬಹಳ ಕಿರಿಯ ಸದಸ್ಯನಾಗಿದ್ದೇನೆ. ನಾವು ಕೆಲವು ಬಾರಿ ಏನಾದರೂ ತಿಳಿದೋ ಅಥವಾ ತಿಳಿಯದೋ ತಪ್ಪು ಮಾಡಿದರೆ ಯಾರಾದರೂ ಹಿರಿಯರು ಅದನ್ನು ತಪ್ಪು ಎಂದು ಹೇಳಿದಾಗ ನಾವು ಅದಕ್ಕೆ ತಲೆಬಾಗುತ್ತೇವೆ. ನಾವು ಕಲಿಯುವುದು ಬಹಳಷ್ಟು ಇದೆ. ನಾವು ತಮ್ಮಲ್ಲಿಯೇ ಸಾಕಷ್ಟು ವಿಷಯಗಳನ್ನು ಚರ್ಚೆ ಮಾಡಿ ನಾವು ಸದನದಲ್ಲಿ ಮಾತನಾಡುತ್ತೇವೆ. ಆದರೆ, ಶ್ರೀ ಎನ್. ರವಿಕುಮಾರ್ ರವರು ಮಾಜಿ ಪ್ರಧಾನ ಮಂತ್ರಿಗಳ ಬಗ್ಗೆ ಇರಬಹುದು ಅಥವಾ ಹಾಲಿ ಮುಖ್ಯಮಂತ್ರಿಗಳ ಬಗ್ಗೆ ಇರಬಹುದು ಬಹಳ ಹಗುರವಾಗಿ ಬಹಳಷ್ಟು ಸಾರಿ ಮಾತನಾಡಿದ್ದಾರೆ. ಆದರೆ, ಅವರು ಆ ರೀತಿ ಮಾತನಾಡುವುದು ಇದೆಯಲ್ಲ, ಅದು ಅವರಿಗೆ ಶೋಭೆ ತರತಕ್ಕಂಥದ್ದಲ್ಲ. ಆ ರೀತಿ ಹರಿತವಾಗಿ ಮಾತನಾಡುವುದನ್ನು ಅವರು ಬಿಡಬೇಕಾಗುತ್ತದೆ. ಈ ಬಗ್ಗೆ ಪತ್ರಿಕೆಗಳಲ್ಲಿ ಬಂದಂತಹ ವರದಿಗಳನ್ನು ನಾವು ನೋಡಿದ್ದೇವೆ. ಏಕೆಂದರೆ, ಅವರು ಮಾತನಾಡುವಾಗ ಮಾತಿನ ಮೇಲೆ ಹಿಡಿತ ಇರಬೇಕಾಗುತ್ತದೆ. ಅದಕ್ಕಿಂತಲೂ ಹೆಚ್ಚಾಗಿ, ಕಠೋರವಾಗಿ ಮಾತನಾಡುವುದಕ್ಕೆ ನಮಗೂ ಸಹ ಬರುತ್ತದೆ. ಆ ರೀತಿ ಅವರೇನಾದರೂ ಪ್ರಚಾರದ ದೃಷ್ಟಿಯಿಂದ, ಮಾಜಿ ಪ್ರಧಾನ ಮಂತ್ರಿಗಳ ಬಗ್ಗೆ ಮಾತನಾಡಿದ ಮಾತ್ರಕ್ಕೆ ನಮಗೆ ಬಹಳ ಪ್ರಚಾರ ಸಿಗುತ್ತದೆ ಎಂದು ಮಾತನಾಡುವುದು ತಪ್ಪಾಗುತ್ತದೆ. ಆ ರೀತಿ ಮಾತನಾಡುವುದು ತಪ್ಪು ಎಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸದನವನ್ನು ಈ ರೀತಿ ಗಂಭೀರತೆಯ ವಾತಾವರಣದಲ್ಲಿ ನಡೆಸುವಂತಹ ಪರಿಸ್ಥಿತಿ ಬರುತ್ತದೆಂದು ನನಗೆ ಅನಿಸಿರಲಿಲ್ಲ. ಈಗ ನನ್ನ ಪ್ರಶ್ನೆಗೆ ಗೃಹ ಮಂತ್ರಿಗಳು ಉತ್ತರ ನೀಡಬೇಕು. ಅವರು ಈ ಸದನದಲ್ಲಿ ಬಹಳ ವರ್ಷಗಳ ಕಾಲ ಸಭಾನಾಯಕರಾಗಿದ್ದರು. ಶ್ರೀ ಎಂ.ಸಿ. ನಾಣಯ್ಯನವರು ಇದ್ದಂತಹ ಸದನ ಇದು. ಆ ಸಂದರ್ಭದಲ್ಲಿ ಡಾ. ವಿ.ಎಸ್.ಆಚಾರ್ಯರವರು ಸಭಾನಾಯಕರಾಗಿದ್ದರು. ಶ್ರೀ ಎಸ್.ಆರ್. ಪಾಟೀಲ್‌ರವರು ಸಭಾನಾಯಕರಾಗಿದ್ದರು. ಈ ಸಭೆ ಅಲ್ಲಿಂದ ಇಲ್ಲಿಯವರೆಗೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿಪಕ್ಷಗಳು ಟೀಕೆ ಮಾಡಿದಂತಹ ಸಂದರ್ಭದಲ್ಲಿ ಇಂತಹ ಪದ ಪ್ರಯೋಗ ಮಾಡಿದಂತಹ ಉದಾಹರಣೆಗಳು ಇಲ್ಲವೇ? ಶ್ರೀ ಎಂ.ಸಿ. ನಾಣಯ್ಯನವರಿಂದ ಪ್ರಾರಂಭವಾಗಿ, ಶ್ರೀ ವಿ.ಆರ್. ಸುದರ್ಶನ್‌ವರೆಗೆ, ಶ್ರೀ ಎಂ.ಪಿ.ನಾಡಗೌಡರವರೆಗೆ ಈ ಸದನವನ್ನು ನಾವು ನೋಡಿದ್ದೇವಲ್ಲ, ಇಲ್ಲಿಯವರೆಗೆ ಈ ಸದನದಲ್ಲಿ ಸರ್ಕಾರವನ್ನು ಟೀಕಿಸುವ ಭರದಲ್ಲಿ ಸರ್ಕಾರ ರೈತರಿಗೆ ಕಣ್ಣೊರೆಸುವ ತಂತ್ರ ಮಾಡಿದೆ ಎಂದು ಹೇಳಿದಂತಹ ಉದಾಹರಣೆಗಳು ಇದೆಯೇ ಅಥವಾ ಇಲ್ಲವೋ? ಇದ್ದರೆ, ಶ್ರೀ ಎನ್.ರವಿಕುಮಾರ್‌ರವರು ಹೇಳಿದ ಪದ ಶತಾಪರಾಧವಾಗುತ್ತದೆಯೇ? ನನ್ನ ಆಕ್ಷೇಪ ಏನೆಂದರೆ, ಒಂದು ವೇಳೆ ಪ್ರತಿಪಕ್ಷಗಳು ಸರ್ಕಾರವನ್ನು ಹೊಗಳಬೇಕು ಎಂದು ನಿರೀಕ್ಷೆ ಮಾಡಿದರೆ ಅದು ಅವರ ತಪ್ಪಲ್ಲ. ಆಯಿತು, ನಮ್ಮನ್ನು ಹೊಗಳಬೇಕಾಗಿತ್ತು ಎಂದು ತಿಳಿದುಕೊಂಡರೆ ಅದು ಅವರ ತಪ್ಪಲ್ಲ, ಅದು ಅವರ ಆಶಯ ಆಗಿರಬಹುದಾಗಿದೆ. ಆದರೆ, ನಮ್ಮ ಜವಾಬ್ದಾರಿ ಅದಲ್ಲ. ನಮ್ಮ ಜವಾಬ್ದಾರಿ ಟೀಕೆ ಮಾಡುವುದು. ಟೀಕೆ ಮಾಡುವ ಸಂದರ್ಭದಲ್ಲಿ ವೈಯಕ್ತಿಕ ನಿಂದನೆ ಸಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವೈಯಕ್ತಿಕ ನಿಂದನೆ ಸಲ್ಲದು. ಆದರೆ, ಇದು ಆರೋಗ್ಯಕರವಾದ ಟೀಕೆಗಳಲ್ಲಿ ಒಂದು. ಸರ್ಕಾರ ಕಣ್ಣೊರೆಸುವ ತಂತ್ರ ಮಾಡುತ್ತಿದೆ, 50 ಲಕ್ಷ ರೂಪಾಯಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ, 25 ಲಕ್ಷ ರೂಪಾಯಿ ಬಂದಿದೆ. ಆಗ ಪ್ರತಿಪಕ್ಷದವರು ಉತ್ತರ ನೀಡುವಾಗ, *“ಏನ್ ರವಿಕುಮಾರ್‌ರವರೇ, ತಾವು ಕಣ್ಣೊರೆಸುವ ತಂತ್ರ ಎಂದು ಹೇಳಿದ್ದೀರಲ್ಲಾ, ಅದು ಯಾವ ರೈತರಿಗೆ ಕಡಿಮೆಯಾಗಿದೆ, ಎಲ್ಲಿ ಅನ್ಯಾಯವಾಗಿದೆ ಹೇಳಿ, ಎಲ್ಲಿ ತಪ್ಪಾಗಿದೆ ಉದಾಹರಣೆಗೆ ನೀಡಿ”* ಎಂದು ವಿಪಕ್ಷಗಳನ್ನು ಚೇಡಿಸುತ್ತಾರೆ. ಇದು ಪ್ರಜಾಪ್ರಭುತ್ವದ ಸಂಪ್ರದಾಯಗಳ ಒಂದು ನಿಯಮ. ಅದನ್ನು ಹೊರತುಪಡಿಸಿ, ಪ್ರತಿಪಕ್ಷಗಳು ಒಂದು ರೀತಿಯ ಮಾತಿನ ದರ್ಪ, ಮಾತಿನ ಓಘಾ, ಪರೋಕ್ಷವಾಗಿ ಹಾಕುವಂತಹ ಬೆದರಿಕೆಗಳು, ಹೀಗೆ ಮಾಡಿದರೆ ವಿರೋಧ ಪಕ್ಷದಲ್ಲಿ ಕೆಲಸ ಮಾಡುವುದು ಕಷ್ಟವಾಗುತ್ತದೆ. ದಯವಿಟ್ಟು, ಇದನ್ನು ಅರ್ಥ ಮಾಡಿಕೊಳ್ಳಬೇಕು.

**ಸಭಾಪತಿಯವರು:–** ಪರೋಕ್ಷವಾಗಿ ಯಾರು ಬೆದರಿಕೆ ಹಾಕಿದ್ದಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಈ ಸದನದಲ್ಲಿ ಬಹಳ ವರ್ಷಗಳ ಕಾಲ ಸದಸ್ಯರಾಗಿದ್ದೀರಿ. ನನಗೆ ಇಲ್ಲಿ ನೋವು ಇರುವುದೇನೆಂದರೆ, *“ತಾವು ಇಂತಹ ಪದ ಪ್ರಯೋಗ ಮಾಡಿದ್ದೀರಿ ಅದು ಸರಿಯಲ್ಲ, ಇದು ತಪ್ಪಾಗಿದೆ, ಇದು ಬೇಜಾಬ್ದಾರಿ”* ಎಂದು ಹೇಳಲಿ ಅದನ್ನು ನೋಡೋಣ. ಅದನ್ನು ಬಿಟ್ಟು, ನಿಮಗೆ ಒಬ್ಬರಿಗೆ ಮಾತನಾಡುವುದಕ್ಕೆ ಬರುತ್ತದೆಯೇ, ನೋಡುತ್ತೇವೆ ಎನ್ನುವಂತಹ ಪರೋಕ್ಷವಾಗಿ ಬೆದರಿಕೆ ಹಾಕುವಂತಹ

ಮಟ್ಟಕ್ಕೆ ಈ ಸದನ ಬಂದರೆ, ಅದಕ್ಕೆ ತಾವು ಸುಮ್ಮನಿದ್ದರೆ, ಈ ಸದನದಲ್ಲಿ ವಿರೋಧ ಪಕ್ಷದವರಾಗಿ ಕೆಲಸ ಮಾಡುವುದು ನಮಗೆ ಕಷ್ಟ.

**ಸಭಾಪತಿಯವರು:–** ನೋಡುತ್ತೇವೆಂದು ಯಾರು ಹೇಳಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಶ ಪೂಜಾರಿ:–** ಮಾನ್ಯ ಸಭಾಪತಿಯವರೇ, ಏಕೆಂದರೆ, ನಾನೂ ಕೂಡ ಸುಮಾರು 9–10 ವರ್ಷಗಳಿಂದ ಈ ಸದನವನ್ನು ನೋಡಿದ್ದೇನೆ. ಶ್ರೀ ಎಂ.ಸಿ. ನಾಣಯ್ಯರವರಿಂದ ಪ್ರಾರಂಭವಾಗಿ ಗೃಹಮಂತ್ರಿಗಳವರೆಗೆ ಸಭಾನಾಯಕರಾಗಿ ಕೆಲಸ ಮಾಡಿದ್ದನ್ನು ನೋಡಿದ್ದೇನೆ. ಆದರೆ, ಈ ರೀತಿಯ ವಾತಾವರಣವನ್ನು ನೋಡಿರಲಿಲ್ಲ. ಇದೊಂದು ರೀತಿಯ ಪ್ರತಿಪಕ್ಷಗಳ ಮೇಲೆ ಗದಾಪ್ರಹಾರ ಮಾಡುವ, ನಮ್ಮ ವಾಕ್ ಸ್ವಾತಂತ್ರ್ಯವನ್ನು ಕಸಿಯುವ, ನಮ್ಮ ವಿಮರ್ಶೆಯನ್ನು ತುಂಡರಿಸುವಂತಹ ಕೆಲಸಗಳು ನಡೆಯುತ್ತಿದೆ.

**ಸಭಾಪತಿಯವರು:–** ಆ ರೀತಿಯ ಮಾತುಗಳನ್ನು ಯಾರು ಹೇಳಿದ್ದಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾರು ಹೇಳದೇ ಇದ್ದರೂ ಸಹ ನನಗೆ ಅರ್ಥವಾಗುತ್ತದೆಯಲ್ಲವೇ? ದಯವಿಟ್ಟು, ನಾನು ತಮ್ಮಲ್ಲಿ ಆಗ್ರಹ ಪಡಿಸುವುದೇನೆಂದರೆ, ಇಂತಹ ಶಬ್ಧಗಳ ಬಳಕೆ ಬಂದರೆ, ನಾವು ಕೂಡ ಪ್ರತಿಪಕ್ಷಗಳು ಜಾಗೃತವಾಗಿರುವಂತಹ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕಾಗುತ್ತದೆ ಎಂದು ತಮಗೆ ಅರಿಕೆ ಮಾಡುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ಈಗ ಶ್ರೀ ಎಸ್.ಎಲ್. ಭೋಜೇಗೌಡರವರು ಮಾತನಾಡುತ್ತಾರೆ. ಶ್ರೀ ಎನ್. ರವಿಕುಮಾರ್‌ರವರೇ ತಮಗೆ ನಂತರ ಮಾತನಾಡಲು ಅವಕಾಶ ಕೊಡುತ್ತೇನೆ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಬಳಸಿದಂತಹ ಪದಗಳು ಅಂತಹ ಕೆಟ್ಟ ಪದಗಳಲ್ಲ. ಈ ಸಮಸ್ಯೆ ತಿಳಿಯಾಗಲಿ, ಉದ್ವೇಗವಾಗುವುದು ಬೇಡ. ಕೇವಲ ಟೀಕೆಗಳನ್ನು ಮಾಡುತ್ತಲೇ ಇದ್ದರೆ ಸದನ ನಡೆಯುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ನಾನು ಕೂಡ ಉದ್ವೇಗವಾಗುವುದು ಬೇಡವೆಂದು ಹೇಳಿದ್ದೇನೆ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಮಾತಿನಲ್ಲಿ ಸತ್ಯವಿದೆ. ಆದುದರಿಂದ ಸದನ ನಡೆಸಿ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(364) 6.10 11.12.2018 ವೈಎಲ್–ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:–** ದಯಮಾಡಿ ಮಾನ್ಯ ಸದಸ್ಯರೆಲ್ಲರಿಗೂ ಹೇಳುವುದೇನೆಂದರೆ, ಯಾರು ಉದ್ವೇಗಕ್ಕೆ ಒಳಗಾಗುವುದು ಬೇಡ. ಅಂತಹ ಶಬ್ದಗಳನ್ನು ಬಳಸುವುದು ಸರಿಯಲ್ಲ. ಬಳಸಬಾರದು.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಗಂಭೀರವಾಗಿರುವಂಥ ಮೊನಚು ಮಾತುಗಳು ನನಗೆ ಬಹಳ ಖುಷಿಯಾಗುತ್ತದೆ. ಅವರ ಮೊನಚು ಮಾತುಗಳಲ್ಲಿ ಅಷ್ಟು ವಾಙ್ಮಯಗಳು ಇವೆ. ಅವರು ಮಾತನಾಡುವ ಸಂದರ್ಭದಲ್ಲಿ ಎಲ್ಲಿ ಅಕ್ಷರಗಳು ತಪ್ಪಿ ಹೋಗುತ್ತದೆ ಎಂದು. . .

**ಸಭಾಪತಿಯವರು:–** ಅವರ ಮಾತಿಗೆ ತಾವು ತಲೆ ಅಲಾಡಿಸುತ್ತಿದ್ದಿರಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಹಾಗಾಗಿ ಯಾವ ರೀತಿ ವಿರೋಧ ಪಕ್ಷ ಕೆಲಸ ಮಾಡುತ್ತದೆ ಎನ್ನುವುದನ್ನು ನಾವು ನೋಡಬೇಕಾಗಿದೆ ನಮ್ಮ ಕರ್ತವ್ಯವೂ ಇದೆ. ಹಾಗಾಗಿ ಎಲ್ಲೋ ಒಂದು ಕಡೆ ವಿರೋಧ ಪಕ್ಷದ ನಾಯಕರು ಮನಸ್ಸಿಗೆ ನೋವು ಉಂಟು ಮಾಡಿಕೊಂಡಿರುವುದು ಕಾಣುತ್ತದೆ. ಆ ರೀತಿ ಏನೂ ಇಲ್ಲ. ನಮಗೆ ಅವರ ಮಾತನ್ನು ಕೇಳುವುದಕ್ಕೆ ಬಹಳ ಇಷ್ಟವಾಗುತ್ತದೆ. ನನಗೆ ಏಕೆಂದರೆ, ಯಾರು ಸಹ ಕಣ್ಣಿದ್ದೂ ಕುರುಡರಂತೆ ನಾಟಕವಾಡಬಾರದು.

**ಸಭಾಪತಿಯವರು:–** ಮತ್ತೆ ಶುರುವಾಗಿಯಿತ್ತೆ?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಆ ರೀತಿ ಏನಿಲ್ಲ. ವಿಷಯವನ್ನು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಸಾಕು ಬಿಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಮಗೆ ಗೊತ್ತಿದ್ದು ಸಹ ವಿರೋಧ ಪಕ್ಷದ ಜವಾಬ್ದಾರಿ ಎಂದು ಟೀಕೆ ಮಾಡುವುದು ಸಹ ಸಲ್ಲದು. ಏಕೆಂದರೆ, ಖುದ್ದಾಗಿ ಮಾನ್ಯ ಮುಖ್ಯಮಂತ್ರಿಗಳು ಹತ್ತಾರು ಜಿಲ್ಲೆಗಳಲ್ಲಿ ಪ್ರಗತಿ ಪರಿಶೀಲನಾ ಸಭೆಗೆ ಹಾಜರಾಗಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳು . . .

**ಸಭಾಪತಿಯವರು:–** ತಾವೂ ಉತ್ತರವನ್ನು ನೀಡುವುದಕ್ಕೆ ಹೋಗುತ್ತಿದ್ದೀರಾ? ಉತ್ತರವನ್ನು ನೀಡುವುದು ಬೇಡ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ನೀಡುತ್ತಿಲ್ಲ.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ,....

(ಗೊಂದಲ)

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೆ,....

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಉತ್ತರವನ್ನು ನೀಡುತ್ತಿಲ್ಲ, ಮಾನ್ಯ ಸಭಾನಾಯಕರು ಉತ್ತರವನ್ನು ನೀಡುತ್ತಾರೆ.

(ಗೊಂದಲ)

**ಸಭಾಪತಿಯವರು:-** ತಾವು ಮಾತನಾಡಿದ್ದು ಸಾಕು, ಬೇಗನೆ ಮುಗಿಸಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸಲಹೆ ಕೊಡುವುದಕ್ಕೆ ಇಚ್ಛಿಸುತ್ತೇನೆ. ಅದೇನೆಂದರೆ, ದಯಮಾಡಿ ನನ್ನನ್ನು ಸೇರಿಸಿಕೊಂಡು ಹಲವಾರು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾಗಿರಬಹುದು ಮತ್ತು ವಿಧಾನ ಸಭೆಯ ಸದಸ್ಯರಾಗಿರಬಹುದು ಸಾಲ ಮನ್ನಾ ಯೋಜನೆಯಲ್ಲಿ ಫಲಾನುಭವಿಗಳಿದ್ದಾರೆ. ಅವರ ಸ್ನೇಹಿತರುಗಳೇ ಇದ್ದಾರೆ. ದಯಮಾಡಿ, ಅದೆಲ್ಲವನ್ನು ತಿಳಿದುಕೊಂಡು, ನಂತರ ಸಾಲ ಮನ್ನಾ ಆಗಿಲ್ಲ ಎನ್ನುವ ವಿಚಾರದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದು ಒಳ್ಳೆಯದು ಎಂದು ಸಲಹೆ ನೀಡುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಉಪಯೋಗಿಸಿರುವ ಶಬ್ದದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಈ ವಿಷಯ ಶಬ್ದಗಳ ಆಧಾರದ ಮೇಲೆ ನಡೆಯುವಂಥ ಸದನ ಆಗಿಲ್ಲ. ಬರಗಾಲದ ವಿಷಯದ ಬಗ್ಗೆ ಮಾತನಾಡುವುದಕ್ಕೆ ಬರುತ್ತೇನೆ. ಬರಗಾಲ ಸಮಸ್ಯೆಯೂ ರೈತರನ್ನು ಕಿತ್ತು ತಿನ್ನುತ್ತಿದೆ. ಕೆಲವರು ಅಳುವಾಗ ಕಣ್ಣೀರು ಬರುವುದಿಲ್ಲ, ಕೆಲವರಿಗೆ ಕಣ್ಣೀರು ಬರುತ್ತದೆ. ಆದರೆ ವಿಷಯವೇನೆಂದರೆ, ರಾಜ್ಯ ಸರ್ಕಾರದಿಂದ 25.00 ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡಲಾಗಿದೆ, ಈ ಮೊತ್ತವನ್ನು survey ಮಾಡಿದಂಥ ಸಂದರ್ಭದಲ್ಲಿ ನೋಡಿದಾಗ ಯಾವುದಕ್ಕೂ ಈ ಅನುದಾನ ಸಾಕಾಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ 16,600 ಕೋಟಿ ರೂಪಾಯಿ ವೆಚ್ಚದ ಒಂದು ವರದಿಯನ್ನು ಸಲ್ಲಿಸಿದೆ. ಇನ್ನೂ ಜಾಸ್ತಿ ಅನುದಾನ ಬೇಕಾಗಬಹುದು. ಆದರೆ, ಕೇಂದ್ರ ಸರ್ಕಾರದಿಂದ ಆದಷ್ಟು ಬೇಗ ಅನುದಾನ ಬರಬೇಕು. ಆದರೆ, ನನಗೆ ಅನ್ನಿಸುತ್ತಿದೆ ರಾಜ್ಯ ಸರ್ಕಾರ ಯಾವುದಾದರೂ ಇಲಾಖೆಯಿಂದ ಅನುದಾನವನ್ನು ತೆಗೆದು ಪ್ರತಿ ತಾಲ್ಲೂಕಿಗೆ ಕೋಟಿಗಳ ಸಂಖ್ಯೆಯಲ್ಲಿ ಕೂಡಲೇ ಅನುದಾನ ಬಿಡುಗಡೆ ಮಾಡಿ, ರೈತನ ಸಂಕಷ್ಟಕ್ಕೆ ಪರಿಹಾರವನ್ನು ಒದಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಗೋವುಗಳಿಗೆ, ದನ-ಕರುಗಳಿಗೆ ನೀರು-ಮೇವು ಇಲ್ಲದೇ ಗೋಶಾಲೆಗೆ ತಳ್ಳುತ್ತಿದ್ದಾರೆ. ರೈತರ ಕಷ್ಟಕ್ಕೆ ತಕ್ಷಣ ಭಾಗಿಯಾಗದಿದ್ದರೆ, ಯಾರು ಕಟುಕರಿದ್ದಾರೆ, ಅವರಿಗೆ ಎಷ್ಟು ಬೆಲೆ ಸಿಗುತ್ತದೆ ಅಷ್ಟಕ್ಕೆ ಗೋವುಗಳನ್ನು ರೈತರು ಮಾರಾಟ ಮಾಡುತ್ತಿದ್ದಾರೆ. ನಂತರ ಗೋವುಗಳನ್ನು ಕೊಂಡುಕೊಳ್ಳುವುದಕ್ಕೆ ಬಹಳಷ್ಟು ಹಣ ಬೇಕಾಗುತ್ತದೆ. ಹಾಗಾಗಿ ರೈತರು ಕಷ್ಟದಲ್ಲಿದ್ದಾಗ ಸರ್ಕಾರ ಬೇಗ ಪರಿಹಾರವನ್ನು ನೀಡಬೇಕೆಂಬುದಷ್ಟೇ ನಮ್ಮ ಅಗ್ರಹವಾಗಿದೆ. ಮತ್ತೊಂದು ವಿಚಾರವೇನೆಂದರೆ, ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಜನ ಜೀವನ ನಿರ್ವಹಣೆಗಾಗಿ ಗುಳೆ ಹೋಗುತ್ತಿದ್ದಾರೆ. ನರೇಗಾ ಯೋಜನೆ ಕೆಳಗಡೆ ಯಾವ ಉದ್ಯೋಗವನ್ನು ಒದಗಿಸಬೇಕು, ಅದನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಿಲ್ಲಾಧಿಕಾರಿಗಳು ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕೂಡಲೇ ಪ್ರಾರಂಭ ಮಾಡಬೇಕು. ಕೆಲವು ಕಡೆ ಪ್ರಾರಂಭ ಮಾಡಲಾಗಿದೆ. ಆದರೆ, ದೊಡ್ಡ ಪ್ರಮಾಣದಲ್ಲಿ ಗುಳೆ ಹೋಗುವುದನ್ನು ತಡೆದು, ದೊಡ್ಡ ಪ್ರಮಾಣದಲ್ಲಿ ಕೆಲಸವನ್ನು ಒದಗಿಸುವಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಅಂಶವನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಗೋಶಾಲೆಗಳು ಬಹಳಷ್ಟು ತಾಲ್ಲೂಕುಗಳಲ್ಲಿ ತೆರೆದಿರುವುದಿಲ್ಲ, ಗೋಶಾಲೆಗಳನ್ನು ತಕ್ಷಣವೇ ತೆರೆಯಬೇಕು. ಜನರಿಗೆ ಕುಡಿಯುವ ನೀರಿಗೂ ಬವಣೆ ಇದ್ದು, borewell ಹಾಕುವುದಕ್ಕೆ ಹಣವೇ ಇಲ್ಲ. 25 ಲಕ್ಷ ರೂಪಾಯಿ ಸಾಕಾಗುವುದಿಲ್ಲ. ಹಾಗಾಗಿ ಜಿಲ್ಲಾಧಿಕಾರಿಗಳ ಹತ್ತಿರ ಮತ್ತು ಬೇರೆ ಬೇರೆ ಇಲಾಖೆಗಳಿಂದ ಇವುಗಳಿಗೂ ಸಹ ಸರ್ಕಾರ ತಕ್ಷಣ ಅನುದಾನ ಒದಗಿಸಬೇಕು, ಸರ್ಕಾರ ಸಹಾಯಕ್ಕೆ ಬರಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ವಿಷಯದ ಬಗ್ಗೆ ಸಾಕಷ್ಟು ಜನ ಮಾತನಾಡುವವರು ಈ ಸದನದಲ್ಲಿರಬಹುದು. ಇದೆಲ್ಲವನ್ನು ನೋಡಿದಂಥ ಸಂದರ್ಭದಲ್ಲಿ ನನಗೆ ಅನ್ನಿಸುತ್ತಿರುವುದೇನೆಂದರೆ, ಸಮಸ್ಯೆಗಳನ್ನು ಪರಿಹರಿಸಲು ಕೆಲವು ಸಚಿವರು ಭೇಟಿ ನೀಡುತ್ತಿದ್ದಾರೆ, ಕೆಲವು ಸಚಿವರು ಭೇಟಿ ನೀಡುತ್ತಿಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ, ಬಹಳಷ್ಟು ಜನ ಸಚಿವರು ರಾಜ್ಯದಲ್ಲಿ ಭೇಟಿ ನೀಡುತ್ತಿಲ್ಲ; ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡುತ್ತಿಲ್ಲ. ರೈತರ ಗೋಳನ್ನು ಕೇಳುವಂಥವರು ಇಲ್ಲ. ಇನ್ನೂ ಸಾಲ ಮನ್ನಾ ವಿಷಯಕ್ಕೆ ಸಂಬಂಧಪಟ್ಟಂತೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಆದರೆ, ಸಾಲ ಮನ್ನಾ ಆಗದೇ ಇರುವುದರಿಂದ ಅವರ ಕೈಯಲ್ಲಿ ಹಣ ಇಲ್ಲದೇ ಇರುವುದರಿಂದ ತಕ್ಷಣಕ್ಕೆ ಏನು ಹಣ ಬೇಕು, ಉದಾಹರಣೆಗೆ ಒಣಗಿ ಹೋಗಿರುವ ಬೆಳೆಯನ್ನು ತೆಗೆಯುವುದಕ್ಕೆ ಈಗ ಇರುವ ಸಾಲವನ್ನು ತೀರಿಸುವವರೆಗೂ ರೈತರಿಗೆ ಸಾಲವೂ ಸಿಗುವುದಿಲ್ಲ. ಹಾಗಾಗಿ ರೈತರು ಇನ್ನಷ್ಟು ಕಷ್ಟಗಳ ಬಲೆಯಲ್ಲಿ ಸಿಕ್ಕಿಕೊಂಡಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಮೊನ್ನೆ ತಾನೇ ಸೇಡಂನಲ್ಲಿ ಹಾಗೂ ದೊಡ್ಡಬಳ್ಳಾಪುರದಲ್ಲಿ ಸಾಲ ಮನ್ನಾ ಮಾಡುವಂಥ ಒಂದು ಕಾರ್ಯಕ್ರಮವನ್ನೇನು ಮಾಡಿದ್ದರು, ಕಣ್ಣು ಒರೆಸುವ ತಂತ್ರವನ್ನು ಮಾಡಿದ್ದಾರೆ ಎನ್ನುವ ಶಬ್ದವನ್ನು ಹೇಳಿದ್ದೆ. ಈ ಶಬ್ದವು ಬೇಜಾರಾಗುವ ಹಾಗಿದ್ದರೆ ಖಂಡಿತ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ನನಗೆ ಈ ಶಬ್ದದಿಂದ ಬೇಜಾರು ಮಾಡುವಂಥ ಅವಶ್ಯಕತೆ ಇಲ್ಲ. ಆದರೆ, ರೈತರಿಗೆ ಎಷ್ಟು ಬೇಜಾರಾಗಿರುವುದಿಲ್ಲ. ನಮಗೆ ಕಣ್ಣು ಒರೆಸುವ ತಂತ್ರವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ ಎಂದು ಹೇಳಿದ ಮಾತಿಗೆ ನಮ್ಮ ಆಡಳಿತ ಪಕ್ಷದ ಸದಸ್ಯರಿಗೆ, ನಾಯಕರಿಗೆ ಇಷ್ಟು ಬೇಜಾರಾಗುವುದಾದರೆ, ರೈತರ ಸಾಲ ಮನ್ನಾವನ್ನು 24 ಗಂಟೆಯೊಳಗೆ ಮಾಡುತ್ತೇನೆ ಎಂದು 6 ತಿಂಗಳಾದರೂ ಸಾಲ ಮನ್ನಾ ಮಾಡಿಲ್ಲ ಎಂದರೆ, ರೈತರಿಗೆ ಎಷ್ಟು ಬೇಜಾರಾಗಿರುವುದಿಲ್ಲ. ಎರಡನೆಯದಾಗಿ ಎರಡು-ಮೂರು ರೀತಿಯಲ್ಲಿ ಬರಗಾಲದ ಪರಿಸ್ಥಿತಿಯನ್ನು ನೋಡಿರುವ ರೈತರಿಗೆ ಇನ್ನೆಷ್ಟು ಬೇಜಾರಾಗಿರಬಹುದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ,....

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:–** ಮಾನ್ಯ ಭೋಜೇಗೌಡರೆ, ನನ್ನ ಮಾತನ್ನು ಮೊದಲು ಮುಗಿಸುತ್ತೇನೆ. ದಯವಿಟ್ಟು ತಾವು ನಂತರ ಮಾತನಾಡಿ.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಭೋಜೇಗೌಡರೆ, ನಾನು ಮಾತನಾಡುವುದಕ್ಕೆ ಬಿಡಿ. ನಾನು ಖಾರವಾಗಿರುವಂಥ ಮಾತನ್ನು ಏನೂ ಹೇಳಿರುವುದಿಲ್ಲ.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವಾಗ ಈ ರೀತಿ ಮಧ್ಯದಲ್ಲಿ ಎದ್ದು ನಿಂತು ಮಾತನಾಡುವುದು ಸರಿಯಲ್ಲ.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಹಾಗಾಗಿ ನಾನು ಹೇಳುವುದಕ್ಕೆ ಬಯಸುವುದೇನೆಂದರೆ,....

(ಗೊಂದಲ)

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಬಹಳ ಅತಿಯಾಯಿತು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದು ಬಹಳ ಅತಿಯಾಯಿತು. ವಿರೋಧ ಪಕ್ಷದ ಸದಸ್ಯರು ಬೇಡ. ಮಾನ್ಯ ಸಭಾನಾಯಕರಿಗೆ ಹೇಳಿ ನಮ್ಮನ್ನು ಸದನದಿಂದ ಹೊರಗೆ ಕಳುಹಿಸಿ ಬಿಡಿ. ಏನಿದು? ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ?

(ಗೊಂದಲ)

**ಸಭಾಪತಿಯವರು:–** ಮಾನ್ಯ ಭೋಜೇಗೌಡರವರೆ, ಒಂದು ನಿಮಿಷ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ಒಂದು ನಿಮಿಷ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ತಮ್ಮ ಎಲೆಯಲ್ಲಿ ಹೆಗ್ಗಣ ಸತ್ತು ಬಿದ್ದಿದ್ದರೆ, ಇನ್ನೊಬ್ಬರ ಎಲೆಯಲ್ಲಿ ನೊಣ ಹುಡುಕುವ ಕೆಲಸ ಮಾಡುತ್ತಾರೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಭೋಜೇಗೌಡರೆ, ಮಾತನಾಡುವುದೆಂದರೆ ಹೇಗೆ ಬೇಕಾದರೂ ಎದ್ದು ನಿಂತು ಮಾತನಾಡುವುದೇ? ಇದು ಪ್ರಜಾಪ್ರಭುತ್ವ ಸರ್ಕಾರ. ಅವರು ಮಾತನಾಡುತ್ತಾರೆ. ಸರಿ ಇಲ್ಲದ ಶಬ್ದಗಳನ್ನು ಕಡತದಿಂದ ತೆಗೆದು ಹಾಕಲಾಗುತ್ತದೆ. ಮಾತನಾಡುವುದಕ್ಕೆ ಬಿಡಿ. ಅವರಿಗೂ ಮಾತನಾಡುವುದಕ್ಕೆ ಸ್ವಾತಂತ್ರ್ಯ ಇದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಹೆಚ್.ಎಂ.ರಮೇಶ ಗೌಡ(ವಿಧಾನಸಭಾ ಕ್ಷೇತ್ರ):–** ಅವರು ಮಾತನಾಡಿರುವುದರಲ್ಲಿ ಏನು ತಪ್ಪು ಇದೆ? ಗಂಭೀರವಾದ ವಿಚಾರವನ್ನು ಚರ್ಚೆ ಮಾಡುತ್ತಿದ್ದಾರೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಭೋಜೇಗೌಡರೆ, ಬೇರೆಯವರಿಗೆ ಮಾತನಾಡುವುದಕ್ಕೆ ಬಿಡುವುದಿಲ್ಲ ಎಂದರೆ ಹೇಗೆ?

**ಡಾ॥ ಜಿ.ಪರಮೇಶ್ವರ(ಉಪ ಮುಖ್ಯಮಂತ್ರಿಯವರು ಹಾಗೂ ಒಳಾಡಳಿತ ಬೆಂಗಳೂರು ನಗರ ಅಭಿವೃದ್ಧಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬರದ ಬಗ್ಗೆ ಏನು ಟೀಕೆ–ಟಿಪ್ಪಣಿಗಳಿವೆ, ಅದರ ಬಗ್ಗೆ ಮಾತನಾಡಲಿ. ಸರ್ಕಾರ ಉತ್ತರ ನೀಡುವುದಕ್ಕೆ ಸಮರ್ಥವಾಗಿದೆ. ಅವರು ಮಾತನಾಡಲಿ, ದಯವಿಟ್ಟು ಅವರಿಗೆ ಮಾತನಾಡುವುದಕ್ಕೆ allow ಮಾಡಿ.

**ಸಭಾಪತಿಯವರು:–** ಅವರು ಮಾತನಾಡುವಾಗ ತೊಂದರೆ ಮಾಡಬೇಡಿ.

**ಶ್ರೀ ಎನ್.ರವಿಕುಮಾರ್:–** ರೈತರು ಅಧಿಕಾರಿಗಳು, ಶಾಸಕರು, ಎಂ.ಎಲ್.ಎ.ಗಳು, ಸಂಬಂಧಪಟ್ಟ ಸಚಿವರು ಬರುವುದಿಲ್ಲ ಎಂದರೆ, ರೈತರ ಬವಣೆ ಹೇಳುವುದಕ್ಕೂ ಆಗದೇ ಇರುವ ಕಷ್ಟದ ಸ್ಥಿತಿಯಲ್ಲಿ ಸಿಲುಕಿಕೊಂಡಿದ್ದಾರೆ. ಆ ಹಿನ್ನೆಲೆಯಿಂದ ಹೇಳುವುದಕ್ಕೆ ಬಯಸುವುದೇನೆಂದರೆ, 100 ತಾಲ್ಲೂಕುಗಳಲ್ಲಿ ಬರಗಾಲ ಎಂದು ಏನು ಘೋಷಣೆ ಮಾಡಿದ್ದಾರೆ, ಪ್ರತಿ ತಾಲ್ಲೂಕಿನಲ್ಲಿಯೂ ಯಾವ ರೈತ ಕಷ್ಟದ ಪರಿಸ್ಥಿತಿಯಲ್ಲಿದ್ದಾನೆ, ಅವನ ಕಷ್ಟದ ನಿವಾರಣೆಗೋಸ್ಕರ ಆತ ಬಂದು approach ಆಗುವುದಕ್ಕೆ ಪರಿಹಾರವನ್ನು ಕೇಳುವುದಕ್ಕೆ; ಆತನಿಗೆ ಊಟ ಸಿಕ್ಕಿರುವುದಿಲ್ಲವೇ, ಆತನ ಎತ್ತುಗಳಿಗೆ ಮೇವು ಸಿಕ್ಕಿರುವುದಿಲ್ಲವೇ, ಇದ್ಯಾವುದೇ ಇದ್ದರೂ ಸಹ ಆ ರೀತಿ ದೂರನ್ನು ಸ್ವೀಕರಿಸಿ, 100 ತಾಲ್ಲೂಕುಗಳಲ್ಲಿ ಅಂತಹ ಪರಿಹಾರ ಕೇಂದ್ರಗಳನ್ನು ತೆರೆಯಬೇಕೆಂಬ ಸಲಹೆಯನ್ನು ನೀಡುವುದಕ್ಕೆ ಬಯಸುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು, ಮಾನ್ಯ ಪ್ರಿಯಾಂಕ ಖರ್ಗೆಯವರು, ಮಾನ್ಯ ರಾಜಶೇಖರ ಬಸವರಾಜ ಪಾಟೀಲ್, ಶ್ರೀ ಬಂಡೆಪ್ಪ ಖಾಶೆಂಪೂರರವರು ಎಲ್ಲಾ ಸಚಿವರು ಸದನದಲ್ಲಿದ್ದಾರೆ. ಹಾಗಾಗಿ ಯಾವ ಸಚಿವರಿಗೂ ರೈತರ ಬಗ್ಗೆ ಕಳಕಳಿ ಇಲ್ಲವೆಂದು ಹೇಳುತ್ತಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(365)11–12–2018 SK-KS 6-20

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್. ರವಿಕುಮಾರ್ (ಮುಂದು):–** ಮಾನ್ಯ ಸಭಾಪತಿಯವರೇ, ರೈತರು ಏನು ಸಂಕಷ್ಟದಲ್ಲಿದ್ದಾರೆ, ಆ ಸಂಕಷ್ಟವನ್ನು ಪರಿಹಾರ ಮಾಡುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ಸೋತಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಏಕೆ ಎಂದು ಹೇಳುವುದಾದರೆ, ಕರ್ನಾಟಕ ರಾಜ್ಯದಲ್ಲಿ ಈ ಸರ್ಕಾರ

ಬಂದ ಮೇಲೆ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಹೇಳಿದರೆ, ಮೂರು ದಿನಗಳಲ್ಲಿ ಹನ್ನೆರಡು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಹೆಸರನ್ನು ಬರೆದುಬಿಟ್ಟು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ, ಈ ಸರ್ಕಾರ ಬಂದ ಮೇಲೆ ಮೂನ್ನೂರಕ್ಕಿಂತ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರ ಮೂಲಕ ಸರ್ಕಾರವನ್ನು ಕೇಳುವುದಕ್ಕೆ ಬಯಸುತ್ತೇನೆ, ಸರ್ಕಾರ ಕಣ್ಣು ಬಿಟ್ಟಿದ್ದಾಗಿದ್ದರೆ, ಪರಿಹಾರ ಮತ್ತು ಸಂಕಷ್ಟದಲ್ಲಿ ಸರ್ಕಾರ ಒಂದು ರೀತಿಯಲ್ಲಿ ಭಾಗಿಯಾಗಿದ್ದೇ ಆದರೆ, ರೈತರು ಏತಕ್ಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಸರ್ಕಾರಕ್ಕೆ ಶಭಾಷ್‌ಗಿರಿಯನ್ನು ಕೊಡುತ್ತಿದ್ದರು. ಮಾನ್ಯ ಕುಮಾರಸ್ವಾಮಿಯವರಿಗೆ red carpet ಹಾಕಿ, ಬಂದ ಹೋದ ಕಡೆಗಳಲ್ಲೆಲ್ಲಾ ಸ್ವಾಗತವನ್ನು ಮಾಡುತ್ತಿದ್ದರು. ರಾಜ್ಯದಲ್ಲಿ ಸಚಿವರು ಏಕೆ ಪ್ರವಾಸ ಮಾಡುತ್ತಿಲ್ಲ? ಸಂಕಷ್ಟದಲ್ಲಿರುವಂತಹ ರೈತರ ಕಣ್ಣೀರನ್ನು ಒರೆಸುವುದರಲ್ಲಿ ಈ ಸರ್ಕಾರ ಸೋತಿದೆ. ಬಹಳಷ್ಟು ಜನ ಸಚಿವರು ಪ್ರವಾಸವನ್ನು ಮಾಡುತ್ತಿಲ್ಲ. ಮಾನ್ಯ ಭೋಜೇಗೌಡರು ಇರಬಹುದು, ಅನೇಕ ಮಾನ್ಯ ಸದಸ್ಯರು ಇರಬಹುದು, ತಾವು ಮಾತನಾಡಿ ಕಣ್ಣೀರು ಒರೆಸುವ ಕೆಲಸವನ್ನು ಮಾಡಿದರೆಂದು ಏನು ಹೇಳಿದರು, ನಾನೂ observe ಮಾಡಿದ್ದೇನೆ, ರಾಜ್ಯದಲ್ಲಿ ಪ್ರವಾಸವನ್ನು ಮಾಡುತ್ತಿದ್ದೇನೆ. ಇದರಿಂದ ರಾಜ್ಯದಲ್ಲಿರುವ ರೈತರಿಗೆ ಕಣ್ಣೀರು ಬರದೇ ಇರುವಂತಹ ಪರಿಸ್ಥಿತಿ ಉಂಟಾಗಿದೆ. ಇದರ ಬಗ್ಗೆ ಚರ್ಚೆ ಮಾಡಬೇಕೇ ಹೊರತು ನಾನು ಏನೋ ಒಂದು ಶಬ್ಧವನ್ನು ಉಪಯೋಗಿಸಿಬಿಟ್ಟೆ ಮತ್ತು ತಪ್ಪು ಮಾಡಿಬಿಟ್ಟೆ ಎಂದು ಹೇಳಿ, ಆ ಶಬ್ಧದ ಬಗ್ಗೆ ಚರ್ಚೆ ಮಾಡುವಂತಹ ಆಗತ್ಯವಿಲ್ಲ. ಹಾಗಾಗಿ ಸದನ ಕರ್ನಾಟಕ ರಾಜ್ಯದ ರೈತರ ಸಂಕಷ್ಟಕ್ಕೆ ಪರಿಹಾರವನ್ನು ಕೊಡುವಂತಹ ಸದನವಾಗಬೇಕು. ಆ ಸದನದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಿದ್ದಾರೆ, ಮಾನ್ಯ ಸಚಿವರಿದ್ದಾರೆ ಮತ್ತು ಮಾನ್ಯ ಸಭಾಪತಿಯವರು ಸಹ ಇದ್ದಾರೆ. ರೈತರಿಗೆ ಪರಿಹಾರವನ್ನು ಒದಗಿಸಬೇಕು. ಸುಮಾರು 100 ಕೇಂದ್ರಗಳಲ್ಲಿ ತಕ್ಷಣಕ್ಕೆ ಪರಿಹಾರ ಕೇಂದ್ರಗಳನ್ನು ತೆರೆಯಬೇಕು. ರೈತರ ಕಣ್ಣೀರನ್ನು ಒರೆಸುವಂತಹ ಕೆಲಸಗಳನ್ನು ಮಾಡಬೇಕೆಂದು ಹೇಳುತ್ತಾ, ನಾನು ಉಪಯೋಗಿಸಿರುವ ಶಬ್ಧದಿಂದ ತಮಗೆ ಬೇಜಾರಾಗಿದ್ದರೆ, ನಾನು ತಮ್ಮ ಮೂಲಕ ಈ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ ಹಾಗೂ ನನ್ನ ಎರಡು ಮಾತಗಳನ್ನು ಮುಗಿಸುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಕೇಳುವುದಕ್ಕೆ ಬಯಸುವುದೇನೆಂದರೆ, ಆ ಮಹಿಳೆಗೆ, ನಾಲ್ಕು ವರ್ಷ ಎಲ್ಲಿ ಮಲಗಿದ್ದೆ ಎಂದು ತಾವು ಆ ಶಬ್ಧವನ್ನು ಉಪಯೋಗಿಸಿದ್ದೀರಿ. ಈ ರೀತಿಯ ಶಬ್ಧದಿಂದ ಬೇಜಾರಾಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–**ಮಾನ್ಯ ಸಭಾಪತಿಯವರೇ, .....

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್. ರವಿಕುಮಾರ್:-**ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆ ಕೇಳುವುದಕ್ಕೆ ಬಯಸುತ್ತೇನೆ. ನಾನು ನನ್ನ ಮಾತನ್ನು ಹೇಳಿ ಮುಗಿಸುತ್ತೇನೆ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-**ಮಾನ್ಯ ಸಭಾಪತಿಯವರೇ, ಒಂದು ನಿಮಿಷ ...

**(ಗೊಂದಲ)**

**ಸಭಾಪತಿಯವರು:-**ಮಾನ್ಯ ಸಚಿವರು ಹೇಳುತ್ತಾರೆ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪ್ರಿಯಾಂಕ ಖರ್ಗೆ (ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಕಾಳಜಿಯಿಂದ ಮಾತನಾಡುತ್ತಿದ್ದರು. ಆದರೆ ಬಹುಶಃ ಇದನ್ನು ನಾವೆಲ್ಲರೂ ಅವರಿಂದ ನಿರೀಕ್ಷೆ ಮಾಡಿರಲಿಲ್ಲ. ಯಾವುದೇ ಒಂದು ವಾಕ್ಯವನ್ನು out of context ತೆಗೆದುಕೊಂಡು ಬಂದು ಸದನದಲ್ಲಿ ಮಾತನಾಡುವುದು ಸರಿಯಲ್ಲ. ಯಾವುದೇ ಒಂದು ವ್ಯಾಖ್ಯಾನ ಮಾಡಬೇಕಾದರೆ, it should be read in full context. ಯಾವುದೋ ಒಂದು ಮಾಧ್ಯಮದವರು TRP (Television Rating Point) ಗೋಸ್ಕರ, ಅದು ಒಂದನ್ನೇ ತೆಗೆದುಕೊಂಡು ಇಪ್ಪತ್ನಾಲ್ಕು ತಾಸು ಚಾನಲ್ ನಡೆಸಬೇಕೆಂದು ಮಾಡಿದರೆ ಹೇಗೆ? ಅದನ್ನು ತಾವು ಹಾಗೆಯೇ ಮಾತನಾಡಿದರೆ ಅದು ಸರಿಯಲ್ಲ. ರೈತರ ಸಾವಿನ ಬಗ್ಗೆ ಮಾತನಾಡಿದ್ದೀರಿ. ಕರ್ನಾಟಕ ರಾಜ್ಯದ ಬಗ್ಗೆ ಅಂಕಿ-ಅಂಶಗಳನ್ನು ಕೊಟ್ಟಿದ್ದೀರಿ. ದಯವಿಟ್ಟು, 2016-17ನೇ ಸಾಲಿನ ಅಂಕಿ-ಅಂಶಗಳನ್ನು ಕೊಟ್ಟರೆ ....

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮಹಾರಾಷ್ಟ್ರದ ಬಗ್ಗೆ ಕೊಡಲಿ.

**(ಗೊಂದಲ)**

**ಶ್ರೀ ಪ್ರಿಯಾಂಕ ಖರ್ಗೆ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಪರಿಹಾರವನ್ನು ಹುಡುಕೋಣ. ನನಗೆ ಇದರ ಬಗ್ಗೆ ಅಲ್ಲ. ಎಲ್ಲಾ ರಾಜ್ಯಗಳದ್ದು ಕೊಡಿ. ಈಗ conveniently ನಮ್ಮ ರಾಜ್ಯದಷ್ಟೇ ಕೊಡುತ್ತಿದ್ದೀರಿ. 2016-17ನೇ ಸಾಲಿನಲ್ಲಿ ದೇಶದಲ್ಲಿ ಎಷ್ಟು ಜನ ರೈತರು ಆತ್ಮಹತ್ಯೆಯಾಗಿದ್ದಾರೆಂಬುದರ ಬಗ್ಗೆ data ಸಿಗುತ್ತದೆಯಾ? ಯಾವುದೇ data ಸಿಗುವುದಿಲ್ಲ. ಕೇಂದ್ರ ಸರ್ಕಾರದಿಂದ ಯಾವುದೇ ಮಾಹಿತಿ ಬಿಡುಗಡೆಯಾಗಿಲ್ಲ. ಮಾಹಿತಿಯನ್ನು ಏಕೆ withhold ಮಾಡುತ್ತಿದ್ದಾರೆ? ಅದರ ಬಗ್ಗೆಯೂ ಚರ್ಚೆಯಾಗಲಿ, ಏಕೆಂದರೆ ಕೇಂದ್ರ ಸರ್ಕಾರದಿಂದಲೂ ಪರಿಹಾರ ನಮಗೆ ಬೇಕು. ನಾವು ಕೇಂದ್ರ ಸರ್ಕಾರದಿಂದಲೂ ಸಹಾಯವನ್ನು ಕೇಳಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಬೇರೆ ಬೇರೆ ರಾಜ್ಯಗಳ ಅಂಕಿ-ಅಂಶಗಳ ಬಗ್ಗೆ ಕೇಳಿದ್ದೀರಿ. ಆಯಾಯ ರಾಜ್ಯದ ವಿರೋಧಪಕ್ಷದ ನಾಯಕರು ಅದನ್ನು ಮಾಡುತ್ತೇವೆ. ಆದರೆ ಇದಕ್ಕೆ ಕೇಂದ್ರ ಸರ್ಕಾರದಲ್ಲಿ ನೀವು ಏನು ಮಾಡುತ್ತಿದ್ದೀರಿ. ಸರ್ಕಾರದಲ್ಲಿ.....

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಗೊಂದಲ)**

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ತಾವು ಒಂದು ನಿಮಿಷ ಅನುಮತಿಯನ್ನು ಕೊಡಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅದು ಪ್ರಜಾಪ್ರಭುತ್ವದ ನಿಯಮ.

**(ಗೊಂದಲ)**

**ಶ್ರೀ ಪ್ರಿಯಾಂಕ ಖರ್ಗೆ:–** ತಮ್ಮ ಸಹಾಯಕ್ಕೆ ಬರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಮ್ಮ ಸಹಾಯಕ್ಕೆ ತಾವು ಎಲ್ಲಿ ಬರುತ್ತೀರಾ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ,

**(ಗೊಂದಲ)**

**ಶ್ರೀ ಪ್ರಿಯಾಂಕ ಖರ್ಗೆ:–**ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಅನುಮತಿಯನ್ನು ಕೊಟ್ಟರೆ, ತಾವು ಬರದ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ. ಒಳ್ಳೆಯ ಸಲಹೆಗಳು ಬರುತ್ತದೆಂಬುದು ನಮ್ಮ ನಿರೀಕ್ಷೆ ಇದೆ. ನಾನು ಅವರು ಏನು ಅಂಕಿ–ಅಂಶಗಳನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ನಾನು ಮಾತನಾಡಿದ್ದೇನೆ. ನಮ್ಮ ಸದನದಲ್ಲಿ, ಈ ಎಲ್ಲಾ ಮಾಹಿತಿಗಳನ್ನು ಕೊಟ್ಟರೂ ಕೂಡ, ನಮಗೆ ಒಳ್ಳೆಯದಾಗುತ್ತದೆ. ದೆಹಲಿಯಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಜನ ರೈತರು ಇವತ್ತು *‘Kisan Mukti March’* ಮಾಡಿಕೊಂಡು, ಮೊನ್ನೆ ದೆಹಲಿಯಲ್ಲಿ protest ಮಾಡಿದರು. ಅದು ಏಕಾಯಿತು? ಆದಾದ ನಂತರ ಜುಲೈ 2017ರಲ್ಲಿ ತಮಿಳುನಾಡಿನ ರೈತರು ಪೂರ್ವಜರ ಮೊಳೆಗಳನ್ನು ತಂದು, ಅಲ್ಲಿ ಇಟ್ಟು ಅದನ್ನು ಪ್ರದರ್ಶನ ಮಾಡಿ, ನಲವತ್ತೊಂದು ದಿನ protest ಮಾಡಿದರು. ಅದು ಏಕಾಯಿತು? ಸೆಪ್ಟೆಂಬರ್ ಮತ್ತು ಅಕ್ಟೋಬರ್ 2018 ರಲ್ಲಿ ಸುಮಾರು ಮೂವತ್ತು ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಎರಡುನೂರು ಕಿಲೋ ಮೀಟರ್ ಕ್ರಮಿಸಿ ಉತ್ತರ ಪ್ರದೇಶದ ಹರಿದ್ವಾರದಿಂದ ದೆಹಲಿಯವರೆಗೆ ನಡೆದುಕೊಂಡು ಬಂದರು. ಅವರಿಗೆ NCR (National Capital Region) ನಲ್ಲಿ ಪ್ರವೇಶ ಕೊಡಲಾರದೇ, ಅವರ ಮೇಲೆ ದೌರ್ಜನ್ಯ ನಡೆಸಿದರು. ಆದಾದ, ಮೇಲೆ ಸೆಪ್ಟೆಂಬರ್ 2018 ರಲ್ಲಿ *‘Mazdoor Kisan Sangharsh Rally’* ಆಯಿತು. ಅಂದರೆ ಇದು ಹೊಲದ ಕಾರ್ಮಿಕರು.......

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ ಹೇಳಿ. ಮಾನ್ಯ ಪೂಜಾರಿಯವರೇ ಒಂದು ನಿಮಿಷ.

**(ಗೊಂದಲ)**

**ಶ್ರೀ ಪ್ರಿಯಾಂಕ ಖರ್ಗೆ:–**ದಯವಿಟ್ಟು, ಒಂದು ನಿಮಿಷ. ನಾವು ನಿಮ್ಮನ್ನು ಟೀಕೆ ಮಾಡುತ್ತಿಲ್ಲ.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪೂಜಾರಿಯವರೇ, ಒಂದು ನಿಮಿಷ. ....

**ಶ್ರೀ ಪ್ರಿಯಾಂಕ ಖರ್ಗೆ:–** ಕರ್ನಾಟಕ ರಾಜ್ಯ ಮತ್ತು ರಾಷ್ಟ್ರದ ನೀತಿಗಳು ಬೇರೆ ಬೇರೆನಾ? ಇಲ್ಲ. ಹಾಗಾದರೆ MSP (Minimum Support Price) ಯನ್ನು ಯಾರು decide ಮಾಡುವುದು?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪೂಜಾರಿಯವರೇ ಒಂದು ನಿಮಿಷ. ....

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಶ್ರೀ ಪ್ರಿಯಾಂಕ ಖರ್ಗೆ:–** ರೈತರಿಗೆ MSP ಯನ್ನು ಯಾರು decide ಮಾಡುವುದು ರಾಜ್ಯ ಸರ್ಕಾರನಾ.....

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪೂಜಾರಿಯವರೇ, ಒಂದು ನಿಮಿಷ. ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಪ್ರಿಯಾಂಕ ಖರ್ಗೆ:–**ಇದು ಚರ್ಚೆಯಾಗಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪೂಜಾರಿಯವರೇ, ಒಂದು ನಿಮಿಷ ಕೇಳಿ. ತಾವು ವಿರೋಧ ಪಕ್ಷದ ನಾಯಕರು ಸ್ವಲ್ಪ ಕೇಳಬೇಕು. ಮಾನ್ಯ ಸಚಿವರು ಏನು ಮಾತನಾಡುತ್ತಾರೆಂಬುದನ್ನು ಕೇಳಿ. ಆನಂತರ ತಾವು ಮಾತನಾಡಿ. ಮಾನ್ಯ ಸಚಿವರು ಮಾತನಾಡುವಾಗ ಮಧ್ಯೆ ತಾವೇಕೆ ನಿಂತುಕೊಂಡು ಮಾತನಾಡುತ್ತೀರಾ? ತಾವು ವಿರೋಧ ಪಕ್ಷದ ನಾಯಕರು. ತಮಗೆ ಎಲ್ಲಾ ಸ್ವಾತಂತ್ರ್ಯ ಇದೆ. ಮಾನ್ಯ ಸಚಿವರು ಮಾತನಾಡುವಾಗ ತಾವು ಸೌಜನ್ಯದಿಂದ ಕುಳಿತುಕೊಂಡು ಕೇಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಮಾನ್ಯ ಪೂಜಾರಿಯವರೇ, ಅವರು yield ಆಗಲಿಲ್ಲ. ಮಾನ್ಯ ಸಚಿವರೇ ಹೇಳಿ.

**ಶ್ರೀ ಪ್ರಿಯಾಂಕ ಖರ್ಗೆ:–**ನಾನು ಏಕೆ ತಮ್ಮ ಸಹಾಯಕ್ಕೆ ಬರುತ್ತೇನೆಂದು ಹೇಳಿದೆನೆಂದರೆ, ಇದರ ಬಗ್ಗೆ ಚರ್ಚೆಯಾದಾಗ ನಮಗೂ ಏನು ಮಾಡಬೇಕು ಎಂಬುದು ಗೊತ್ತಾಗುತ್ತದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಹೇಳಿ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ರೈತರ ಆದಾಯ ಕಡಿಮೆಯಾಗುತ್ತಿದೆ ಎಂಬುದರ ಬಗ್ಗೆ ಇಡೀ ದೇಶದಲ್ಲಿಯೇ ಚರ್ಚೆಯಾಗುತ್ತಿದೆ. ಮೊನ್ನೆ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿರುವ ಒಬ್ಬ ರೈತ ಸಂಜಯ್ ಸಾತೆ ಸುಮಾರು 750 ಕೆ.ಜಿ ಈರುಳ್ಳಿಯನ್ನು ರೂ.1064 ಗಳಿಗೆ ಮಾರಿದ್ದಾನೆ. ಈರುಳ್ಳಿಯನ್ನು ಒಂದು ಕೆಜಿಗೆ ರೂ. 1.45 ಗಳಂತೆ ಮಾರಿದ್ದಾನೆ. ಮಾನ್ಯ ಪ್ರಧಾನ ಮಂತ್ರಿಯವರ ಹೆಸರಿಗೆ ರೂ.54 ಗಳನ್ನು ಹಾಕಿದ್ದಾನೆ. ಇದರಿಂದ, the average household income of farmers is also decreasing ಎಂಬುದು ಬಹಳ ಎದ್ದು ಕಾಣಿಸುತ್ತಿದೆ, ಅದರ ಬಗ್ಗೆಯೂ ಹೆಚ್ಚು ಬೆಳಕು ಚೆಲ್ಲಲಿ. Minimum Support Price...ದಯವಿಟ್ಟು, ನಾನು ಹೇಳುತ್ತಿದ್ದೇನೆ. ....

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಸಭಾಪತಿಯವರು:–**ದಯವಿಟ್ಟು, ಮಾನ್ಯ ಪೂಜಾರಿಯವರೇ ಕುಳಿತುಕೊಳ್ಳಿ ಅವರು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಶ್ರೀ ಪ್ರಿಯಾಂಕ ಖರ್ಗೆ:–** ನೀವು ಪತ್ರವನ್ನು ಕೊಡಿ. ನಾವು ಪತ್ರವನ್ನು ತೆಗೆದುಕೊಂಡು ಹೋಗಿ ಅಲ್ಲಿಯೇ ಹೋಗಿ ಮಾತನಾಡುತ್ತೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ,... ಇಂತಹದೇ ಕೊಡುತ್ತಾರೆಂಬುದು ನಮಗೆ ಅರ್ಥವಾಗಲಿಲ್ಲ. ಅದಕ್ಕೋಸ್ಕರ .....

**(ಗೊಂದಲ)**

**ಶ್ರೀ ಪ್ರಿಯಾಂಕ ಖರ್ಗೆ:–** ನಾವು ಅವರಿಂದ ಅಪೇಕ್ಷೆಯನ್ನು ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ಚರ್ಚೆಯನ್ನು ಮಾಡಿ, ನಮಗೆ ಸಲಹೆಯನ್ನು ಕೊಡಲಿ. MSP ಬಗ್ಗೆ ಸಾಕಷ್ಟು ಜನ ಮಾತನಾಡುತ್ತಿದ್ದಾರೆ. ತಾವು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಇಪ್ಪತ್ನಾಲ್ಕು ಗಂಟೆಯೊಳಗೆ ರೈತರ ಸಾಲ ಮನ್ನಾ ಮಾಡುತ್ತಾರೆ. ಅದೇ ರೀತಿ ಕೇಂದ್ರದಲ್ಲಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅಧಿಕಾರ ಬಂದಾಗ, ಸ್ವಾಮಿನಾಥನ್ ಕಮಿಟಿ ವರದಿಯನ್ನು ಅನುಷ್ಠಾನಕ್ಕೆ ತರುತ್ತೇನೆಂದು ತಾವು ಹೇಳಿದ್ದಿರಿ. ಇವತ್ತು ಅದು ಕೂಡ ಆಗಿಲ್ಲ. ಇವತ್ತು MSP ಏನಾಗಿದೆ? It was just an eyewash. ಶೇ. 1.5 ಕ್ಕಿಂತ ಜಾಸ್ತಿ ಕೊಡುತ್ತೇವೆಂದು ಹೇಳಿದ್ದರು. ಇವತ್ತು ಅದೂ ಆಗುತ್ತಿಲ್ಲ. ಬಹುಶಃ ಇದರ ಬಗ್ಗೆ ಆಮೇಲೆ ನಮ್ಮ ನಾಯಕರು ಹೆಚ್ಚು ಬೆಳಕು ಚೆಲ್ಲಬೇಕೆಂದು ನಾನು ಕೇಳುತ್ತಿದ್ದೇನೆ. As on today, the A2+FL cost (actual paid out cost **plus** imputed value of family labour) of Paddy is Rs.1,166 per quintal. But the announced MSP was Rs.1,750 per quintal.

**ಸಭಾಪತಿಯವರು:–** ಮಾನ್ಯ ಸಚಿವರೇ, ಸರ್ಕಾರದ ಉತ್ತರವನ್ನು ಹೇಳಿಬಿಡಿ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಅದನ್ನು ಬಿಡುತ್ತೇನೆ. ಇನ್ನೊಂದು ಮಾತ್ರ ಇದೆ. ನಾನು MSP ಬಗ್ಗೆ ಮಾತನಾಡುವುದಿಲ್ಲ. ಇದಕ್ಕೂ ಮತ್ತು ನಮಗೇನು ಸಂಬಂಧ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಾರೆ. ಆಮದು ನೀತಿಯನ್ನು ಯಾರು ಮಾಡುತ್ತಾರೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ಇದೇ ಉತ್ತರ ....

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ ಹೇಳಿಬಿಡಿ.

**(ಗೊಂದಲ)**

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಇದೇ ಉತ್ತರ ಎಂದು ಅಂದುಕೊಳ್ಳಲಿ ಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ....ಕರ್ನಾಟಕ ರಾಜ್ಯದ ರೈತರಿಗೆ ಕುಡಿಯುವ ನೀರು ಇಲ್ಲದೇ....

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪೂಜಾರಿಯವರೇ, ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ಇಲ್ಲಿ ಗೋಶಾಲೆಗಳನ್ನು ತೆರದಿಲ್ಲ ಎಂದು ಹೇಳಿದ್ದಕ್ಕೆ, ...

**(ಗೊಂದಲ)**

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಈ ಮಾಹಿತಿ ಏನಿದೆ?

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಹರಿದ್ವಾರದಲ್ಲಿ ತೆರೆದಿಲ್ಲ ಎಂದು ಉತ್ತರ ಹೇಳುತ್ತಿದ್ದೀರಿ. ನಮ್ಮ ರಾಜ್ಯದಲ್ಲಿನ ಸಮಸ್ಯೆ ಬಗ್ಗೆ ಸರ್ಕಾರ ಹೇಳಲಿ.

**ಸಭಾಪತಿಯವರು:–** ಮಾನ್ಯ ಪೂಜಾರಿಯವರೇ, ಅವರು yield ಆಗಿಲ್ಲ. ಅವರು yield ಆದರೆ ತಾವು ಮಾತನಾಡಬೇಕು. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪ್ರಿಯಾಂಕ ಖರ್ಗೆ:–** ಈ ಮಾಹಿತಿ ನಮ್ಮ ರಾಜ್ಯದ್ದು ಅಲ್ಲ. ಲೋಕಸಭೆಯಲ್ಲಿ ಚುಕ್ಕೆ ಗುರ್ತಿಲ್ಲದ ಪ್ರಶ್ನೆಯದ್ದು ಆಗಿರುತ್ತದೆ; The volume of wheat imported in 2013-14, has swelled up by 100-160 times in terms of value.

(366)11–12–20186–30 TCH-RN

**ಶ್ರೀ ಪ್ರಿಯಾಂಕ ಖರ್ಗೆ(ಮುಂದು):–** (ಸಭಾಪತಿಯವರ ಉಪಸ್ಥಿತಿ)

ಅಂದರೆ, ಆಮದು ಮಾಡಿಕೊಳ್ಳುವುದಕ್ಕೆ ಯಾರು ಅವಕಾಶ ಮಾಡಿಕೊಡುತ್ತಿದ್ದಾರೆ? ಈ ರೀತಿ ಆಮದು ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದರಿಂದ ನಮ್ಮ ರಾಜ್ಯದ ರೈತರು ಸಾಯುತ್ತಾರೆ ಅಷ್ಟೆ. Farm loan waiver ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಇವತ್ತಿನ ದಿವಸ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ನಮ್ಮ ಬಳಿ ಡೇಟಾ ಕೂಡ ಇಲ್ಲ. ಈ ವಿಷಯದ ಬಗ್ಗೆ ಕೂಡ ಮಾತನಾಡಬೇಕಾಗುತ್ತದೆ. ಇದರ ಬಗ್ಗೆ ಚರ್ಚೆ ಮಾಡುವುದರಿಂದ, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ಹೆಚ್ಚು ಹಣವನ್ನು ಕೇಳಬಹುದು. ಇತ್ತೀಚೆಗೆ ಮಾನ್ಯ ಸಚಿವರಾದ ಶ್ರೀ ಬಂಡೆಪ್ಪ ಖಾಶೆಂಪೂರ ರವರು ಹಾಗೂ ನಾವು ತೊಗರಿ ಪ್ರೊಕ್ಯೂರ್‌ಮೆಂಟ್‌ಗಾಗಿ ಪ್ರತಿ ದಿನವೂ ಹೋಗಿ ಕೇಳುತ್ತಿದ್ದೇವೆ. ಆದರೆ ಅವರಿಂದ ನಮಗೆ ಯಾವುದೇ ಸ್ಪಂದನೆ ಸಿಗುತ್ತಿಲ್ಲ. ಬಹುಶಃ ಈ ಕಡತವನ್ನೆಲ್ಲಾ ತೆಗೆದುಕೊಂಡು ಹೋಗಿ ತೋರಿಸಿ ಅವರಿಂದ ಹೆಚ್ಚು ದುಡ್ಡನ್ನು ಕೇಳಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದು ಏನೆಂದರೆ, ನಮ್ಮ ರಾಜ್ಯದ ವಿರೋಧಪಕ್ಷದ ನಾಯಕರಿಗೆ ಇವರು ಸಹಾಯ ಮಾಡುವುದಕ್ಕಿಂತಲೂ ಪಾರ್ಲಿಮೆಂಟ್‌ನಲ್ಲಿ ಇರತಕ್ಕಂಥ ವಿರೋಧಪಕ್ಷದ ನಾಯಕರಿಗೆ ಸಹಾಯ ಮಾಡಿದರೆ ಒಳ್ಳೆಯದಾಗುತ್ತದೆ. ದಯವಿಟ್ಟು ತಾವು ಅದನ್ನು ಮಾಡಿ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಸಹಾಯ ಮಾಡಲೇಬೇಕಾಗುತ್ತದೆ. ಏಕೆಂದರೆ, ಅಲ್ಲಿ ಏನಾದರೂ ಅನುಕೂಲ ಆದರೆ ಇಲ್ಲಿ ಕೂಡ ಅನುಕೂಲ ಆಗುತ್ತದೆ.

**ಶ್ರೀ ಐವನ್ ಡಿ'ಸೋಜ(ನಾಮನಿರ್ದೇಶಿತರು):–** ಇವತ್ತು ಐದು ರಾಜ್ಯಗಳ ಚುನಾವಣಾ ಫಲಿತಾಂಶ ಬಂದಿದೆ. ಮುಂದಿನ ದಿನಗಳಲ್ಲಿ ಪಾರ್ಲಿಮೆಂಟ್‌ನಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಸಂಭವವಿದೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಈ ಚರ್ಚೆಯನ್ನು ಗಮನಿಸಿದಾಗ ಒಂದು ಒಳ್ಳೆಯ ಅವಕಾಶವನ್ನು ಕಳೆದುಕೊಂಡೆನು ಎಂದು ನನಗೆ ದುಃಖ ಆಗುತ್ತಿದೆ. ಅದು ಯಾವುದು ಎಂದರೆ, ಇಲ್ಲಿ ನಾವು ಮಾದಕ ವಸ್ತು ಬಗ್ಗೆ ಮಾನ್ಯ ಗೃಹಸಚಿವರ ಬಳಿ ಕೇಳಿದೆವು. ನಾವು ಏಕೆ ಪಂಜಾಬ್ ರಾಜ್ಯದಿಂದ ಶುರು ಮಾಡಲಿಲ್ಲ, ಕಾಶ್ಮೀರದಿಂದ ಶುರು ಮಾಡಲಿಲ್ಲ? ಏಕೆಂದರೆ, ಅಲ್ಲಿಂದ ಬಂದು ಇಲ್ಲಿ ಉತ್ತರ ಹೇಳಬೇಕಾಗಿತ್ತು. ಏಕೆಂದರೆ, ಈ ಸದನಕ್ಕೆ ಬರಬೇಕಾದರೆ ನಾವು ದೇಶವನ್ನೆಲ್ಲಾ ಸುತ್ತಿಕೊಂಡೇ ಬರಬೇಕಲ್ಲವೇ? ಈಗ ಬರ ಪೀಡಿತದ ಬಗ್ಗೆ ಏನಾದರೂ ಮಾತನಾಡಬೇಕಾದರೆ ಇಲ್ಲಿಯದ್ದನ್ನು ಮಾತನಾಡುವುದಕ್ಕೆ ಆಗುತ್ತದೆಯೇ? ಇಲ್ಲಿನ ರೈತರ ಬಗ್ಗೆ ಮಾತನಾಡಬೇಕಾದರೆ, ಯಾವ್ಯಾವ ರಾಜ್ಯದ ರೈತರು ಸತ್ತರು, ಏಕೆ ಸತ್ತರು ಎಂದು ಹೇಳಬೇಕಾಗುತ್ತದೆ.

**ಶ್ರೀ ಪ್ರಿಯಾಂಕ ಖರ್ಗೆ:–** ಇಲ್ಲ, ಇಲ್ಲ, Agrarian Policy cannot be...

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ದೇಶದೊಳಗೆ ಮಾದಕ ವಸ್ತು ಪಾಕಿಸ್ತಾನದಿಂದ ಇನ್ನೊಂದು ದೇಶದಿಂದ ಬರುತ್ತದೆ ಎಂದು ಚರ್ಚೆ ಆಗುತ್ತಿರುವಾಗ ಗೃಹ ಸಚಿವರಾದ ಸನ್ಮಾನ್ಯ ಡಾ॥ ಜಿ.ಪರಮೇಶ್ವರ್‌ರವರು ಉತ್ತರ ಕೊಡುವುದಕ್ಕೆ ತಯಾರಿರುವಾಗ ನಾನು ಇದನ್ನೆಲ್ಲಾ ಮಾತನಾಡದೇ ಸುಮ್ಮನೆ ಕುಳಿತುಕೊಂಡುಬಿಟ್ಟೆವಲ್ಲಾ ಎನ್ನುವಂತಹ ದುಃಖ ಆಗುತ್ತಿದೆ. ಈಗ ಇನ್ನೊಮ್ಮೆ ಆ ಪ್ರಶ್ನೆಯನ್ನು ಹಾಕಿಕೊಂಡು ಹೊಸದಾಗಿ ಪ್ರಾರಂಭ ಮಾಡುವುದು ಒಳ್ಳೆಯದು ಎಂದು ಅನಿಸುತ್ತದೆ. ಎರಡನೆಯದಾಗಿ, ನಾನು ಅವರಿಗೆ ಸಲಹೆ ಕೊಟ್ಟೆನು. ಅವರು ತಮ್ಮ ಗಮನಕ್ಕೂ ಕೂಡ ತಂದರು. ಇದು ಬಹಳ ಉತ್ತಮವಾದಂತಹ ಮಾಹಿತಿ. ದೇಶ ನಮ್ಮದೆ. ಹಾಗಾಗಿ, ಕೇಂದ್ರ ಸರ್ಕಾರದ ಇಷ್ಟೊಂದು ಮಾಹಿತಿಯನ್ನು ಇಟ್ಟುಕೊಂಡಿದ್ದಾರೆ. ರಾಜ್ಯ ಸರ್ಕಾರದ ಮಾಹಿಯನ್ನು ಕಡಿಮೆ ಇಟ್ಟುಕೊಂಡಿದ್ದಾರಲ್ಲಾ ಎನ್ನುವುದೇ ದುಃಖ. ಮಾನ್ಯ ಸಚಿವರು ಇಡೀ ದೇಶದ ಮಾಹಿತಿಯನ್ನು ಇಟ್ಟುಕೊಂಡಿದ್ದಾರೆ. ಇಲ್ಲಿನ ಮಾಹಿತಿಯನ್ನು ಇಟ್ಟುಕೊಂಡು, ಇಲ್ಲಿನ ಸಮಸ್ಯೆಗೆ ಉತ್ತರವನ್ನು ಕೊಡಿ ಎಂದರೆ, 'ಕೊಂಕಣ ಸುತ್ತಿಕೊಂಡು ಮೈಲಾರಕ್ಕೆ ಬಂದಂತೆ' ಆಯಿತು. ಅದರ ಬದಲಿಗೆ ಪಾರ್ಲಿಮೆಂಟ್‌ನಲ್ಲಿ ಇರತಕ್ಕಂಥ ಈಗಿನ ವಿರೋಧಪಕ್ಷದ ನಾಯಕರು, ಅವರು ನಮಗೆ ಸರ್ವ ಮಾನ್ಯರು ಹಾಗೂ ಬಹಳ ಆತ್ಮೀಯರು. ಮುಂಬರುವ ಅಧಿವೇಶನಕ್ಕೆ ಅವರಿಗೆ ಇವಿಷ್ಟೂ ಮಾಹಿತಿಯನ್ನು ಕೊಡಬೇಕು. ಅವರು ಸದನ ನಡೆಸಲು ಬಿಡಬಾರದು. ಆ ವಿರೋಧಪಕ್ಷದ ನಾಯಕರು ನಮ್ಮ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡಬೇಕು. ಪಾರ್ಲಿಮೆಂಟ್‌ನಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ನಮ್ಮ ಪರವಾಗಿ ಏನು ಮಾಡುತ್ತಿದ್ದಾರೆ? ಪಾರ್ಲಿಮೆಂಟ್‌ನಲ್ಲಿ ಇರುವಂತಹ ವಿರೋಧಪಕ್ಷದ ನಾಯಕರು ಏನಾದರೂ ಕೈಕಟ್ಟಿಕೊಂಡು ಕುಳಿತುಕೊಂಡಿದ್ದರೆ ಅವರಿಗೆ ಎಚ್ಚರಿಸಬೇಕು, ನ್ಯಾಯ ದೊರಕಿಸಿ ಕೊಡಬೇಕು. ಸರ್ಕಾರದಲ್ಲಿ ನ್ಯಾಯ ಕೊಡಿಸಲು ಯಾರಾದರೇನು. ಅದಕ್ಕೆ ದಯಮಾಡಿ ಅವರದ್ದು ಏನೇನು ಕಡತ ಇದೆಯೋ ಅದನ್ನು ಸಾಧ್ಯವಾದರೆ ಅವರೇ ಕಳುಹಿಸಿ ಕೊಡಲಿ. ಅದು ಆಗದಿದ್ದರೆ, ಅದನ್ನು ನಮ್ಮ ಕೈಗೆ ಕೊಡಲಿ, ನಾವು ಅವರಿಗೆ ಕೊಟ್ಟು, endorsement ನ್ನು ಅವರ ಕೈಗೆ ಕೊಡುತ್ತೇವೆ.

**ಸಭಾಪತಿಯವರು:–** ತಾವು ಅಷ್ಟು ಮಾಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪ್ರಿಯಾಂಕ ಖರ್ಗೆ:-** ಮಾನ್ಯ ಸಭಾಪತಿಯವರೇ, ಬೇರೆ ಯಾರಾದರೂ ಹೊಸ ಸದಸ್ಯರು ಮಾತನಾಡಿದರೆ ಪರವಾಗಿಲ್ಲ. ಆದರೆ ಶ್ರೀ ಆಯನೂರು ಮಂಜುನಾಥ್‌ರವರು ಹಿರಿಯ ಸದಸ್ಯರು ಇದ್ದಾರೆ. Central Agriculture Policy and State Agriculture Policy ಎರಡೂ ಕೂಡ ಬೇರೆ ಬೇರೆ ಇವೆಯೆಂದು ಹೇಳುತ್ತಿದ್ದೇನೆ. MSP ಫಿಕ್ಸ್ ಮಾಡುವುದು ನಾವಲ್ಲ, ಕೇಂದ್ರ ಸರ್ಕಾರದವರು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಅವರ ಪ್ರಶ್ನೆ ಯಾವುದು ಇತ್ತು, ಮಾನ್ಯ ಸಚಿವರು ಏನು ಉತ್ತರ ಕೊಡುತ್ತಿದ್ದಾರೆ?

**ಶ್ರೀ ಪ್ರಿಯಾಂಕ ಖರ್ಗೆ:-** ಮಾನ್ಯ ಸಭಾಪತಿಯವರೇ, ಇಲ್ಲ. You cannot defuse. ಈಗ ನೋಡಿ, ತೊಗರಿ ಆಮದು ಇದೆ. Whose is the import policy? ಅದು ನಮ್ಮದಾ?

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ರೈತರ ಆದಾಯ ದ್ವಿಗುಣ ಆಗುತ್ತದೆ ಎಂದು ಹೇಳಿದ್ದಾರೆ. ಅಲ್ಲಿಯವರೆಗೆ ಕಾಯೋಣ.

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ಹೊಸದಾಗಿ ವಿಧಾಪರಿಷತ್‌ಗೆ ಸದಸ್ಯನಾಗಿ ಆಯ್ಕೆ ಆಗಿದ್ದೇವೆ. ನಾನು ಶಾಲೆಗೆ ಯಾವ ರೀತಿ ಹೋಗುತ್ತಿದ್ದೇವೋ ಅದೇ ರೀತಿ ಇಲ್ಲಿ ಏನು ನಡೆಯುತ್ತದೆ ಎಂದು ಶಿಸ್ತಿನಿಂದ ಬಹಳ ಗೌರವದಿಂದ ಬರುತ್ತಿದ್ದೇವೆ. ವಿರೋಧ ಪಕ್ಷ ಎಂದರೆ, ಜ್ವಲಂತ ಸಮಸ್ಯೆಗಳು ಹಾಗೂ ಸಮಾಜದ ಸಮಸ್ಯೆಗಳ ಬಗ್ಗೆ ಒಂದು ನಾಣ್ಯದ ಎರಡು ಮುಖ ಇರಬೇಕು. ಅದು ಸರ್ಕಾರ ಆಗಿರಬಹುದು, ವಿರೋಧ ಪಕ್ಷ ಆಗಿರಬಹುದು. ಒಂದು ನಾಣ್ಯದ ಎರಡು ಮುಖವಾಗಿ ಸಮಸ್ಯೆಗಳನ್ನು ಬಗೆಹರಿಸಬೇಕು. ಆದರೆ, ನಾನು ನೋಡಿದಂತೆ ವಿರೋಧಪಕ್ಷ ನಮ್ಮ ಸರ್ಕಾರದ ನಮ್ಮ ಮಂತ್ರಿಗಳ ಸ್ವಾಭಿಮಾನಕ್ಕೆ ಧಕ್ಕೆ ತರುವಂತಹ ಕೆಲಸ ಮಾಡುತ್ತಿದ್ದಾರೆ. ಅವರು ಟೀಕೆ ಟಿಪ್ಪಣಿಗಳನ್ನು ಮಾಡುವುದನ್ನು ಬಿಟ್ಟು ಸಲಹೆಗಳನ್ನು ಕೊಡುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಸಚಿವರು ಹೇಳಬೇಕಾದ ಉತ್ತರವನ್ನು ಹೇಳುತ್ತಿದ್ದೀರಿ. ನಿಮ್ಮ ಸಲಹೆ ಏನಿದೆ ಅದನ್ನು ಹೇಳಿ?

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ವಿರೋಧಪಕ್ಷದ ನಾಯಕರಿಗೂ ಸಹ Minister of State ಸ್ಥಾನವನ್ನು ಕೊಟ್ಟಿದ್ದಾರೆ. ಅವರು ಸಹ ಈ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ, ಇಂತಹ ಸಮಸ್ಯೆ ಇದೆ ಎಂದು ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. ಸದನದಲ್ಲಿ ಚರ್ಚೆ ಮಾಡುವುದಕ್ಕಿಂತ ಮುಖ್ಯವಾಗಿ ಎಲ್ಲೆಲ್ಲಿ ಜ್ವಲಂತ ಸಮಸ್ಯೆಗಳಿವೆ ಅದರ ಬಗ್ಗೆ ಸರ್ಕಾರ ಮತ್ತು ವಿರೋಧಪಕ್ಷ ಒಂದೇ ನಾಣ್ಯದ ಎರಡು ಮುಖದಂತೆ ಕೆಲಸ ಮಾಡಬೇಕು. ಒಂದೇ ಸೇತುವೆಯಾಗಿ ಇರಬೇಕು. ಸರ್ಕಾರದ ಸ್ವಾಭಿಮಾನಕ್ಕೆ ಧಕ್ಕೆ ತರತಕ್ಕಂಥದ್ದು, ಕಣ್ಣೊರೆಸುವ ತಂತ್ರ ಆಗಬಾರದು. ಆದರೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಸರ್ಕಾರ ಆಗಿರಬಹುದು, ನಮ್ಮ ಮಾನ್ಯ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಂತ್ರಿಗಳು ಆಗಿರಬಹುದು ಅವರಿಗೆ ಜನರ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವಂತಹ ಶಕ್ತಿ ಇದೆ. ಖಂಡಿತವಾಗಿಯೂ ಮಾಡುತ್ತೇವೆ. ಅವರಿಗಿಂತ ಹೆಚ್ಚಿನದಾಗಿ ಸರ್ಕಾರದ ಜವಾಬ್ದಾರಿ ಇದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಸಭಾಪತಿಯವರು:–** ಈಗ ಸದನದ ಗಮನಕ್ಕೆ ಒಂದು ವಿಚಾರ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಕೆ.ಸಿ.ಕೊಂಡಯ್ಯನವರು ಸ್ಥಳೀಯ ಸಂಸ್ಥೆಗಳ ಎಲ್ಲಾ ಮಾನ್ಯ ಸದಸ್ಯರುಗಳನ್ನು ಸಭೆಗೆ ಆಹ್ವಾನಿಸಿದ್ದಾರಂತೆ. ಅದಕ್ಕಾಗಿ ನಾಳೆ ಚರ್ಚೆ ಮುಂದುವರೆಯುತ್ತದೆ. ನಾಳೆಗೆ ಡಾ|| ತೇಜಸ್ವಿನಿ ಗೌಡರವರು, ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ನಾರಾಯಣಸ್ವಾಮಿ, ಶ್ರೀ ಎಸ್.ರುದ್ರೇಗೌಡ, ಮತ್ತು ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಇವರುಗಳು ಮಾತನಾಡುತ್ತಾರೆ. ಸದನವನ್ನು ನಾಳೆ 10.30 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 36 ನಿಮಿಷಕ್ಕೆ ಮುಕ್ತಾಯಗೊಂಡಿತು. ಪುನಃ ದಿನಾಂಕ 12ನೇ ಡಿಸೆಂಬರ್ ಮಾಹೆ 2018ರಂದು ಬುಧವಾರ ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

********

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು